ಭಾನುವಾರ, ಫೆಬ್ರುವರಿ 1, 2026 | ₹ 7.00

www.prajavani.net prajavani.net prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಚಾಂಗಮಲೋ

ದಾವಣಗೆರೆಯಿಂದ ವಿಜಯನಗರದ ಮೈಲಾರಲಿಂಗೇಶ್ವರ ದೇವಸ್ಥಾನಕ್ಕೆ ಭಕ್ತರು ಪಾದಯಾತ್ರೆಯಲ್ಲಿ ಸಾಗಿದರು



ಇಶಾನ್ ಅಬ್ಬರದ ಶತಕ

ತಿರುವನಂತಪುರದಲ್ಲಿ ಶನಿವಾರ ನ್ಯೂಜಿಲೆಂಡ್ ಎದುರು ನಡೆದ ಟಿ20 ಪಂದ್ಯದಲ್ಲಿ ಭಾರತದ ಇಶಾನ್ ಕಿಶನ್ ಶತಕ ದಾಖಲಿಸಿದರು








ಚಿಟಿಕೆ ಸುದ್ದಿ

ಅಂತರ ನಿಗಮ ವರ್ಗಾವಣೆ: ಅವಧಿ ವಿಸ್ತರಣೆ

ಬೆಂಗಳೂರು: ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯುಆರ್‌ಟಿಸಿಗಳ ನಡುವಿನ 2026ನೇ ಸಾಲಿನ ಅಂತರ ನಿಗಮ ವರ್ಗಾವಣೆ ಪ್ರಕ್ರಿಯೆ ಆರಂಭಗೊಂಡಿದ್ದು, ಅರ್ಜಿ ಸಲ್ಲಿಸಲು ಜ.31ರವರೆಗೆ ಅವಕಾಶ ನೀಡಲಾಗಿತ್ತು. ಇದನ್ನು ಫೆ.28ರವರೆಗೆ ವಿಸ್ತರಿಸಲಾಗಿದೆ.

ಮೇಲ್ವಿಚಾರಕರು (ದರ್ಜೆ-3), ನೌಕರರು (ದರ್ಜೆ-4) ವರ್ಗಾವಣೆಗೆ ಜ.28ರ ಸಂಜೆ 5.30ರ ಒಳಗೆ ಆನ್‌ಲೈನ್ ಮೂಲಕ (www.ksrtc.org/transfer) ಅರ್ಜಿ ಸಲ್ಲಿಸಬಹುದು. ಸಾಮಾನ್ಯ ಮತ್ತು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ನಿರ್ದೇಶಕರು (ಸಿಬ್ಬಂದಿ ಮತ್ತು ಜಾಗೃತ) ತಿಳಿಸಿದ್ದಾರೆ.

ಅಶೋಕ, ನಾಗಮಣಿಗೆ 'ಬಿ.ಎಂ.ಶ್ರೀ ಪ್ರಶಸ್ತಿ'


ಟಿ.ಪಿ. ಅಶೋಕ


ನಾಗಮಣಿ ಎಸ್. ರಾವ್

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನ ನೀಡುವ 2026ನೇ ಸಾಲಿನ 'ಪ್ರೊ. ಎಲ್. ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ'ಗೆ ವಿಮರ್ಶಕ ಟಿ.ಪಿ. ಅಶೋಕ ಮತ್ತು 'ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ'ಗೆ ಪತ್ರಕರ್ತೆ ನಾಗಮಣಿ ಎಸ್. ರಾವ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿವೆ. ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಫೆ.28ರಂದು ಬೆಳಿಗ್ಗೆ 10.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಲೇಖಕಿ ಕೆ.ಆರ್. ಸಂಧ್ಯಾ ರೆಡ್ಡಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ಅಕ್ರಮ ಗಣಿಗಾರಿಕೆ: ಕಲ್ಲೆಸೆದು ತಡೆದ ಮಹಿಳಾ ಅಧಿಕಾರಿ



ಹಿರಿಯ ಭೂ ವಿಜ್ಞಾನಿ ಬಿಂದನ್ ಪಾಟೀಲ ಅವರು, ಅಕ್ರಮಕ್ಕೆ ಬಳಸಿದ ಜೆಸಿಬಿ ಮೇಲೆ ಕಲ್ಲೆಸೆದರು

ಬೆಳಗಾವಿ: ತಾಲ್ಲೂಕಿನ ಇನಾಂ ಬಡಸ್ ಗ್ರಾಮದ ಸರಹದ್ದಿನಲ್ಲಿ ಅಕ್ರಮ ಗಣಿಗಾರಿಕೆ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಿದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ಬಿಂದನ್ ಪಾಟೀಲ ಅವರು, ಅಕ್ರಮಕ್ಕೆ ಬಳಸಿದ ಜೆಸಿಬಿ ಮೇಲೆ ಕಲ್ಲೆಸೆದಿದ್ದಾರೆ.

ಐದು ತಿಂಗಳ ಹಿಂದಿನ ವಿಡಿಯೊ ತುಣುಕುಗಳು ಶನಿವಾರ ಜಾಲತಾಣಗಳಲ್ಲಿ ಹರಿದಾಡಿವೆ. ಅಧಿಕಾರಿಯ ದಿಟ್ಟ ನಡೆಗೆ ಪ್ರಶಂಸೆ ವ್ಯಕ್ತವಾಗಿದೆ.

ಗ್ರಾಮದ ಹೊರವಲಯದಲ್ಲಿ ಅಕ್ರಮವಾಗಿ ಲ್ಯಾಟರೈಟ್ (ಸಿಮೆಂಟ್ ಉತ್ಪಾದನೆಗೆ ಬಳಸುವ ಪುಡಿಗಲ್ಲು) ತೆಗೆಯುತ್ತಿದ್ದರು. ಸ್ಥಳಕ್ಕೆ ಬಂದ ಬಿಂದನ್, ಗಣಿಗಾರಿಕೆ ನಿಲ್ಲಿಸಲು ತಾಕೀತು ಮಾಡಿದರು. ಆಗ ಸ್ಥಳದಲ್ಲಿದ್ದವರು ಅವರ ವಿರುದ್ಧ ಏರುಧ್ವನಿಯಲ್ಲಿ ಮಾತಾಡಲು ಶುರು ಮಾಡಿದರು. ರಾಜಕೀಯ ವ್ಯಕ್ತಿಗಳ ಹೆಸರು ಬಳಸಿಕೊಂಡು ಗಣಿಗಾರಿಕೆ ಮುಂದುವರಿಸಿದ್ದರು.

ಹಗಿನವಾಳು: ಜಾತ್ರೆ ಸ್ಥಗಿತ, ಬೀದಿಯಲ್ಲೇ ನಿಂತ ರಥ


ವಿವಾದಕ್ಕೆ ಕಾರಣವಾದ ಬಾವುಟ

ನಂಜನಗೂಡು (ಮೈಸೂರು ಜಿಲ್ಲೆ): ತಾಲ್ಲೂಕಿನ ಹಗಿನವಾಳು ಗ್ರಾಮದಲ್ಲಿ ಶನಿವಾರ ನಿಗದಿಯಾಗಿದ್ದ ಗ್ರಾಮದೇವತೆ 'ಪಟ್ಟದಮ್ಮ ರಾಣಿ ದೇವತೆ ಜಾತ್ರೆ' ಕೊನೆ ಕ್ಷಣದಲ್ಲಿ ಸ್ಥಗಿತಗೊಂಡ ಪರಿಣಾಮ, ರಥವು ಬೀದಿಯಲ್ಲೇ ನಿಂತಿದೆ.

ಅದ್ದೂರಿಯಾಗಿ ಜಾತ್ರೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ದೇಗುಲದ ಬಳಿ ಫೋಕಸ್ ಲೈಟ್ ಕಂಬಕ್ಕಿಂತಲೂ ಮೇಲೆ ಬಸವೇಶ್ವರ ಚಿತ್ರವಿದ್ದ ಬಾವುಟ ಹಾಕಿದ್ದ ವಿಚಾರದಲ್ಲಿ ಗ್ರಾಮದ ದಲಿತರು–ಲಿಂಗಾಯತರ ನಡುವೆ ವಿವಾದ ಉಂಟಾಗಿ ಜಾತ್ರೆ ಸ್ಥಗಿತಗೊಂಡಿತು.

ಈ ವೇಳೆ, ಆ ಬಾವುಟದ ಬಳಿ ಅಂಬೇಡ್ಕರ್ ಭಾವಚಿತ್ರ ಅಳವಡಿಸಲು ಕೆಲವರು ಮುಂದಾದಾಗ ಮಾತಿನ ಚಕಮಕಿ ಜಾಸ್ತಿಯಾಗಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಸದ್ಯ ಗ್ರಾಮದಲ್ಲಿ ಬಿಗುವಿನ ವಾತಾವರಣವಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ದುಶ್ಚಟ ಬಿಡಲು 'ಅಂಬೇಡ್ಕರ್ ದಾರಿ'

'ಚೈತ್ಯ ಭೂಮಿ' ದರ್ಶನಕ್ಕೆ ವಿಮಾನಯಾನ ಸಂವಿಧಾನದ ಬೆಳಕಿನಲ್ಲಿ ಪ್ರತಿಜ್ಞೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಬಡ ಜನರ ದುಶ್ಚಟ ಬಿಡಿಸಲು ಪಣತೊಟ್ಟಿರುವ ದೇವನಹಳ್ಳಿ ಯುವಕ ಎಂ.ಪಿ.ಗಿರೀಶ್, ನಿಗದಿಪಡಿಸಿದ ಅವಧಿಯಲ್ಲಿ ಚಟ ಮುಕ್ತರಾಗುವವರನ್ನು ವಿಮಾನದಲ್ಲಿ ಮುಂಬೈಗೆ ಕರೆದೊಯ್ದು ಬಿ.ಆರ್.ಅಂಬೇಡ್ಕರ್ ಅವರ ಸಮಾಧಿ ಮುಂದೆ ಪ್ರತಿಜ್ಞಾ ವಿಧಿ ಬೋಧಿಸುತ್ತಿದ್ದಾರೆ.

ದುಶ್ಚಟ ಬಿಡುವ 'ಭೀಮ ಸಂಕಲ್ಪ' ಮಾಡಿದ್ದ 26 ಜನರ ಮೊದಲ ತಂಡ ಕಳೆದ ತಿಂಗಳು ಮುಂಬೈಗೆ ಪ್ರಯಾಣ ಬೆಳೆಸಿತ್ತು. ಅಂಬೇಡ್ಕರ್ ಸಮಾಧಿ ಸ್ಥಳ 'ಚೈತ್ಯ ಭೂಮಿ'ಯಲ್ಲಿ ದುಶ್ಚಟ ಮುಕ್ತ ಸರಳ ಜೀವನ, ಅಂಬೇಡ್ಕರ್ ತತ್ವ–ಸಿದ್ಧಾಂತಗಳ ಪಾಲನೆ, ಸಂವಿಧಾನದ ಬೆಳಕಿನಲ್ಲಿ ನಡೆಯುವ ಪ್ರತಿಜ್ಞಾವಿಧಿ ಸ್ವೀಕರಿಸಿ ತಮ್ಮ ಗ್ರಾಮಗಳಿಗೆ ಮರಳಿದೆ.

ದೇವನಹಳ್ಳಿ ಬಳಿಯ ಮಲ್ಲೇಪುರದ ಜಿ.ಎನ್.ಪ್ರಕಾಶ್–ಸರೋಜಮ್ಮ ದಂಪತಿ ಪುತ್ರ ಗಿರೀಶ್ ಕಾನೂನು ಪದವೀಧರ. ಕೃಷಿಯ ಜತೆಗೆ ಉದ್ಯಮದಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವ ಅವರು, ಪರಿಶಿಷ್ಟ ಜಾತಿಯ ತನ್ನ ಸಮುದಾಯದ ಜನರು ದುಶ್ಚಟಗಳಿಗೆ ಒಳಗಾಗಿ ಸಂಕಷ್ಟದ ಜೀವನ ನಡೆಸುವುದನ್ನು ತಡೆಯಲು ಕಂಡುಕೊಂಡ ಮಾರ್ಗವೇ 'ಭೀಮ ಸಂಕಲ್ಪ'.

ದಲಿತ ಸಂಘರ್ಷ ಸಮಿತಿಯ ವಿದ್ಯಾರ್ಥಿ ವಿಭಾಗದ ಸಂಚಾಲಕರಾಗಿದ್ದ ಅವರು ಪರಿಶಿಷ್ಟ ಜಾತಿಯ ಬಹಳಷ್ಟು ಜನರು ಶಿಕ್ಷಣ ವಂಚಿತರಾಗಿದ್ದು, ಕಷ್ಟದ ಜೀವನ ಸಾಗಿಸುತ್ತಿರುವುದನ್ನು ಗಮನಿಸಿದ್ದರು. ಹಗಲೆಲ್ಲ ಮೈಮುರಿದು ದುಡಿದು, ಸಿಗುತ್ತಿದ್ದ ಕಡಿಮೆ ಕೂಲಿಯನ್ನು ಮದ್ಯಪಾನ, ಬೀಡಿ, ಸಿಗರೇಟು, ಗುಟ್ಕಾ ಮತ್ತಿತರ ತಂಬಾಕು ಉತ್ಪನ್ನಗಳಿಗೆ ಖರ್ಚು ಮಾಡುತ್ತಿದ್ದರು. ಸ್ವಂತ ಮನೆ ಇಲ್ಲದವರು, ಮನೆ ಇದ್ದರೂ ಸುಸ್ಥಿತಿಗೆ ತಂದುಕೊಳ್ಳದವರು, ಮಕ್ಕಳನ್ನು ಶಾಲೆಗೆ ಕಳುಹಿಸದೆ ಕೆಲಸಕ್ಕೆ ಹಚ್ಚಿದವರು. ಅಂದಿನ ದುಡಿಮೆಯಲ್ಲೇ ಅಂದಿನ ಜೀವನ ಸಾಗಿಸುವ ಅವರ ಸ್ಥಿತಿ ಕಂಡು ಮರುಗಿದ್ದರು. ಇಂತಹ ಸಮಸ್ಯೆಗಳಿಗೆ ಮೂಲ ಕಾರಣ ದುಶ್ಚಟ ಎನ್ನುವುದನ್ನು ಅರ್ಥ ಮಾಡಿಕೊಂಡ ಅವರು ತನ್ನ ಸಮುದಾಯದ ಜನರ ದುಶ್ಚಟ ಬಿಡಿಸುವ ಪಣ ತೊಟ್ಟಿದ್ದಾರೆ.

'ದುಶ್ಚಟ ಬಿಡಲು ಜನರು ದೇವರ ಮೊರೆ ಹೋಗುತ್ತಾರೆ. ಮಾಲೆ ಹಾಕುತ್ತಾರೆ. ನಾನು ಮೊದಲಿನಿಂದಲೂ ಅಂಬೇಡ್ಕರ್ ಅವರ ಅನುಯಾಯಿ. ಅವರೇ ನಮಗೆ ದೇವರು. ಅದಕ್ಕಾಗಿ ದುಶ್ಚಟ ಬಿಡುವ ಸಂಕಲ್ಪ ಮಾಡುವ ನನ್ನ ಜನರನ್ನು ಅಂಬೇಡ್ಕರ್ ಸಮಾಧಿ ಸ್ಥಳಕ್ಕೆ ಕರೆದುಕೊಂಡು ಹೋಗುವ ನಿರ್ಧಾರ ಮಾಡಿದೆ. ಆರಂಭದಲ್ಲಿ ಏಳು ದಿನ ಎಲ್ಲ ಚಟಗಳನ್ನೂ ಬಿಡುವ ಷರತ್ತು ಹಾಕಿದೆ. ಶ್ವೇತವಸ್ತ್ರ ಧರಿಸಿ ಷರತ್ತು ಪೂರೈಸಿದ ಅವರನ್ನು ಕರೆದುಕೊಂಡು ಹೋಗಿ ಬಂದೆ' ಎಂದು ತಮ್ಮ ಹೊಸ ಪ್ರಯೋಗದ ಹಾದಿಯನ್ನು ತೆರೆದಿಟ್ಟರು ಗಿರೀಶ್.


ಮುಂಬೈನ ಚೈತ್ಯ ಭೂಮಿಯಲ್ಲಿ ದೇವನಹಳ್ಳಿಯ 'ಭೀಮ ಸಂಕಲ್ಪ' ತಂಡ

600 ಜನರಿಗೆ ವಿಮಾನಯಾನದ ಅನುಭವ

ಒಳ್ಳೆ ಸುದ್ದಿ

ನಾಲ್ಕು ವರ್ಷಗಳಿಂದ ತಮ್ಮ ಜನುಮ ದಿನವನ್ನು ಚೈತ್ಯ ಭೂಮಿಯಲ್ಲೇ ಆಚರಿಸುತ್ತಾ ಬಂದಿದ್ದ ಗಿರೀಶ್ ಅವರು ಪ್ರತಿ ವರ್ಷ 150 ಜನರನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತಿದ್ದರು. ಒಮ್ಮೆಯೂ ವಿಮಾನ ಹತ್ತದ ಅಂತಹ 600ಕ್ಕೂ ಹೆಚ್ಚು ಜನರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ.

ಈಗ ದುಶ್ಚಟ ಬಿಡಿಸುವ ನೆಪದಲ್ಲಿ ಅಂಬೇಡ್ಕರ್ ತತ್ವ ಸಿದ್ಧಾಂತ, ಸಂವಿಧಾನದ ಆಶಯಗಳನ್ನು ಪರಿಚಯಿಸುತ್ತಿದ್ದಾರೆ. ಹಾಗೆಯೇ, ಒಂದು ಸುತ್ತು ಮುಂಬೈ ಪ್ರವಾಸವನ್ನೂ ಮಾಡಿಸುತ್ತಿದ್ದಾರೆ.

> ಸಮುದಾಯದ ಜನರು ದುಶ್ಚಟ ತೊರೆದು ನೆಮ್ಮದಿಯ ಬದುಕು ನಡೆಸಬೇಕು ಎನ್ನುವುದಷ್ಟೆ ಧ್ಯೇಯ. ಖರ್ಚುವೆಚ್ಚದ ಲೆಕ್ಕ ಇಟ್ಟಿಲ್ಲ. ಈ ಸತ್ಕಾರ್ಯವನ್ನು ನಿರಂತರವಾಗಿ ಮುಂದುವರಿಸುವೆ
> **ಎಂ.ಪಿ.ಗಿರೀಶ್, ಮಲ್ಲೇಪುರ,** ದೇವನಹಳ್ಳಿ

> ದೇವರ ಹೆಸರಲ್ಲಿ ದುಶ್ಚಟ ಬಿಡುವವರನ್ನು ನೋಡಿದ್ದೆ. ಇದೇ ಮೊದಲ ಬಾರಿ ಅಂಬೇಡ್ಕರ್ ಹೆಸರಲ್ಲಿ ಇಂತಹ ಮನಪರಿವರ್ತನೆಯ ಹೊಸ ಹಾದಿ ತೆರೆಯಲಾಗಿದೆ. ಗಿರೀಶ್ ಸಂಕಲ್ಪವನ್ನು ದೇಶದ ಎಲ್ಲೆಡೆ ವಿಸ್ತರಿಸಬೇಕಿದೆ
> **ಭೀಮರಾವ್ ಯಶವಂತ್ ಅಂಬೇಡ್ಕರ್,** (ಬಿ.ಆರ್.ಅಂಬೇಡ್ಕರ್ ಮೊಮ್ಮಗ)

> ವಿಮಾನಯಾನ ಇದೇ ಮೊದಲ ಅನುಭವ. ಮುಂಬೈನ ತಾಜ್ ಹೋಟೆಲ್‌ನಲ್ಲಿ ಉಪಾಹಾರ ಕೊಡಿಸಿದರು. ಅಂಬೇಡ್ಕರ್ ಸಮಾಧಿಯ ದರ್ಶನದ ನಂತರ ಜೀವನಪೂರಾ ದುಶ್ಚಟ ತೊರೆಯಲು ನಿರ್ಧರಿಸಿರುವೆ
> **ರಾಮಕೃಷ್ಣ,** ಸೂಲಿಬೆಲೆ

ಸುದ್ದಿ 2 ನಿಮಿಷ

ಹರಿಪ್ರಸಾದ್‌ಗೆ ಆರ್‌ಎಸ್‌ಎಸ್ ಟೀಕೆಯ ಚಪಲ: ಛಲವಾದಿ

ಬೆಂಗಳೂರು: ಆರ್‌ಎಸ್‌ಎಸ್ ವಿರುದ್ಧ ಮಾತನಾಡುವುದನ್ನೇ ಕಾಂಗ್ರೆಸ್ ಮುಖಂಡ ಬಿ.ಕೆ.ಹರಿಪ್ರಸಾದ್ ಚಪಲ ಮಾಡಿಕೊಂಡಿದ್ದಾರೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ದೂರಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಜಂಟಿ ಅಧಿವೇಶನದಲ್ಲಿ ಭಾಗವಹಿಸಿದ್ದ ರಾಜ್ಯಪಾಲರು ತೆರಳುವಾಗ ಕೆಲವರು ಧಿಕ್ಕಾರ ಕೂಗಿದ್ದಾರೆ. ಅವರ ಮೇಲೆ ಹಲ್ಲೆ ಮಾಡಲು ಮುಂದಾಗಿದ್ದರು. ಈ ಘಟನೆಗಳ ಮುಖ್ಯ ಕಾರಣಕರ್ತರು ಹರಿಪ್ರಸಾದ್. ರಾಜ್ಯಪಾಲರ ಜತೆಗೆ ಆರ್‌ಎಸ್‌ಎಸ್ ಅನ್ನೂ ಟೀಕಿಸಿದರು. ಚಡ್ಡಿ, ಪೋಕ್ಸೊ ಪದ ಬಳಸಿದ್ದಾರೆ. ರಾಜ್ಯಪಾಲರ ಬಗ್ಗೆ ಉದ್ಧಟತನದ ಮಾತನಾಡಿದ್ದಾರೆ. ಪ್ರಶ್ನಿಸಿದ ನನ್ನನ್ನೂ ಕೆಟ್ಟ ಪದಗಳಿಂದ ನಿಂದಿಸಿದ್ದಾರೆ' ಎಂದು ಟೀಕಿಸಿದರು.

'ವಿಬಿ–ಜಿ ರಾಮ್ ಜೆ'ಯಲ್ಲಿ ರಾಮನ ಹೆಸರು ಇರುವುದನ್ನೇ ಕಾಂಗ್ರೆಸ್‌ಗೆ ಸಹಿಸಲು ಆಗಿಲ್ಲ. ಹಿಂದುತ್ವ, ರಾಮನನ್ನು ವಿರೋಧಿಸಬೇಕೆಂದೇ ವಿಶೇಷ ಅಧಿವೇಶನ ಕರೆದಿದ್ದಾರೆ. ಸದನ ಕರೆಯುವ ಅಗತ್ಯ ಇರಲಿಲ್ಲ. ಸದನದಲ್ಲಿ ಕಾಂಗ್ರೆಸ್ ಸದಸ್ಯರು ಹೆಣ್ಣು ಮಕ್ಕಳ ಬಗ್ಗೆ ಅಗೌರವದಿಂದ ಮಾತನಾಡಿದ್ದಾರೆ. ದಲಿತರ ಧ್ವನಿ ಅಡಗಿಸುವಲ್ಲೂ ಕಾಂಗ್ರೆಸ್ ಸಫಲವಾಗಿದೆ' ಎಂದು ದೂರಿದರು.

'ಅಕ್ರಮಗಳ ತಡೆಗೆ ಸೆಂಟ್ರಲ್ ಕಮಾಂಡ್ ಸೆಂಟರ್' ಆರಂಭ



ಬೆಂಗಳೂರು: ರಾಜ್ಯದ ಜೈಲುಗಳಲ್ಲಿನ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಹಾಗೂ ಕಾರಾಗೃಹಗಳೊಂದಿಗೆ ಸಮನ್ವಯ ಸಾಧಿಸಲು 'ಸೆಂಟ್ರಲ್ ಕಮಾಂಡ್ ಸೆಂಟರ್' ಆರಂಭಿಸಲಾಗಿದೆ.

ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ಪ್ರಧಾನ ಕಚೇರಿಯಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಅವರು ಈ 'ಸೆಂಟರ್' ಉದ್ಘಾಟಿಸಿದರು.

ಪರಮೇಶ್ವರ ಮಾತನಾಡಿ, 'ಕಾರಾಗೃಹದಲ್ಲಿ ಮದ್ಯ ಕುಡಿದು ನೃತ್ಯ ಮಾಡುವುದು, ಜನ್ಮದಿನ ಆಚರಣೆ, ಮಾದಕ ವಸ್ತು ಪತ್ತೆಗೆ ಸಂಬಂಧಿಸಿದ ವಿಡಿಯೊಗಳು ಜಾಲತಾಣದಲ್ಲಿ ಹರಿದಾಡುತ್ತಿದ್ದವು. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಹಿತೇಂದ್ರ ನೇತೃತ್ವದಲ್ಲಿ ಸಮಿತಿ ರಚಿಸಿತು. ಕಾರಾಗೃಹ ಸುಧಾರಣೆಗೆ ಸಂಬಂಧಿಸಿದಂತೆ ಸಮಿತಿ ಕೆಲವು ಸಲಹೆಗಳನ್ನು ನೀಡಿದೆ' ಎಂದು ಹೇಳಿದರು.

'ಬೆಂಗಳೂರು, ಮೈಸೂರು, ಶಿವಮೊಗ್ಗ, ಬಳ್ಳಾರಿ, ಧಾರವಾಡ, ಬೆಳಗಾವಿ, ಕಲಬುರಗಿ, ವಿಜಯಪುರ ಕೇಂದ್ರ ಕಾರಾಗೃಹಗಳು ಮತ್ತು ಮಂಗಳೂರು, ತುಮಕೂರು, ಬೆಂಗಳೂರು ದಕ್ಷಿಣ ಮತ್ತು ಚಾಮರಾಜನಗರ ಜಿಲ್ಲಾ ಕಾರಾಗೃಹಗಳ ಒಟ್ಟು 1,076 ಕ್ಯಾಮೆರಾಗಳನ್ನು ಕಮಾಂಡ್ ಸೆಂಟರ್‌ಗೆ ಸಂಪರ್ಕ ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕಾರಾಗೃಹಗಳ ಸಿ.ಸಿ. ಟಿ.ವಿ ಕ್ಯಾಮೆರಾ ಪರಿಶೀಲನೆಗೆ ಕ್ರಮ ವಹಿಸಲಾಗುವುದು' ಎಂದು ತಿಳಿಸಿದರು.

ವೇದಾಂತ ಭಾರತೀ ವಿವೇಕ ದೀಪ್ತಿ ಸಮ್ಮೇಳನ: ವಿಧುಶೇಖರ ಭಾರತೀ ಸ್ವಾಮೀಜಿ ಪ್ರತಿಪಾದನೆ

'ಜೀವನ ಸಾರ್ಥಕ್ಯಕ್ಕೆ ಶಂಕರರ ತತ್ವವೇ ಮಾರ್ಗ'

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಇಂದ್ರಿಯಗಳನ್ನು ನಮ್ಮ ವಶದಲ್ಲಿ ಇರಿಸಿಕೊಳ್ಳಲು ಸಾಧ್ಯವಾಗಿಸುವ ಜ್ಞಾನವೇ ನಿಜವಾದ ಜ್ಞಾನ. ಅಂತಹ ಜ್ಞಾನವನ್ನು ಪಡೆದುಕೊಳ್ಳುವುದೇ ನಮ್ಮ ಜೀವನದ ಮಾರ್ಗವಾಗಬೇಕು. ಶಂಕರರ ತತ್ವಗಳು ಆ ಮಾರ್ಗವನ್ನು ತೋರಿಸುತ್ತವೆ' ಎಂದು ಶೃಂಗೇರಿ ಶಾರದಾ ಪೀಠದ ವಿಧುಶೇಖರ ಭಾರತೀ ಸ್ವಾಮೀಜಿ ಹೇಳಿದರು.

ವೇದಾಂತ ಭಾರತೀ ನಗರದಲ್ಲಿ ಆಯೋಜಿಸಿರುವ 'ವಿವೇಕ ದೀಪ್ತಿ' ಸಮಾವೇಶದ ಭಾಗವಾಗಿ ಶನಿವಾರ, ಶಂಕರಭಗವತ್ಪಾದರು ರಚಿಸಿದ್ದ ದಕ್ಷಿಣಾಮೂರ್ತಿ ಅಷ್ಟಕದ ಸಮರ್ಪಣೆ ಕಾರ್ಯಕ್ರಮದ ನಂತರ ಅವರು ಮಾತನಾಡಿದರು.

'ಜನನ–ಮರಣದ ನಡುವಿರುವುದೇ ಜೀವನ. ಅದನ್ನು ಮೀರಿ ಜೀವನವನ್ನು ಸಾರ್ಥಕಗೊಳಿಸಬೇಕು. ಜ್ಞಾನ, ಭಕ್ತಿ ಮತ್ತು ವೈರಾಗ್ಯದ ಮೂಲಕ ಆತ್ಮ ಸಾಕ್ಷಾತ್ಕಾರ ಮತ್ತು ಮೋಕ್ಷವನ್ನು ಸಾಧಿಸಬೇಕು. ಲೌಕಿಕ ಜೀವನದ ಒಳಹೊರಗನ್ನು ತಿಳಿದಷ್ಟೂ ಅವೆಲ್ಲ, ಕೇವಲ ಜೀವನ ನಡೆಸುವ ಸಾಧನಗಳು ಎಂಬ ಅರಿವು ನಮಗಾಗುತ್ತದೆ. ಅದನ್ನು ಅರ್ಥ ಮಾಡಿಸುವ ಸಾಧನವೇ ಶಂಕರರ ತತ್ವ. ಈ ಹೊತ್ತಿನಲ್ಲಿ ಶಂಕರರ ತತ್ವ ಮತ್ತು ಉಪದೇಶಗಳು ಹಿಂದೆಂದಿಗಿಂತ ಹೆಚ್ಚು ಅಗತ್ಯ. ಅವುಗಳನ್ನು ಪ್ರತಿದಿನ ಮನನ ಮಾಡಿಕೊಳ್ಳಬೇಕು' ಎಂದರು.

'ಭಾರತವು ವಿಶ್ವಗುರುವಾಗಲು ಶಂಕರರ ತತ್ವಗಳನ್ನು ಅನುಸರಿಸಬೇಕು. ಆಧುನಿಕ ವಿಜ್ಞಾನ ಮತ್ತು ಸನಾತನ ಧರ್ಮದ್ದು ಬೇರ್ಪಡಿಸಲಾಗದ ಸಂಬಂಧ. ಹೀಗಾಗಿಯೇ ಹಲವು ಯತ್ನಗಳ ನಂತರವೂ ಧರ್ಮವು ನಾಶವಾಗದೇ ಉಳಿದಿದೆ. ವೇದಾಂತ ಭಾರತೀ ಸಹಯೋಗದಲ್ಲಿ ಶೃಂಗೇರಿ ಮಠವು ಧಾರ್ಮಿಕ ಜಾಗೃತಿ ಬಿತ್ತುವ ಕೆಲಸವನ್ನು ಮಾಡುತ್ತಿದೆ. ಅದು ಮುಂದುವರೆಯಬೇಕು' ಎಂದರು.

ಯಡತೊರೆ ಯೋಗಾನಂದೇಶ್ವರ ಸರಸ್ವತೀ ಮಠದ ಬ್ರಹ್ಮಾನಂದ ಭಾರತೀ ಸ್ವಾಮೀಜಿ, ವೇದಾಂತ ಭಾರತೀ ಟ್ರಸ್ಟಿ ಮತ್ತು ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಎಸ್.ಎಸ್.ನಾಗಾನಂದ, ಹಿರಿಯ ವಕೀಲ ಅಶೋಕ ಹಾರನಹಳ್ಳಿ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ದಕ್ಷಿಣಾಮೂರ್ತಿ ಅಷ್ಟಕ ಮತ್ತು ವಿಜ್ಞಾನದ ತತ್ವಗಳನ್ನು ಸಂಯೋಜಿಸಿದ ಪರಿಕಲ್ಪನೆಗಳ ವಸ್ತು ಪ್ರದರ್ಶನವನ್ನು ಸಮ್ಮೇಳನದ ಭಾಗವಾಗಿ ಆಯೋಜಿಸಲಾಗಿದೆ. ವಿವೇಕ ದೀಪ್ತಿಯಲ್ಲಿ ನಗರದ 350ಕ್ಕೂ ಹೆಚ್ಚು ಶಾಲೆಗಳ ವಿದ್ಯಾರ್ಥಿಗಳು ಭಾಗಿಯಾಗಿದ್ದಾರೆ.




ವೇದಾಂತ ಭಾರತಿ ಆಯೋಜಿಸಿದ್ದ ವಿವೇಕದೀಪ್ತಿ ಸಮ್ಮೇಳನದಲ್ಲಿ ಕೃಷ್ಣರಾಜನಗರ ಯಡತೊರೆ ಯೋಗಾನಂದೇಶ್ವರ ಸರಸ್ವತೀ ಮಠದ ಶಂಕರ ಭಾರತೀ ಸ್ವಾಮೀಜಿ ಮತ್ತು ಬ್ರಹ್ಮಾನಂದ ಭಾರತೀ ಸ್ವಾಮೀಜಿ ಹಾಗೂ ಶೃಂಗೇರಿ ಶಾರದಾ ಪೀಠದ ವಿಧುಶೇಖರ ಭಾರತೀ ಸ್ವಾಮೀಜಿ ಭಾಗವಹಿಸಿದ್ದರು (ಎಡಚಿತ್ರ) ಸಮ್ಮೇಳನದಲ್ಲಿ ಶಾಲಾ ವಿದ್ಯಾರ್ಥಿಗಳು ಶಂಕರಭಗವತ್ಪಾದರು ರಚಿಸಿದ್ದ 'ದಕ್ಷಿಣಾಮೂರ್ತಿ ಅಷ್ಟಕ' ಪಠಿಸಿದರು –ಪ್ರಜಾವಾಣಿ ಚಿತ್ರ

> ದಕ್ಷಿಣಾಮೂರ್ತಿ ಅಷ್ಟಕವನ್ನು ವಿಜ್ಞಾನದ ಪರಿಕಲ್ಪನೆಗೆ ಅಳವಡಿಸುವ ಯತ್ನ ಮಾಡಲಾಗಿದೆ. ಈ ಮೂಲಕ ವಿಜ್ಞಾನದ ತತ್ವಗಳನ್ನು ಜನರಿಗೆ ತಲುಪಿಸಲಾಗುವುದು
> **ಶಂಕರ ಭಾರತೀ ಸ್ವಾಮೀಜಿ,** ಯೋಗಾನಂದೇಶ್ವರ ಸರಸ್ವತೀ ಮಠ, ಯಡತೊರೆ

ಕಾಂಗ್ರೆಸ್ ಮುಖಂಡನ ಪುತ್ರರಿಂದ ಪೊಲೀಸರ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕಾಂಗ್ರೆಸ್‌ನ ಸ್ಥಳೀಯ ಮುಖಂಡ, ನಗರಾಭಿವೃದ್ಧಿ ಪ್ರಾಧಿಕಾರದ (ಧೂಡಾ) ಮಾಜಿ ಅಧ್ಯಕ್ಷ ಆಯೂಬ್ ಪೈಲ್ವಾನ್ ಅವರ ಪುತ್ರರಿಬ್ಬರು ಶನಿವಾರ ಸಂಜೆ ಗಲಾಟೆ ಪ್ರಕರಣದ ಆರೋಪಿಗಳನ್ನು ಬಂಧಿಸಲು ತೆರಳಿದ್ದ ಪೊಲೀಸರ ಮೇಲೆ ಹಲ್ಲೆ ನಡೆಸಿದ್ದಾರೆ.

ಇಲ್ಲಿನ ಬಡಾವಣೆ ಠಾಣೆಯ ಇನ್‌ಸ್ಪೆಕ್ಟರ್ ಆರ್.ಗಾಯತ್ರಿ ಹಾಗೂ ಕಾನ್‌ಸ್ಟೆಬಲ್‌ಗಳಾದ ಕೆಂಚಪ್ಪ ಮತ್ತು ಹರೀಶ್ ಹಲ್ಲೆಗೊಳಗಾದವರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಹಲ್ಲೆಗೆ ಸಂಬಂಧಿಸಿದಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಆಪ್ತ ಆಯೂಬ್ ಪೈಲ್ವಾನ್ ಅವರ ಪುತ್ರ ಹಸೇನ್ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕೇಂದ್ರದಿಂದ ತಾರತಮ್ಯ ಆರೋಪ: ಸಿ.ಎಂ ಅಭಿಯಾನ

'ನ್ಯಾಯಕ್ಕಾಗಿ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '16ನೇ ಹಣಕಾಸು ಆಯೋಗದ ಮುಂದೆ ರಾಜ್ಯ ಸರ್ಕಾರವು ನ್ಯಾಯಯುತ ತೆರಿಗೆ ಪಾಲು, ಪ್ರಾಕೃತಿಕ ವಿಕೋಪ ಪರಿಹಾರ ನಿಧಿ, ವಿಶೇಷ ಅನುದಾನ ಸೇರಿದಂತೆ ಪ್ರಮುಖ ಬೇಡಿಕೆಗಳನ್ನು ಮಂಡಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ನನ್ನ ಸಾಮಾಜಿಕ ಜಾಲತಾಣದಲ್ಲಿ 'ನ್ಯಾಯಕ್ಕಾಗಿ ಕನ್ನಡಿಗರ ಹೋರಾಟ' ಎಂಬ ಅಭಿಯಾನ ಆರಂಭಿಸಿದ್ದೇನೆ. ಈ ಅಭಿಯಾನವನ್ನು ಬೆಂಬಲಿಸಬೇಕು' ಎಂದು ನಾಡಿನ ಜನತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ.

ತಮ್ಮ 'ಎಕ್ಸ್' ಖಾತೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿರುವ ಅವರು, '14ನೇ ಹಣಕಾಸು ಆಯೋಗಕ್ಕೆ (ಶೇ 4.71ರಷ್ಟು) ಹೋಲಿಸಿದರೆ 15ನೇ ಹಣಕಾಸು ಆಯೋಗದಲ್ಲಿ ತೆರಿಗೆ ಪಾಲು ಶೇ 3.64ಕ್ಕೆ ಇಳಿಸುವ ಮೂಲಕ ಘೋರ ಅನ್ಯಾಯ ಮಾಡಲಾಗಿದೆ. ಉದಾಹರಣೆಗೆ, ರಾಜ್ಯಗಳಿಗೆ ಹಂಚಿಕೆ ಮಾಡುವ ₹100ರಲ್ಲಿ ಮೊದಲು ಕರ್ನಾಟಕಕ್ಕೆ ₹4.71 ಸಿಗುತ್ತಿದ್ದರೆ 15ನೇ ಆಯೋಗವು ಅದನ್ನು ₹ 3.64 ಇಳಿಸಿತು. ಇದರಿಂದ ರಾಜ್ಯಕ್ಕೆ ಸುಮಾರು ₹80 ಸಾವಿರ ಕೋಟಿಯಷ್ಟು ಅನುದಾನ ಕೈತಪ್ಪಿ, ಅನ್ಯಾಯವಾಯಿತು' ಎಂದಿದ್ದಾರೆ.

'ತೆರಿಗೆ, ಸೆಸ್ ಮುಂತಾದ ರೂಪದಲ್ಲಿ ಕೇಂದ್ರ ಸರ್ಕಾರವು ಕರ್ನಾಟಕದಿಂದ ₹4.5 ಲಕ್ಷ ಕೋಟಿಯಿಂದ ₹5 ಲಕ್ಷ ಕೋಟಿಗಳಷ್ಟು ಸಂಗ್ರಹಿಸುತ್ತದೆ. ಆದರೆ, ಕೇಂದ್ರದಿಂದ ಅತ್ಯಂತ ಕಡಿಮೆ ತೆರಿಗೆ ಪಾಲು ಮತ್ತು ಅನುದಾನ ಪಡೆಯುವ ರಾಜ್ಯ ಕರ್ನಾಟಕ. ಹೀಗಾಗಿ 14ನೇ ಹಣಕಾಸು ಆಯೋಗವು ನೀಡಿದ್ದ ಶೇ 4.71ರಷ್ಟು ಪಾಲನ್ನು ಕೊಟ್ಟರೆ ನಾವು ನಿಟ್ಟುಸಿರು ಬಿಡುವಂತಾಗುತ್ತದೆ. ಅದಕ್ಕಿಂತ ಹೆಚ್ಚು ಕೊಟ್ಟರೆ ಮಾತ್ರ ನೈಜವಾಗಿ ನ್ಯಾಯ ಸಿಕ್ಕಂತಾಗುತ್ತದೆ' ಎಂದೂ ಹೇಳಿದ್ದಾರೆ.

'ಜನಸಂಖ್ಯೆಯನ್ನು 1971ರ ಬದಲಾಗಿ 2011 ಅನ್ನು ಆಧಾರವಾಗಿರಿಸಿಕೊಂಡ ಕಾರಣದಿಂದಲೂ ನಮಗೆ ಅನ್ಯಾಯವಾಗಿದೆ. 1971ರ ಜನಸಂಖ್ಯೆಯನ್ನೇ ಮಾನದಂಡವನ್ನಾಗಿ ಇಟ್ಟುಕೊಳ್ಳಬೇಕು ಹಾಗೂ ಜನಸಂಖ್ಯೆಗೆ ನಿಗದಿಪಡಿಸಿರುವ ಪ್ರಾಮುಖ್ಯವನ್ನು ವೈಜ್ಞಾನಿಕವಾಗಿ ಪರಿಗಣಿಸಬೇಕು. ಕಲ್ಯಾಣ ಕರ್ನಾಟಕ ಭಾಗದ ಪರಿಸರ ಸಂರಕ್ಷಣೆ ಮತ್ತು ವಿಪತ್ತು ನಿರ್ವಹಣೆಗಾಗಿ ₹ 10 ಸಾವಿರ ಕೋಟಿ ವಿಶೇಷ ಪ್ಯಾಕೇಜ್ ನೀಡಬೇಕು' ಎಂದೂ ಒತ್ತಾಯಿಸಿದ್ದಾರೆ.



ಅಭಿಯಾನದ ಭಾಗವಾಗಿ, ಸಿದ್ದರಾಮಯ್ಯ ಅವರ 'ಎಕ್ಸ್' ಖಾತೆಯಲ್ಲಿನ ಪೋಸ್ಟರ್

> ಬೆಂಗಳೂರಿನ ಅಭಿವೃದ್ಧಿಗೆ ಐದು ವರ್ಷಗಳಲ್ಲಿ ₹1.15 ಲಕ್ಷ ಕೋಟಿ ಹೂಡಿಕೆ ಅಗತ್ಯವಿದ್ದು, 16ನೇ ಹಣಕಾಸು ಆಯೋಗವು ಕನಿಷ್ಠ ₹ 27,793 ಕೋಟಿ ನೀಡುವಂತೆ ಶಿಫಾರಸು ಮಾಡಬೇಕು
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಮತ್ತೊಬ್ಬ ಪಿಎಸ್‌ಐ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ


ಚೇತನ್ ಕುಮಾರ್

ತುಮಕೂರು: ಟೋಯಿಂಗ್ ಮಾಡಿ ಒಯ್ದಿದ್ದ ಕಾರು ಹಿಂದಿರುಗಿಸಲು ₹40 ಸಾವಿರ ಲಂಚ ಪಡೆದ ಆರೋಪದ ಮೇಲೆ ತುಮಕೂರು ಗ್ರಾಮಾಂತರ ಠಾಣೆ ಸಬ್ ಇನ್‌ಸ್ಪೆಕ್ಟರ್ ಎಸ್.ಎಸ್. ಚೇತನ್ ಕುಮಾರ್ ಅವರನ್ನು ಲೋಕಾಯುಕ್ತ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಚೇತನ್ ಪರ ಲಂಚದ ಹಣ ಪಡೆದಿದ್ದ ಜಾಸ್ ಟೋಲ್ ಸಮೀಪದ ಹೋಟೆಲ್ ಕ್ಯಾಷಿಯರ್ ಸಫ್ದರ್ ಅಲಿಖಾನ್ ಅವರನ್ನು ಬಂಧಿಸಲಾಗಿದೆ. ಇಬ್ಬರನ್ನೂ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಪ್ರಕರಣ ವಿವರ: ಬೆಂಗಳೂರಿನ ನಾಗದೇವನಹಳ್ಳಿಯ ಎಸ್.ಕೆ.ನಾಗೇಶ್ ಅವರು ಜ. 17ರಂದು ನಗರದ ಹೊರವಲಯದ ಕೆಸರುಮಡು ಗ್ರಾಮದ ದರ್ಗಾ ಸರ್ಕಲ್‌ನಲ್ಲಿ ಕಾರು ನಿಲ್ಲಿಸಿದ್ದರು. ಆಗ ಸ್ಥಳಕ್ಕೆ ಪಿಎಸ್‌ಐ ಟೋಯಿಂಗ್ ಮಾಡಿ ಕಾರು ತೆಗೆದುಕೊಂಡು ಹೋಗಿ ಠಾಣೆ ಬಳಿ ನಿಲ್ಲಿಸಿದ್ದರು.

ಠಾಣೆಗೆ ಬಂದು ಕಾರು ಬಿಡುಗಡೆಗೆ ಕೋರಿದಾಗ, 'ನೀವು ಗಾಂಜಾ ಸೇವನೆ ಮಾಡಿದ್ದೀರಿ. ಪ್ರಕರಣ ದಾಖಲಿಸಲಾಗುವುದು. ನ್ಯಾಯಾಲಯದಲ್ಲಿ ಕಾರು ಬಿಡಿಸಿಕೊಳ್ಳಿ' ಎಂದಿದ್ದಾರೆ. ನಂತರ ₹5 ಲಕ್ಷ ಲಂಚಕ್ಕೆ ಒತ್ತಾಯಿಸಿದ್ದಾರೆ. ಅಂತಿಮವಾಗಿ ₹40 ಸಾವಿರ ನೀಡಿ ಕಾರು ತೆಗೆದುಕೊಂಡು ಹೋಗುವಂತೆ ಸೂಚಿಸಿದ್ದಾರೆ. ಈ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಪಿಎಸ್‌ಐ ಸೂಚನೆಯಂತೆ ಶುಕ್ರವಾರ ರಾತ್ರಿ ಜಾಸ್ ಟೋಲ್ ಬಳಿ ಇರುವ 'ನಮಸ್ತೆ ತುಮಕೂರು' ಹೋಟೆಲ್ ಕ್ಯಾಷಿಯರ್ ಸಫ್ದರ್ ಅಲಿಖಾನ್ ಅವರಿಗೆ ನಾಗೇಶ್ ₹40 ಸಾವಿರ ನೀಡಿದ್ದರು. ಆಗ ಲೋಕಾಯುಕ್ತ ಪೊಲೀಸರು ಹಣದ ಸಹಿತ ಖಾನ್ ವಶಕ್ಕೆ ಪಡೆದರು.

ಕೇರಳದಲ್ಲಿ ಮುಂದಿನ ವರ್ಷದಿಂದ 10ನೇ ತರಗತಿಯಲ್ಲಿ ಶೇಕಡ 25ರಷ್ಟು ಪಠ್ಯಕ್ರಮವನ್ನು ಕಡಿತ ಮಾಡುವ ಸರ್ಕಾರದ ನಿರ್ಧಾರ ಸರಿಯೇ?

● ಸರಿ ● ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಆಶ್ವಾಸನೆ ಈಡೇರಿಕೆಗಾಗಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ 10 ಮಹಾನಗರ ಪಾಲಿಕೆಗಳ ನೌಕರರ ಬೇಡಿಕೆಗಳನ್ನು ಮೂರು ತಿಂಗಳಲ್ಲಿ ಈಡೇರಿಸುವುದಾಗಿ ನೀಡಿದ್ದ ಆಶ್ವಾಸನೆಯನ್ನು ಕೂಡಲೇ ಕಾರ್ಯಗತಗೊಳಿಸಬೇಕು' ಎಂದು ರಾಜ್ಯ ಮಹಾನಗರ ಪಾಲಿಕೆಗಳ ನೌಕರರ ಸಂಘ ಮನವಿ ಮಾಡಿಕೊಂಡಿದೆ.

'ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು, ಮುಷ್ಕರ ನಿರತ ಮಹಾನಗರ ಪಾಲಿಕೆಗಳ ನೌಕರರನ್ನು ಕಳೆದ ಜುಲೈ 15ರಂದು ಭೇಟಿ ಮಾಡಿ, ಇಲಾಖೆಯ ಕಾರ್ಯದರ್ಶಿಯವರೊಂದಿಗೆ ಸಂಧಾನ ಸಭೆ ನಡೆಸಿದ್ದರು. ಎಲ್ಲ ಬೇಡಿಕೆಗಳನ್ನು ಮೂರು ತಿಂಗಳಲ್ಲಿ ಈಡೇರಿಸುವ ಭರವಸೆ ನೀಡಿದ್ದರು. ಆರು ತಿಂಗಳಾದರೂ ಇನ್ನೂ ಯಾವುದೇ ಕ್ರಮವಾಗಿಲ್ಲ' ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

ಸಾಮಾನ್ಯ ನೇಮಕಾತಿ ನಿಯಮಗಳಿಗೆ ತಿದ್ದುಪಡಿ, ನೌಕರರನ್ನು ಪೂರ್ಣ ಪ್ರಮಾಣದಲ್ಲಿ ಸರ್ಕಾರಿ ನೌಕರರೆಂದು ಪರಿಗಣಿಸುವುದು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ (ಕೆಜಿಐಡಿ), ಸಮೂಹ ವಿಮೆ ಯೋಜನೆ (ಜಿಐಎಸ್) ಮತ್ತು ಸಮೂಹ ಭವಿಷ್ಯ ನಿಧಿ (ಜಿಪಿಎಫ್) ಸೌಲಭ್ಯಗಳನ್ನು ನೀಡಬೇಕು ಎಂದು ಒತ್ತಾಯಿಸಿ ಮಹಾನಗರ ಪಾಲಿಕೆಗಳ ನೌಕರರು 2025ರ ಜುಲೈ 8ರಿಂದ ಮುಷ್ಕರ ನಡೆಸಿದ್ದರು.

ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಯವರಿಗೆ ಪತ್ರ ಬರೆದಿರುವ ಅವರು, 'ನಗರಾಭಿವೃದ್ಧಿ ಸಚಿವರು ಹಾಗೂ ನೀವು ನೀಡಿದ್ದ ಆಶ್ವಾಸನೆಯಿಂದ ಮುಷ್ಕರವನ್ನು ವಾಪಸ್ ಪಡೆಯಲಾಗಿತ್ತು. ಆದರೆ ಈವರೆಗೂ ವೃಂದ ಮತ್ತು ನೇಮಕಾತಿ ನಿಯಮಾವಳಿ ತಿದ್ದುಪಡಿ ಸೇರಿದಂತೆ ಪ್ರಮುಖ ಬೇಡಿಕೆಗಳನ್ನು ಈಡೇರಿಸುವಲ್ಲಿ ಸರ್ಕಾರಿ ಆದೇಶವಾಗಿಲ್ಲ. ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ.

ಬಾಗಿಲು ತೆರೆಯಲು ಒಪ್ಪದ ಸಿಬ್ಬಂದಿ ಜತೆಗೆ ವಾಗ್ವಾದ

ಕಸಾಪ ಕಚೇರಿ ಬಾಗಿಲು ಬಡಿದ ಜೋಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧ್ಯಕ್ಷ ಸ್ಥಾನ ಅಲಂಕರಿಸಲು ವಕೀಲರೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತಿಗೆ (ಕಸಾಪ) ಶನಿವಾರ ಭೇಟಿ ನೀಡಿದ್ದ ಮಹೇಶ ಜೋಶಿ, ಕಚೇರಿಯ ಬಾಗಿಲು ತೆರೆಯಲು ಒಪ್ಪದ ಅಲ್ಲಿನ ಸಿಬ್ಬಂದಿ ಜತೆಗೆ ವಾಗ್ವಾದ ನಡೆಸಿದರು.

ಸಹಕಾರ ಇಲಾಖೆಯು ಆಡಳಿತಾಧಿಕಾರಿ ನೇಮಕ ಮಾಡಿದ್ದ ಆದೇಶದಲ್ಲಿ 'ಅಧಿಕಾರವಧಿ ಮುಂದಿನ 3 ತಿಂಗಳಿಗೆ ಅಥವಾ ವಿಚಾರಣೆ ಪೂರ್ಣಗೊಳ್ಳುವವರೆಗೆ ಈ ನೇಮಕಾತಿ ಜಾರಿಯಲ್ಲಿ ಇರಲಿದೆ' ಎಂದು ತಿಳಿಸಿತ್ತು.

ಆಡಳಿತಾಧಿಕಾರಿ ಅವಧಿ ವಿಸ್ತರಿಸಿರುವ ಬಗ್ಗೆ ಮಾಹಿತಿ ಇರದಿದ್ದ ಜೋಶಿ, ಈ ಹಿಂದೆ ತಮ್ಮ ಕಾರ್ಯಕಾರಿ ಸಮಿತಿಯಲ್ಲಿ ಗೌರವ ಕಾರ್ಯದರ್ಶಿಯಾಗಿದ್ದ ಬಿ.ಎಂ.ಪಟೇಲ್ ಪಾಂಡು, ಗೌರವ ಕೋಶಾಧ್ಯಕ್ಷರಾಗಿದ್ದ ಡಿ.ಆರ್. ವಿಜಯ ಕುಮಾರ್ ಜತೆಗೆ ಅಧ್ಯಕ್ಷ ಸ್ಥಾನ ಅಲಂಕರಿಸಲು ಪರಿಷತ್ತಿಗೆ ಭೇಟಿ ನೀಡಿದರು.

ಆಡಳಿತಾಧಿಕಾರಿ ಕಚೇರಿಯ ಬಾಗಿಲು ತೆರೆಯುವಂತೆ ಜೋಶಿ ಪಟ್ಟು ಹಿಡಿದ ಕಾರಣ, ಕೆಲ ಹೊತ್ತು ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಈ ವೇಳೆ ಆಡಳಿತಾಧಿಕಾರಿ ಅವರ ಅವಧಿ ವಿಸ್ತರಿಸಿ ಹೊರಡಿಸಲಾದ ಆದೇಶದ ಪ್ರತಿಯನ್ನು, ಕಸಾಪ ಸಿಬ್ಬಂದಿ ಪೊಲೀಸರ ಸಮ್ಮುಖದಲ್ಲಿ ನೀಡುತ್ತಿದ್ದಂತೆ ವಾಪಸ್ ತೆರಳಿದರು.

ಮಹೇಶ ಜೋಶಿ ಅವರ ಕಾರ್ಯವಿಧಾನದ ಬಗ್ಗೆ ಆರೋಪಗಳು ಕೇಳಿಬಂದ ಕಾರಣ, ಸಹಕಾರ ಇಲಾಖೆಯು ಈ ಹಿಂದೆ ವಿಚಾರಣಾಧಿಕಾರಿಯನ್ನೂ ನೇಮಕ ಮಾಡಿತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಅವರು 2025ರ ಅಕ್ಟೋಬರ್‌ನಲ್ಲಿ ಕಸಾಪ ಆಡಳಿತಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ್ದರು.

ಜೋಶಿ ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆ ಪೂರ್ಣಗೊಳ್ಳದ ಕಾರಣ, ಆಡಳಿತಾಧಿಕಾರಿ ಅವಧಿಯನ್ನು 'ಮುಂದಿನ 3 ತಿಂಗಳು ಅಥವಾ ಸರ್ಕಾರದಿಂದ ಅಂತಿಮ ತೀರ್ಮಾನವಾಗುವವರೆಗೆ' ವಿಸ್ತರಿಸಿ ಡಿ.30ರಂದೇ ಇಲಾಖೆ ಆದೇಶ ಹೊರಡಿಸಿದೆ.


ಕಸಾಪ ಆಡಳಿತಾಧಿಕಾರಿ ಕಚೇರಿ ಮುಂದೆ ಮಹೇಶ ಜೋಶಿ, ಬಿ.ಎಂ. ಪಟೇಲ್ ಪಾಂಡು, ಡಿ.ಆರ್. ವಿಜಯ ಕುಮಾರ್

'ಅಧ್ಯಕ್ಷ ಹುದ್ದೆ ಖಾಲಿ ಬಿಡುವಂತಿಲ್ಲ'

'ನಾನು ಚುನಾಯಿತ ಅಧ್ಯಕ್ಷನಾಗಿದ್ದು, ಯಾವುದೇ ಕಾರಣಕ್ಕೂ ಕಸಾಪ ಅಧ್ಯಕ್ಷ ಹುದ್ದೆಯನ್ನು ಖಾಲಿ ಬಿಡುವಂತಿಲ್ಲ. ಅಧ್ಯಕ್ಷ ಹುದ್ದೆ, ಕಾರ್ಯಕಾರಿ ಸಮಿತಿಯನ್ನು ವಿಸರ್ಜಿಸಿಲ್ಲ. ಆದ್ದರಿಂದ, ಈ ಹುದ್ದೆಯಲ್ಲಿ ಪುನರ್ ಕಾರ್ಯನಿರ್ವಹಿಸಲು ಹಾಜರಾಗಿದ್ದೆ. ಆಡಳಿತಾಧಿಕಾರಿ ಅವಧಿಯನ್ನು ಮತ್ತೊಮ್ಮೆ ಮೂರು ತಿಂಗಳು ವಿಸ್ತರಿಸಿ ಸರ್ಕಾರ ಆದೇಶ ಹೊರಡಿಸಿದರೂ, ಕೋರ್ಟ್ ವಿಚಾರಣೆ ಸಂದರ್ಭದಲ್ಲಿ ಸರ್ಕಾರವು ಅದನ್ನು ಮರೆಮಾಚಿದೆ. ನಮ್ಮ ವಕೀಲರಿಗೆ, ಆಡಳಿತಾಧಿಕಾರಿ ಅವಧಿ ವಿಸ್ತರಿಸಿದ ಆದೇಶ ಪ್ರತಿಯನ್ನು ಕೊಟ್ಟಿಲ್ಲ' ಎಂದು ಮಹೇಶ ಜೋಶಿ ತಿಳಿಸಿದರು.

'3 ತಿಂಗಳ ಅವಧಿಗೆ ಅಥವಾ ವಿಚಾರಣೆ ಪೂರ್ಣಗೊಳ್ಳುವವರೆಗೆ ಇದರಲ್ಲಿ ಯಾವುದು ಮೊದಲೊ ಅಲ್ಲಿಯವರೆಗೆ ಮಾತ್ರ ಆಡಳಿತಾಧಿಕಾರಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿತ್ತು. ಹೈಕೋರ್ಟ್‌ನ ಏಕಸದಸ್ಯ ಪೀಠಕ್ಕೆ 2026ರ ಜ.13ರಂದು ವಿಚಾರಣೆ ವರದಿಯನ್ನು ಸಲ್ಲಿಸಲಾಗಿದೆ. ಈ ನಿಟ್ಟಿನಲ್ಲಿ ಆಡಳಿತಾಧಿಕಾರಿಯ ಅವಧಿ, ವಿಚಾರಣೆ ಪೂರ್ಣಗೊಂಡಿದ್ದರಿಂದ ಸಹಜವಾಗಿ ಅಧ್ಯಕ್ಷರಾಗಿ ನಾನು ಮುಂದುವರಿಯಬೇಕಾಗುತ್ತದೆ' ಎಂದು ಹೇಳಿದರು.

ಭಾನುವಾರ, ಫೆಬ್ರುವರಿ 1, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 32 | ಪುಟ 22
● www.prajavani.net prajavani.net prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಮರ್ಕಟಗಳಾಟ...
ಎರಡು ಕೋತಿಗಳು ಚಿನ್ನಾಟದಲ್ಲಿ ತೊಡಗಿದ್ದ ದೃಶ್ಯವು ದೆಹಲಿಯಲ್ಲಿ ಶನಿವಾರ ಕಂಡಿತು



‘ಹೂಡಿಕೆ, ವಿಸ್ತರಣೆಗೆ ದಾವೋಸ್ ಭೂಮಿಕೆ’ 8
ಗಗನಯಾನಕ್ಕೆ ಸಿದ್ಧತೆ: ಇಸ್ರೊ 9

ಕುಸಿದ ಬೆಲೆ: ರಬ್ಬರ್ ಉಳಿಯುವುದೇ?

ಸರ್ಕಾರದ ಆಮದು ನೀತಿ, ಕಾರ್ಮಿಕರ ಕೊರತೆ, ಏರಿಕೆಯಾಗದ ಧಾರಣೆ: ಪರ್ಯಾಯ ಬೆಳೆಗಳತ್ತ ಬೆಳೆಗಾರರ ಚಿತ್ತ

ಒಳನೋಟ

● ರೇವಣ್ಣ ಎಂ.


ರಬ್ಬರ್ ಹಾಲು ಸಂಗ್ರಹಿಸುವ ಪ್ರಕ್ರಿಯೆ

ಮಂಗಳೂರು: ‘ಮಕ್ಕಳೆಲ್ಲ ಉತ್ತಮ ವೇತನ ಸಿಗುವ ಉದ್ಯೋಗದಲ್ಲಿದ್ದು ಬೇರೆ ಊರುಗಳಲ್ಲಿ ನೆಲಸಿದ್ದಾರೆ. ನಾನು, ಪತ್ನಿ ಜಮೀನು ನೋಡಿಕೊಂಡು ಇದ್ದೇವೆ. ಒಂದು ಹೆಕ್ಟೇರ್‌ನಲ್ಲಿ ಸುಮಾರು 400 ರಬ್ಬರ್ ಮರಗಳಿವೆ. ಎಲ್ಲವನ್ನೂ ನಾನೊಬ್ಬನೇ ಟ್ಯಾಪ್ ಮಾಡಲು ಸಾಧ್ಯ ಆಗುತ್ತಿಲ್ಲ. ಟ್ಯಾಪರ್‌ಗಳಿಂದ (ರಬ್ಬರ್ ಹಾಲಿಳಿಸುವ ಕಾರ್ಮಿಕರು) ಕೆಲಸ ಮಾಡಿಸೋಣ ಎಂದರೆ ಲಾಭವೇನೂ ಸಿಗದು. ಈಗಿನ ಬೆಲೆ ನೋಡಿದರೆ, ರಬ್ಬರ್ ಬೆಳೆಯನ್ನು ಉಳಿಸಿಕೊಳ್ಳಬೇಕು ಎಂಬ ಆಸೆಯೇ ಉಳಿದಿಲ್ಲ’.

‘ತೋಟವನ್ನು ಗುತ್ತಿಗೆಗೆ ನೀಡಿ, ಹಣ್ಣು ಅಥವಾ ಅಡಿಕೆ ಸಸಿ ಹಾಕಬೇಕು ಎಂದು ನಿರ್ಧರಿಸಿದ್ದೇನೆ...’ ಹೀಗೆಂದು ಒಂದೇ ಉಸಿರಿನಲ್ಲಿ ಹೇಳಿದರು ರಬ್ಬರ್ ಬೆಳೆಗಾರ, ಪಶ್ಚಿಮಘಟ್ಟದ ತಪ್ಪಲಿನ ಚಾರ್ಮಾಡಿಯ ಕೃಷ್ಣಪ್ಪ.

ಇದು ಕೇವಲ ಕೃಷ್ಣಪ್ಪ ಅವರ ನಿಲುವಲ್ಲ. ರಾಜ್ಯದ ಬಹುತೇಕ ರಬ್ಬರ್ ಬೆಳೆಗಾರರ ಅಭಿಪ್ರಾಯ.


ದಶಕಗಳ ಹಿಂದೆ ಕರಾವಳಿ, ಮಲೆನಾಡು ಭಾಗದಲ್ಲಿ ಭತ್ತ, ಅಡಿಕೆ, ಗೇರುಬೀಜ (ಗೋಡಂಬಿ) ಬೆಳೆಯುವ ಪ್ರದೇಶಗಳನ್ನು ಆವರಿಸಿದ್ದ ರಬ್ಬರ್ ಬೆಳೆಯ ವ್ಯಾಪ್ತಿ ನಿಧಾನವಾಗಿ ಕಡಿಮೆ ಆಗುತ್ತಿದೆ. ಹವಾಮಾನ ಬದಲಾವಣೆಯಿಂದ ಇಳುವರಿಯಲ್ಲಿ ಆಗುತ್ತಿರುವ ವ್ಯತ್ಯಾಸ, ನಿರಂತರವಾಗಿ ಇಳಿಮುಖವಾಗುತ್ತಿರುವ ಧಾರಣೆ ಹಾಗೂ ಸರ್ಕಾರಗಳ ಆಮದು ಧೋರಣೆಯಿಂದ ರಬ್ಬರ್ ಬೆಳೆಯ ಒಲವು ಕಡಿಮೆಯಾಗುತ್ತಿದೆ. ಜತೆಗೆ, ಕೌಶಲ ಇರುವ ಕಾರ್ಮಿಕರ ಕೊರತೆಯೂ ಬೆಳೆಯ ವಿಸ್ತಾರ, ಬೆಳೆಗಾರರ ಆಸಕ್ತಿಯನ್ನು ಕಡಿಮೆಗೊಳಿಸುತ್ತಿದೆ.

ದೇಶದ ರಬ್ಬರ್ ಉತ್ಪಾದನೆಯಲ್ಲಿ ರಾಜ್ಯವು ಮೂರನೇ ಸ್ಥಾನದಲ್ಲಿದೆ.

▶6

> **ಬೆಳೆಗಾರರು ನಿರಾಶರಾಗುವುದು ಬೇಡ. ರಬ್ಬರ್‌ಗೆ ಭವಿಷ್ಯ ಇದ್ದು, ಭರವಸೆಯ ಬೆಳೆಯಾಗಿದೆ. ಬೆಳೆಗಾರರು ವಿಶ್ವಾಸ ಕಳೆದುಕೊಳ್ಳಬೇಕಿಲ್ಲ. ಇಳುವರಿ ನೀಡುವ ರಬ್ಬರ್ ಮರಗಳನ್ನು ಕಡಿದು ಬೇರೆ ಬೆಳೆ ಬೆಳೆಯುವುದು ಬೇಡ**
> **ಶ್ರೀಧರ ಜಿ.ಭಿಡೆ,** ಅಧ್ಯಕ್ಷ ಬೆಳ್ತಂಗಡಿ ತಾಲ್ಲೂಕು ರಬ್ಬರ್ ಬೆಳೆಗಾರರ ಮಾರುಕಟ್ಟೆ ಮತ್ತು ಸಂಸ್ಕರಣಾ ಸಹಕಾರ ಸಂಘ

ದೇಶದಲ್ಲಿ ನೈಸರ್ಗಿಕ ರಬ್ಬರ್ ಬೆಳೆಯ ಪ್ರದೇಶ, ಉತ್ಪಾದನೆ ಮಾಹಿತಿ



(ಆಧಾರ: ರಬ್ಬರ್ ಬೋರ್ಡ್ ಮಾಹಿತಿ)

ಬೆಳೆಗಾರರ ಬೇಡಿಕೆಗಳು

ಆರ್ಥಿಕ ಸಮಸ್ಯೆಯಿಂದ ಪಾರಾಗಿಸಲು ಹಾಗೂ ರಬ್ಬರ್ ಕೃಷಿಯನ್ನು ಉಳಿಸಲು ನೈಸರ್ಗಿಕ ರಬ್ಬರ್‌ಗೂ ಕನಿಷ್ಠ ಬೆಂಬಲ ಬೆಲೆ ನಿಗದಿಗೊಳಿಸಬೇಕು. ಆಮದು ಸುಂಕ ಹೆಚ್ಚಿಸಿ ದೇಶೀಯ ಉತ್ಪನ್ನಕ್ಕೆ ಆದ್ಯತೆ ಒದಗಿಸಬೇಕು. ಮಾರುಕಟ್ಟೆಯಲ್ಲಿ ಉಂಟಾಗುವ ಬೆಲೆಯ ತೀವ್ರ ಏರಿಳಿತ ತಪ್ಪಿಸಲು ಬೆಲೆ ಸ್ಥಿರೀಕರಣ ನಿಧಿ ಸ್ಥಾಪಿಸಬೇಕು. ನೈಸರ್ಗಿಕ ರಬ್ಬರನ್ನು ಕೃಷಿ ಸರಕಾಗಿಯೇ ಪರಿಗಣಿಸಬೇಕು. ಬೆಳೆ ವಿಮೆ ಯೋಜನೆ ವ್ಯಾಪ್ತಿಗೆ ಒಳಪಡಿಸಿ ಸಹಾಯಧನ ಒದಗಿಸಬೇಕು.

ರಬ್ಬರ್ ವಾಣಿಜ್ಯ ಇಲಾಖೆ ವ್ಯಾಪ್ತಿಯಲ್ಲಿದ್ದು, ಅದನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆ ವ್ಯಾಪ್ತಿಗೆ ಸೇರಿಸಬೇಕು. ಆರ್‌ಎಸ್‌ಎಸ್ (ರಿಬ್ಡ್ ಸ್ಮೋಕ್ಡ್ ಶೀಟ್) ದರ ಕೆ.ಜಿಗೆ ₹258 ನಿಗದಿಗೊಳಿಸಬೇಕು. ರಬ್ಬರ್ ಕೃಷಿಗೂ ಹವಾಮಾನ ಆಧಾರಿತ ವಿಮೆ ಸವಲತ್ತು ಒದಗಿಸಿಕೊಡಬೇಕು.

ಇಂದು ಬಜೆಟ್



ಟ್ರಂಪ್ ಸುಂಕ ಬೆದರಿಕೆ, ಜಾಗತಿಕ ಅಸ್ಥಿರತೆ ಸವಾಲು

ಯಾವ ಯಾವ ಕ್ಷೇತ್ರಗಳಿಗೆ ಆದ್ಯತೆ?

- ರಕ್ಷಣಾ ವಲಯ, ರೈಲ್ವೆ, ರಸ್ತೆ, ನಗರ ಮೂಲಸೌಕರ್ಯ, ನವೀಕರಿಸಬಹುದಾದ ಇಂಧನ, ವಿದ್ಯುತ್ – ಈ ಕ್ಷೇತ್ರಗಳಿಗೆ ಬಡ್ಡಿರಹಿತ ಸಾಲಗಳ ಮೂಲಕ ಹೆಚ್ಚಿನ ಪ್ರೋತ್ಸಾಹ ನೀಡುವ ಸಾಧ್ಯತೆ
- ತಯಾರಿಕಾ ವಲಯಕ್ಕೆ ಉತ್ತೇಜನ, ಕೌಶಲ ಅಭಿವೃದ್ಧಿಗೆ ಪ್ರೋತ್ಸಾಹ
- ತಯಾರಿಕಾ ಸಾಮರ್ಥ್ಯ ವೃದ್ಧಿ, ರಫ್ತು ಮತ್ತು ಉದ್ಯೋಗಾವಕಾಶ ಸೃಷ್ಟಿಗೆ ಹೊಸ ಉಪಕ್ರಮ (ಪಿಎಲ್‌ಐ) ಜಾರಿ ಸಾಧ್ಯತೆ

ಬಜೆಟ್ ಭಾನುವಾರ ಮಂಡನೆ ಆಗುತ್ತಿರುವುದು ಸ್ವತಂತ್ರ ಭಾರತದ ಇತಿಹಾಸದಲ್ಲಿ ಇದೇ ಮೊದಲನೆಯ ಬಾರಿ

ಆರ್ಥಿಕ ಸ್ಥಿರತೆ, ಅಭಿವೃದ್ಧಿ ಸಮನ್ವಯಕ್ಕೆ ಯತ್ನ?

ನವದೆಹಲಿ (ಪಿಟಿಐ): ಭೌಗೋಳಿಕ ರಾಜಕೀಯ ಅನಿಶ್ಚಿತತೆ, ಬಂಡವಾಳದ ಹೊರ ಹರಿವು, ಅಮೆರಿಕದ ಸುಂಕ ಹೇರಿಕೆಯಿಂದ ಭಾರತದ ಅರ್ಥ ವ್ಯವಸ್ಥೆಯ ಮೇಲೆ ಪರಿಣಾಮ ಬೀರದಂತೆ ಆರ್ಥಿಕ ಸ್ಥಿರತೆ ಮತ್ತು ಅಭಿವೃದ್ಧಿ ಮಧ್ಯೆ ಸಮನ್ವಯ ಕಾಯ್ದುಕೊಳ್ಳುವ ಉಪಕ್ರಮಗಳನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭಾನುವಾರ ಮಂಡಿಸಲಿರುವ 2026–27ನೇ ಸಾಲಿನ ಬಜೆಟ್‌ನಲ್ಲಿ ಪ್ರಕಟಿಸುವ ಸಾಧ್ಯತೆಗಳಿವೆ.

ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಗಾತ್ರವನ್ನೇ ಕೇಂದ್ರ ಸರ್ಕಾರ ಅಭಿವೃದ್ಧಿಯ ಮಾನದಂಡವಾಗಿ ಬಿಂಬಿಸಿಕೊಳ್ಳುತ್ತಿದೆ ಎಂಬ ವಿರೋಧ ಪಕ್ಷಗಳ ಟೀಕೆಗಳ ನಡುವೆಯೇ, ಸೀತಾರಾಮನ್ ಒಂಬತ್ತನೆಯ ಬಾರಿಗೆ ಬಜೆಟ್ ಮಂಡಿಸಲು ಸಿದ್ಧರಾಗಿದ್ದಾರೆ.

ಆರ್‌ಬಿಐ ರೆಪೊ ದರ ಇಳಿಕೆ ಮಾಡಿರುವುದು, ಆದಾಯ ತೆರಿಗೆ, ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಕಡಿತ ಮಾಡಿರುವುದು ಈಗಾಗಲೇ ದೇಶದ ಆರ್ಥಿಕ ಬೆಳವಣಿಗೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ. ಹಣದುಬ್ಬರವೂ ಇಳಿಕೆ ಕಂಡಿದೆ. ಅಮೆರಿಕವು ಶೇಕಡ 50ರಷ್ಟು ಪ್ರತೀಕಾರದ ಸುಂಕ ವಿಧಿಸಿದರೂ ಭಾರತವು ಪ್ರಗತಿ ದರದಲ್ಲಿ ‘ಸ್ಥಿರತೆ’ ಕಾಯ್ದುಕೊಂಡಿದ್ದು ಇದೇ ಕಾರಣಕ್ಕೆ ಎನ್ನುತ್ತಾರೆ ಆರ್ಥಿಕ ವಿಶ್ಲೇಷಕರು.

ಈ ಹಂತದಲ್ಲಿ ಜಾಗತಿಕ ವ್ಯಾಪಾರ ಅಸ್ಥಿರತೆ, ಚಿನ್ನ ಬೆಳ್ಳಿ ಧಾರಣೆಯಲ್ಲಿ ಅಪಾಯಕಾರಿ ಏರಿಕೆ, ಡಾಲರ್ ಎದುರು ರೂಪಾಯಿ ವಿನಿಮಯ ಮೌಲ್ಯ ಕುಸಿತ ಮತ್ತಿತರರ ಸವಾಲುಗಳನ್ನು ಮೆಟ್ಟಿ ನಿಲ್ಲಲು ಬೇಕಿರುವ ಕ್ರಮಗಳು ಬಜೆಟ್‌ನಲ್ಲಿ ಘೋಷಣೆಯಾಗುವ ಸಾಧ್ಯತೆಗಳಿವೆ.

ದೇಶೀಯ ಮಟ್ಟದಲ್ಲಿ ತಯಾರಿಕೆಯನ್ನು ಹೆಚ್ಚಿಸಿ ಬಳಕೆಯನ್ನು ಪ್ರೋತ್ಸಾಹಿಸಲು ಸರ್ಕಾರ ಕ್ರಮ ವಹಿಸಲಿದೆ. ಮೂಲಸೌಕರ್ಯ ವಲಯದಲ್ಲಿ ಹೂಡಿಕೆ ಹೆಚ್ಚಿಸುವುದರ ಜತೆಯಲ್ಲೇ, ವಿತ್ತೀಯ ಕೊರತೆ ಹೆಚ್ಚದಂತೆ ನೋಡಿಕೊಳ್ಳಲೂ ಗಮನ ಹರಿಸುವ ಸಾಧ್ಯತೆಗಳಿವೆ.

▶8

ಏನಿರಬಹುದು?

- ವೈಯಕ್ತಿಕ ಆದಾಯ ತೆರಿಗೆ ಮಿತಿಯಲ್ಲಿ ಏರಿಕೆ ಸಾಧ್ಯತೆ ಕಡಿಮೆ
- ಮಧ್ಯಮ ವರ್ಗದ ಮೇಲಿನ ಹೊರೆ ಇಳಿಸಿ, ಬಳಕೆಗೆ ಉತ್ತೇಜನ
- ಕಾರ್ಪೊರೇಟ್ ತೆರಿಗೆಯಲ್ಲಿ ಯಥಾಸ್ಥಿತಿ ಸಾಧ್ಯತೆ
- ಪೆಟ್ರೋಲ್– ಡೀಸೆಲ್ ಮೇಲಿನ ಅಬಕಾರಿ ಸುಂಕ ಏರಿಕೆ ಸಾಧ್ಯತೆ. ಆದರೆ, ಅದನ್ನು ನೇರವಾಗಿ ಗ್ರಾಹಕರಿಗೆ ವರ್ಗಾಯಿಸುವ ಸಾಧ್ಯತೆ ಕಡಿಮೆ
- ಚುನಾವಣೆ ನಡೆಯಲಿರುವ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಅಸ್ಸಾಂ ರಾಜ್ಯಗಳಿಗೆ ಹೊಸ ಕೊಡುಗೆಗಳ ಘೋಷಣೆ ಸಾಧ್ಯತೆ
- ಎಂಎಸ್‌ಎಂಇ ವಲಯಕ್ಕೆ ಪ್ರೋತ್ಸಾಹ– ಸಾಲ ಖಾತರಿ
- ಎಲೆಕ್ಟ್ರಿಕ್ ಮೊಬಿಲಿಟಿ, ಗ್ರೀನ್ ಹೈಡ್ರೋಜನ್, ಶುದ್ಧ ಇಂಧನ ಉಪಕರಣ ವಲಯಕ್ಕೆ ಉತ್ತೇಜನ
- ಜಾಗತಿಕ ಅಸ್ಥಿರತೆ ಕಾರಣದಿಂದ ಇಂಧನ ಭದ್ರತೆಗೆ ಯೋಜನೆ

ಸವಾಲುಗಳು

- ತೆರಿಗೆ ಕಡಿತವು ಸರ್ಕಾರದ ಆದಾಯಕ್ಕೆ ಹೊಡೆತ ನೀಡುವುದರಿಂದ ಈ ಆಯ್ಕೆಯನ್ನು ಕೆಲವು ಕ್ಷೇತ್ರಗಳಿಗೆ ಮಾತ್ರ ಸೀಮಿತಗೊಳಿಸಬಹುದು
- ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದ ಸ್ಥಿರಗೊಳ್ಳದ ಹೊರತು ಹೂಡಿಕೆದಾರರ ವಿಶ್ವಾಸವನ್ನು ಶೀಘ್ರವಾಗಿ ಮರುಸ್ಥಾಪಿಸುವುದು ಕಷ್ಟ
- ಡಾಲರ್ ಎದುರು ರೂಪಾಯಿ ವಿನಿಮಯ ಮೌಲ್ಯ ಕುಸಿಯುತ್ತಿರುವುದರಿಂದ ವಿದೇಶಿ ಹೂಡಿಕೆದಾರಿಂದ ಷೇರುಗಳ ಮಾರಾಟ ಹೆಚ್ಚಿದೆ

ಮೊರಾರ್ಜಿ ದೇಸಾಯಿ ಅವರು 10 ಬಾರಿ ಬಜೆಟ್ ಮಂಡಿಸಿದ್ದರು. ಅವರ ದಾಖಲೆಯ ಸಮೀಪಕ್ಕೆ ನಿರ್ಮಲಾ ಸೀತಾರಾಮನ್ (9ನೇ ಬಾರಿ) ಬಂದಿದ್ದಾರೆ

ನಾಲ್ವರು ಕಾರ್ಮಿಕರು ಶಂಕಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಸೂಲಿಬೆಲೆ (ಹೊಸಕೋಟೆ): ಮುತ್ಸಂದ್ರ ಗ್ರಾಮದಲ್ಲಿ ಶುಕ್ರವಾರ ಬೆಳಗಿನ ಜಾವ ಅಸ್ಸಾಂನ ನಾಲ್ವರು ಕಾರ್ಮಿಕರು ತಾವಿದ್ದ ಮನೆಯಲ್ಲಿ ಶಂಕಾಸ್ಪದವಾಗಿ ಮೃತಪಟ್ಟಿದ್ದಾರೆ.

ಜಯಂತ್ ಶಿಂಧೆ (25), ನೀರೇಂದ್ರನಾಥ್ ಟೈಡ್ (24) ಡಾಕ್ಟರ್ ಟೈಡ್ (25), ಧನಂಜಯ್ ಟೈಡ್ (20) ಮೃತ ಕಾರ್ಮಿಕರು. ವೇರ್‌ಹೌಸ್‌ನಲ್ಲಿ ಕೆಲಸ ಮಾಡುತ್ತಿದ್ದ ನಾಲ್ವರೂ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಶುಕ್ರವಾರ ಎರಡನೇ ಪಾಳಿ ಕೆಲಸಕ್ಕೆ ಹೋಗಿರಲಿಲ್ಲ. ಇವರ ಜೊತೆಗೆ ವಾಸವಿದ್ದ ಕಾರ್ಮಿಕ ಅಜಯ್ ಕೆಲಸಕ್ಕೆ ತೆರಳಿದ್ದರು. ಆತ ಕೆಲಸವನ್ನು ಮುಗಿಸಿ ರಾತ್ರಿ ಮನೆಗೆ ಹಿಂದಿರುಗಿದಾಗ ನಾಲ್ವರು ಮೃತಪಟ್ಟಿರುವುದು ಗೊತ್ತಾಯಿತು. ಸಾವಿಗೆ ನಿಖರ ಕಾರಣ ಗೊತ್ತಾಗಿಲ್ಲ.

ಗ್ಯಾಸ್ ಸ್ಟೌ ಮೇಲಿಟ್ಟಿದ್ದ ಪಾತ್ರೆಯಲ್ಲಿ ಅನ್ನ ಸೀದು ಹೋಗಿತ್ತು. ಕಿಟಕಿ ಇಲ್ಲದಿದ್ದ ಕೊಠಡಿಯಲ್ಲಿ ಹೊಗೆ ತುಂಬಿತ್ತು. ಉಸಿರುಗಟ್ಟಿ ಸತ್ತಿರಬಹುದು ಎಂದು ಶಂಕಿಸಲಾಗಿದೆ. ಸೂಲಿಬೆಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಯ್ ಆತ್ಮಹತ್ಯೆ: ತನಿಖೆಗೆ ಎಸ್‌ಐಟಿ

ಪ್ರಜಾವಾಣಿ ವಾರ್ತೆ


ಸಿ.ಜೆ.ರಾಯ್

ಬೆಂಗಳೂರು: ರಿಯಲ್ ಎಸ್ಟೇಟ್ ಕಂಪನಿ ‘ಕಾನ್ಫಿಡೆಂಟ್ ಗ್ರೂಪ್’ ಮುಖ್ಯಸ್ಥ ಸಿ.ಜೆ.ರಾಯ್ ಅವರು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣ ಏನು ಎಂಬುದು ನಿಗೂಢವಾಗಿದ್ದು, ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಲಾಗಿದೆ.

ಗ್ರೂಪ್‌ನ ಕೇರಳ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಟಿ.ಎ.ಜೋಸೆಫ್ ಅವರ ದೂರು ಆಧರಿಸಿ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಕಾಯ್ದೆಯ ಸೆಕ್ಷನ್ 194/3(4) ಅಡಿ ಅನುಮಾನಾಸ್ಪದ ಸಾವು ಪ್ರಕರಣ ದಾಖಲಾಗಿತ್ತು.

ಈ ಪ್ರಕರಣದ ತನಿಖೆಗೆ ಪಶ್ಚಿಮ ವಲಯದ ಜಂಟಿ ಪೊಲೀಸ್ ಕಮಿಷನರ್ ಸಿ.ವಂಶಿಕೃಷ್ಣ ನೇತೃತ್ವದಲ್ಲಿ ಎಸ್‌ಐಟಿ ರಚಿಸಿ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಶನಿವಾರ ಆದೇಶಿಸಿದ್ದಾರೆ. ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ್ ಅವರು ತನಿಖಾಧಿಕಾರಿಯಾಗಿ ನೇಮಕಗೊಂಡಿದ್ದಾರೆ.

▶7

ತೆರಿಗೆ ಭಯೋತ್ಪಾದನೆಯಿಂದ ರಕ್ಷಿಸಿ: ಮೋಹನ್‌ದಾಸ್ ಪೈ

ಬೆಂಗಳೂರು: ‘ಪ್ರಧಾನಿ ನರೇಂದ್ರ ಮೋದಿ ಅವರೇ ಪ್ರಾಮಾಣಿಕ ತೆರಿಗೆ ಪಾವತಿದಾರರನ್ನು ತೆರಿಗೆ ಭಯೋತ್ಪಾದನೆಯಿಂದ ರಕ್ಷಿಸಿ’ ಎಂದು ಉದ್ಯಮಿ ಟಿ.ವಿ.ಮೋಹನ್‌ದಾಸ್ ಪೈ ಅವರು ಕೋರಿದ್ದಾರೆ.

‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ಪ್ರಧಾನಿ ಮೋದಿ ಮತ್ತು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಅದನ್ನು ಟ್ಯಾಗ್ ಮಾಡಿದ್ದಾರೆ.

▶7

ಸುನೇತ್ರಾ ಪವಾರ್ ಪದಗ್ರಹಣ

ಪ್ರಜಾವಾಣಿ ವಾರ್ತೆ/ ಪಿಟಿಐ


ಮುಂಬೈ (ಪಿಟಿಐ): ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ನಾಯಕ, ದಿವಂಗತ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ಅವರು ಮಹಾರಾಷ್ಟ್ರದ ಮೊದಲ ಮಹಿಳಾ ಉಪ ಮುಖ್ಯಮಂತ್ರಿಯಾಗಿ ಶನಿವಾರ ಪ್ರಮಾಣವಚನ ಸ್ವೀಕರಿಸಿದರು.

ಸುನೇತ್ರಾ (62) ಅವರು ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊಸ ಜವಾಬ್ದಾರಿ ವಹಿಸಿಕೊಂಡರು. ಇಲ್ಲಿನ ಲೋಕಭವನದಲ್ಲಿ ಸಂಜೆ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ಆಚಾರ್ಯ ದೇವವ್ರತ ಅವರು ಪ್ರಮಾಣವಚನ ಬೋಧಿಸಿದರು. ಇದಕ್ಕೂ ಮುನ್ನ ಶನಿವಾರ ಬೆಳಿಗ್ಗೆ ಅವರನ್ನು ಎನ್‌ಸಿಪಿ ಶಾಸಕಾಂಗ ಪಕ್ಷದ ನಾಯಕಿಯಾಗಿ ಆಯ್ಕೆ ಮಾಡಲಾಯಿತು.

▶9

> **ಅಜಿತ್ ಪವಾರ್ ಅವರ ಪರಂಪರೆ ಮತ್ತು ಆದರ್ಶಗಳನ್ನು ಮುಂದುವರಿಸುತ್ತೇನೆ. ಕರ್ತವ್ಯ, ಹೋರಾಟ, ಜನರೆಡೆಗಿನ ಬದ್ಧತೆ ಕುರಿತ ಅವರ ಬೋಧನೆಗಳು ನನಗೆ ಪ್ರೇರಣೆಯಾಗಿದೆ**
> **ಸುನೇತ್ರಾ ಪವಾರ್,** ಮಹಾರಾಷ್ಟ್ರದ ನೂತನ ಡಿಸಿಎಂ

ಚಿನಕುರುಳಿ ಪ್ರಕಾಶ್ ಶೆಟ್ಟಿ



ಪ್ರಬಲ ಸ್ಫೋಟ: ಆರು ಜನಕ್ಕೆ ಗಾಯ

ಪ್ರಜಾವಾಣಿ ವಾರ್ತೆ

ಹುಮನಾಬಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಮೋಳಕೇರಾ ಗ್ರಾಮದಲ್ಲಿ ಶನಿವಾರ ಸಂಭವಿಸಿದ ಪ್ರಬಲ ಸ್ಫೋಟದಲ್ಲಿ ನಾಲ್ವರು ಮಕ್ಕಳು ಸೇರಿದಂತೆ ಆರು ಜನ ಗಾಯಗೊಂಡಿದ್ದಾರೆ.

ಗ್ರಾಮದ ಜಬ್ಬಾರ್ ರಜಾಕ್ (60), ಅನ್ವರ್ ಜಮೀರ್ ಸಾಬ್ (19), ಬುಸೇರಾ ಅಲ್ಲಾವುದ್ದೀನ್ (4), ಆರೀಜ್ ರಜಾಕ್ ಸಾಬ್ (4), ಅರ್ಜಾನ್ ರಜಾಕ್ (7) ಹಾಗೂ ಮಸ್ತಾನ್ ಮುಸಾ (8) ಗಾಯಗೊಂಡವರು. ನಾಲ್ವರು ಮಕ್ಕಳನ್ನು ಜಿಲ್ಲೆಯ ಬ್ರಿಮ್ಸ್‌ಗೆ ದಾಖಲಿಸಲಾಗಿದೆ.

ಜಬ್ಬಾರ್ ಹಾಗೂ ಅನ್ವರ್ ಅವರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಹೆಚ್ಚಿನ ಚಿಕಿತ್ಸೆಗೆ ಕ್ರಮವಾಗಿ ಹೈದರಾಬಾದ್ ಮತ್ತು ಸೋಲಾಪುರ ಆಸ್ಪತ್ರೆಗೆ ಕರೆದೊಯ್ಯಲಾಗಿದೆ.

▶7

ವರ್ಷದಲ್ಲಿ ಐದನೇ ಸ್ಫೋಟ

ಮೋಳಕೇರಾದಲ್ಲಿ ಕಳೆದ ಒಂದು ವರ್ಷದಲ್ಲಿ ಐದು ಬಾರಿ ಸ್ಫೋಟಗಳು ಸಂಭವಿಸಿವೆ. ಈ ಹಿಂದೆ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದರು. ಇಂತಹ ಸ್ಫೋಟಗಳಿಗೆ ಕಾರಣ ತಿಳಿಯಲು ಸಮಗ್ರ ತನಿಖೆ ನಡೆಸಬೇಕೆಂದು ಗ್ರಾಮಸ್ಥರು ಒತ್ತಾಯಿಸುತ್ತ ಬಂದಿದ್ದಾರೆ.

ಸ್ಫೋಟಕ ಸಂಗ್ರಹಿಸಿದ ಅನುಮಾನ

ಹೈದರಾಬಾದ್–ಮುಂಬೈ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲೇ ಇರುವ ಮೋಳಕೇರಾ ಗ್ರಾಮದ ಮನೆಯೊಂದರ ಬಳಿಯೇ ಸತತವಾಗಿ ಸ್ಫೋಟ ಸಂಭವಿಸಿರುವುದು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ‘ಪೇಂಟಿಂಗ್ ಕೆಲಸ ಮಾಡುವ ವ್ಯಕ್ತಿಯೊಬ್ಬರು ಬ್ಯಾರಲ್‌ನಲ್ಲಿ ಪೇಂಟ್ ಹಾಗೂ ಇತರೆ ರಾಸಾಯನಿಕಗಳು ಸಂಗ್ರಹಿಸಿದ ಮಾಹಿತಿಯಿದ್ದು, ಅದರಿಂದಲೇ ಸ್ಫೋಟ ಸಂಭವಿಸಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ತಿಳಿಸಿದ್ದಾರೆ.

ಗೃಹ ಸಚಿವ ಪರಮೇಶ್ವರ ಹೇಳಿಕೆ ಉಲ್ಲೇಖಿಸಿದ ಹೈಕೋರ್ಟ್ ● ಸರ್ಕಾರಕ್ಕೆ ನೋಟಿಸ್

‘ಮರಳು ಅಕ್ರಮ: ಸಿಬಿಐ ತನಿಖೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲ ರಾಜಕೀಯ ಪಕ್ಷಗಳ ಪ್ರಭಾವಿ ವ್ಯಕ್ತಿಗಳು ಅಕ್ರಮ ಮರಳು ಗಣಿಗಾರಿಕೆಯಲ್ಲಿ ಭಾಗಿಯಾಗಿದ್ದಾರೆ’ ಎಂದು ಗೃಹ ಸಚಿವ ಪರಮೇಶ್ವರ ಸದನದಲ್ಲಿ ನೀಡಿದ್ದ ಹೇಳಿಕೆಯ ಮಾಧ್ಯಮ ವರದಿಗಳನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ತನ್ನ ನಿಗಾದಲ್ಲಿ ಸಿಬಿಐ ಅಥವಾ ಎಸ್‌ಐಟಿ ತನಿಖೆ ನಡೆಸುವ ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟಿದೆ.

ಪರಮೇಶ್ವರ ಅವರ ಹೇಳಿಕೆಯ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ವರದಿ ಆಧರಿಸಿ, ಹಿರಿಯ ನ್ಯಾಯಮೂರ್ತಿ ಡಿ.ಕೆ.ಸಿಂಗ್ ಹಾಗೂ ನ್ಯಾಯಮೂರ್ತಿ ತಾರಾ ವಿತಸ್ತಾ ಗಂಜು ಅವರಿದ್ದ ವಿಭಾಗೀಯ ನ್ಯಾಯಪೀಠ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡಿದೆ.

ರಾಜ್ಯದ ಗೃಹ, ಗಣಿ ಮತ್ತು ಅರಣ್ಯ ಇಲಾಖೆಗಳ ಕಾರ್ಯದರ್ಶಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ, ‘ನೋಟಿಸ್‌ಗೆ ಮೂರು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಬೇಕು’ ಎಂದು ನಿರ್ದೇಶಿಸಿದೆ. ಅರ್ಜಿಯನ್ನು ಸೂಕ್ತ ನ್ಯಾಯಪೀಠದ ಮುಂದೆ ನಿಯೋಜನೆ ಮಾಡಲು ಮುಖ್ಯ ನ್ಯಾಯಮೂರ್ತಿಗಳ ಪೀಠಕ್ಕೆ ವರ್ಗಾವಣೆ ಮಾಡಿ ಆದೇಶಿಸಲಾಗಿದೆ.

▶7



- ನ್ಯಾಯಮೂರ್ತಿ ಡಿ.ಕೆ. ಸಿಂಗ್ ನೇತೃತ್ವದ ಪೀಠ
- ಸ್ವಯಂ ಪ್ರೇರಿತ ಪಿಐಎಲ್ ದಾಖಲು
- ಆಕ್ಷೇಪಣೆ ಸಲ್ಲಿಸಲು ಮೂರು ವಾರ ಗಡುವು

ಭರವಸೆ ಕಾಣುತ್ತಿಲ್ಲ...

‘ಮಾಫಿಯಾಗಳಿಂದ ನಡೆಯುತ್ತಿರುವ ಅಕ್ರಮ ಮರಳು ಗಣಿಗಾರಿಕೆ ತಡೆಯಲು ಸೂಕ್ತ ಕ್ರಮ ಕೈಗೊಳ್ಳುವಲ್ಲಿ ರಾಜ್ಯದ ಗೃಹ ಸಚಿವರು ಅಸಹಾಯಕರಾಗಿದ್ದಾರೆ ಎಂದು ಭಾವಿಸುವುದಾದರೆ, ಇಂತಹ ಅಕ್ರಮಗಳನ್ನು ರಾಜ್ಯದ ಆಡಳಿತ ವ್ಯವಸ್ಥೆ ತಡೆಯಬಲ್ಲದು ಎಂಬುದಕ್ಕೆ ಯಾವುದೇ ಭರವಸೆ ಕಾಣುತ್ತಿಲ್ಲ. ಇದೊಂದು ಗಂಭೀರ ಸಮಸ್ಯೆಯಾಗಿದ್ದು ನ್ಯಾಯಾಲಯದ ಮೇಲ್ವಿಚಾರಣೆ ಅಗತ್ಯವಿದೆ’ ಎಂದು ನ್ಯಾಯಪೀಠ ಹೇಳಿದೆ.

‘ರಾಯಚೂರು ಜಿಲ್ಲೆಯ ಶಾಸಕಿಯೊಬ್ಬರು ತಮ್ಮ ಪ್ರದೇಶದಲ್ಲಿ ಅಕ್ರಮ ಮರಳು ಗಣಿಗಾರಿಕೆಯ ವಿರುದ್ಧ ಧ್ವನಿ ಎತ್ತಿದ ಪರಿಣಾಮ ಮರಳು ಮಾಫಿಯಾದವರು ಅವರ ಜೀವಕ್ಕೆ ಬೆದರಿಕೆ ಹಾಕಿದ್ದಾರೆ ಎಂದು ದೂರು ನೀಡಲಾಗಿದೆ. ಮರಳು ತೆಗೆಯುವುದಕ್ಕೆ ಟೆಂಡರ್ ಕರೆದು ಬಿಡ್‌ಗಳನ್ನು ಆಹ್ವಾನಿಸಿದ್ದರೂ, ಅದರ ಪ್ರಕ್ರಿಯೆ ಪೂರ್ಣಗೊಂಡಿಲ್ಲ. ಮರಳು ಗಣಿಗಾರಿಕೆ ನಡೆಸುವುದನ್ನು ಕಾನೂನು ಬದ್ಧಗೊಳಿಸಲು ಬಯಸದ ದೊಡ್ಡದೊಡ್ಡ ಕುಳಗಳು ಈ ದಂಧೆಯಲ್ಲಿ ಭಾಗಿಯಾಗಿದ್ದಾರೆ. ಮರಳು ಗಣಿಗಾರಿಕೆಗೆ ಟೆಂಡರ್ ಕರೆದು ನಿಯಮ ಬದ್ಧವಾಗಿ ನಡೆಸಿದಲ್ಲಿ ಅದರಿಂದ ಬರುವ ಹಣ ಖಜಾನೆಗೆ ಹೋಗುತ್ತದೆ. ಆಗ ಈ ಮಾಫಿಯಾಗಳು ತಮ್ಮ ಅಕ್ರಮ ಗಳಿಕೆಯನ್ನು ಕಳೆದುಕೊಳ್ಳಲಿವೆ’ ಎಂಬ ಮಾಧ್ಯಮ ವರದಿಗಳನ್ನು ನ್ಯಾಯಪೀಠ ಉಲ್ಲೇಖಿಸಿದೆ.





ಆನೇಕಲ್ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಯ ಹರಿಕಾರ, ಜನಪ್ರಿಯ ಶಾಸಕ ಬಿ. ಶಿವಣ್ಣ ರವರಿಗೆ ಹುಟ್ಟು ಹಬ್ಬದ ಸಂಭ್ರಮ



01-02-2026 ನೇ ಭಾನುವಾರ





ಆನೇಕಲ್ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಹರಿಕಾರ ಬಿ.ಶಿವಣ್ಣ ಅವರಿಗೆ ಜನ್ಮದಿನದ ಸಂಭ್ರಮ. ಅವರ ಬದುಕಿನ ಹಾದಿಯ ಸಿಂಹಾವಲೋಕನ ಮಾಡಿದರೆ ಛಲಬಿಡದ ವಿಕ್ರಮನಂತೆ ತನ್ನ ಗುರಿಯನ್ನು ಸಾಧಿಸಿದರು. ವಿದ್ಯಾರ್ಥಿ ದಿಸೆಯಿಂದಲೂ ಕಾಂಗ್ರೆಸ್ ಪಕ್ಷದೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ



ಬಿ.ಶಿವಣ್ಣ ಅವರು ವಿದ್ಯಾರ್ಥಿ ಕಾಂಗ್ರೆಸ್(ಎನ್ಎಸ್‌ಯುಐ) ಜಿಲ್ಲಾಧ್ಯಕ್ಷರಾಗಿ, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾಗಿ, ಜಿಲ್ಲಾ ಪಂಚಾಯಿತಿ ಸದಸ್ಯರಾಗಿ, ಐದು ಬಾರಿ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಮೂರು ಬಾರಿ ಆನೇಕಲ್ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಜನಪ್ರೀತಿಯ ನಾಯಕರಾಗಿ ಕೆಲಸ ಮಾಡುತ್ತಿದ್ದಾರೆ.

ಸರ್ಕಾರದೊಂದಿಗೆ ತಮ್ಮದೇ ಆದ ಒಡನಾಟವಿಟ್ಟುಕೊಂಡು ಪಕ್ಷದ ಪ್ರಮುಖ ನಾಯಕರ ಸಹಕಾರದಿಂದ ಆನೇಕಲ್ ಅಭಿವೃದ್ಧಿಗೆ ಹೆಚ್ಚಿನ ನೆರವು ಪಡೆಯುವ ಮೂಲಕ ಆನೇಕಲ್ ವಿಧಾನಸಭಾ ಕ್ಷೇತ್ರದಲ್ಲಿ ಕಾವೇರಿ ಕುಡಿಯುವ ನೀರು, ದ್ವಿಪಥ ರಸ್ತೆಗಳು, ಸುಸಜ್ಜಿತ ಅಂಬೇಡ್ಕರ್ ಭವನ, ಏತ ನೀರಾವರಿ ಯೋಜನೆಯ ಮೂಲಕ 66 ಕೆರೆಗಳಿಗೆ ನೀರು ತುಂಬಿಸುವುದು, ಶಾಸಕರ ನಡಿಗೆ ಹಳ್ಳಿಯ ಕಡೆ ಕಾರ್ಯಕ್ರಮದ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಜನರ





ಮನೆ ಬಾಗಿಲಿಗೆ ಕೊಂಡೊಯ್ದ ಕೀರ್ತಿ ಬಿ.ಶಿವಣ್ಣ ಅವರಿಗೆ ಸಲ್ಲುತ್ತದೆ.

ಸುಸಜ್ಜಿತ ಅಂಬೇಡ್ಕರ್ ಭವನ ಬಿ. ಶಿವಣ್ಣ ಅವರ ಶಪಥ : ಮೀಸಲು ವಿಧಾನಸಭಾ ಕ್ಷೇತ್ರವಾಗಿದ್ದರೂ ಆನೇಕಲ್ ತಾಲ್ಲೂಕಿನಲ್ಲಿ ಅಂಬೇಡ್ಕರ್ ಭವನ ನಿರ್ಮಾಣವಾಗಿರಲಿಲ್ಲ. ಹಾಗಾಗಿ ಸರ್ಕಾರದಲ್ಲಿ ಒತ್ತಡ ಹೇರಿ ಆನೇಕಲ್‌ಗೆ ಅಂಬೇಡ್ಕರ್ ಭವನ ಮಂಜೂರು ಮಾಡಿಸಿದ್ದಾರೆ. ಬೆಂಗಳೂರಿನ ಟೌನ್ ಹಾಲ್ ಮಾದರಿಯಲ್ಲಿ 19 ಕೋಟಿ ರೂ. ವೆಚ್ಚದಲ್ಲಿ ಅಂಬೇಡ್ಕರ್ ಭವನ ಕಟ್ಟಡವು ಆನೇಕಲ್ ಪಟ್ಟಣದಲ್ಲಿ ನಿರ್ಮಾಣವಾಗಿದ್ದು ಬಹುತೇಕ ಕಾಮಗಾರಿ ಪೂರ್ಣಗೊಂಡಿದ್ದು ಉದ್ಘಾಟನೆಗೆ ಸಜ್ಜಾಗಿದೆ.

ಕಾವೇರಿ ತಂದ ಭಗೀರಥ : ಆನೇಕಲ್ ತಾಲ್ಲೂಕಿನಲ್ಲಿ ಯಾವುದೇ ಜಲಮೂಲಗಳಿರಲಿಲ್ಲ. ಕುಡಿಯುವ ನೀರಿಗಾಗಿ ಪರದಾಡಬೇಕಾಗಿತ್ತು. ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಆನೇಕಲ್‌ಗೆ ಕಾವೇರಿ ನೀರು ತರಲಾಗಿದ್ದು ಬಿ.ಶಿವಣ್ಣ ಅವರ ಅವಿರಥ ಪ್ರಯತ್ನದಿಂದ ಕಾವೇರಿ ನೀರು ಆನೇಕಲ್‌ಗೆ ಬಂದಿದೆ. ಆನೇಕಲ್ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೂ ಕಾವೇರಿ ನೀರು ಪೂರೈಕೆ ಮಾಡಬೇಕು ಎಂಬುದು ಬಿ. ಶಿವಣ್ಣ ಅವರ ಮಹಾದಾಶೆಯಾಗಿದೆ.

ಬರಿದಾದ ಕೆರೆಗಳಿಗೆ ಮರುಜೀವ ನೀಡಿದ ಶಾಸಕ ಬಿ.ಶಿವಣ್ಣ : ಮಳೆಯ ಅಭಾವದಿಂದ ಕೆರೆಗಳು ತುಂಬುವುದೇ ದುಸ್ತರ ಎಂಬ ಪರಿಸ್ಥಿತಿ ಆನೇಕಲ್ ತಾಲ್ಲೂಕಿನಲ್ಲಿತ್ತು. ಕೆರೆಗಳಲ್ಲಿ ನೀರಿನ ಸೆಲೆಗಳು ಬತ್ತಿ ಹೋಗಿದ್ದವು. ಈ ಸಂದರ್ಭದಲ್ಲಿ ಆನೇಕಲ್ ತಾಲ್ಲೂಕಿನ 66 ಕೆರೆಗಳಿಗೆ ಏತ ನೀರಾವರಿ ಮೂಲಕ ನೀರು ತುಂಬಿಸಿದ್ದರಿಂದ ಬಹುತೇಕ ಆನೇಕಲ್ ತಾಲ್ಲೂಕಿನ ಕೆರೆಗಳು ತುಂಬಿ ತುಳುಕುತ್ತಿವೆ. ಕೆರೆ ತುಂಬುವುದರ ಜೊತೆಗೆ ಸುತ್ತಮುತ್ತಲಿನ ಪ್ರದೇಶ ಅಂತರ್ಜಲ ಹೆಚ್ಚಾಗಿದ್ದು ಬತ್ತಿ ಹೋಗಿದ್ದ ಕೊಳವೆ ಬಾವಿಗಳು ಜೀವಕಳೆಯನ್ನು ಪಡೆದಿವೆ. ನೂರಾರು ಎಕರೆ ಜಮೀನಿಗೆ ನೀರುಣಿಸುತ್ತಿವೆ.

ಮಿನಿ ವಿಧಾನಸೌಧಕ್ಕೆ ಮಹೂರ್ತ : ತಾಲ್ಲೂಕು ಕೇಂದ್ರವಾದ ಆನೇಕಲ್‌ನಲ್ಲಿ ಹಲವಾರು ಸರ್ಕಾರಿ ಕಚೇರಿಗಳಿಗೆ ಸ್ವಂತ ಕಟ್ಟಡವಿಲ್ಲ. ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಎಲ್ಲಾ ಸರ್ಕಾರಿ ಕಚೇರಿಗಳು ಒಂದೆ ಸೂರಿನಡಿಯಲ್ಲಿ ಬರುವಂತೆ ಮಾಡುವ ಸಲುವಾಗಿ ಮಿನಿ ವಿಧಾನಸೌಧಕ್ಕೆ ಸರ್ಕಾರದಿಂದ 16 ಕೋಟಿ ಹಣವನ್ನು ಶಾಸಕ ಬಿ.ಶಿವಣ್ಣ ಮಂಜೂರು ಮಾಡಿಸಿದ್ದು ಪಟ್ಟಣದ ಬಿಇಓ ಕಚೇರಿ ಸಮೀಪದಲ್ಲಿ ಭೂಮಿ ಪೂಜೆ ಮಾಡಲು ಸಿದ್ದತೆ ನಡೆಸಲಾಗಿದೆ.





ಆನೇಕಲ್‌ನಲ್ಲಿ ಅಂತರರಾಷ್ಟ್ರೀಯ ಕ್ರೀಡಾಂಗಣ : ಆನೇಕಲ್ ತಾಲ್ಲೂಕಿನ ಇಂಡ್ಲವಾಡಿ ಸಮೀಪ ಗೃಹ ಮಂಡಳಿ ವತಿಯಿಂದ ನಿರ್ಮಾಣವಾಗುತ್ತಿರುವ ಸೂರ್ಯಸಿಟಿಯಲ್ಲಿ ಆಧುನಿಕ ಸೌಲಭ್ಯಗಳುಳ್ಳ ಅಂತರರಾಷ್ಟ್ರೀಯ ಕ್ರೀಡಾಂಗಣ ಮಂಜೂರಾತಿಗೆ ಶಾಸಕ ಬಿ.ಶಿವಣ್ಣ ಶ್ರಮಿಸಿದ್ದು ಶಿವಣ್ಣ ಅವರು ಮಾಜಿ ಸಂಸದ ಡಿ.ಕೆ.ಸುರೇಶ್ ಅವರ ಜೊತೆಗೂಡಿ ರಾಜ್ಯ ಸರ್ಕಾರದಲ್ಲಿ ಒತ್ತಡ ಹೇರಿ ಕ್ರೀಡಾಂಗಣ ಮಂಜೂರು ಮಾಡಿಸಿದ್ದಾರೆ. ಇದರಿಂದಾಗಿ ಈ ಭಾಗಕ್ಕೆ ಹೈಟೆಕ್ ಸ್ಪರ್ಶ ದೊರೆಯಲಿದೆ.

ದ್ವಿಪಥದ ರಸ್ತೆಗಳಾದ ಮುಖ್ಯ ರಸ್ತೆಗಳು : ಆನೇಕಲ್ ತಾಲ್ಲೂಕಿನ ಬಹುತೇಕ ಎಲ್ಲಾ ಮುಖ್ಯರಸ್ತೆಗಳನ್ನು ದ್ವಿಪಥ ರಸ್ತೆಗಳಾಗಿ ಮಾಡಿದ ಕೀರ್ತಿ ಬಿ.ಶಿವಣ್ಣ ಅವರಿಗೆ ಸಲ್ಲುತ್ತದೆ. ಆನೇಕಲ್-ಚಂದಾಪುರ, ಆನೇಕಲ್-ಅತ್ತಿಬೆಲೆ, ಅತ್ತಿಬೆಲೆ-ಸರ್ಜಾಪುರ, ಸರ್ಜಾಪುರ-ದೊಮ್ಮಸಂದ್ರ ಸೇರಿದಂತೆ ಹಲವು ರಸ್ತೆಗಳನ್ನು ದ್ವಿಪಥ ರಸ್ತೆಗಳಾಗಿ ಮಾಡಿದ ಕೀರ್ತಿ ಬಿ.ಶಿವಣ್ಣ ಅವರಿಗೆ ಸಲ್ಲುತ್ತದೆ.

ಅಭಿವೃದ್ಧಿ ಪಥದಲ್ಲಿ ಆನೇಕಲ್ ವಿಧಾನಸಭಾ ಕ್ಷೇತ್ರ : ದೊಮ್ಮಸಂದ್ರದಲ್ಲಿ 100 ಹಾಸಿಗೆಯ ಸುಸಜ್ಜಿತ ಆಸ್ಪತ್ರೆಯ ನಿರ್ಮಾಣಕ್ಕೆ ಚಾಲನೆ ನೀಡಲಾಗಿದ್ದು ಪ್ರಗತಿಯಲ್ಲಿದೆ. ಆನೇಕಲ್ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ 32ಕೋಟಿ ರೂ. ವೆಚ್ಚದಲ್ಲಿ ಜಲಸಂಗ್ರಹಾಗಾರ ನಿರ್ಮಾಣಕ್ಕೆ ಮಂಜೂರಾತಿ. ಟಿ.ಸಿ.ಹಳ್ಳಿ ಬಳಿ 30 ಕೋಟಿ ರೂ. ವೆಚ್ಚದಲ್ಲಿ ಕಾರ್ಮಿಕರ ಮಕ್ಕಳ ವಸತಿ ಶಾಲೆ ಮಂಜೂರು. ಇಗ್ಗಲೂರು ಬಳಿ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರ ಕಾರ್ಮಿಕ ಸಚಿವರಾಗಿದ್ದ ಅವದಿಯಲ್ಲಿ ಮಂಜೂರಾತಿ ನೀಡಿದ್ದ ಇಎಸ್‌ಐ ಆಸ್ಪತ್ರೆ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ.

ಆನೇಕಲ್ ವಿಧಾನಸಭಾ ಕ್ಷೇತ್ರದ ಹೆಬ್ಬಗೋಡಿ ನಗರಸಭೆ ಮತ್ತು ಚಂದಾಪುರ ಹಾಗೂ ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ರೂಪಿಸಲು ಸರ್ಕಾರದಿಂದ 400 ಕೋಟಿ ಅನುದಾನ ಮಂಜೂರಾಗಿದೆ. ವಿಧಾನಸಭಾ ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗಾಗಿ 150ಕೋಟಿ ರೂ. ಅನುದಾನ ಮಂಜೂರಾಗಿ ಕಾಮಗಾರಿ ಪ್ರಗತಿಯಲ್ಲಿದೆ.

ಹುಟ್ಟುಹಬ್ಬದ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು
ದಿನಾಂಕ: 01-02-2026 ನೇ ಭಾನುವಾರ

- ಆನೇಕಲ್ ತಾಲ್ಲೂಕಿನ ಚಂದಾಪುರ ಸೂರ್ಯಸಿಟಿಯಲ್ಲಿ 1500 ಮಂದಿ ಶಿಕ್ಷಕರಿಗೆ ಗುರುವಂದನಾ ಕಾರ್ಯಕ್ರಮ. 150 ಮಂದಿ ಶಿಕ್ಷಕರಿಗೆ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ.
- ಉಚಿತ ಆರೋಗ್ಯ ತಪಾಸಣಾ ಶಿಬಿರ.
- ಚಂದಾಪುರ ಸೂರ್ಯಸಿಟಿಯಲ್ಲಿ ರಾಜ್ಯ ಮಟ್ಟದ ಖೋ ಖೋ ಸ್ಪರ್ಧೆ.
- ಸಿಪಾನಿ ಸೇವಾ ಆಶ್ರಮದಲ್ಲಿ ವೃದ್ಧರಿಗೆ ಅನ್ನದಾನ ಮತ್ತು ಕಂಬಳಿ ವಿತರಣೆ.
- ಸಂಜೆ ಆನೇಕಲ್ ಪಟ್ಟಣದಲ್ಲಿ ಖ್ಯಾತ ಗಾಯಕ ಸಾಧುಕೋಕಿಲ ಅವರ ನೇತೃತ್ವದಲ್ಲಿ ಸಂಗೀತ ಸಂಜೆ.
- ಚಂದಾಪುರ ಸೂರ್ಯಸಿಟಿಯಲ್ಲಿ ಕೃಷ್ಣಾರ್ಜುನರ ಯುದ್ಧ ನಾಟಕ ಪ್ರದರ್ಶನ.

ನಮ್ಮೊಂದಿಗೆ : ಬಿ.ಶಿವಣ್ಣ ಹಿತೈಷಿ ಬಳಗ (ರಿ.), ಬಿ.ಎಸ್ ಫೌಂಡೇಶನ್ (ರಿ.), ಬಿ.ಶಿವಣ್ಣ ಅಭಿಮಾನಿಗಳ ಬಳಗ (ರಿ.)

‘ಅನಾಥ’ ವಾಹನಗಳ ಟೋಯಿಂಗ್

ಸಂಚಾರ ಪೊಲೀಸರ ಸಹಯೋಗದಲ್ಲಿ ತೆರವು: ಮಹೇಶ್ವರ್ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ತಿಂಗಳಿಂದ ರಸ್ತೆ ಬದಿಯಲ್ಲಿರುವ ‘ಅನಾಥ ವಾಹನಗಳನ್ನು’ ಟೋಯಿಂಗ್ ಮೂಲಕ ತೆರವುಗೊಳಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಬದಿಯಲ್ಲಿ ನಿಂತಿರುವ ಅನಾಥ ವಾಹನಗಳನ್ನು ತೆರವುಗೊಳಿಸುವ ಸಲುವಾಗಿ ಎರಡು ಟೋಯಿಂಗ್ ವಾಹನಗಳನ್ನು ಈಗಾಗಲೇ ಖರೀದಿಸಲಾಗಿದೆ. ಸಂಚಾರ ಪೊಲೀಸ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಎಲ್ಲಾ ಕಡೆ ಅನಾಥ ವಾಹನಗಳ ತೆರವು ಕಾರ್ಯವನ್ನು ಕೂಡಲೇ ಪ್ರಾರಂಭಿಸಲು ಅಧಿಕಾರಿಗಳಿಗೆ ಆದೇಶಿಸಿದರು.

ಮುಖ್ಯಾಂಶಗಳು

- ಎರಡು ಟೋಯಿಂಗ್ ವಾಹನ ಖರೀದಿ
- ಉತ್ತರ ನಗರ ಪಾಲಿಕೆ: ₹1,242 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ
- ಇದುವರೆಗೆ ₹640 ಕೋಟಿ ಸಂಗ್ರಹ

‘ಮೇಲ್ಸೇತುವೆ ಕಾಮಗಾರಿ ಪೂರ್ಣಗೊಳಿಸಿ’


ಮಹೇಶ್ವರ್ ರಾವ್

ಯಲಹಂಕ ಮೇಲ್ಸೇತುವೆ ಕಾಮಗಾರಿಯನ್ನು ಸೆಪ್ಟೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು. ದೊಡ್ಡಬಳ್ಳಾಪುರ ಮುಖ್ಯರಸ್ತೆಯಲ್ಲಿ ಎರಡು ಕಿ.ಮೀ ಉದ್ದದ ಮೇಲ್ಸೇತುವೆ ಕಾಮಗಾರಿಯು ಶೇ 70 ರಷ್ಟು ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿಯನ್ನು ಇನ್ನು ಏಳು ತಿಂಗಳಲ್ಲಿ ಮುಗಿಸಬೇಕು ಎಂದು ಮಹೇಶ್ವರ್ ರಾವ್ ಅವರು ಗುತ್ತಿಗೆದಾರರು ಹಾಗೂ ಅಧಿಕಾರಿಗಳಿಗೆ ಸೂಚಿಸಿದರು.

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಶನಿವಾರ ಮಾತನಾಡಿದ ಅವರು, ಈವರೆಗೆ ಎಲ್ಲೆಲ್ಲಿ, ಎಷ್ಟು ಪರಿತ್ಯಾಜ್ಯನಾ ಪತ್ರಗಳನ್ನು (ರಿಲಿಂಕ್ವಿಸ್ಟ್‌ಮೆಂಟ್ ಡೀಡ್) ನೀಡಲಾಗಿದೆಯೋ, ಅಷ್ಟು ಜಾಗಗಳನ್ನು ಪಾಲಿಕೆಗೆ ವಶಪಡಿಸಿಕೊಳ್ಳದಿರುವ ವಿವರಗಳನ್ನು ಪಟ್ಟಿ ಮಾಡಿಕೊಳ್ಳಬೇಕು. ನಂತರ ಎಲ್ಲಾ ಜಾಗಗಳನ್ನು ಪಾಲಿಕೆ ವಶಕ್ಕೆ ಪಡೆದು ರಸ್ತೆ ವಿಸ್ತರಣೆ ಸೇರಿದಂತೆ ಅಗತ್ಯ ಅಭಿವೃದ್ಧಿ ಕಾರ್ಯಗಳಿಗೆ ಕ್ರಮ ಕೈಗೊಳ್ಳಬೇಕು ಎಂದರು.

ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ₹1,242 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿಯನ್ನು ನಿಗದಿಪಡಿಸಲಾಗಿದ್ದು, ಇದುವರೆಗೂ ₹640 ಕೋಟಿ ಸಂಗ್ರಹಿಸಲಾಗಿದೆ. ಆಯಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹದ ಪ್ರಗತಿಯನ್ನು ನಿರಂತರವಾಗಿ ಪರಿಶೀಲಿಸಿ, ಗುರಿ ಸಾಧಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಹೆಣ್ಣೂರು ಬಂಡೆ ಬಳಿ 5 ಎಕರೆ ಬಿಡಿಎ ಜಾಗವನ್ನು ಪರಿಶೀಲಿಸಿ, ಅದನ್ನು ಪಾಲಿಕೆಗೆ ಹಸ್ತಾಂತರ ಮಾಡಿಕೊಂಡು, ಮೈದಾನದ ಸುತ್ತಲೂ ಸಸಿಗಳನ್ನು ನೆಟ್ಟು, ವಾಕಿಂಗ್ ಟ್ರ್ಯಾಕ್ ಮಾಡಿ ಸುಸಜ್ಜಿತ ಆಟದ ಮೈದಾನ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು.

ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್, ಅಭಿವೃದ್ಧಿ ಹೆಚ್ಚುವರಿ ಆಯುಕ್ತೆ ಲತಾ, ಕಂದಾಯ ಹೆಚ್ಚುವರಿ ಆಯುಕ್ತ ಅಮರೇಶ್, ಜಂಟಿ ಆಯುಕ್ತರಾದ ಮೊಹಮ್ಮದ್ ನಯೀಮ್ ಮೊಮಿನ್, ಪಲ್ಲವಿ, ಮುಖ್ಯ ಎಂಜಿನಿಯರ್‌ಗಳಾದ ಯಮುನಾ, ಪ್ರಕಾಶ್ ಉಪಸ್ಥಿತರಿದ್ದರು.

‘ಬೇಂದ್ರೆ ಕವಿತೆಗಳಲ್ಲಿ ತತ್ತ್ವದ ಮಾಧುರ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೇಂದ್ರೆ ಅವರ ಕಾಲಘಟ್ಟದಲ್ಲಿನ ನವೋದಯ ಸಾಹಿತ್ಯದ ಮೇಲೆ ಕವಿ ರವೀಂದ್ರನಾಥ ಟಾಗೋರ್, ಸ್ವಾಮಿ ವಿವೇಕಾನಂದ, ಮಹರ್ಷಿ ಅರವಿಂದ ಘೋಷ್ ಮತ್ತು ಇತಿಹಾಸಕಾರ ಹಾಗೂ ತತ್ವಜ್ಞಾನಿಯಾಗಿದ್ದ ಆನಂದಕುಮಾರ ಸ್ವಾಮಿ ಅವರ ಪ್ರಭಾವ ಅಗಾಧವಾದುದು’ ಎಂದು ವಿಮರ್ಶಕ ಎಸ್.ಆರ್. ವಿಜಯಶಂಕರ ಅಭಿಪ್ರಾಯಪಟ್ಟರು.

‘ಬೆಂಗಳೂರು ವಕೀಲರ ಸಾಹಿತ್ಯ ಕೂಟ’ದ ವತಿಯಿಂದ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿರುವ ವಕೀಲರ ಸಭಾಂಗಣದಲ್ಲಿ ಕವಿ ದ.ರಾ. ಬೇಂದ್ರೆ ಅವರ ಜನ್ಮದಿನದ ಅಂಗವಾಗಿ ಅವರ ಕಾವ್ಯದ ಕುರಿತು ಶನಿವಾರ ಉಪನ್ಯಾಸ ನೀಡಿದರು.

‘ಪದಗಳ ಬಗ್ಗೆ ಅನುಪಮ ವ್ಯಾಮೋಹ ಹೊಂದಿದ್ದ ಬೇಂದ್ರೆಯವರ ಮನೆಯ ಪುಸ್ತಕದ ಕಪಾಟಿನಲ್ಲಿ 430ಕ್ಕೂ ಹೆಚ್ಚು ನಿಘಂಟುಗಳಿದ್ದವು. ಅವರ ಕವಿತೆಗಳಲ್ಲಿ ತತ್ತ್ವ ತುಂಬಿ ತುಳುಕಾಡುತ್ತಿತ್ತು. ಅವರ ಪದಗಳಲ್ಲಿನ ಧಾತು ಹೊಸ ಹೊಸ ಅರ್ಥಗಳನ್ನು ಸೃಜಿಸುತ್ತಾ, ಹಾಸ್ಯ, ಮೊನಚು ಮತ್ತು ಜೀವನದ ಗಂಭೀರತೆಯನ್ನು ಪ್ರತಿಧ್ವನಿಸುತ್ತಿದ್ದವು’ ಎಂದು ಬಣ್ಣಿಸಿದರು.

‘ಐಂದ್ರಿಕ, ಬೌದ್ಧಿಕ, ಆಧ್ಯಾತ್ಮಿಕ ಮತ್ತು ಸತ್ಯ– ಸೌಂದರ್ಯಗಳಿಂದ ಹರಳುಗಟ್ಟಿದ ಬೇಂದ್ರೆಯವರ ನಾಕು ತಂತಿ ಕವಿತೆ ಅವರ 45 ವರ್ಷಗಳ ಅಧ್ಯಾತ್ಮದ ಹುಡುಕಾಟದ ಫಲ. ಪ್ರತಿ ಬಾರಿ ಓದಿದಾಗಲೂ ಅದರಲ್ಲೊಂದು ನವನವೀನ ಹೊಳಹು ಕಾಣುತ್ತದೆ. ಅವರ ಕಾವ್ಯದ ಶಕ್ತಿ ಅಸಾಮಾನ್ಯ’ ಎಂದು ಬೇಂದ್ರೆಯವರ ಹಲವಾರು ಕವಿತೆಗಳನ್ನು ವಿಶ್ಲೇಷಿಸಿದರು.


‘ಬೆಂಗಳೂರು ವಕೀಲರ ಸಂಘ’ದ ಪದಾಧಿಕಾರಿ ವೀಣಾ ರಾವ್ ಅವರಿಗೆ ಪದಾಂಕಿತ ಹಿರಿಯ ವಕೀಲ ಸಿ.ಆರ್.ಗೋಪಾಲ ಸ್ವಾಮಿ ಅವರು ಬೇಂದ್ರೆ ಅವರ ಕುರಿತಾದ ಪುಸ್ತಕ ನೀಡಿ ಗೌರವಿಸಿದರು. ಬೆಂಗಳೂರು ವಕೀಲರ ಸಾಹಿತ್ಯ ಕೂಟದ ಅಧ್ಯಕ್ಷ ಮಂಜುನಾಥ ಬಿ. ಗೌಡ (ಎಡದಿಂದ ಮೊದಲನೆಯವರು) ಮತ್ತು ವಿಮರ್ಶಕ ಎಸ್.ಆರ್. ವಿಜಯಶಂಕರ ಉಪಸ್ಥಿತರಿದ್ದರು

ಮುಖ್ಯ ಅತಿಥಿಯಾಗಿದ್ದ ಪದಾಂಕಿತ ಹಿರಿಯ ವಕೀಲ ಸಿ.ಆರ್. ಗೋಪಾಲ ಸ್ವಾಮಿ, ‘ಸೃಷ್ಟಿಯ ಆರಾಧಕರಾಗಿದ್ದ ಬೇಂದ್ರೆಯವರ ಕವಿತೆಯಲ್ಲಿ ಜಾನಪದೀಯ ಸೊಗಡಿತ್ತು. ಇಂದು ಅನೇಕರು ಒಬ್ಬ ಕವಿಯನ್ನು ಮತ್ತೊಬ್ಬ ಕವಿಗೆ ಹೋಲಿಸುವ ಚಟ ಬೆಳೆಸಿಕೊಂಡಿದ್ದಾರೆ. ಇದು ಒಳ್ಳೆಯದಲ್ಲ. ಯಾವುದೇ ಕವಿ ಮತ್ತೊಬ್ಬ ಕವಿಗಿಂತಲೂ ಭಿನ್ನ’ ಎಂದರು.

ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿ ವಿ.ಆನಂದ, ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ವಿ.ಅನುಪಮಾ, ಕೆ.ಪಿ.ಸರಸ್ವತಿ, ಬಿ.ಅಮೃತಾ, ರೇಣುಕಾದೇವಿ, ವೈ.ಜೆ. ಜೈಶಂಕರ್, ಎನ್.ರಾಮಮೂರ್ತಿ, ಎಚ್.ಪಿ.ಅಶ್ವಿನ್ ಕುಮಾರ್ ಮತ್ತು ಎನ್.ಗಣೇಶ್, ಹಿರಿಯ ವಕೀಲ ಜಗದೀಶ್ ಮುಂಡರಗಿ ಪಾಲ್ಗೊಂಡಿದ್ದರು.

ಪಿಎಚ್.ಡಿ ಪದವಿ ಪ್ರವೇಶಕ್ಕೆ ಅರ್ಜಿ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ 2026ನೇ ಸಾಲಿನ ಪಿಎಚ್.ಡಿ ಪದವಿ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. ಫೆಬ್ರುವರಿ 2ರಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಯಾವುದೇ ದಂಡವಿಲ್ಲದೆ ಫೆಬ್ರುವರಿ 28ರವರೆಗೂ ಅರ್ಜಿ ಸಲ್ಲಿಸಬಹುದು. ದಂಡ ಸಹಿತ ಅರ್ಜಿ ಸಲ್ಲಿಸಲು ಮಾರ್ಚ್ 7 ಕೊನೆಯ ದಿನ. ಮಾಹಿತಿಗೆ https://www.bangaloreuniversity.karnataka.gov.in ಸಂಪರ್ಕಿಸಬಹುದು.

'ಟೋಲ್ ಶುಲ್ಕ ಸಂಗ್ರಹ ನಿಯಮಬಾಹಿರ'

ಕನಕಪುರ ರಸ್ತೆಯಲ್ಲಿರುವ ಸೋಮನಹಳ್ಳಿ ಟೋಲ್ ಪ್ಲಾಜಾ • ಬೇರೆಡೆಗೆ ಸ್ಥಳಾಂತರಿಸಲು ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಒಂದು ತಿಂಗಳ ಒಳಗಾಗಿ ಉಚಿತ ಪಾಸ್ ನೀಡುವಂತೆ ನಿರ್ದೇಶನ
- ಸ್ಥಳೀಯರ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಲು ಸೂಚನೆ

ಬೆಂಗಳೂರು: 'ಕನಕಪುರ ರಸ್ತೆಯಲ್ಲಿರುವ ಸೋಮನಹಳ್ಳಿ ಟೋಲ್ ಪ್ಲಾಜಾದಲ್ಲಿ ಬಳಕೆದಾರ ಶುಲ್ಕ ಸಂಗ್ರಹವು ನಿಯಮಬಾಹಿರವಾಗಿದ್ದು, ರಾಷ್ಟ್ರೀಯ ಹೆದ್ದಾರಿ ನಿಯಮಗಳನ್ನು ಉಲ್ಲಂಘಿಸಿದೆ' ಎಂದು ಹೈಕೋರ್ಟ್ ಸಾರಿದೆ.

ಈ ಸಂಬಂಧ ಸೋಮನಹಳ್ಳಿ, ನೆಲಗುಲಿ ಮತ್ತು ಕಗ್ಗಲಿಪುರ ಗ್ರಾಮಸ್ಥರು ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕ ಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಸ್ಥಳೀಯ ನಿವಾಸಿಗಳ ಸುಗಮ ಸಂಚಾರಕ್ಕೆ ಅನುವಾಗುವಂತೆ ಒಂದು ತಿಂಗಳ ಒಳಗಾಗಿ ಉಚಿತ ಪಾಸ್‌ಗಳನ್ನು ನೀಡಬೇಕು' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಹಾಗೂ ಟೋಲ್ ಪ್ಲಾಜಾ ನಿರ್ವಹಣೆ ಮಾಡುತ್ತಿರುವ ಸಂಸ್ಥೆಗೆ ನಿರ್ದೇಶಿಸಿರುವ ನ್ಯಾಯಪೀಠ, 'ಈ ಪ್ರಕ್ರಿಯೆಯನ್ನು 30 ದಿನಗಳ ಒಳಗಾಗಿ ಪೂರ್ಣಗೊಳಿಸಬೇಕು' ಎಂದು ತಿಳಿಸಿದೆ.

'ಒಂದು ವೇಳೆ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸದಿದ್ದರೆ, ಪ್ರತಿವಾದಿಗಳು ಸೋಮನಹಳ್ಳಿಯಲ್ಲಿ ಟೋಲ್ ಸಂಗ್ರಹವನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಟೋಲ್ ಪ್ಲಾಜಾವನ್ನು, ರಾಷ್ಟ್ರೀಯ ಹೆದ್ದಾರಿ ಶುಲ್ಕ (ದರಗಳು ಮತ್ತು ಸಂಗ್ರಹದ ನಿರ್ಣಯ) ನಿಯಮಗಳು– 2008ರ ಪ್ರಕಾರ ಬೇರೆಡೆಗೆ ಸ್ಥಳಾಂತರಿಸಬೇಕು' ಎಂದು ಆದೇಶದಲ್ಲಿ ವಿವರಿಸಲಾಗಿದೆ.

'ರಾಷ್ಟ್ರೀಯ ಹೆದ್ದಾರಿ 209ರಲ್ಲಿನ ಟೋಲ್ ಪ್ಲಾಜಾ, ನಿಯಮಗಳನ್ನು ಉಲ್ಲಂಘಿಸಿದೆ. ಸರ್ವೀಸ್ ರಸ್ತೆಯನ್ನು ಒದಗಿಸದೆ ಟೋಲ್ ವಿಧಿಸುವುದು ಏಕಪಕ್ಷೀಯ ಮತ್ತು ಅಸಮಂಜಸ. ಇಂತಹ ಸೌಲಭ್ಯವು ಪುರಸಭೆ ಅಥವಾ ನಗರ ವ್ಯಾಪ್ತಿಯಿಂದ 10 ಕಿ.ಮೀ ದೂರವಿರಬೇಕು. ಸುರಕ್ಷತಾ ಕ್ರಮಗಳನ್ನು ಅಳವಡಿಸದೆ, ಸ್ಥಳೀಯ ನಿವಾಸಿಗಳಿಂದ ಟೋಲ್ ಸಂಗ್ರಹಕ್ಕೆ ಒತ್ತಾಯ ಮಾಡುವುದು ಅನ್ಯಾಯ ಮತ್ತು ದಬ್ಬಾಳಿಕೆಯಾಗಲಿದೆ' ಎಂದು ನ್ಯಾಯಪೀಠ ಹೇಳಿದೆ.

ಜಮನಾಲಾಲ್ ಬಜಾಜ್ ಟ್ರಸ್ಟ್ ಮೇಲ್ಮನವಿ ವಜಾ

ಹೈಕೋರ್ಟ್ ಸುದ್ದಿ

ಮಾಗಡಿ ಮುಖ್ಯ ರಸ್ತೆಯಲ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ವತಿಯಿಂದ 'ಮೆಗಾ ಕೃಷಿ ಮಾರುಕಟ್ಟೆ' ನಿರ್ಮಾಣಕ್ಕಾಗಿ 172 ಎಕರೆಗೂ ಹೆಚ್ಚಿನ ವಿಶಾಲ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡಿದ್ದ ರಾಜ್ಯ ಸರ್ಕಾರದ ಕ್ರಮವನ್ನು ಎತ್ತಿಹಿಡಿದಿದ್ದ ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ಪ್ರಶ್ನಿಸಲಾದ ಮೇಲ್ಮನವಿಯನ್ನು ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

ಭೂ ಸ್ವಾಧೀನ ಕ್ರಮವನ್ನು ಪ್ರಶ್ನಿಸಿ, 'ಜಮನಾಲಾಲ್ ಬಜಾಜ್ ಸೇವಾ ಟ್ರಸ್ಟ್' ಅಧ್ಯಕ್ಷ ರಾಹುಲ್ ಬಜಾಜ್ ಸೇರಿದಂತೆ ಎಂಟು ಟ್ರಸ್ಟಿಗಳು ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ನಿಯೋಜನೆಗೊಂಡಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ವಿಶೇಷ ನ್ಯಾಯಪೀಠ ಈ ಮೊದಲು ತಿರಸ್ಕರಿಸಿತ್ತು.

ಇದನ್ನು ಪ್ರಶ್ನಿಸಿ 'ಜಮನಾಲಾಲ್ ಬಜಾಜ್ ಸೇವಾ ಟ್ರಸ್ಟ್' ರಿಟ್ ಮೇಲ್ಮನವಿ ಸಲ್ಲಿಸಿತ್ತು. ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಇದೀಗ, 'ಏಕಸದಸ್ಯ ನ್ಯಾಯಪೀಠದ ತೀರ್ಪಿನಲ್ಲಿ ಯಾವುದೇ ಲೋಪಗಳಿಲ್ಲ' ಎಂದು ಸ್ಪಷ್ಟಪಡಿಸಿದೆ. ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ್ ವಾದ ಮಂಡಿಸಿದ್ದರು.

ಪ್ರಕರಣ: 'ಮಾಗಡಿ ಮುಖ್ಯ ರಸ್ತೆಯಲ್ಲಿನ ಶ್ರೀಗಂಧ ಕಾವಲ್‌ನಲ್ಲಿ 172 ಎಕರೆ 22 ಗುಂಟೆ, ಹೇರೋಹಳ್ಳಿಯ ಎರಡು ಪ್ರದೇಶಗಳಲ್ಲಿ ಕ್ರಮವಾಗಿ 104 ಎಕರೆ 5 ಗುಂಟೆ ಹಾಗೂ 3 ಎಕರೆ 34 ಗುಂಟೆ ಜಮೀನನ್ನು ಸ್ವಾಧೀನಕ್ಕೆ ಪಡೆಯಲು ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಕಾರ್ಯದರ್ಶಿ ಮತ್ತು ಬೆಂಗಳೂರು ಜಿಲ್ಲಾಧಿಕಾರಿ 1999ರ ಏಪ್ರಿಲ್ 13ರಂದು ಅಧಿಸೂಚನೆ ಹೊರಡಿಸಿದ್ದರು. ಇದನ್ನು ಪ್ರಶ್ನಿಸಿ ಟ್ರಸ್ಟ್ ಹೈಕೋರ್ಟ್ ಮೆಟ್ಟಿಲೇರಿತ್ತು.

ಕನ್ನಡ ಸಾಹಿತ್ಯ ಪರಿಷತ್ತು: 52 ದತ್ತಿ ಪ್ರಶಸ್ತಿಗಳು ಪ್ರಕಟ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 2024ನೇ ಸಾಲಿನ 52 ವಿವಿಧ ದತ್ತಿ ಪ್ರಶಸ್ತಿಗಳನ್ನು ಘೋಷಿಸಿದೆ.

2024ರ ಜ.1ರಿಂದ ಡಿ.31ರೊಳಗೆ ಪ್ರಕಟಗೊಂಡ ಪುಸ್ತಕಗಳನ್ನು ಲೇಖಕರು, ಪ್ರಕಾಶಕರಿಂದ 54 ದತ್ತಿ ಪ್ರಶಸ್ತಿಗೆ ಆಹ್ವಾನಿಸಲಾಗಿತ್ತು. ಈ ಪ್ರಶಸ್ತಿಗಳಿಗೆ 900 ಕೃತಿಗಳು ಬಂದಿದ್ದವು. ಸಾಹಿತಿ ಕೆ. ಮರುಳಸಿದ್ದಪ್ಪ ಅವರ ಅಧ್ಯಕ್ಷತೆಯ ಸಮಿತಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ಆಯ್ಕೆ ಮಾಡಿದೆ.

'ಪಿ.ಶಾಂತಿಲಾಲ್ ದತ್ತಿ ಪ್ರಶಸ್ತಿ' ಮತ್ತು 'ಅಸುಂಡಿ ಹುದ್ದಾರ್ ಕೃಷ್ಣರಾವ್ ದತ್ತಿ ಪ್ರಶಸ್ತಿ'ಗೆ ಯಾವುದೇ ಪುಸ್ತಕಗಳು ಬಂದಿರಲಿಲ್ಲ ಎಂದು ಆಡಳಿತಾಧಿಕಾರಿ ಕೆ.ಎಂ.ಗಾಯಿತ್ರಿ ತಿಳಿಸಿದ್ದಾರೆ.

ಹುಬ್ಬಳ್ಳಿ ಐತಿಹಾಸಿಕ ಕಾರ್ಯಕ್ರಮ ಯಶಸ್ವಿ

ಮತ್ತೊಮ್ಮೆ ಸಂಘಟನಾ ಸಾಮರ್ಥ್ಯ ಸಾಬೀತು ಮಾಡಿದ ಜಮೀರ್ ಅಹಮದ್



ಬೆಂಗಳೂರು: ಹುಬ್ಬಳ್ಳಿಯಲ್ಲಿ 42,345 ಮನೆಗಳ ಹಸ್ತಾಂತರ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸುವ ಮೂಲಕ, ವಸತಿ, ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ವಕ್ಫ್ ಸಚಿವ ಜಮೀರ್ ಅಹ್ಮದ್ ಖಾನ್ ಮತ್ತೊಮ್ಮೆ ತಮ್ಮ ಅಸಾಧಾರಣ ಸಂಘಟನಾ ಸಾಮರ್ಥ್ಯ ಪ್ರದರ್ಶಿಸಿದ್ದಾರೆ.

ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ 42,345 ಮನೆಗಳನ್ನು ಹಸ್ತಾಂತರಿಸಲಾದ ಕಾರ್ಯಕ್ರಮಕ್ಕಾಗಿ 2.5 ಲಕ್ಷಕ್ಕೂ ಹೆಚ್ಚು ಜನರನ್ನು ಸಜ್ಜುಗೊಳಿಸುವ ಮೂಲಕ ಅವರು ಹೈಕಮಾಂಡ್ ಮಟ್ಟದಲ್ಲಿಯೂ ಮೆಚ್ಚುಗೆಯನ್ನು ಗಳಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮದ ವೇದಿಕೆಯಲ್ಲಿ ಮಾತನಾಡುತ್ತಾ ಈ ಕಾರ್ಯಕ್ರಮವನ್ನು ಶ್ಲಾಘಿಸಿದ್ದು ವಿಶೇಷವಾಗಿ ಗಮನ ಸೆಳೆದಿದೆ. ಇಂತಹ ಅಭೂತಪೂರ್ವ ಕಾರ್ಯಕ್ರಮವನ್ನು ಇತಿಹಾಸದಲ್ಲಿ ಎಂದಿಗೂ ನಡೆಸಲಾಗಿಲ್ಲ ಎಂದು ಅವರು ಮೆಚ್ಚುಗೆ ಸೂಚಿಸಿದರು.

ಕಳೆದ ವರ್ಷವೂ ಜಮೀರ್ ಅಹ್ಮದ್ ಖಾನ್ ಅವರು ರಾಹುಲ್ ಗಾಂಧಿಯವರ ಸಮ್ಮುಖದಲ್ಲಿ ಹೊಸಪೇಟೆಯಲ್ಲಿರುವ ತಮ್ಮ ಉಸ್ತುವಾರಿ ಜಿಲ್ಲೆ ವಿಜಯನಗರದಲ್ಲಿ ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನೆಯ ಸಮಾವೇಶವನ್ನು ಯಶಸ್ವಿಯಾಗಿ ನಡೆಸುವ ಮೂಲಕ ತಮ್ಮ ಸಂಘಟನಾ ಶಕ್ತಿಯನ್ನು ಸಾಬೀತುಪಡಿಸಿದ್ದರು. ಈಗ ಅವರು ಹುಬ್ಬಳ್ಳಿ ಕಾರ್ಯಕ್ರಮದ ಮೂಲಕವೂ ಯಶಸ್ಸನ್ನು ಪುನರಾವರ್ತಿಸಿದ್ದಾರೆ.

ಜಮೀರ್ ಅಹಮದ್ ಅವರು, ಹತ್ತು ದಿನಗಳ ಕಾಲ ಹುಬ್ಬಳ್ಳಿಯಲ್ಲಿಯೇ ವಾಸ್ತವ್ಯ ಹೂಡಿ, ಕೊಳಚೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ ಅವರ ಜತೆಗೂಡಿ ಕೆಲಸ ಮಾಡಿದರು. ಜತೆಗೆ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಉಸ್ತುವಾರಿ ಸಚಿವರು, ಶಾಸಕರು ಮತ್ತು ಪಕ್ಷದ ನಾಯಕರೊಂದಿಗೆ ಸಮನ್ವಯ ಸಾಧಿಸಿದರು. ಆ ಮೂಲಕ ಕಾರ್ಯಕ್ರಮ ಎಲ್ಲಾ ಸಿದ್ಧತೆಗಳನ್ನು ಪರಿಪೂರ್ಣವಾಗಿ ನಿರ್ವಹಿಸಿದರು. ಹುಬ್ಬಳ್ಳಿ ಕಾರ್ಯಕ್ರಮವು ಎಐಸಿಸಿ ವಲಯಗಳಲ್ಲಿಯೂ ಚರ್ಚೆಯ ವಿಷಯವಾಗಿದೆ. ಇಂತಹ ದೊಡ್ಡ ಪ್ರಮಾಣದ ಕಾರ್ಯಕ್ರಮಗಳು ಪಕ್ಷಕ್ಕೆ ಬಲ ತುಂಬುತ್ತದೆ ಎಂದು ಪಕ್ಷದ ಹಿರಿಯ ನಾಯಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೂಲಗಳ ಪ್ರಕಾರ, ರಾಹುಲ್ ಗಾಂಧಿ, ಕೆ.ಸಿ.ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ ಸೇರಿದಂತೆ ಹಿರಿಯ ನಾಯಕರು ಅತ್ಯುತ್ತಮ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ಜಮೀರ್ ಅಹಮದ್ ಅವರನ್ನು ಶ್ಲಾಘಿಸಿದ್ದಾರೆ ಎಂದು ತಿಳಿದು ಬಂದಿದೆ.

ಜಮೀರ್ ಅಹ್ಮದ್ ಖಾನ್ ಬೆಂಗಳೂರು ಅರಮನೆ ಮೈದಾನದಲ್ಲಿ ನಡೆದ ಜಶ್ನೆ-ಎ-ಈದ್ ಮಿಲಾದ್-ಉನ್-ನಬಿ ಆಚರಣೆ ಸೇರಿದಂತೆ ಒಂದು ವರ್ಷದಲ್ಲಿ ಮೂರು ಮೆಗಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದ್ದಾರೆ. ಪ್ರತಿಯೊಂದು ಕಾರ್ಯಕ್ರಮದಲ್ಲೂ ಲಕ್ಷಾಂತರ ಜನರು ಸೇರಿದ್ದು ಇವರ ಸಂಘಟನಾ ಶಕ್ತಿಗೆ ಸಾಕ್ಷಿಯಾಗಿದೆ. ಈ ಕಾರ್ಯಕ್ರಮಗಳಿಂದಾಗಿ ಅವರ ನಾಯಕತ್ವ, ವರ್ಚಸ್ಸು ಮತ್ತು ಅಸಾಧಾರಣ ಸಂಘಟನಾ ಶಕ್ತಿ ಸಾಬೀತಾಗಿದೆ.

ಕಾಂಗ್ರೆಸ್‌ನಲ್ಲಿ ಪ್ರಭಾವಿ ನಾಯಕರಾಗಿ ಹೊರಹೊಮ್ಮುತ್ತಿರುವ ಜಮೀರ್

'ಇತ್ತೀಚಿನ ದಿನಗಳಲ್ಲಿ ಜಮೀರ್ ಅಹ್ಮದ್ ಖಾನ್ ಮುಸ್ಲಿಂ ಸಮುದಾಯದ ನಾಯಕ ಎಂಬುದನ್ನು ಮೀರಿ ಬೆಳೆಯುತ್ತಿದ್ದಾರೆ. ದಲಿತರು, ಹಿಂದುಳಿದ ವರ್ಗಗಳು ಮತ್ತು ಸಮಾಜದ ಎಲ್ಲಾ ವರ್ಗಗಳನ್ನು ಪ್ರತಿನಿಧಿಸುವ ನಾಯಕರಾಗಿ ಹೊರಹೊಮ್ಮುತ್ತಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲೂ ಸಹ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಂತರ ಕರ್ನಾಟಕದ ಅತ್ಯಂತ ಪ್ರಭಾವಶಾಲಿ ನಾಯಕರಲ್ಲಿ ಒಬ್ಬರಾಗಿ ಹೊಮ್ಮುತ್ತಿದ್ದಾರೆ. ಯಾವುದೇ ಸಭೆಗಳಿರಲಿ 'ಜೈ ಭೀಮ್' ಘೋಷಣೆಯೊಂದಿಗೆ ಪ್ರಾರಂಭವಾಗುವ ಅವರ ಭಾಷಣ ದಲಿತ ಸಮುದಾಯಗಳಲ್ಲಿ ಅವರಿಗಿರುವ ಅಪಾರ ಗೌರವ ಮತ್ತು ಪ್ರೀತಿಯನ್ನು ತೋರುತ್ತದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

'ಕೂಡಿ ಬಾಳಿದರೆ ನೆಮ್ಮದಿ ಜೀವನ'

ಕಾರ್ಯಸಿದ್ಧಿ ವಿನಾಯಕ ಸ್ವಾಮಿ ಪ್ರತಿಮೆ ಪುನರ್ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಜಗತ್ತಿನಲ್ಲಿ ನೆಮ್ಮದಿ, ಶಾಂತಿ ಕಾಣಬೇಕಾದರೆ ತಂದೆ– ತಾಯಿ, ಒಡಹುಟ್ಟಿದವರು, ಹಿರಿಯರ ಜೊತೆ ಕೂಡಿ ಬಾಳುವ ಕೆಲಸ ಮಾಡಬೇಕು. ಆಗ ನೆಮ್ಮದಿಯ ಜೀವನ ಕಾಣಬಹುದು ಎಂದು ಶೃಂಗೇರಿ ಮಠದ ವಿಧುಶೇಖರ ಭಾರತಿ ಸ್ವಾಮೀಜಿ ಹೇಳಿದರು.

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ ಎಂಟನೇ ಬ್ಲಾಕ್‌ನಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಮ್ಮಿಕೊಂಡಿದ್ದ ಕಾರ್ಯಸಿದ್ಧಿ ವಿನಾಯಕ ಸ್ವಾಮಿ ಪ್ರತಿಮೆ ಪುನರ್ ಪ್ರತಿಷ್ಠಾಪನೆ, ವಿಮಾನ ಗೋಪುರದ ಬ್ರಹ್ಮಕಲಶ ಕುಂಭಾಭಿಷೇಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಾಸಕ ಎಸ್.ಟಿ. ಸೋಮಶೇಖರ್ ಮಾತನಾಡಿ, 'ಬಡಾವಣೆಯ ಎಲ್ಲ ವರ್ಗದ ಜನರು ಒಗ್ಗಟ್ಟಾಗಿ ದೇವಸ್ಥಾನ ನಿರ್ಮಿಸಿದ್ದಾರೆ. ಪ್ರತಿನಿತ್ಯ ಎಲ್ಲರೂ ಒಗ್ಗೂಡಿ ದೇವರ ಸೇವೆ ಮಾಡಬೇಕು. ತಮ್ಮೆಲ್ಲ ಸಾಮಾಜಿಕ ಪುಣ್ಯದ ಕೆಲಸದಲ್ಲಿ ನಿಮ್ಮ ಸೇವಕನಾಗಿ ಕೈಜೋಡಿಸುತ್ತೇನೆ' ಎಂದು ಹೇಳಿದರು.

ಸಾಮಾಜಿಕ ಕಾರ್ಯಕರ್ತ ಎಸ್.ಟಿ. ಕುಬೇರಸ್ವಾಮಿ, ಕಾಂಗ್ರೆಸ್ ನಾಯಕ ಮುದ್ದನಪಾಳ್ಯ ವಿ.ಅಶ್ವಥ್, ದೇವಸ್ಥಾನದ ಸೇವಾಕರ್ತ ಎಸ್.ಟಿ. ರಮೇಶ್, ಓಂ ಪ್ರಕಾಶ್, ಕೃಷ್ಣೇಗೌಡ, ಚಂದ್ರಪ್ಪ, ದಯಾನಂದ್, ಪ್ರಧಾನ ಕಾರ್ಯದರ್ಶಿಗಳಾದ ಜಿ.ಎನ್. ಹನುಮಂತರಾಜು, ಪಳನಿವೇಲ್, ಅರವಿಂದ ಅಶೋಕ್, ಮುಖಂಡರಾದ ಆದಿತ್ಯ ರಮೇಶ್, ನಿಖಿಲ್ ಗೌಡ, ಸುಮಾ ಜನಾರ್ದನ್, ಎನ್. ರಮೇಶ್, ನಾಗರಾಜ್ ಸಿಂಗ್ರಿ, ಬಿ.ರಮೇಶ್ ಭಾಗವಹಿಸಿದ್ದರು.



ವಿಶ್ವೇಶ್ವರಯ್ಯ ಎಂಟನೇ ಬ್ಲಾಕ್‌ನಲ್ಲಿ ಆಯೋಜಿಸಿದ್ದ ಕಾರ್ಯಸಿದ್ಧಿ ವಿನಾಯಕ ಸ್ವಾಮಿ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ ಹಾಗೂ ವಿಮಾನ ಗೋಪುರದ ಬ್ರಹ್ಮಕಲಶ ಕುಂಭಾಭಿಷೇಕ ಮಹೋತ್ಸವದಲ್ಲಿ ವಿಧುಶೇಖರ ಭಾರತಿ ಸ್ವಾಮೀಜಿ, ಶಾಸಕ ಎಸ್.ಟಿ. ಸೋಮಶೇಖರ್ ಭಾಗವಹಿಸಿದ್ದರು



ವಿಪ್ರೊ ಕಂಪನಿ 15ನೇ ಆವೃತ್ತಿಯ 'ವಿಪ್ರೊ ಅರ್ಥಿಯನ್ ಸ್ಪರ್ಧೆ'ಯಲ್ಲಿ ಭಾಗವಹಿಸಿದ್ದ ಶಾಲಾ ತಂಡಗಳು

'ವಿಪ್ರೊ ಅರ್ಥಿಯನ್' ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಪ್ರೊ ಕಂಪನಿ 15ನೇ ಆವೃತ್ತಿಯ 'ವಿಪ್ರೊ ಅರ್ಥಿಯನ್' ಪ್ರಶಸ್ತಿ ಪ್ರದಾನ ಸಮಾರಂಭ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಆವರಣದಲ್ಲಿ ಶನಿವಾರ ನೆರವೇರಿತು.

ಈ ಪ್ರಶಸ್ತಿಗೆ ದೇಶದ ಬೇರೆ ಬೇರೆ ಭಾಗದ ಶಾಲೆ ಹಾಗೂ ಕಾಲೇಜುಗಳಿಂದ ಬಂದಿದ್ದ ಎರಡು ಸಾವಿರಕ್ಕೂ ಹೆಚ್ಚು ಪ್ರವೇಶಗಳ ಪೈಕಿ 25 ತಂಡಗಳನ್ನು ತೀರ್ಪುಗಾರರು ಆಯ್ಕೆ ಮಾಡಿದರು.

ಜೀವವೈವಿಧ್ಯ, ತ್ಯಾಜ್ಯ ನಿರ್ವಹಣೆ ಹಾಗೂ ಜಲ ಸಂರಕ್ಷಣೆ ಸೇರಿ ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಕ್ರಮಗಳನ್ನು ಕೈಗೊಳ್ಳಲು ಉತ್ತೇಜಿಸಲಾಗುತ್ತದೆ. ಈ ಕ್ಷೇತ್ರದಲ್ಲಿ ಮಾಡಿದ ಸಾಧನೆ ಪರಿಗಣಿಸಿ ಪ್ರಶಸ್ತಿ ನೀಡಲಾಗುತ್ತದೆ.

ಈ ಬಾರಿಯ ಪ್ರಶಸ್ತಿಗೆ ಬೆಂಗಳೂರಿನ ಮಾರಗೊಂಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆಯ್ಕೆಯಾಗಿದೆ. ವಿದ್ಯಾರ್ಥಿಗಳು ತಮ್ಮ ಶಾಲೆ, ಮನೆಗಳು ಮತ್ತು ಗ್ರಾಮದಲ್ಲಿ ನೀರಿನ ಮೂಲಗಳು, ಬಳಕೆ ಹಾಗೂ ಸಂರಕ್ಷಣೆಯ ಬಗ್ಗೆ ಅಧ್ಯಯನ ನಡೆಸಿದರು.

ವಿಪ್ರೊ ಲಿಮಿಟೆಡ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನುರಾಗ್ ಬೆಹರ್, ವಿಪ್ರೊ ಫೌಂಡೇಶನ್‌ನ ಮ್ಯಾನೇಜಿಂಗ್ ಟ್ರಸ್ಟಿ ಪಿ.ಎಸ್. ನಾರಾಯಣ ಅವರು ಬೆಂಗಳೂರಿನ ಮಾರಗೊಂಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಿದರು.

ಒಳ ಮೀಸಲಾತಿಯಲ್ಲಿ ಅನ್ಯಾಯ: ಮಾರ್ಚ್‌ನಲ್ಲಿ ಧರಣಿ

ರಾಜರಾಜೇಶ್ವರಿ ನಗರ: ಪರಿಶಿಷ್ಟ ಜಾತಿಯ ಒಳ ಮೀಸಲಾತಿ ವರ್ಗೀಕರಣದಲ್ಲಿ ಭೋವಿ, ಬಂಜಾರ, ಕೊರಮ, ಕೊರಚ, ಅಲೆಮಾರಿ ಸಮುದಾಯಗಳಿಗೆ ಆಗಿರುವ ಅನ್ಯಾಯವನ್ನು ಖಂಡಿಸಿ ರಾಜ್ಯ ಸರ್ಕಾರದ ವಿರುದ್ಧ ಮಾರ್ಚ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಚಿತ್ರದುರ್ಗ ಭೋವಿ ಪೀಠಾಧ್ಯಕ್ಷ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ತಿಳಿಸಿದರು.

ಅಂದ್ರಹಳ್ಳಿಯ ಚಕ್ರ ನಗರದಲ್ಲಿ ಜರುಗಿದ ಸಿದ್ದರಾಮೇಶ್ವರ ಜಯಂತ್ಯುತ್ಸವ ಮತ್ತು ಸಿದ್ದರಾಮೇಶ್ವರ ಭೋವಿ (ವಡ್ಡರ) ಬಳಗ– ಬೆಂಗಳೂರು ಸಂಘಟನೆಯ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಪರಿಶಿಷ್ಟ ಜಾತಿ ಪ್ರವರ್ಗ 'ಸಿ' ಎಂಬ ಸೂತ್ರದ ಮೂಲಕ ಒಳ ಮೀಸಲಾತಿಯೊಳಗೆ ಒಳ ಮೀಸಲಾತಿ ತರುತ್ತಿರುವುದು ಪರಿಶಿಷ್ಟ ಜಾತಿಗೆ ಮಾಡುತ್ತಿರುವ ಅನ್ಯಾಯ. ಪ್ರವರ್ಗ 'ಸಿ' ಸೂತ್ರ ತಿರಸ್ಕರಿಸಬೇಕು ಎಂದು ಒತ್ತಾಯಿಸಿದರು.

ವಿಧಾನ ಪರಿಷತ್ ಸದಸ್ಯ ಟಿ.ಎನ್. ಜವರಾಯಿ ಗೌಡ ಮಾತನಾಡಿ, 'ಭೋವಿ ಜನಾಂಗ ಅವಿದ್ಯಾವಂತ, ಮುಗ್ಧ, ಪ್ರಾಮಾಣಿಕ ಜನಾಂಗವಾಗಿದ್ದು, ರಾಷ್ಟ್ರ ನಿರ್ಮಾಣ, ಸಮಾಜ ಸೇವೆಯಲ್ಲಿ ಮುಂಚೂಣಿಯಲ್ಲಿದೆ' ಎಂದು ಹೇಳಿದರು.

ರಾಷ್ಟ್ರೀಯ ಭೋವಿ (ವಡ್ಡರ) ಜನಾಂಗದ ಅಧ್ಯಕ್ಷ ರವಿ ಎಚ್. ಮಾಕಳಿ, ಎಂ.ಆರ್.ಟಿ ಸಂಸ್ಥೆಯ ಮಾಲೀಕ ಅಂದ್ರಹಳ್ಳಿ ಪ್ರಕಾಶ್, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ರಾಮಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಎಚ್. ಜಯಶಂಕರ್, ಬೆಂಗಳೂರು ನಗರ ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷ ಎ.ವೆಂಕಟೇಶ್, ಸಂಘದ ಅಧ್ಯಕ್ಷ ಭೀಮರಾಜು, ಜೆಡಿಎಸ್ ಮುಖಂಡ ಗೋಪಾಲ್, ಸಂಘದ ಪದಾಧಿಕಾರಿಗಳಾದ ಸಾಬಣ್ಣ, ಭೀಮರಾಯ್, ದೀಪಕ್, ತಿರುಪತಿ, ಲಕ್ಷ್ಮಣ್ ವಡ್ಡಾರ್, ಹುಸೇನಪ್ಪ, ಮಲ್ಲಪ್ಪ, ಭರತ್, ಎನ್. ಸಾಬಣ್ಣ, ತಿಮ್ಮಯ್ಯ, ನರಸಿಂಹ, ಭೀಮಣ್ಣ, ಶರಣಪ್ಪ, ಹನುಮಂತ, ಮಾದೇಶ ಇದ್ದರು.

ಗಿಡ ನೆಡುವ ಅಭಿಯಾನ ಇಂದಿನಿಂದ

ಬೆಂಗಳೂರು: ಬೆಳವಾಲ್ ಫೌಂಡೇಷನ್‌ನಿಂದ ಫೆ.1ರಿಂದ ಜೂನ್ 5ರವರೆಗೆ ರಾಜ್ಯದಾದ್ಯಂತ ಒಂದು ಕೋಟಿ ಗಿಡಗಳನ್ನು ನೆಡುವ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೌಂಡೇಷನ್ ಸಂಸ್ಥಾಪಕ ಸಂಜಯ್ ಬೆಳವಾಲ್, 'ಅರಣ್ಯ ಯೋಜನೆಯಡಿ ಗಿಡಗಳನ್ನು ನೆಡಲಾಗುವುದು. ಭೂಮಿಯ ರಕ್ಷಣೆ, ಆರೋಗ್ಯಕರ ಜೀವನ ಮತ್ತು ಪರಿಶುದ್ಧ ಆಮ್ಲಜನಕಕ್ಕಾಗಿ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ' ಎಂದು ತಿಳಿಸಿದರು.

97ನೇ ಮಾಸಿಕ ಸಭೆ ಇಂದು

ಬೆಂಗಳೂರು: ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಸದಸ್ಯರ 97ನೇ ಮಾಸಿಕ ಸಭೆ ಲಾಲ್‌ಬಾಗ್ ಹೂ ತೋಟದಲ್ಲಿ ಫೆಬ್ರುವರಿ 1 ರಂದು ಬೆಳಿಗ್ಗೆ 8 ಗಂಟೆಗೆ ನಡೆಯಲಿದೆ.

ಬೈಕ್ ಟ್ಯಾಕ್ಸಿ: ಮೇಲ್ಮನವಿಗೆ ಆಗ್ರಹ

ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ಟ್ಯಾಕ್ಸಿ ಪರವಾಗಿ ಹೈಕೋರ್ಟ್ ನೀಡಿರುವ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ (ಎಸ್‌ಎಲ್‌ಪಿ) ಸಲ್ಲಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಲು ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ನಿರ್ಧರಿಸಿದೆ ಎಂದು ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ ಶರ್ಮ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, 'ಈ ತೀರ್ಪು ಕಾನೂನು ವ್ಯಾಖ್ಯಾನ, ಸಾರ್ವಜನಿಕ ಸುರಕ್ಷತೆ, ಸಾರಿಗೆ ನಿಯಂತ್ರಣ ಮತ್ತು ಸರ್ಕಾರದ ನೀತಿ ನಿರ್ಧಾರಾಧಿಕಾರದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಇದೇ ಅಂತಿಮವಾದರೆ ರಾಜ್ಯದ ಸಾರಿಗೆ ವ್ಯವಸ್ಥೆಯಲ್ಲಿ ಗೊಂದಲ ಉಂಟಾಗಿ, ಸಾರ್ವಜನಿಕರ ಜೀವಭದ್ರತೆಗೆ ಅಪಾಯ ಉಂಟಾಗುವ ಸಾಧ್ಯತೆ ಇದೆ' ಎಂದು ಆತಂಕ ವ್ಯಕ್ತಪಡಿಸಿದರು.

ಮೋಟಾರು ವಾಹನಗಳ ಕಾಯ್ದೆ ಪ್ರಕಾರ 'ಮೋಟಾರು ಕ್ಯಾಬ್' ಎಂದರೆ ಪ್ರಯಾಣಿಕರ ಸುರಕ್ಷಿತ ವಾಣಿಜ್ಯ ಸಾರಿಗೆಗಾಗಿ ವಿನ್ಯಾಸ ಗೊಳಿಸಲಾದ ವಾಹನವೆಂದು ಸ್ಪಷ್ಟವಾಗಿದೆ. ಮೋಟಾರು ಸೈಕಲ್‌ಗಳನ್ನು ಮೋಟಾರು ಕ್ಯಾಬ್ ಎಂದು ಪರಿಗಣಿಸಿರುವುದು ಶಾಸನದ ಉದ್ದೇಶಕ್ಕೆ ವಿರುದ್ಧವಾಗಿದೆ. ಮೋಟಾರು ಸೈಕಲ್‌ಗಳಲ್ಲಿ ಸುರಕ್ಷತಾ ವ್ಯವಸ್ಥೆಗಳಿಲ್ಲ. ಅಪಘಾತ ಸಂಭವಿಸಿದಾಗ ಬೇರೆ ವಾಹನಗಳಿಗಿಂತ ಮೋಟಾರು ಸೈಕಲ್‌ಗಳಲ್ಲಿ ಹೆಚ್ಚು ಗಾಯ ಮತ್ತು ಜೀವಹಾನಿಯಾಗುವ ಅಪಾಯವಿದೆ ಎಂದು ವಿವರಿಸಿದರು.

ಕೇಂದ್ರ ಮೋಟಾರು ವಾಹನ ನಿಯಮಾವಳಿಗಳಲ್ಲಿ ಎರಡು ಚಕ್ರದ ವಾಹನಗಳನ್ನು ಪ್ರತ್ಯೇಕ ವರ್ಗದಲ್ಲಿ ಮತ್ತು ಪ್ರಯಾಣಿಕರ ವಾಹನಗಳನ್ನು ಪ್ರತ್ಯೇಕ ವರ್ಗಗಳಲ್ಲಿ ವರ್ಗೀಕರಿಸಲಾಗಿದೆ. ಈ ವಿಭಜನೆಯನ್ನು ಕಡೆಗಣಿಸಿದರೆ ಕಾನೂನು ಚೌಕಟ್ಟೇ ದುರ್ಬಲಗೊಳ್ಳಲಿದೆ ಎಂದು ಹೇಳಿದರು.

ಪೊಲೀಸ್ ಇಲಾಖೆಯ ಅಂಕಿ ಅಂಶಗಳ ಪ್ರಕಾರ, ರಸ್ತೆ ಅಪಘಾತಗಳಲ್ಲಿ ಶೇ 70ರಿಂದ ಶೇ 85ರಷ್ಟು ಅಪಘಾತಗಳು ದ್ವಿಚಕ್ರ ವಾಹನಗಳಿಗೆ ಸಂಬಂಧಿಸಿದ್ದವು ಆಗಿವೆ. ಅಗ್ರಿಗೇಟರ್ ಸಂಸ್ಥೆಗಳು ನಡೆಸುವ ಬೈಕ್ ಟ್ಯಾಕ್ಸಿಗಳು ಅನೇಕ ಸಂದರ್ಭದಲ್ಲಿ ಅಪಘಾತಕ್ಕೆ ಈಡಾಗಿ ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡಿರುವುದು ವರದಿಯಾಗಿವೆ. ಆದರೆ, ಆ ಪ್ರಯಾಣಿಕರಿಗೆ ಅಗ್ರಿಗೇಟರ್ ಕಂಪನಿಗಳು ಯಾವುದೇ ಪರಿಹಾರ ನೀಡಿಲ್ಲ. ವಿಮಾ ಪರಿಹಾರವನ್ನೂ ಒದಗಿಸಿಲ್ಲ ಎಂದು ಮಾಹಿತಿ ನೀಡಿದರು.

ಬೈಕ್ ಟ್ಯಾಕ್ಸಿಗಳಿಗೆ ಅವಕಾಶ ನೀಡಿದರೆ ಸಾರ್ವಜನಿಕ ಸುರಕ್ಷತೆಗೆ ಅಪಾಯ, ಅಪಘಾತ ಪ್ರಮಾಣ ಹೆಚ್ಚಳ, ಪ್ರಯಾಣಿಕರ ಜೀವಭದ್ರತೆಗೆ ಹಾನಿ, ಈಗಾಗಲೇ ನಿಯಮಪಾಲನೆ ಮಾಡುತ್ತಿರುವ ಆಟೊ, ಟ್ಯಾಕ್ಸಿ, ಬಸ್ ಚಾಲಕರ ಜೀವನೋಪಾಯಕ್ಕೆ ಹೊಡೆತ ಬೀಳಲಿದೆ ಎಂದರು.



> ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿ ಹೈಕೋರ್ಟ್ ತೀರ್ಪಿಗೆ ಮಧ್ಯಂತರ ತಡೆಯಾಜ್ಞೆ ಪಡೆದು ರಾಜ್ಯದ ಸಾರಿಗೆ ನೀತಿಯನ್ನು ಕಾಪಾಡಬೇಕು
>
> **ಎಸ್. ನಟರಾಜ ಶರ್ಮ,** ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಅಧ್ಯಕ್ಷ

ಬುದ್ಧಗಯಾ: 8–9ಕ್ಕೆ ರಾಷ್ಟ್ರೀಯ ಅಧಿವೇಶನ

ಬೆಂಗಳೂರು: ಅಖಿಲ ಭಾರತ ಬೌದ್ಧರ ವೇದಿಕೆಯು ಫೆ.8 ಮತ್ತು 9ರಂದು ಬುದ್ಧಗಯಾದಲ್ಲಿ ರಾಷ್ಟ್ರೀಯ ಅಧಿವೇಶನ ಹಮ್ಮಿಕೊಂಡಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ರಾಜ್ಯ ಸಂಚಾಲಕ ಎಂ. ವೆಂಕಟಸ್ವಾಮಿ, 'ಈ ಅಧಿವೇಶನಕ್ಕೆ ದಕ್ಷಿಣ ಭಾರತದಿಂದ 100 ಬೌದ್ಧ ಬಿಕ್ಕುಗಳು ತೆರಳಲಿದ್ದಾರೆ. ಬೌದ್ಧ ಮತ್ತು ಅಂಬೇಡ್ಕರ್‌ವಾದಿ ಸಂಘಟನೆಗಳ ರಾಜ್ಯ ಮುಖಂಡರು ಪಾಲ್ಗೊಳ್ಳಬೇಕು' ಎಂದು ಮನವಿ ಮಾಡಿದರು.



PARAS



FARNAZ

ನೆಲಮಂಗಲದಲ್ಲಿ 'ಕೆಎನ್‌ಎಸ್ ಸಮೂಹ' ಟೌನ್‌ಶಿಪ್

ಕೆಎನ್‌ಎಸ್ ಇನ್‌ಫ್ರಾಸ್ಟ್ರಕ್ಚರ್‌ನಿಂದ ಮತ್ತೊಂದು ಯೋಜನೆ, ನೆಲಮಂಗಲದಲ್ಲಿ 150 ಎಕರೆ ಪ್ರದೇಶದಲ್ಲಿ ಸಕಲ ಸೌಕರ್ಯಗಳೊಂದಿಗೆ ಟೌನ್‌ಶಿಪ್ ಅಭಿವೃದ್ಧಿಗೆ ಚಾಲನೆ

ಬೆಂಗಳೂರು: ರಿಯಲ್ ಎಸ್ಟೇಟ್ ಕ್ಷೇತ್ರವೆಂದರೆ ಕೇವಲ ಇಟ್ಟಿಗೆ-ಮಣ್ಣಿನ ಕಟ್ಟಡಗಳಲ್ಲ. ಅದು ಸಾವಿರಾರು ಕುಟುಂಬಗಳ ಜೀವನದ ಕನಸು. ಇಂತಹ ಕನಸುಗಳಿಗೆ ಕಳೆದ 18 ವರ್ಷಗಳಿಂದ ಜೀವ ತುಂಬುತ್ತಾ, ಗುಣಮಟ್ಟ ಮತ್ತು ನಂಬಿಕೆಗೆ ಹೆಸರಾಗಿರುವ ಕೆಎನ್‌ಎಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆ ಈಗ ಮತ್ತೊಂದು ಮಹತ್ವದ ಮೈಲಿಗಲ್ಲನ್ನು ತಲುಪಿದೆ. ಬೆಂಗಳೂರಿನ ನೆಲಮಂಗಲದಲ್ಲಿ ಸುಮಾರು 150 ಎಕರೆ ವಿಸ್ತೀರ್ಣದ ಅತ್ಯಾಧುನಿಕ ಪ್ಲಾಟೆಡ್ ಟೌನ್‌ಶಿಪ್ 'ಕೆಎನ್‌ಎಸ್ ಸಮೂಹ' ಯೋಜನೆಯನ್ನು ಅಧಿಕೃತವಾಗಿ ಮಾರುಕಟ್ಟೆಗೆ ಪರಿಚಯಿಸಿದೆ. ಆ ಮೂಲಕ ರಿಯಲ್‌ಎಸ್ಟೇಟ್ ಕ್ಷೇತ್ರದಲ್ಲಿ ತನ್ನದೇ ಆದ ಮತ್ತೊಂದು ಛಾಪು ಮೂಡಿಸಲು ಸಜ್ಜಾಗಿದೆ.

ಕೆಎನ್‌ಎಸ್ ಇನ್‌ಫ್ರಾ ಸ್ಟ್ರಕ್ಚರ್ 2007ರಲ್ಲಿ ಆರಂಭವಾಗಿ, ಬೆಂಗಳೂರಿನ ರಿಯಲ್ ಎಸ್ಟೇಟ್ ನಕ್ಷೆಯಲ್ಲಿ ಅಳಿಸಲಾಗದ ಮುದ್ರೆಯೊತ್ತಿದೆ. ಕಳೆದೆರಡು ದಶಕಗಳಲ್ಲಿ ಸಂಸ್ಥೆಯು ಅಪಾರ ಸಾಧನೆಯ ಮೂಲಕ ಎಲ್ಲರ ಗಮನ ಸೆಳೆದಿದೆ. ಕಳೆದ 18 ವರ್ಷಗಳಿಂದ ಸುದೀರ್ಘ ಹಾಗೂ ಯಶಸ್ವಿ ಕಾರ್ಯ-ನಿರ್ವಹಣೆಯಿಂದ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಮಹತ್ವದ ಮೈಲಿಗಲ್ಲುಗಳನ್ನು ಸ್ಥಾಪಿಸಿದೆ. ಈವರೆಗೆ ಸುಮಾರು 2.6 ಕೋಟಿ ಚದರ ಅಡಿ ಪ್ರದೇಶವನ್ನು ಅಭಿ-ವೃದ್ಧಿಪಡಿಸುವ ಮೂಲಕ ಕೋಟ್ಯಾಂತರ ಗ್ರಾಹಕರ ವಿಶ್ವಾಸಕ್ಕೆ ಪಾತ್ರವಾಗಿದೆ. ಜತೆಗೆ, 15,000ಕ್ಕೂ ಹೆಚ್ಚು ತೃಪ್ತಿಕರ ಗ್ರಾಹಕರು ಸಂಸ್ಥೆಯ ಮೇಲೆ ವಿಶ್ವಾಸವಿ-ಟ್ಟಿದ್ದಾರೆ. ಸಂಸ್ಥೆಯ ಯಶಸ್ಸಿಗೆ ಮುಖ್ಯ ಕಾರಣವೆಂದರೆ ಅದರ ಕಾರ್ಯವೈಖರಿ. ಪಾರದರ್ಶಕತೆ, ಕಾನೂನುಬದ್ಧತೆ ಮತ್ತು ಸಮಯಕ್ಕೆ ಸರಿಯಾಗಿ ಯೋಜನೆಯನ್ನು ಪೂರ್ಣಗೊಳಿಸುವುದು ಇವರ ಮೂಲ ತತ್ವಗಳಾಗಿವೆ. ಸಂಸ್ಥೆಯ ಪ್ರತಿಯೊಂದು ಯೋಜನೆಯು ಬಿಎಮ್‌ಆರ್‌ಡಿಎ, ಬಿಡಿಎ ಮತ್ತು ಕರ್ನಾಟಕ ರೇರಾ ಪ್ರಾಧಿ-ಕಾರಗಳಿಂದ ಅಧಿಕೃತ ಅನುಮೋದನೆ ಪಡೆದಿರುತ್ತದೆ. ಇದು ಹೂಡಿಕೆದಾರರಿಗೆ ಹೆಚ್ಚಿನ ಸುರಕ್ಷತೆಯನ್ನು ನೀಡುತ್ತದೆ.

ಕೆಎನ್‌ಎಸ್ ಇನ್‌ಫ್ರಾಸ್ಟ್ರಕ್ಚರ್ ತನ್ನ ಪ್ರತಿಯೊಂದು ಯೋಜನೆಯಲ್ಲಿಯೂ ಶಿಸ್ತುಬದ್ಧ ನಗರ ವಿಸ್ತರಣೆಗೆ ಒತ್ತು ನೀಡುತ್ತಿದೆ. ಬೆಂಗಳೂರಿನಂತಹ ವೇಗವಾಗಿ ಬೆಳೆಯುತ್ತಿರುವ ನಗರದಲ್ಲಿ, ವಿಶ್ವಾಸಾರ್ಹ ಮತ್ತು ಕಾನೂನುಬದ್ಧ ವಸತಿ ಸೌಕರ್ಯ ಒದಗಿಸುವಲ್ಲಿ ಸಂಸ್ಥೆ ಮುಂಚೂಣಿಯಲ್ಲಿದೆ. ಕೆಎನ್‌ಎಸ್ ಇನ್‌ಫ್ರಾಸ್ಟ್ರಕ್ಚರ್ ಕುರಿತು ಹೆಚ್ಚಿನ ಮಾಹಿತಿಗಾಗಿ 07941057108 ಮತ್ತು www.knsgroup.in ಸಂಪರ್ಕಿಸಿ.



- ಕೆಎನ್‌ಎಸ್ ಇನ್‌ಫ್ರಾ-ಸ್ಟ್ರಕ್ಚರ್ ಕಳೆದ 18ವರ್ಷಗಳಿಂದ ವಿಶ್ವಾಸಾರ್ಹ ಸೇವೆ
- ಈವರೆಗೆ 2.6ಕೋಟಿ ಚದರ ಅಡಿ ಪ್ರದೇಶ ಅಭಿವೃದ್ಧಿ
- 15ಸಾವಿರಕ್ಕೂ ಅಧಿಕ ಗ್ರಾಹಕರ ನೆಮ್ಮದಿಯ ಬದುಕಿಗೆ ಸೇವೆ







ಪ್ರಸ್ತುತಿ:
ಪಿವಿ ಬ್ರ್ಯಾಂಡ್ ಸ್ಪಾಟ್

ಕೆಎನ್‌ಎಸ್ ಸಮೂಹ ಯೋಜನೆಯ ವಿಶೇಷಗಳು

ಸಮಗ್ರ ವಸತಿ ಟೌನ್‌ಶಿಪ್ ಸುಮಾರು 150 ಎಕರೆ ಪ್ರದೇಶದಲ್ಲಿ ಹರಡಿಕೊಂಡಿದ್ದು, ಒಟ್ಟು ಮೂರು ಹಂತಗಳಲ್ಲಿ ಅಭಿ-ವೃದ್ಧಿಪಡಿಸಲಾಗುತ್ತಿದೆ. ಇದು ಕೇವಲ ಲೇಔಟ್ ಆಗಿರದೆ, ಒಂದು ಸುಸಜ್ಜಿತ ಜೀವನಶೈಲಿಯನ್ನು ನೀಡುವ ಸಮುದಾಯ ಕೇಂದ್ರವಾಗಿದೆ.

1. **ಕನೆಕ್ಟಿವಿಟಿ :** ಈ ಯೋಜನೆಯು ರಾಷ್ಟ್ರೀಯ ಹೆದ್ದಾರಿ-48(ತುಮಕೂರು-ಬೆಂಗಳೂರು ಹೆದ್ದಾರಿ)ಗೆ ಅತ್ಯಂತ ಸಮೀಪದಲ್ಲಿದೆ. ಇದರಿಂದಾಗಿ ಬೆಂಗಳೂರು ನಗರದ ಇತರ ಭಾಗಗಳಿಗೆ ಸುಲಭ ಸಂಪರ್ಕ ಸಿಗುವುದಲ್ಲದೆ, ಸಮೀಪದ ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರಗಳಿಗೆ ಇದು ಹತ್ತಿರವಾಗಿದೆ. ಭವಿಷ್ಯದಲ್ಲಿ ಈ ಭಾಗದಲ್ಲಿ ಹೆಚ್ಚಿನ ಮೂಲಸೌಕರ್ಯ ಅಭಿವೃದ್ಧಿಯಾಗುವ ಸಾಧ್ಯತೆಗಳಿರುವುದರಿಂದ, ಹೂಡಿಕೆಗೆ ಇದು ಅತ್ಯಂತ ಸೂಕ್ತ ಸ್ಥಳವಾಗಿದೆ. ವಿಶೇಷವಾಗಿ ಸ್ಯಾಟಲೈಟ್ ರಿಂಗ್ ರಸ್ತೆಯೂ ಸಹ ಸಮೀಪದಲ್ಲೇ ಹಾದು ಹೋಗಿರುವುದರಿಂದ ಕನೆಕ್ಟಿವಿಟಿಗೆ ಸಹಕಾರಿಯಾಗಿದೆ.
2. **ವಿಶ್ವದರ್ಜೆಯ ಸೌಲಭ್ಯಗಳು:** ಕೆಎನ್‌ಎಸ್ ಸಮೂಹ ಯೋಜನೆಯಲ್ಲಿ ಗ್ರಾಹಕರಿಗೆ ಅತ್ಯುತ್ತಮ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ಗ್ರಾಹಕರಿಗೆ ಅಗತ್ಯ ಮೂಲ ಸೌಕರ್ಯಗಳಾದ ಅಗಲವಾದ ಆಂತರಿಕ ರಸ್ತೆಗಳು, ಸುಸಜ್ಜಿತ ಡ್ರೈನೇಜ್ ವ್ಯವಸ್ಥೆ, ನಿರಂತರ ವಿದ್ಯುತ್ ಮತ್ತು ನೀರಿನ ಸೌಲಭ್ಯವನ್ನು ಒದಗಿಸಲಾಗಿದೆ. ಉತ್ತಮ ಪರಿಸರಕ್ಕೆ ಮುಕ್ತವಾದ ಹಸಿರು ಜಾಗಗಳು, ಸುಂದರವಾದ ಉದ್ಯಾನವನಗಳು ಮತ್ತು ಲ್ಯಾಂಡ್‌ಸ್ಕೇಪಿಂಗ್ ಸೌಕರ್ಯ ಕಲ್ಪಿಸಲಾಗಿದೆ. ಜತೆಗೆ, ಉತ್ತಮ ಜೀವನಶೈಲಿಗಾಗಿ ಸುಸಜ್ಜಿತ ಕ್ಲಬ್‌ಹೌಸ್, ಜಾಗಿಂಗ್ ಟ್ರ್ಯಾಕ್, ಯೋಗ ಮತ್ತು ಧ್ಯಾನ ವಲಯಗಳನ್ನು ರೂಪಿಸಲಾಗಿದೆ. ಕ್ರೀಡಾ ಸೌಲಭ್ಯಗಳು ಮತ್ತು ಮಕ್ಕಳಿಗಾಗಿ ಪ್ರತ್ಯೇಕ ಆಟದ ಪ್ರದೇಶಗಳನ್ನು ಸಹ ಅಭಿವೃದ್ಧಿಪಡಿಸಲಾಗಿದೆ.
3. **ಗ್ರಾಹಕ ಸ್ನೇಹಿ ಸೌಕರ್ಯ :** ಕೆಎನ್‌ಎಸ್ ಸಮೂಹ ಯೋಜನೆಯನ್ನು ಆರಂಭಿಸಿದ ಸಂಸ್ಥೆ, 'ನಾವು ಕೇವಲ ನಿವೇಶನಗಳನ್ನು ಮಾರಾಟ ಮಾಡುವುದಿಲ್ಲ, ಬದಲಾಗಿ ಮುಂದಿನ ತಲೆಮಾರಿಗೆ ಮೌಲ್ಯಯುತವಾದ ಆಸ್ತಿಯನ್ನು ನಿರ್ಮಿಸಿಕೊಡುತ್ತೇವೆ' ಎಂದು ಸಂತಸ ವ್ಯಕ್ತಪಡಿಸಿದೆ. ಈ ಟೌನ್‌ಶಿಪ್ ಯೋಜನೆಯಡಿ ಅಗಲವಾದ ರಸ್ತೆಗಳು ಮತ್ತು ಪರಿಸರ ಸ್ನೇಹಿ ವಿನ್ಯಾಸಗಳ ಮೂಲಕ ದೀರ್ಘಕಾಲೀನ ಮೌಲ್ಯವನ್ನು ಸೃಷ್ಟಿಸುವುದು ಸಂಸ್ಥೆಯ ಉದ್ದೇಶವಾಗಿದೆ.



ಡೈರಿ: ರಾಜಕಾರಣಿಗಳು, ನಟ– ನಟಿಯರ ಹೆಸರು

ಸಿ.ಜೆ.ರಾಯ್ ಸಹೋದರ, ಪುತ್ರನ ಹೇಳಿಕೆ ದಾಖಲಿಸಿಕೊಂಡ ಪೊಲೀಸರು • ತನಿಖೆ ಚುರುಕು

ಪ್ರಜಾವಾಣಿ ವಾರ್ತೆ



ಐಷಾರಾಮಿ ಕಾರಿನೊಂದಿಗೆ ಸಿ.ಜೆ.ರಾಯ್

ಬೆಂಗಳೂರು: ಆತ್ಮಹತ್ಯೆ ಮಾಡಿಕೊಂಡ ರಿಯಲ್ ಎಸ್ಟೇಟ್ ಉದ್ಯಮಿ ಸಿ.ಜೆ. ರಾಯ್ ಅವರು ತಮ್ಮ ಡೈರಿಯಲ್ಲಿ ಹಲವು ರಾಜಕಾರಣಿಗಳು, ಸಿನಿಮಾ ಕ್ಷೇತ್ರದ ಗಣ್ಯರು, ಮಾಡೆಲ್‌ಗಳು ಹಾಗೂ ನಟ–ನಟಿಯರ ಹೆಸರುಗಳನ್ನು ಬರೆದಿದ್ದಾರೆ.

ರಾಯ್ ಅವರು ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವಹಿಸುವುದಕ್ಕೂ ಮುನ್ನ ಅಶೋಕನಗರ ಠಾಣೆಯ ಪೊಲೀಸರು, ಪ್ರಕರಣದ ಪ್ರಾಥಮಿಕ ತನಿಖೆ ನಡೆಸಿ, ಮಾಹಿತಿ ಕಲೆಹಾಕಿದ್ದರು. ರಾಯ್ ಅವರ ಕಚೇರಿಯಲ್ಲಿದ್ದ ಎರಡು ಐ–ಫೋನ್, ಲ್ಯಾಪ್‌ಟಾಪ್ ಹಾಗೂ ಡೈರಿಯನ್ನು ಜಪ್ತಿ ಮಾಡಿಕೊಂಡಿದ್ದರು. ರಾಯ್ ಅವರಿಗೆ ಡೈರಿ ಬರೆಯುವ ಅಭ್ಯಾಸವಿತ್ತು. ಆ ಡೈರಿಯಲ್ಲಿ ಕೇರಳ, ಕರ್ನಾಟಕದ ಕೆಲವು ಗಣ್ಯರ ಹೆಸರು ಬರೆದಿರುವುದು ಪತ್ತೆಯಾಗಿದೆ ಎಂದು ಮೂಲಗಳು ಹೇಳಿವೆ.

'ಡೈರಿಯಲ್ಲಿ ಪಟ್ಟಿ ಮಾಡಿರುವ ಹೆಸರುಗಳನ್ನು ಯಾವ ಉದ್ದೇಶದಿಂದ ಬರೆಯಲಾಗಿತ್ತು ಎಂಬುದನ್ನು ಪರಿಶೀಲಿಸಲಾಗುತ್ತಿದೆ. ರಾಯ್ ಅವರು ತಮ್ಮ ಉದ್ಯಮದ ಭಾಗವಾಗಿ ಆಯೋಜಿಸುತ್ತಿದ್ದ ಹಲವು ಕಾರ್ಯಕ್ರಮಗಳಿಗೆ ನಟ, ನಟಿಯರು ಹಾಗೂ ಮಾಡೆಲ್‌ಗಳನ್ನು ಆಹ್ವಾನಿಸುತ್ತಿದ್ದರು. ಇವೆಂಟ್ ಮ್ಯಾನೇಜ್‌ಮೆಂಟ್‌ಯೋಜನೆಗಳ ಗಣ್ಯರ ಹೆಸರು ಪಟ್ಟಿ ಮಾಡಲಾಗಿತ್ತೇ ಅಥವಾ ರಿಯಲ್ ಎಸ್ಟೇಟ್‌ನಲ್ಲಿ ವ್ಯವಹಾರಿಕ ನಂಟು ಹೊಂದಲಾಗಿತ್ತೇ ಎಂಬುದನ್ನು ಪರಿಶೀಲಿಸಬೇಕಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ರಾಯ್ ಅವರು ತಮ್ಮ ಎರಡು ಐ–ಫೋನ್‌ಗಳಿಗೂ ಪಾಸ್‌ವರ್ಡ್ ಹಾಕಿದ್ದಾರೆ. ಐ–ಫೋನ್‌ಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಕೊನೆಯ ಬಾರಿಗೆ ಯಾರ ಜತೆ ಫೋನ್‌ನಲ್ಲಿ ಮಾತನಾಡಿದ್ದರು? ಏನು ಮಾತುಕತೆ ನಡೆಸಿದ್ದರು ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಅವರು ಹೇಳಿದರು.

ಇಬ್ಬರ ಹೇಳಿಕೆ ದಾಖಲು: 'ಸಿ.ಜೆ.ಬಾಬು ಹಾಗೂ ರಾಯ್ ಅವರ ಪುತ್ರ ರೋಹಿತ್ ಅವರಿಂದ ಅಶೋಕನಗರ ಠಾಣೆಯ ಪೊಲೀಸರು ಪ್ರಾಥಮಿಕ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಐ.ಟಿ ಅಧಿಕಾರಿಗಳು ಯಾವ ವಿಚಾರವಾಗಿ ದಾಳಿ ಮಾಡಿದ್ದರು? ಐ.ಟಿ ಅಧಿಕಾರಿಗಳು ಒತ್ತಡ ಹಾಕುತ್ತಿದ್ದಾರೆ ಎಂಬುದಾಗಿ ರಾಯ್ ತಮ್ಮ ಬಳಿ ಹೇಳಿಕೊಂಡಿದ್ದರೆ ಎಂದು ಪ್ರಶ್ನೆ ಕೇಳಿ ಮಾಹಿತಿ ಪಡೆಯಲಾಗಿದೆ. ಅಂತ್ಯಸಂಸ್ಕಾರ ಮುಗಿದ ಮೇಲೆ ಎಸ್‌ಐಟಿ ಅಧಿಕಾರಿಗಳು ವಿವರವಾದ ಹೇಳಿಕೆ ದಾಖಲಿಸಿ ಕೊಳ್ಳಲಿದ್ದಾರೆ' ಎಂದು ತನಿಖಾ ಮೂಲಗಳು ಹೇಳಿವೆ.

ಹೋಟೆಲ್‌ನಲ್ಲೂ ಪರಿಶೀಲನೆ: ಹಲಸೂರಿನ ಸೋಮೇಶ್ವರಪುರದ ಕಾನ್ಫಿಡೆಂಟ್ ಹೋಟೆಲ್ಸ್ 24ನೇ ಮಹಡಿಯ ಕೊಠಡಿಯಲ್ಲಿ ಗುರುವಾರ ರಾತ್ರಿ ರಾಯ್ ಅವರು ವಾಸ್ತವ್ಯ ಮಾಡಿದ್ದರು. ಆ ಕೊಠಡಿಯಲ್ಲೂ ಪರಿಶೀಲನೆ ನಡೆಸಲಾಗಿದೆ. ಹೋಟೆಲ್‌ನಲ್ಲಿ ಯಾವುದೇ ದಾಖಲೆಗಳು ಸಿಕ್ಕಿಲ್ಲ. ಐ.ಟಿ ಅಧಿಕಾರಿಗಳು ಕಚೇರಿಯ ಮೇಲೆ ದಾಳಿ ನಡೆಸಿದಾಗ ಮಾಹಿತಿ ತಿಳಿದು, ರಾಯ್ ಅವರು ಅದೇ ಹೋಟೆಲ್‌ನಿಂದ ನೇರವಾಗಿ ಕಚೇರಿಗೆ ಬಂದಿದ್ದರು ಎಂದು ಮೂಲಗಳು ಹೇಳಿವೆ.

'ಕಚೇರಿಯಲ್ಲಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಆಫ್ ಮಾಡಲಾಗಿತ್ತು. ಯಾವುದೇ ದೃಶ್ಯಾವಳಿಗಳು ಸಿಕ್ಕಿಲ್ಲ. ಯಾವ ಕಾರಣದಿಂದ ಕ್ಯಾಮೆರಾ ಆಫ್ ಮಾಡಲಾಗಿತ್ತು ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ರಾಯ್ ಒಡೆತನದ ಗ್ರೂಪ್ ಮೇಲೆ ಕಳೆದ ಡಿಸೆಂಬರ್‌ನಲ್ಲೂ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿದ್ದರು. ದಾಳಿಯ ವೇಳೆ ಸಿ.ಜೆ.ರಾಯ್ ಅವರ ಬಳಿ ಪರವಾನಗಿ ಪಡೆದ ಪಿಸ್ತೂಲ್ ಇದ್ದರೂ ಅದನ್ನು ವಶಪಡಿಸಿಕೊಂಡಿರಲಿಲ್ಲ. ಕಾನೂನು ಪ್ರಕಾರ, ದಾಳಿ ವೇಳೆ ಪರವಾನಗಿ ಪಡೆದು ಶಸ್ತ್ರಾಸ್ತ್ರಗಳನ್ನು ತಾತ್ಕಾಲಿಕವಾಗಿ ವಶಪಡಿಸಿಕೊಂಡು, ಸ್ಥಳೀಯ ಪೊಲೀಸರ ಸುಪರ್ದಿಗೆ ಒಪ್ಪಿಸಬೇಕು. ಆದರೆ, ಕಳೆದ ಎರಡೂವರೆ ತಿಂಗಳ ಅವಧಿಯಲ್ಲಿ ರಾಯ್ ಅವರ ಕಚೇರಿ ಮೇಲೆ ಎರಡು ಬಾರಿ ಐ.ಟಿ ದಾಳಿ ನಡೆದಿದ್ದರೂ, ಪಿಸ್ತೂಲ್ ವಶಕ್ಕೆ ಪಡೆದಿರಲಿಲ್ಲ. ಆ ನಿಟ್ಟಿನಲ್ಲೂ ತನಿಖೆ ನಡೆಸಲಾಗುವುದು ಎಂದು ಮೂಲಗಳು ಹೇಳಿವೆ.

ಐ.ಟಿ ಅಧಿಕಾರಿಗಳಿಂದ ಮಾಹಿತಿ ಪಡೆದ ಪೊಲೀಸರು

'ರಾಯ್ ಆತ್ಮಹತ್ಯೆ ಪ್ರಕರಣದ ಸಂಬಂಧ ಆದಾಯ ತೆರಿಗೆ ಇಲಾಖೆಯ ಕೇರಳದ ಅಧಿಕಾರಿಗಳಾದ ಕೃಷ್ಣಪ್ರಸಾದ್ ಹಾಗೂ ಸಿಬಿನ್ ಅವರಿಂದ ಮಾಹಿತಿ ಪಡೆಯಲಾಗಿದೆ. ಯಾವ ಉದ್ದೇಶದಿಂದ ದಾಳಿ ನಡೆಸಲಾಗಿತ್ತೆಂದು ಪ್ರಶ್ನೆ ಕೇಳಿ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಗಿದೆ. ಎಸ್‌ಐಟಿ ರಚನೆ ಆಗಿರುವುದರಿಂದ ಇನ್ನೂ ಹೆಚ್ಚಿನ ಮಾಹಿತಿ ಪಡೆಯಬೇಕಿದ್ದು, ನಗರ ತೊರೆಯದಂತೆ ಹೇಳಲಾಗಿದೆ. ಕೇರಳ ಐ.ಟಿ ತಂಡವು ಸದ್ಯ ಕಾನ್ಫಿಡೆಂಟ್ ಗ್ರೂಪ್ ಕಚೇರಿಯಲ್ಲೇ ಇದೆ' ಎಂದು ಮೂಲಗಳು ಹೇಳಿವೆ.

ದೂರಿನಲ್ಲಿ ಏನಿದೆ?

'ಕಾನ್ಫಿಡೆಂಟ್ ಗ್ರೂಪ್'ನ ಕೇರಳ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಟಿ.ಎ.ಜೋಸೆಫ್ ಅವರು ನೀಡಿದ ದೂರಿನ ಮೇರೆಗೆ ಅಶೋಕ ನಗರ ಠಾಣೆಯ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ಸಿ.ಜೆ.ರಾಯ್ ಅವರು ಶುಕ್ರವಾರ ಮಧ್ಯಾಹ್ನ 3ರ ಸುಮಾರಿಗೆ ನನ್ನ ಜತೆಗೆ ಕಾರಿನಲ್ಲಿ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ ಕಚೇರಿಗೆ ಬಂದಿದ್ದರು. ಕಚೇರಿಯಲ್ಲಿದ್ದ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳ ಎದುರು ಹೇಳಿಕೆ ದಾಖಲಿಸಿ, ಬಳಿಕ ತಮ್ಮ ಕ್ಯಾಬಿನ್‌ಗೆ ತೆರಳಿದ್ದರು. ತಾಯಿಯ ಜತೆಗೆ ಮಾತನಾಡಬೇಕು ಎಂದು ಹೇಳಿ ನನ್ನನ್ನು ಹೊರಕ್ಕೆ ಕಳುಹಿಸಿದ್ದರು. ಹತ್ತು ನಿಮಿಷ ಕಳೆದ ಮೇಲೆ ಮತ್ತೆ ಕ್ಯಾಬಿನ್‌ಗೆ ಹೋಗಲು ವಾಪಸ್ ಬಂದೆ. ಆಗ ಯಾರನ್ನೂ ಕ್ಯಾಬಿನ್‌ಗೆ ಬಿಡದಂತೆ ಸೆಕ್ಯೂರಿಟಿಗೆ ರಾಯ್ ಸೂಚಿಸಿದ್ದರು. ಮತ್ತೆ 15 ನಿಮಿಷ ಬಿಟ್ಟು ಕ್ಯಾಬಿನ್‌ಗೆ ಹೋಗಿ ಬಾಗಿಲು ತಟ್ಟಿದ್ದೆ, ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಬಾಗಿಲು ಒಡೆದು ಪರಿಶೀಲಿಸಿದಾಗ ರಾಯ್ ಅವರು ಕುರ್ಚಿಯಲ್ಲಿ ಕುಳಿತ ಸ್ಥಿತಿಯಲ್ಲಿದ್ದರು. ಶರ್ಟ್ ಮೇಲೆ ರಕ್ತವಿತ್ತು, ತಕ್ಷಣವೇ ಆಂಬುಲೆನ್ಸ್ ಕರೆಸಿದೆವು. ಎಚ್‌ಎಸ್‌ಆರ್ ಲೇಔಟ್‌ನ ನಾರಾಯಣ ಆಸ್ಪತ್ರೆಗೆ ಕರೆದೊಯ್ದು ಐಸಿಯುಗೆ ದಾಖಲಿಸುವ ವೇಳೆಗೆ ರಾಯ್ ಮೃತಪಟ್ಟಿದ್ದರು. ರಾಯ್ ಅವರು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಯಾರ ಒತ್ತಡ ಇರಬಹುದು ಎಂಬ ಬಗ್ಗೆ ಸಮಗ್ರ ತನಿಖೆ ನಡೆಸಬೇಕು' ಎಂದು ಜೋಸೆಫ್ ದೂರಿನಲ್ಲಿ ಕೋರಿದ್ದಾರೆ.

ಎದೆಯ ಭಾಗಕ್ಕೆ ಹೊಕ್ಕಿದ್ದ ಗುಂಡು

'ಗುಂಡಿನ ಗಾಯಗಳಿಂದ ರಾಯ್ ಮೃತಪಟ್ಟಿದ್ದಾರೆ ಎಂಬುದು ಮರಣೋತ್ತರ ಪರೀಕ್ಷೆಯ ವೇಳೆ ಗೊತ್ತಾಗಿದೆ. ದೇಹದಲ್ಲಿದ್ದ ಒಂದು ಗುಂಡು ಹೊರಕ್ಕೆ ತೆಗೆಯಲಾಗಿದೆ. ಹೃದಯ, ಶ್ವಾಸಕೋಶವನ್ನು ಗುಂಡು ಸೀಳಿಕೊಂಡು ಹೋಗಿತ್ತು, ಗುಂಡು ಹೊರಕ್ಕೆ ಹೋದ ಗಾಯ ಇಲ್ಲ. 6.35 ಎಂಎಂ ಬುಲೆಟ್ ಇದಾಗಿದೆ. ಪಿಸ್ತೂಲ್ ಹಿಡಿದಿದ್ದ ಬೆರಳಿನ ಮಾದರಿ, ರಕ್ತದ ಮಾದರಿ ಪಡೆದು ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿದೆ' ಎಂದು ಬೌರಿಂಗ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಎಂ.ಎಸ್.ಅರವಿಂದ್ ಮಾಹಿತಿ ನೀಡಿದರು.

> ಸಿ.ಜೆ.ರಾಯ್‌ಗೆ ಯಾವುದೇ ಬೆದರಿಕೆ ಕರೆಗಳು ಬಂದಿರಲಿಲ್ಲ. ಶತ್ರುಗಳೂ ಇರಲಿಲ್ಲ. ಉದ್ಯಮಕ್ಕೆ ಸಾಲವನ್ನೂ ಪಡೆದಿರಲಿಲ್ಲ. ಐ.ಟಿ ಅಧಿಕಾರಿಗಳ ಒತ್ತಡದಿಂದ ಅವರು ಆತ್ಮಹತ್ಯೆ ಮಾಡಿಕೊಂಡಿರಬಹುದು
> — ಸಿ.ಜೆ.ಬಾಬು, ರಾಯ್ ಸಹೋದರ

ಅಂತ್ಯಕ್ರಿಯೆ ಇಂದು

ಅಂತ್ಯಕ್ರಿಯೆಯನ್ನು ಭಾನುವಾರ ನಡೆಸಲು ಕುಟುಂಬಸ್ಥರು ನಿರ್ಧರಿಸಿದ್ದಾರೆ. ಬೌರಿಂಗ್ ಆಸ್ಪತ್ರೆಯ ಶವಾಗಾರದಿಂದ ಮೃತದೇಹವನ್ನು ಬನ್ನೇರುಘಟ್ಟ ರಸ್ತೆಯ ನೆಟ್ಸ್ ಲಕ್ಷುರಿ ರೆಸಾರ್ಟ್ ಆವರಣಕ್ಕೆ ಕೊಂಡೊಯ್ದು, ಬೆಳಿಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು. ಬಳಿಕ, ಹೊಸೂರು ರಸ್ತೆಯಲ್ಲಿರುವ ಚರ್ಚ್‌ಗೆ ಮೃತದೇಹ ಕೊಂಡೊಯ್ಯಲಾಗುವುದು. ನಂತರ, ನೆಟ್ಸ್ ಲಕ್ಷುರಿ ರೆಸಾರ್ಟ್ ಆವರಣಕ್ಕೆ ಮೃತದೇಹ ತಂದು ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬಸ್ಥರು ತಿಳಿಸಿದರು.

ಸುದ್ದಿ 2 ನಿಮಿಷ

ಕೆಎಫ್‌ಸಿಸಿ: ಜಯಮಾಲಾ ಅಧ್ಯಕ್ಷೆ

ಬೆಂಗಳೂರು: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ(ಕೆಎಫ್‌ಸಿಸಿ) ಅಧ್ಯಕ್ಷರಾಗಿ ನಟಿ, ನಿರ್ಮಾಪಕಿ ಜಯಮಾಲಾ ಆಯ್ಕೆಯಾಗಿದ್ದಾರೆ.

ಶನಿವಾರ(ಜ.31) ರೇಸ್ ಕೋರ್ಸ್ ರಸ್ತೆಯಲ್ಲಿರುವ ಗುರುರಾಜ ಕಲ್ಯಾಣ ಮಂಟಪದಲ್ಲಿ 2026–27ನೇ ಸಾಲಿನ ವಾರ್ಷಿಕ ಚುನಾವಣೆ ನಡೆಯಿತು. ಈ ಬಾರಿಯ ಅಧ್ಯಕ್ಷ ಸ್ಥಾನ ನಿರ್ಮಾಪಕರ ವಲಯಕ್ಕೆ ಮೀಸಲಾಗಿತ್ತು. ಈಗಾಗಲೇ ಮಂಡಳಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ನಟಿ ಜಯಮಾಲಾ ಹಾಗೂ ನಿರ್ಮಾಪಕ ಭಾ.ಮಾ.ಹರೀಶ್ ಅವರು ಈ ವರ್ಷದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆಯಲ್ಲಿದ್ದರು. ಒಟ್ಟು 846 ಮತಗಳು ಚಲಾವಣೆಯಾಗಿದ್ದು, ಜಯಮಾಲಾ ಅವರು 512 ಮತಗಳನ್ನು ಪಡೆದುಕೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ನಿರ್ಮಾಪಕ ವಲಯದಿಂದ ನಟ ಸುಂದರ್‌ರಾಜ್, ವಿತರಕ ವಲಯದಿಂದ ನಿರ್ಮಾಪಕ ಕೆ.ಮಂಜು ಹಾಗೂ ಪ್ರದರ್ಶಕರ ವಲಯದಿಂದ ಕಿಶೋರ್ ಕುಮಾರ್ ಎಂ.ಎನ್. ಆಯ್ಕೆಯಾಗಿದ್ದಾರೆ. ಗೌರವ ಕಾರ್ಯದರ್ಶಿ ಸ್ಥಾನಕ್ಕೆ ನಿರ್ಮಾಪಕ ವಲಯದಿಂದ ಎ.ಗಣೇಶ್, ಪ್ರದರ್ಶಕ ವಲಯದಿಂದ ಅಶೋಕ್ ಕೆ.ಸಿ., ವಿತರಕ ವಲಯದಿಂದ ರಮೇಶ್ ಬಾಬು ಎಂ.ಆರ್. ಚುನಾಯಿತರಾದರು. ಖಜಾಂಚಿಯಾಗಿ ಜಯಸಿಂಹ ಮುಸುರಿ ಬಿ.ಕೆ. ಆಯ್ಕೆಯಾದರು. ವಾಣಿಜ್ಯ ಮಂಡಳಿಯ ಕಾರ್ಯಕಾರಿ ಸಮಿತಿಗೆ ಮೂರು ವಲಯದಿಂದ 48 ಮಂದಿ ಸದಸ್ಯರನ್ನು ಚುನಾವಣೆಯ ಮೂಲಕ ಆಯ್ಕೆ ಮಾಡಲಾಗಿದೆ.



3ಕ್ಕೆ ಕೋರೆಗಾಂವ್ ವಿಜಯೋತ್ಸವ

ಬೆಂಗಳೂರು: ಭಾರತೀಯ ದಲಿತ ಪ್ಯಾಂಥರ್ ರಾಜ್ಯ ಸಮಿತಿಯು ಫೆ.3ರಂದು ಬೆಳಿಗ್ಗೆ 11 ಗಂಟೆಗೆ ಗಾಂಧಿ ಭವನದಲ್ಲಿ 'ಭೀಮಾ ಕೋರೆಗಾಂವ್ ವಿಜಯೋತ್ಸವ' ಹಾಗೂ 'ದಲಿತರ ಮುಂದಿನ ಸವಾಲುಗಳು' ವಿಷಯದ ಮೇಲೆ ವಿಚಾರಸಂಕಿರಣ ಹಮ್ಮಿಕೊಂಡಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಮಲ್ಲಪ್ಪ ಹೊಸ್ಮನಿ ಇಂಗನಕಲ್, 'ಜ್ಞಾನಪ್ರಕಾಶ ಸ್ವಾಮೀಜಿ, ವರಜ್ಯೋತಿ ಭಂತೇಜಿ ಅವರು ಸಾನ್ನಿಧ್ಯ ವಹಿಸಲಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ' ಎಂದು ಹೇಳಿದರು.

'ಭೀಮಾ ಕೋರೆಗಾಂವ್ ಇತಿಹಾಸವನ್ನು ಪಠ್ಯಪುಸ್ತಕದಲ್ಲಿ ಅಳವಡಿಸುವಂತೆ, ಮರ್ಯಾದೆಗೇಡು ಹತ್ಯೆಯಂತಹ ಹೀನಕೃತ್ಯಗಳ ವಿರುದ್ಧ ಕಠಿಣ ಕಾನೂನು ರೂಪಿಸುವಂತೆ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡಲಾಗುವುದು' ಎಂದರು.

ಸಮಿತಿಯ ರಾಜ್ಯ ಉಪಾಧ್ಯಕ್ಷ ಆರ್.ತಿಮ್ಮಾರೆಡ್ಡಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಎ.ಸಿ.ದಾನಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿ ಆದಪ್ಪ ಹೊಸಮನಿ ಉಪಸ್ಥಿತರಿದ್ದರು.

'ಇಚ್ಛೆಸಿದಂತೆ ಸಿನಿಮಾ ಮಾಡಲಾಗುತ್ತಿಲ್ಲ'

ಬಾಲಿವುಡ್ ನಿರ್ದೇಶಕ, ನಟ ಅನುರಾಗ್ ಕಶ್ಯಪ್ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಾವು ಇಚ್ಛಿಸಿದ ರೀತಿಯಲ್ಲಿ ಸಿನಿಮಾಗಳನ್ನು ಮಾಡಲು ಸಾಧ್ಯವಾಗದೇ ಇರುವುದು ಭಾರತದ ನಿರ್ದೇಶಕನಿಗೆ ಪ್ರಸ್ತುತ ಇರುವ ದೊಡ್ಡ ಭಯ' ಎಂದು ಬಾಲಿವುಡ್ ನಿರ್ದೇಶಕ, ನಟ ಅನುರಾಗ್ ಕಶ್ಯಪ್ ಅಭಿಪ್ರಾಯ ವ್ಯಕ್ತಪಡಿಸಿದರು.

17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಅಂಗವಾಗಿ ಶನಿವಾರ ನಡೆದ 'ಫಿಯರ್‌ಲೆಸ್ ಫಿಲ್ಮ್ ಮೇಕಿಂಗ್' ಸಂವಾದದಲ್ಲಿ ಅವರು ಮಾತನಾಡಿದರು. ಚಿತ್ರ ವಿಮರ್ಶಕ ಭಾರದ್ವಾಜ್ ರಂಗನ್ ಸಂವಾದ ನಡೆಸಿಕೊಟ್ಟರು.

'ಭಾಷೆ, ಪಾತ್ರಗಳ ಧರ್ಮದ ಕಾರಣದಿಂದ 'ಗ್ಯಾಂಗ್ಸ್ ಆಫ್ ವಾಸೇಪುರ್' ಅಥವಾ 'ಬ್ಲ್ಯಾಕ್ ಫ್ರೈಡೆ'ಯಂಥ ಸಿನಿಮಾಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಕಾರಣ 'ಗ್ಯಾಂಗ್ಸ್ ಆಫ್ ವಾಸೇಪುರ್'ನಲ್ಲಿ ಹೀರೊಗಳು ಮುಸ್ಲಿಂ ಆಗಿದ್ದರು, ಖಳನಾಯಕ ಹಿಂದೂವಾಗಿದ್ದ. ಇದು ಈಗ ಒಂದು ಸಮಸ್ಯೆಯಾಗಲಿದೆ. ಇರಾನ್ ಅಥವಾ ರಷ್ಯಾದಂತಹ ರಾಷ್ಟ್ರಗಳ ನಿರ್ದೇಶಕರು ಹೆಚ್ಚಿನ ನಿರ್ಬಂಧಗಳ ನಡುವೆಯೂ ಉತ್ತಮ ಸಿನಿಮಾ ಮಾಡುತ್ತಿದ್ದಾರೆ. ಇದು ಸ್ಫೂರ್ತಿಯಾಗಬೇಕು' ಎಂದರು.

'ಇತ್ತೀಚೆಗೆ ತೆರೆಕಂಡ 'ಧುರಂಧರ್' ಧೈರ್ಯಶಾಲಿ ಮುಖ್ಯವಾಹಿನಿ ಚಿತ್ರಕ್ಕೆ ಉತ್ತಮ ಉದಾಹರಣೆ. ನನಗೆ ಈ ಸಿನಿಮಾ ಇಷ್ಟವಾಯಿತು, ಆದರೆ ಕೆಲವು ಸಿದ್ಧಾಂತಗಳು ಇಷ್ಟವಾಗಲಿಲ್ಲ' ಎಂದರು.



ಭಾರದ್ವಾಜ್ ರಂಗನ್, ಅನುರಾಗ್ ಕಶ್ಯಪ್

ಕನ್ನಡದ 'ಟಾಕ್ಸಿಕ್' ಚಿತ್ರದ ಟೀಸರ್ ಬಗ್ಗೆ ಮಾತನಾಡಿದ ಅವರು, 'ಟೀಸರ್ ಚೆನ್ನಾಗಿತ್ತು. ಟೀಸರ್ ವಿರುದ್ಧ ವ್ಯಕ್ತವಾದ ಆಕ್ರೋಶವು ನಮ್ಮ ಸಾಂಸ್ಕೃತಿಕ ಬೂಟಾಟಿಕೆಯನ್ನು ತೋರಿಸುತ್ತದೆ' ಎಂದರು.

ಲೇಖಕ ವಿವೇಕ ಶಾನಭಾಗ ಅವರ 'ಘಾಚರ್ ಘೋಚರ್' ಕಾದಂಬರಿಯನ್ನು ಆಧರಿಸಿ ಕನ್ನಡ ಚಿತ್ರವೊಂದನ್ನು ನಿರ್ಮಿಸುತ್ತಿರುವುದಾಗಿ ಅನುರಾಗ್ ಹೇಳಿದರು. ಚಿತ್ರವು ಸದ್ಯ ಬರವಣಿಗೆ ಹಂತದಲ್ಲಿದ್ದು, ಮುಂದೆ ಹಿಂದಿಯಲ್ಲೂ ಬರಲಿದೆ. ಇದರ ನಿರ್ದೇಶಕರು ಮತ್ತು ಕಲಾವಿದರ ವಿವರಗಳನ್ನು ಶೀಘ್ರದಲ್ಲೇ ಪ್ರಕಟಿಸುವುದಾಗಿ ತಿಳಿಸಿದರು.

ಕೈದಿಗಳ ಮನ ಪರಿವರ್ತನೆ ಮಾಡಿ: ಪರಮೇಶ್ವರ

ಬೆಂಗಳೂರು: ಕೈದಿಗಳ ಮನಪರಿವರ್ತನೆ ಮಾಡಿ ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಆತ್ಮಸಾಕ್ಷಿಯಿಂದ ಕೆಲಸ ಮಾಡಬೇಕು ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ರಾಜ್ಯ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಪ್ರಧಾನ ಕಚೇರಿಯಲ್ಲಿ ಸ್ಥಾಪಿಸಲಾದ ಕಾರಾಗೃಹ 'ಸೆಂಟ್ರಲ್ ಕಮಾಂಡ್ ಸೆಂಟರ್'ಅನ್ನು ಉದ್ಘಾಟಿಸಿದ ಬಳಿಕ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಕರ್ತವ್ಯದಲ್ಲಿ ಲೋಪವಾದರೆ, ಇಡೀ ವ್ಯವಸ್ಥೆಯೇ ಹಾಳಾಗುತ್ತದೆ. ಸಿಬ್ಬಂದಿ ಕರ್ತವ್ಯದ ಮೇಲೆ ಹಿರಿಯ ಅಧಿಕಾರಿಗಳು ನಿಗಾವಹಿಸಬೇಕು' ಎಂದು ಹೇಳಿದರು.

'ಸಿಬ್ಬಂದಿ ಕಣ್ಣುತಪ್ಪಿ ಯಾವುದೇ ವಸ್ತುಗಳು ಜೈಲಿನ ಒಳಗೆ ಹೋಗಲು ಸಾಧ್ಯವಿಲ್ಲ. ಕರ್ತವ್ಯ ದಲ್ಲಿ ನಿರ್ಲಕ್ಷ್ಯ ವಹಿಸುವುದು ಸರಿಯಲ್ಲ. ಸಿಬ್ಬಂದಿಯ ನಿರ್ಲಕ್ಷ್ಯದಿಂದ ಇದೆಲ್ಲ ಸಾಧ್ಯ' ಎಂದು ಹೇಳಿದರು.

'ನಾನು ಮೂರು ಬಾರಿ ಗೃಹಸಚಿವನಾದ ಅವಧಿಯಲ್ಲಿ ಸುಮಾರು 2500 ಕೈದಿಗಳನ್ನು ಸುಧಾರಣೆ ಮಾಡಿ, ಬಿಡುಗಡೆ ಮಾಡಲಾಗಿದೆ' ಎಂದು ಅವರು ತಿಳಿಸಿದರು.

ಸರ್ಕಾರಕ್ಕೆ ವರದಿ ಸಲ್ಲಿಸಿದ ಆರ್ಥಿಕ ತಜ್ಞ ಪ್ರೊ.ಎಂ.ಗೋವಿಂದರಾವ್ ಅಧ್ಯಕ್ಷತೆಯ ಸಮಿತಿ

ಅಸಮತೋಲನ ನಿವಾರಣೆಗೆ ₹43,914 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಮುಂದಿನ ಐದು ವರ್ಷಗಳಲ್ಲಿ ಹೆಚ್ಚುವರಿಯಾಗಿ ₹43,914 ಕೋಟಿ ವಿನಿಯೋಗಿಸಬೇಕು ಎಂದು ಈ ಕುರಿತು ರಚಿಸಿದ್ದ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಅಸಮತೋಲನ ನಿವಾರಣೆಗೆ ಪರಿಹಾರ ಕಂಡುಕೊಳ್ಳಲು ಆರ್ಥಿಕ ತಜ್ಞ ಪ್ರೊ.ಎಂ.ಗೋವಿಂದರಾವ್ ಅಧ್ಯಕ್ಷತೆಯ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶನಿವಾರ ವರದಿ ಸಲ್ಲಿಸಿತು.

ಸರ್ಕಾರದ 11 ಇಲಾಖೆಗಳಿಗೆ ಹೆಚ್ಚುವರಿ ಹಣವನ್ನು ಹಂಚಿಕೆ ಮಾಡಿ, ಮೂಲ ಸೌಕರ್ಯ ಅಭಿವೃದ್ಧಿ, ಆರ್ಥಿಕ ಚಟುವಟಿಕೆಗಳು ಹಾಗೂ ಸುಸ್ಥಿರ ಬೆಳವಣಿಗೆಗೆ ವಿನಿಯೋಗಿಸುವಂತೆ ಸೂಚಿಸಿದ್ದು, ಹಿಂದುಳಿದಿರುವಿಕೆಯ ಸೂಚ್ಯಂಕವನ್ನು ಆಧರಿಸಿ ಆಯಾ ಜಿಲ್ಲೆಗಳಿಗೆ ಅನುದಾನ ಹಂಚಿಕೆ ಮಾಡುವಂತೆ ವರದಿ ಹೇಳಿದೆ.

ಕೃಷಿ ಆಧಾರಿತ ಪ್ರದೇಶಗಳಲ್ಲಿ ಮಳೆ ನೀರು ಕೊಯ್ಲು, ಸೂಕ್ಷ್ಮ ನೀರಾವರಿ, ಕೆರೆ ಪುನರುಜ್ಜೀವನ, ಮಾರುಕಟ್ಟೆ ವಿಸ್ತರಣೆ, ಶೈತ್ಯಾಗಾರ, ಕೃಷಿ ಉತ್ಪಾದನಾ ಕೇಂದ್ರ ತೆರೆಯುವಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದೆ.

ಕೆಲ ಮಂಡಳಿಗಳ ವಿಸರ್ಜಿಸಿ: ವಿವಿಧ ಪ್ರದೇಶಾಭಿವೃದ್ಧಿ ಮಂಡಳಿಗಳ ಕಾರ್ಯವೈಖರಿ ಪರಿಶೀಲಿಸಿರುವ ಸಮಿತಿ, ಅವುಗಳ ವಿಸರ್ಜನೆಗೆ ಸಲಹೆ ನೀಡಿದೆ. ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಕರಾವಳಿ ಅಭಿವೃದ್ಧಿ ಮಂಡಳಿ, ಗಡಿ ಅಭಿವೃದ್ಧಿ ಪ್ರಾಧಿಕಾರಗಳ ಕಾರ್ಯನಿರ್ವಹಣೆ ಹಾಗೂ ಅನುದಾನ ಹಂಚಿಕೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದು ಹಿಂದುಳಿದಿರುವಿಕೆ ಹೋಗಲಾಡಿಸುವಲ್ಲಿ ಈ ಸಂಸ್ಥೆಗಳು ವಿಫಲವಾಗಿವೆ ಎಂದು ಹೇಳಿದೆ.



ಪ್ರೊ.ಎಂ.ಗೋವಿಂದರಾವ್ ಅವರು ಸಿದ್ದರಾಮಯ್ಯ ಅವರಿಗೆ ವರದಿಯನ್ನು ಸಲ್ಲಿಸಿದರು. ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು

1,160 ಕೆಪಿಎಸ್ ಶಾಲೆ ಶಿಫಾರಸು

ಕಲಬುರಗಿ, ಬೆಳಗಾವಿ, ಮೈಸೂರು ಹಾಗೂ ಬೆಂಗಳೂರು ವಿಭಾಗದಲ್ಲಿ 1,160 ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳ ಮಾದರಿಯಲ್ಲಿ ಅಭಿವೃದ್ಧಿ ಪಡಿಸುವಂತೆ ವರದಿ ಶಿಫಾರಸು ಮಾಡಿದೆ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ಈಗ ನೀಡುತ್ತಿರುವ ₹5000 ಕೋಟಿ ವಾರ್ಷಿಕ ಅನುದಾನವನ್ನು 2030-31ರ ಹೊತ್ತಿಗೆ ₹6,380 ಕೋಟಿಗೆ ಹೆಚ್ಚಳ ಮಾಡುವಂತೆ ಸಲಹೆ ನೀಡಿದೆ.

ಅತ್ಯಂತ ಹಿಂದುಳಿದ ಜಿಲ್ಲೆಗಳು 8

ಅಭಿವೃದ್ಧಿ ಮಾನದಂಡಗಳ ಆಧಾರದ ಮೇಲೆ, ಕಲಬುರಗಿ ವಿಭಾಗದಲ್ಲಿ 6, ಬೆಳಗಾವಿ ವಿಭಾಗದಲ್ಲಿ 2 ಜಿಲ್ಲೆಗಳು ಅತ್ಯಂತ ಹಿಂದುಳಿದಿವೆ ಎಂದು ಸಮಿತಿ ಗುರುತಿಸಿದೆ.

ಒಟ್ಟು 23 ಹಿಂದುಳಿದ ಜಿಲ್ಲೆಗಳಲ್ಲಿ 14 ಉತ್ತರ ಕರ್ನಾಟಕದಲ್ಲಿ, 9 ದಕ್ಷಿಣ ಕರ್ನಾಟಕ ಭಾಗದಲ್ಲಿವೆ. ಅಭಿವೃದ್ಧಿ ಹೊಂದಿದ ಜಿಲ್ಲೆಗಳು 8 ಮಾತ್ರ ಇದ್ದು, 5 ಮೈಸೂರು ವಿಭಾಗದಲ್ಲಿ, 3 ಬೆಂಗಳೂರು ವಿಭಾಗದಲ್ಲಿ ಕೇಂದ್ರೀಕೃತವಾಗಿವೆ. ಉತ್ತರ ಕರ್ನಾಟಕದ ಒಂದೇ ಒಂದು ಜಿಲ್ಲೆಯನ್ನು ಅಭಿವೃದ್ಧಿ ಹೊಂದಿದ ಜಿಲ್ಲೆ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ವರದಿ ಹೇಳಿದೆ.

ವರದಿ ಪ್ರಕಾರ ಕಲಬುರಗಿ ವಿಭಾಗದ 51 ತಾಲ್ಲೂಕುಗಳಲ್ಲಿ 39 ಅತ್ಯಂತ ಹಿಂದುಳಿದ, 9 ಅತಿ ಹಿಂದುಳಿದ, ಬೆಳಗಾವಿ ವಿಭಾಗದಲ್ಲಿ 20 ಅತ್ಯಂತ ಹಿಂದುಳಿದ, 34 ಅತಿ ಹಿಂದುಳಿದ, 14 ಹಿಂದುಳಿದ ಹಾಗೂ ನಾಲ್ಕು ಮಾತ್ರ ಅಭಿವೃದ್ಧಿ ಹೊಂದಿದ ತಾಲ್ಲೂಕು. ಮೈಸೂರು ವಿಭಾಗದಲ್ಲಿ 35, ಬೆಂಗಳೂರು ವಿಭಾಗದಲ್ಲಿ 20 ಅಭಿವೃದ್ಧಿ ಹೊಂದಿದ ತಾಲ್ಲೂಕುಗಳಿವೆ.

ಯಾವುದಕ್ಕೆ ಎಷ್ಟು ಹಂಚಿಕೆ (₹ಕೋಟಿಗಳಲ್ಲಿ)

ಕೃಷಿ	2,000
ನೀರಾವರಿ	10,000
ಕೈಗಾರಿಕೆ	2,000
ಹೊಸ ಶಾಲೆ, ಶಿಕ್ಷಕರ ನೇಮಕ	12,444
ಉನ್ನತ ಶಿಕ್ಷಣ	500
ಕೌಶಲಾಭಿವೃದ್ಧಿ	250
ಆರೋಗ್ಯ ಕ್ಷೇತ್ರ	11,770
ಪೌಷ್ಟಿಕಾಂಶಗಳ ಪೂರೈಕೆ	1,000
ಪ್ರವಾಸೋದ್ಯಮ	1,000
ನಗರಾಭಿವೃದ್ಧಿ	1,450
ರಸ್ತೆ ಸಂಪರ್ಕ	1,500

ಚುಟುಕು ಸುದ್ದಿ

ಎಫ್‌ಸ್ಟೈನ್ ಫೈಲ್: ಮೀರಾ ನಾಯರ್ ಹೆಸರು

ನ್ಯೂಯಾರ್ಕ್/ನವದೆಹಲಿ (ಪಿಟಿಐ): ನ್ಯೂಯಾರ್ಕ್ ನಗರದ ಮೇಯರ್ ಜೊಹ್ರಾನ್ ಮಮ್ದಾನಿ ಅವರ ತಾಯಿ ಹಾಗೂ ಭಾರತೀಯ ಸಿನಿಮಾ ನಿರ್ಮಾಪಕಿ ಮೀರಾ ನಾಯರ್ ಅವರ ಹೆಸರು ಅಮೆರಿಕದ ನ್ಯಾಯಾಂಗ ಇಲಾಖೆ ಬಿಡುಗಡೆ ಮಾಡಿರುವ 'ಜೆಫ್ರಿ ಎಫ್‌ಸ್ಟೈನ್ ಫೈಲ್' ನಲ್ಲಿ ಉಲ್ಲೇಖವಾಗಿದೆ.

ಮಹಿಳೆಯರು ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಮಾನವ ಕಳ್ಳಸಾಗಣೆ ಪ್ರಕರಣಗಳಲ್ಲಿ ಅಪರಾಧಿಯಾಗಿದ್ದ ಉದ್ಯಮಿ ಜೆಫ್ರಿ ಎಫ್‌ಸ್ಟೈನ್ ದುಷ್ಕೃತ್ಯಗಳ ತನಿಖೆಗೆ ಸಂಬಂಧಿಸಿದ ಇನ್ನಷ್ಟು ದಾಖಲೆಗಳನ್ನು ಇಲಾಖೆ ಬಿಡುಗಡೆ ಮಾಡಿದೆ.

ಮಾನವಕಳ್ಳಸಾಗಣೆ ಅಪರಾಧಿ ಘಿಸಲೇನ್ ಮ್ಯಾಕ್ಸ್‌ವೆಲ್ ಆಯೋಜಿಸಿದ್ದ 'ಔತಣಕೂಟ'ದಲ್ಲಿ ಮೀರಾ ನಾಯರ್ ಪಾಲ್ಗೊಂಡಿದ್ದರು ಎಂದು ದಾಖಲೆಗಳಲ್ಲಿ ಇದೆ.

ಭಾರತ ನಿರಾಕರಣೆ: ಎಫ್‌ಸ್ಟೈನ್ ಫೈಲ್‌ನಲ್ಲಿ ಪ್ರಧಾನಿ ಮೋದಿ ಹೆಸರು ಪ್ರಸ್ತಾಪ, ಇಸ್ರೇಲ್‌ಗೆ ಅವರು ನೀಡಿದ್ದ ಭೇಟಿಯ ಉಲ್ಲೇಖ ಆಗಿರುವುದನ್ನು ಭಾರತದ ವಿದೇಶಾಂಗ ಇಲಾಖೆ ಸ್ಪಷ್ಟವಾಗಿ ನಿರಾಕರಿಸಿದೆ.

'ಈ ಉಲ್ಲೇಖಗಳು ಅಪರಾಧಿಯೊಬ್ಬನ ಕೀಳು ಆಲೋಚನೆಗಳಷ್ಟೇ' ಎಂದು ವಿದೇಶಾಂಗ ಇಲಾಖೆ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ನಗರದಲ್ಲಿ ಇಂದು


ಅಗ್ರಿವಾಕ್: ರೈತರ ಸಬಲೀಕರಣಕ್ಕಾಗಿ ಒಂದು ನಡೆ, ಆಯೋಜನೆ: ಕೃಷಿ ಇಲಾಖೆ, ಸ್ಥಳ: ಬ್ಯಾಂಡ್‌ಸ್ಟ್ಯಾಂಡ್, ಕಬ್ಬನ್ ಉದ್ಯಾನ, ಬೆಳಿಗ್ಗೆ 6.30

ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಸರಸ್ವತಿ ಉಪಾಸನೆ: ಎಸ್.ಆರ್. ವಾದಿರಾಜ್ ಆಚಾರ್, ಆಯೋಜನೆ ಹಾಗೂ ಸ್ಥಳ: ಶ್ರೀವಜ್ರ ಕ್ಷೇತ್ರ, 151, 7ನೆ ಅಡ್ಡ ರಸ್ತೆ, 3ನೆ ಬ್ಲಾಕ್, ತ್ಯಾಗರಾಜನಗರ, ಬೆಳಿಗ್ಗೆ 7ರಿಂದ

ಜಿನಸಹಸ್ರಾಷ್ಟ ನಾಮಾರ್ಚನೆ ಮಹಾಪೂಜೆಯ ಸಮಾರೋಪ ಸಮಾರಂಭ: ಆಯೋಜನೆ: ವಿಶ್ವಶಾಂತಿ ಯುವಸೇನಾ ಸಮಿತಿ, ಸ್ಥಳ: ರವಿಶಂಕರ ಗುರೂಜಿ ಆಶ್ರಮದ ವೇದ ವಿಜ್ಞಾನ ಮಹಾವಿದ್ಯಾಪೀಠ ಶಾಲೆ ಕ್ರೀಡಾಂಗಣ, ಕನಕಪುರ ರಸ್ತೆ, ಬೆಳಿಗ್ಗೆ 9

ಭಕ್ತಿ ಭಾವಾನಂದ ಅಡಿ ಅಖಂಡ ಭಜನೆ: ಆಯೋಜನೆ ಹಾಗೂ ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 9ರಿಂದ

ಬೆಂಗಳೂರು ಪಟ್ಲ ಯಕ್ಷೋತ್ಸವ: ಬೆಳಿಗ್ಗೆ 8.30ರಿಂದ 'ಹೆಜ್ಜೆ–ಗೆಜ್ಜೆ' ಶೀರ್ಷಿಕೆಯಡಿ ಮಕ್ಕಳ ಯಕ್ಷಗಾನ ಸ್ಪರ್ಧೆ, ಮಕ್ಕಳಿಗೆ 'ಯಕ್ಷ ಚಿತ್ರಸಂತೆ', ಬೆಳಿಗ್ಗೆ 11ರಿಂದ ಉದ್ಘಾಟನಾ ಪರ್ವ: ಡಿ.ಕೆ. ಶಿವಕುಮಾರ್, ಉಮೇಶ್ ಶೆಟ್ಟಿ, ಉದಯ್ ಕುಮಾರ್ ಶೆಟ್ಟಿ, ಉದಯ್ ಹೆಗ್ಡೆ, ಕರುಣಾಕರ ಹೆಗ್ಡೆ, ದಿನೇಶ್ ವೈದ್ಯ, ಪಟ್ಲ ಸತೀಶ್ ಶೆಟ್ಟಿ, ಮಧ್ಯಾಹ್ನ 1ರಿಂದ ಗುರು ಸಂಜೀವ ಸುವರ್ಣ ಅವರ ನಿರ್ದೇಶನದಲ್ಲಿ ಯಕ್ಷ ಬ್ಯಾಲೆ, ಮಧ್ಯಾಹ್ನ 2ರಿಂದ 'ಕಾಳಿಂಗ–ಕಾಳಿಂಗ' ಶೀರ್ಷಿಕೆಯಡಿ ಪಿ. ಕಾಳಿಂಗ ರಾವ್–ಕಾಳಿಂಗ ನಾವಡರ ಪದ ಪದ್ಯಗಳ ಅನುರಣನ, ಸಂಜೆ 5ರಿಂದ ಸಮಾರೋಪ ಸಮಾರಂಭ, ಸಂಜೆ 6ಕ್ಕೆ ತೆಂಕು ಬಡಗಿನ ದಿಗ್ಗಜರಿಂದ 'ಕಟೀಲು ಕ್ಷೇತ್ರ ಮಹಾತ್ಮೆ' ಯಕ್ಷಗಾನ ಪ್ರಸಂಗ, ಆಯೋಜನೆ: ಯಕ್ಷ ಧ್ರುವ ಪಟ್ಲ ಫೌಂಡೇಷನ್ ಬೆಂಗಳೂರು ಘಟಕ, ಸ್ಥಳ: ಬಂಟರ ಸಂಘ, ವಿಜಯನಗರ



ಪಟ್ಲ ಸತೀಶ್ ಶೆಟ್ಟಿ

ಹಿಂದೂ ಸಮಾಜೋತ್ಸವ: ಆಶೀರ್ವಚನ: ಆದಿತ್ಯ ಸ್ವಾಮಿ, ದಿಕ್ಸೂಚಿ ಭಾಷಣ: ಶ್ರೀಹರಿ ಶರ್ಮ, ಆಯೋಜನೆ: ಹಿಂದೂ ಸಮಾಜೋತ್ಸವ, ಸ್ಥಳ: ಕಾರ್ಪೊರೇಷನ್ ಶಾಲೆ ಮೈದಾನ, 2ನೇ ಕ್ರಾಸ್, ಮಾಗಡಿ ರಸ್ತೆ, ಬೆಳಿಗ್ಗೆ 9

ಬ್ಯಾರಿ ಕೂಟ: ಉದ್ಘಾಟನೆ: ಸಿದ್ದರಾಮಯ್ಯ ಅಧ್ಯಕ್ಷತೆ: ಶಬೀರ್ ಬ್ರಿಗೇಡ್, ಪ್ರಾಸ್ತಾವಿಕ ಮಾತು: ಯು.ಟಿ. ಖಾದರ್, ಆಯೋಜನೆ: ಬ್ಯಾರಿಸ್ ಸೆಂಟ್ರಲ್ ಕಮಿಟಿ, ಸ್ಥಳ: ಅರಮನೆ ಮೈದಾನದ ಶೃಂಗಾರ್ ಪ್ಯಾಲೇಸ್, ಬೆಳಿಗ್ಗೆ 10

ಕನ್ನಡ ಉತ್ಸವ: ಉದ್ಘಾಟನೆ: ಅರವಿಂದ ಲಿಂಬಾವಳಿ, ಮಂಜುಳಾ ಅರವಿಂದ ಲಿಂಬಾವಳಿ, ಅಧ್ಯಕ್ಷತೆ: ಸಿ. ಚಂದ್ರಪ್ಪ, ಉಪಸ್ಥಿತಿ: ಸತ್ಯಮಂಗಲ ಮಹದೇವ, ಅಜಿತ್ ಕುಮಾರ್, ಆಶಯ ನುಡಿ: ಎಂ. ಪ್ರಕಾಶಮೂರ್ತಿ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು ಮಹದೇವಪುರ ವಿಧಾನಸಭಾ ಘಟಕ, ಬೆಳಿಗ್ಗೆ 10.30 (ಬೆಳಿಗ್ಗೆ 8 ಗಂಟೆಗೆ ರಾಮಗೊಂಡನಹಳ್ಳಿ ಸರ್ಕಾರಿ ಶಾಲೆಯಿಂದ ವರ್ತೂರು ಕೋಡಿವರೆಗೆ ಕನ್ನಡ ಜಾಗೃತಿ ಮೆರವಣಿಗೆ)

ಸಾಮೂಹಿಕ ಸರಸ್ವತಿ ಪೂಜೆ: ಆಯೋಜನೆ: ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ, ಬೆಳಿಗ್ಗೆ 10.30

'ಕಾರ್ಮಿಕ ಸಂಹಿತೆಗಳು' ಮೋದಿ ಕಟ್ಟುತ್ತಿರುವ ಸುಳ್ಳುಗಳ ಅನಾವರಣ: ನಾಲ್ಕು ಕಾರ್ಮಿಕ ಸಂಹಿತೆಗಳ ವಿಶ್ಲೇಷಣೆ, ಅತಿಥಿ: ವಿ. ಗೋಪಾಲಗೌಡ, ಆಯೋಜನೆ: ಎಐಸಿಸಿಟಿಯು, ಸ್ಥಳ: ಗಾಂಧಿ ಭವನ, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30

ದತ್ತಿ ಉಪನ್ಯಾಸ: 'ಅಭಿಜ್ಞಾನ ಶಾಕುಂತಲ ಕಾವ್ಯದಲ್ಲಿ ಶಾಕುಂತಲ ಮತ್ತು ದುಷ್ಯಂತನ ಪಾತ್ರಗಳು: ಭಾರತೀಯ ಮುಂಗಾರು ಮಳೆಯ ಒಂದು ರೂಪಕದ ವಿಸಂಕೇತ' ವಿಷಯದ ಬಗ್ಗೆ ಉಪನ್ಯಾಸ: ಶಶಿಧರ ಚಿಕ್ಕ, 'ಹೊಯ್ಸಳ ದೇವಾಲಯಗಳು ಮತ್ತು ಅವುಗಳ ಸಂರಕ್ಷಣೆ' ವಿಷಯದ ಬಗ್ಗೆ ಉಪನ್ಯಾಸ: ಎಚ್.ಜಿ. ಶಶಿಧರ್, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಗುರು ಸಿದ್ದರಾಮೇಶ್ವರ ಅವರ 854ನೇ ಜಯಂತಿ: ಉದ್ಘಾಟನೆ: ಎಲ್. ರವಿಸುಬ್ರಮಣ್ಯ, ಅಧ್ಯಕ್ಷತೆ: ನಂಜಪ್ಪ ಭೋವಿ, ಅತಿಥಿ: ಶರಣ ಬಂಗಾರಸ್ವಾಮಿ, ಕವಿ ಸ್ವಾಮಿ, ಕೃಷ್ಣಪ್ಪ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ, ಆಯೋಜನೆ: ಭೋವಿ ಜನಾಂಗ ಒಕ್ಕೂಟ, ಸ್ಥಳ: ಆಲದ ಮರದ ತಿಮ್ಮಪ್ಪ ಆವರಣ, ಗವಿಗಂಗಾಧರೇಶ್ವರ ದೇವಸ್ಥಾನದ ಹತ್ತಿರ, ಕೆ.ಜಿ. ನಗರ, ಬೆಳಿಗ್ಗೆ 11


ಮಾಸದ ಮಂಥನ: 'ಬದುಕು–ಬರಹ, ಪ್ರೇರಕ–ಪೂರಕ' ವಿಷಯದ ಬಗ್ಗೆ ಸಂವಾದ: ಎ.ಆರ್. ಮಣಿಕಾಂತ್, ಸ್ಥಳ: ನಂ.17, ಸಾನಿಧ್ಯ, 1ನೇ ಅಡ್ಡರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಅವ್ವ ನುಡಿ ಉತ್ಸವ: 12 ಪುಸ್ತಕಗಳು ಬಿಡುಗಡೆ ಹಾಗೂ ಅವ್ವ ಪ್ರಶಸ್ತಿಗಳ ಪ್ರದಾನ ಸಮಾರಂಭ: ಅತಿಥಿ: ರಾಗಂ, ವೀರಕಪುತ್ರ ಶ್ರೀನಿವಾಸ, ಎಸ್.ಎಸ್. ಸತ್ಯನಾರಾಯಣ, ಸ್ಥಳ: ಕೃಷ್ಣರಾಜ ಪರಿಷತ್ತು ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3

'ಸಮ್ಮಿಲನ' ಶರೀಫ ನಮನ: ಅತಿಥಿ: ಶ್ರೀಧರ್, ಸನ್ಮಾನ: ಸದ್ಯೋಜಾತ ಭಟ್ಟ, ವಾದ್ಯ ಸಹಕಾರ: ಸಂಗೀತ್ ಥಾಮಸ್, ಗುರುರಾಜ್, ಶೌರಿ ಶಾನಭೋಗ್, ಸಂತೋಷ್ ಹೆಗಡೆ, ನಿರಂಜನ್ ಹೆಗಡೆ, ಸುಬ್ರಹ್ಮಣ್ಯ ಹೆಗಡೆ, ಆಯೋಜನೆ: ಶ್ರೀ ಮ್ಯೂಸಿಕ್ ಅಕಾಡೆಮಿ, ಸ್ಥಳ: ಶಂಕರ ಫೌಂಡೇಷನ್, ಕನಕಪುರ ರಸ್ತೆ, ಮಧ್ಯಾಹ್ನ 3.30

'ತುಕಾರಾಮ್ ಹೇಳೆ ಕಬೀರ' ಶೀರ್ಷಿಕೆಯಡಿ ಸಂಗೀತ ಸಂವಾದ: ಜಯತೀರ್ಥ ಮೇವುಂಡಿ, ಭುವನೇಶ್ ಕೋಮಕಲಿ, ಧನಶ್ರೀ ಲೇಲೆ, ಆಯೋಜನೆ: ಪಂಚಮ್ ನಿಷಾದ್ ಸಂಸ್ಥೆ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಸಂಜೆ 5.30

ದಾಸ ನಿರಂತರ ಸಂಗೀತೋತ್ಸವ ಹಾಗೂ ಪಂ.ಆರ್.ವಿ. ಶೇಷಾದ್ರಿ ಗವಾಯಿ ಪ್ರಶಸ್ತಿ ಪ್ರದಾನ: ಸಂತೋಷ್ ಹೆಗ್ಡೆ, ಉದ್ಘಾಟನೆ; ಶ್ರೀನಿವಾಸ ಪ್ರಭು, ಪುಸ್ತಕ ಬಿಡುಗಡೆ: ರಂಜನಿ, ಅತಿಥಿಗಳು: ಪೂರ್ಣಾ ಆಚಾರ್ಯ, ಶೈಲೇಂದ್ರ ಶರ್ಮಾ, ಅಶ್ವಿನ್ ಬಾಳಿಗಾ, ಪ್ರಶಸ್ತಿ ಪುರಸ್ಕೃತರು: ವಾಗೀಶ್ ಭಟ್, ಆಯೋಜನೆ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಬೆಳಿಗ್ಗೆ 9.30ರಿಂದ



ವಾಗೀಶ್ ಭಟ್


ಭಾರತ ರಂಗ ಮಹೋತ್ಸವ ಹಾಗೂ ರಂಗ ಪರಿಷೆ: ಮಧ್ಯಾಹ್ನ 3.30ಕ್ಕೆ ರಂಗ ಪರಿಷೆ ಉದ್ಘಾಟನೆ: ಬಿ.ಆರ್. ಪಾಟೀಲ, ಉತ್ಸವ ಗೌರವ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಆರ್. ಮುನಿರತ್ನ, ಅತಿಥಿಗಳು: ಪುರುಷೋತ್ತಮ ಬಿಳಿಮಲೆ, ಶ್ರೀನಿವಾಸ ಕಪ್ಪಣ್ಣ, ಸಂಜೆ 5ಕ್ಕೆ ಭಾರತ ರಂಗ ಮಹೋತ್ಸವ ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಉತ್ಸವ ಗೌರವ: ಉಮಾಶ್ರೀ, ರಂಗಪರಿಷೆ ವಿಶೇಷ ಸಂಚಿಕೆ ಬಿಡುಗಡೆ: ಪ್ರಕಾಶ್ ರಾಜ್, ಅತಿಥಿಗಳು: ಗೊ.ರು. ಚನ್ನಬಸಪ್ಪ, ಕೆ.ಎಂ. ಗಾಯತ್ರಿ, ಕೆ.ಟಿ. ಶಾಂತಲಾ, ಕಾ.ತ. ಚಿಕ್ಕಣ್ಣ, ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ರಾಷ್ಟ್ರೀಯ ನಾಟಕ ಶಾಲೆ ತಂಡದಿಂದ 'ಬಾಬೂಜಿ' ನಾಟಕ ಪ್ರದರ್ಶನ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ರಾಷ್ಟ್ರೀಯ ನಾಟಕ ಶಾಲೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ



ಉಮಾಶ್ರೀ

61ನೇ ನಾದಜ್ಯೋತಿ ಸಂಗೀತ ಸಂಭ್ರಮ: ಪಂಚವೇಣುವಾದನ: ಎಚ್.ಎಸ್. ವೇಣುಗೋಪಾಲ್, ಎಂ.ಎಸ್. ಪ್ರಮುಖ್, ಅಪ್ರಮೇಯ ಶೇಷಾದ್ರಿ, ಸುಹಾಸ್ ಮುರುಳಿ, ಅಚ್ಯುತ್ ಎಂ. ಅತ್ರೇಯ, ಪಿಟೀಲು: ಆರ್. ರಘುರಾಮ್, ಮೃದಂಗ: ಜಿ. ಅರವಿಂದ್, ಖಂಜೀರ: ಆರ್. ಹರೀಶ್ ಚಂದ್ರ, ಪ್ರಶಸ್ತಿ ಪ್ರದಾನ ಸಮಾರಂಭ: ಅತಿಥಿಗಳು: ವೂಡೇ ಪಿ. ಕೃಷ್ಣ, ಎಸ್. ಸೂರ್ಯಪ್ರಕಾಶ್ ಪಂಡಿತ್, ಪ್ರಶಸ್ತಿ ಪುರಸ್ಕೃತರು: ಸಿ. ರಾಮದಾಸ್, ಎಚ್.ಎಸ್. ವೇಣುಗೋಪಾಲ್, ಬಿ.ಎಸ್. ಪ್ರಶಾಂತ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 4.15ರಿಂದ (ಪ್ರಶಸ್ತಿ ಪ್ರದಾನ ಸಮಾರಂಭ ಸಂಜೆ 6.15ಕ್ಕೆ)

ದಕ್ಷಿಣಾಸ್ಯ ದರ್ಶಿನೀ ಸಮಾರೋಪ ಸಮಾರಂಭ: ಅತಿಥಿಗಳು: ಎಸ್. ಸೋಮನಾಥ್, ಪ್ರಹ್ಲಾದ್ ರಾಮರಾವ್, ಆಯೋಜನೆ: ವೇದಾಂತ ಭಾರತಿ, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಸಂಜೆ 4.30




ಎಸ್. ಸೋಮನಾಥ್

ವಾರ್ಷಿಕ ವಸಂತ ಸಂಗೀತ ಉತ್ಸವ: ಕೊಳಲು ಜುಗಲ್‌ಬಂದಿ: ಹೇರಾಂಬ್, ಹೇಮಂತ್, ಪಿಟೀಲು: ಎಲ್. ರಾಮಕೃಷ್ಣನ್, ಮೃದಂಗ: ಬಿ.ಸಿ. ಮಂಜುನಾಥ್, ಖಂಜಿರಾ: ಜಿ. ಗುರುಪ್ರಸನ್ನ, ಆಯೋಜನೆ: ಶ್ರೀರಾಮ ಲಲಿತಕಲಾ ಮಂದಿರ, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಅತಿಥಿಗಳು: ಡಿ.ಆರ್. ಪಾಟೀಲ, ಪಿ.ಎನ್. ರಾಜಾರಾಂ, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

ಮಡಿವಾಳ ಮಾಚಿದೇವ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಬಸವ ಮಾಚಿದೇವ ಸ್ವಾಮೀಜಿ, ಮುಕ್ತಾನಂದ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಶಿವರಾಜ ಎಸ್. ತಂಗಡಗಿ, ಅತಿಥಿ: ಉದಯ್ ಗರುಡಾಚಾರ್, ಉಪನ್ಯಾಸ: ಯಡಿಯೂರು ಮೂಡಲಗಿರಿಯಪ್ಪ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6



ಕನಕದಾಸರ ವಿರಚಿತ 'ಹರಿಭಕ್ತಿಸಾರ' ಧಾರ್ಮಿಕ ಪ್ರವಚನ: ಧನಂಜಯಾಚಾರ್ಯ, ಆಯೋಜನೆ ಹಾಗೂ ಸ್ಥಳ: ವಿಜಯ ಮಧ್ವ ಸಂಘ, ಗಂಗಾಧರ ಬಡಾವಣೆ, ವಿಜಯನಗರ 2ನೇ ಹಂತ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

‘ಸುಳ್ಳು ದೂರಿಗೆ ಕಡಿವಾಣ ಅಗತ್ಯ’

ವಕೀಲರ ವಿರುದ್ಧದ ಅಪಾಯಕಾರಿ ಪ್ರವೃತ್ತಿಗೆ ತಡೆ ಹಾಕಬೇಕಿದೆ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿಯನ್ನು ಪ್ರತಿನಿಧಿಸುವ ವಕೀಲರು ಹಿಂದೆ ಸರಿಯುವಂತೆ ಮಾಡಲು ಅವರ ವಿರುದ್ಧವೇ ಸುಳ್ಳು ದೂರು ನೀಡಿ ಅವರನ್ನೇ ಆರೋಪಿಗಳನ್ನಾಗಿ ಸಿಲುಕಿಸುವ ಅಪಾಯಕಾರಿ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದ್ದು ಇದಕ್ಕೆ ಕಡಿವಾಣ ಅಗತ್ಯ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಮತ್ತು ಇದಕ್ಕೆ ಸಂಬಂಧಿಸಿದಂತೆ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಬೇಕು’ ಎಂದು ಕೋರಿ ಹೈಕೋರ್ಟ್ ವಕೀಲರೂ ಆದ ಯಾಸ್ಮೀನ್ ಸಾಲೇಹ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಧ್ಯಂತರ ಆದೇಶ ನೀಡಿದೆ.

‘ಯಾಸ್ಮೀನ್ ವಿರುದ್ಧ, ಭಾರತೀಯ ನ್ಯಾಯ ಸಂಹಿತೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿರುದ್ಧದ ದೌರ್ಜನ್ಯ ತಡೆ ಕಾಯ್ದೆ ಅಡಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ತಡೆ ನೀಡಿರುವ ನ್ಯಾಯಪೀಠ, ‘ವಕೀಲರ ವಿರುದ್ಧ ಅಪರಾಧ ದಾಖಲಿಸುವ ಮೊದಲು, ಪ್ರತೀಕಾರ ತೀರಿಸಿಕೊಳ್ಳುವುದಕ್ಕಾಗಿ ಆರೋಪ ಮಾಡುತ್ತಿದ್ದಾರೆಯೇ ಎಂಬುದನ್ನು ಪೊಲೀಸರು ತಿಳಿದುಕೊಳ್ಳಬೇಕು. ಆರೋಪಗಳನ್ನು ಮಾಡುತ್ತಿರುವ ದೂರುದಾರರ ಆರೋಪಗಳ ಸ್ವರೂಪದ ಬಗ್ಗೆ ಕೂಲಂಕಷ ವಿಚಾರಣೆ ನಡೆಸಬೇಕು. ತದನಂತರವೇ ಮುಂದಡಿ ಇಡಬೇಕು’ ಎಂದು ಎಚ್ಚರಿಸಿದೆ.



‘ವಿರುದ್ಧ ಪಕ್ಷಗಾರರು ಸುಳ್ಳು ಎಫ್‌ಐಆರ್‌ಗಳನ್ನು ದಾಖಲಿಸಿ ಬೆದರಿಕೆ ಒಡ್ಡಿದರೆ, ಎದುರುದಾರರನ್ನು ಪ್ರತಿನಿಧಿಸುವ ವಕೀಲರು ಹಿಂಜರಿಯುತ್ತಾರೆ ಮತ್ತು ಭಯಪಡುತ್ತಾರೆ. ಈ ರೀತಿಯ ಅನುಚಿತ ಆರೋಪಗಳನ್ನು ಮಾಡುತ್ತಿರುವ ಪ್ರಕರಣಗಳು ಕೋರ್ಟ್ ಗಮನಕ್ಕೆ ಬಂದಿವೆ. ಹೀಗಾಗಿ, ಅಪಾಯಕ್ಕೆ ಸಿಲುಕಿರುವ ವಕೀಲರಿಗೆ ರಕ್ಷಣೆ ನೀಡುವ ಅಗತ್ಯವಿದೆ’ ಎಂದು ನ್ಯಾಯಪೀಠ ಆದೇಶಿಸಿದೆ. ವಿಚಾರಣೆಯನ್ನು ಫೆಬ್ರುವರಿ 19ಕ್ಕೆ ಮುಂದೂಡಲಾಗಿದೆ.

ಪ್ರಕರಣ: ಆಸ್ತಿ ವಿಭಜನಾ ದಾವೆ ಮತ್ತು ವೈವಾಹಿಕ ವಿಷಯದಲ್ಲಿ ಪಕ್ಷಗಾರರೊಬ್ಬರ ಪತ್ನಿಯನ್ನು ಯಾಸ್ಮೀನ್ ಸಾಲೇಹ ಪ್ರತಿನಿಧಿಸಿದ್ದರು. ಯಾಸ್ಮೀನ್ ಹಿಂದೆ ಸರಿಯುವಂತೆ ಮಾಡಲು ಅವರ ವಿರುದ್ಧ ದೂರುದಾರೆಯ ಪತಿ ಕ್ರಿಮಿನಲ್ ದೂರು ದಾಖಲಿಸಿದ್ದರು.

ಮಹಾ ಪಂಚಾಯತ್ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಉಳಿಸಿ ಆಂದೋಲನದ ಭಾಗವಾಗಿ ‘ಮನರೇಗಾ ರಕ್ಷಣಾ ಒಕ್ಕೂಟ-ಕರ್ನಾಟಕ’ವು ಫೆ.2ರಂದು ಬೆಳಿಗ್ಗೆ 10ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಹಾ ಪಂಚಾಯತ್ ಹಮ್ಮಿಕೊಂಡಿದೆ.

ನರೇಗಾ ಯೋಜನೆಯು ಕಳೆದ ಎರಡು ದಶಕಗಳಿಂದ ದೇಶದ ಗ್ರಾಮೀಣ ಕೂಲಿಕಾರರು ಮತ್ತು ಸಣ್ಣ ರೈತರ ಜೀವನೋಪಾಯಕ್ಕೆ ಬಲವಾದ ಆಧಾರವಾಗಿತ್ತು. ಅಂಥ ಕಾನೂನನ್ನು ಕಿತ್ತು ಹಾಕಿರುವ ಕೇಂದ್ರ ಒಕ್ಕೂಟ ಸರ್ಕಾರವು ಹೊರತಂದಿರುವ ‘ವಿಕಸಿತ ಭಾರತ- ಗ್ಯಾರಂಟಿ ಫಾರ್ ರೋಜ್‌ಗಾರ್ ಆ್ಯಂಡ್ ಆಜೀವಿಕಾ ಮಿಷನ್ (ಗ್ರಾಮೀಣ) ಕಾನೂನನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿ ಕಾರ್ಮಿಕರ ಮಹಾ ಪಂಚಾಯತ್ ನಡೆಸಲಾಗುವುದು ಎಂದು ಒಕ್ಕೂಟ ತಿಳಿಸಿದೆ.

ಕರ್ನಾಟಕದ ರೈತ, ದಲಿತ, ಗ್ರಾಮೀಣ ಕೂಲಿಕಾರರು, ಭೂಮಿ-ವಸತಿ ರಹಿತರು, ಭೂ ಕಬಳಿಕೆ ವಿರೋಧಿ ಮತ್ತು ಸ್ವರ್ಣೋದಯ ಸಂಘಟನೆಗಳ ಒಕ್ಕೂಟದ ಸಹಯೋಗದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಕಾರ್ಮಿಕರು, ಮಹಿಳೆಯರು, ರೈತರು ಸೇರಿದಂತೆ ಎಲ್ಲರೂ ಸೇರಿ ಪಂಚಾಯಿತಿ ನಡೆಸಿ ತೀರ್ಮಾನ ಕೈಗೊಳ್ಳಲಿದ್ದಾರೆ. ಆ ತೀರ್ಮಾನವನ್ನು ಸರ್ಕಾರಕ್ಕೆ ಒಪ್ಪಿಸಲಿದ್ದಾರೆ. ವಿವಿಧ ಸಂಘಟನೆಗಳ ಮುಖಂಡರು, ಲೇಖಕರು, ಚಿಂತಕರು, ವಿವಿಧ ಕ್ಷೇತ್ರಗಳ ತಜ್ಞರು ಭಾಗವಹಿಸಲಿದ್ದಾರೆ. ಮಾಹಿತಿಗೆ 9902540033, 9591212825 ಸಂಪರ್ಕಿಸಬಹುದು ಎಂದು ಒಕ್ಕೂಟ ಹೇಳಿದೆ.

‘ನೇಕಾರರಿಗೆ ಶೇ 10 ಹೆಚ್ಚುವರಿ ವೇತನ’

ಹುಬ್ಬಳ್ಳಿ: ‘ನೇಕಾರರ ಅಭಿವೃದ್ಧಿಗಾಗಿ ಕೈಮಗ್ಗ ಅಭಿವೃದ್ಧಿ ನಿಗಮ ವಿವಿಧ ಯೋಜನೆ ಹಮ್ಮಿಕೊಂಡಿದೆ. ಜನವರಿಯಿಂದ ಅನ್ವಯವಾಗುವಂತೆ ಮೂಲ ವೇತನಕ್ಕೆ ಶೇ 10ರಷ್ಟು ಹೆಚ್ಚುವರಿ ಹಣ ನೀಡಿ ವೇತನ ಪಾವತಿಗೆ ತೀರ್ಮಾನಿಸಲಾಗಿದೆ’ ಎಂದು ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ನಾಗೇಂದ್ರ ಕುಮಾರ್ ಶನಿವಾರ ಹೇಳಿದರು.

‘ನಿಗಮದಡಿ ರಾಜ್ಯ ಹಾಗೂ ದೇಶದ ವಿವಿಧೆಡೆ ಹಲವು ಆಸ್ತಿ, ಮಳಿಗೆಗಳು ಇದ್ದು ಅವುಗಳ ದಾಖಲಾತಿಗಳನ್ನು ಸಂಗ್ರಹಿಸಲಾಗುತ್ತಿದೆ. ಆಸ್ತಿಗಳು ಇರುವ ಕಡೆ ಅವುಗಳನ್ನು ನವೀಕರಣಗೊಳಿಸಿ ಬಾಡಿಗೆ ನೀಡಲಾಗುವುದು. ರಾಜ್ಯದಲ್ಲಿರುವ ಕೈಮಗ್ಗ ಘಟಕಗಳ ಸಮೀಕ್ಷೆ ನಡೆಸಲಾಗುವುದು, ನೂತನ ಮಾದರಿಯ ಕೈಮಗ್ಗ ಗಳನ್ನು ವಿತರಿಸಲಾಗುವುದು’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ನೇಕಾರರ ಹಾಗೂ ನಿಗಮದ ಅಭಿವೃದ್ಧಿಗೆ ಬಜೆಟ್‌ನಲ್ಲಿ ₹75 ಕೋಟಿ ಮೀಸಲಿಡುವಂತೆ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗಿದೆ. ಸದ್ಯ ಇರುವ ಸಮಸ್ಯೆಗಳ ಪರಿಹಾರಕ್ಕೆ ₹15 ಕೋಟಿ ನೀಡುವಂತೆ ವಿನಂತಿಸಲಾಗಿದೆ’ ಎಂದರು.

‘ನಿಗಮದಡಿ ಪ್ರಸ್ತುತ ರಾಜ್ಯದ ಎಂಟು ಕಡೆ ಪ್ರಿಯದರ್ಶಿನಿ ಬಟ್ಟೆ ಮಳಿಗೆಗಳಿದ್ದು, ಇನ್ನೂ ಹತ್ತು ಕಡೆ ತೆರೆಯಲು ಯೋಜನೆಯಿದೆ’ ಎಂದು ತಿಳಿಸಿದರು.



ಸವದತ್ತಿ–ಮುನವಳ್ಳಿ ರಸ್ತೆಯಲ್ಲಿ ಭಾರತ ಹುಣ್ಣಿಮೆ ಪ್ರಯುಕ್ತ ಯಲ್ಲಮ್ಮನಗುಡ್ಡಕ್ಕೆ ಅಲಂಕೃತ ಚಕ್ಕಡಿಗಳ ಸಾಲು ಸಾಗಿತು –ಚಿತ್ರ: ಗೋವಿಂದರಾಜ ಜವಳಿ

ಏಳುಕೊಳ್ಳದ ನಾಡಲ್ಲಿ ‘ಎತ್ತಿನಬಂಡಿಗಳ ಜಾತ್ರೆ’

• ಇಮಾಮ್‌ಹುಸೇನ್ ಗೂಡುನವರ

ಯಲ್ಲಮ್ಮನಗುಡ್ಡ (ಬೆಳಗಾವಿ ಜಿಲ್ಲೆ): ಕುಂಕುಮ-ಭಂಡಾರ ಜಾತ್ರೆ, ಹಸಿರು ಬಳೆಗಳ ಜಾತ್ರೆ ಎಂದೆಲ್ಲ ಕರೆಯಲಾಗುವ ಯಲ್ಲಮ್ಮನಗುಡ್ಡದ ಭಾರತ ಹುಣ್ಣಿಮೆ ಜಾತ್ರೆ ‘ಎತ್ತಿನಬಂಡಿಗಳ ಜಾತ್ರೆ’ ಎಂದೂ ಹೆಸರಾಗಿದೆ. ವಾಹನಗಳ ಸೌಲಭ್ಯವಿದ್ದರೂ, ಭಕ್ತರು ಎತ್ತಿನ ಬಂಡಿಯಲ್ಲಿಯೇ ಗುಡ್ಡಕ್ಕೆ ಬರುವ ಪದ್ಧತಿ ಇಂದಿಗೂ ರೂಢಿಯಲ್ಲಿದೆ.

ಯಲ್ಲಮ್ಮನಗುಡ್ಡದಲ್ಲಿ ವರ್ಷದ 12 ಹುಣ್ಣಿಮೆಗಳಲ್ಲೂ ಜಾತ್ರೆ ನಡೆಯುತ್ತದೆ. ಆದರೆ, ಫೆಬ್ರುವರಿ 1ರಂದು ನಡೆಯುವ ಭಾರತ ಹುಣ್ಣಿಮೆ ಜಾತ್ರೆ ಎಲ್ಲಕ್ಕಿಂತ ದೊಡ್ಡದು. ಇದರಲ್ಲಿ ಪಾಲ್ಗೊಳ್ಳಲು ದೇಶದ ವಿವಿಧೆಡೆಯಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ.

ಬೆಳಗಾವಿ, ಬಾಗಲಕೋಟೆ, ವಿಜಯಪುರ, ಗದಗ, ಕೊಪ್ಪಳ ಸೇರಿದಂತೆ ವಿವಿಧ ಜಿಲ್ಲೆಗಳ ಭಕ್ತರು ಬಂಡಿಗಳಲ್ಲಿ ಬರುತ್ತಾರೆ. ಗುಡ್ಡಕ್ಕೆ ತೆರಳುವ ಮಾರ್ಗದಲ್ಲಿ ಚಕ್ಕಡಿಗಳ ಸಾಲು ಕಾಣುತ್ತದೆ.

‘ಪ್ರತಿ ವರ್ಷ 20 ಟ್ರ್ಯಾಕ್ಟರ್, 15 ಎತ್ತಿನ ಬಂಡಿಗಳಲ್ಲಿ ಬರುತ್ತೇವೆ. ಪೂರ್ವಜರ ಕಾಲದಿಂದ ಈ ಸಂಪ್ರದಾಯವಿದೆ. ಯಾವ ವಾಹನದಲ್ಲಿ ಬಂದರೂ ಈ ಖುಷಿ ಸಿಗದು’ ಎಂದು ಗೋಕಾಕ ತಾಲ್ಲೂಕಿನ ಹಿರೇನಂದಿಯ ರೈತ ಮಲ್ಲಿಕಾರ್ಜುನ ಮೂಲಿಮನಿ ‘ಪ್ರಜಾವಾಣಿ’ಗೆ ತಿಳಿಸಿದರು.

ಹಲವು ಭಕ್ತರು ಟಂಟಂ, ಟ್ರ್ಯಾಕ್ಟರ್ ಮತ್ತಿತರ ವಾಹನಗಳಲ್ಲಿ ಗುಡ್ಡಕ್ಕೆ ಬರುತ್ತಾರೆ. ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆಯೇ ಹೆಚ್ಚಿದೆ.

ಫೆಬ್ರುವರಿ 15ರ ಮಹಾಶಿವರಾತ್ರಿಯ ವರೆಗೆ ಈ ಜಾತ್ರೆಯು ನಡೆಯಲಿದೆ. ಗುಡ್ಡಕ್ಕೆ ಸಾವಿರಾರು ಸಂಖ್ಯೆಯಲ್ಲಿ ಅಲಂಕೃತ ಬಂಡಿಗಳಲ್ಲಿ ಬಂದು ಗ್ರಾಮೀಣ ಸೊಗಡು ಹರಡಲಿವೆ.

₹25 ಲಕ್ಷ ಮೌಲ್ಯದ ಮದ್ಯ ವಶ

ಬೆಳಗಾವಿ: ಅಕ್ರಮವಾಗಿ ಗೋವಾ ಮದ್ಯ ಸಾಗಣೆ ಮಾಡುತ್ತಿದ್ದ ಲಾರಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇದರಲ್ಲಿ ಅಂದಾಜು ₹25 ಲಕ್ಷ ಮೌಲ್ಯದ ಮದ್ಯ ಪತ್ತೆಯಾಗಿದೆ.

ಮಾಳಮಾರುತಿ ಠಾಣೆ ಇನ್‌ಸ್ಪೆಕ್ಟರ್ ಬಿ.ಆರ್.ಗಡ್ಡೇಕರ್ ನೇತೃತ್ವದ ತಂಡವು ಶ್ರೀನಗರದ ಉದ್ಯಾನದ ಬಳಿ ಲಾರಿ ತಡೆದು ತಪಾಸಣೆ ನಡೆಸಿತು. ಅದರಲ್ಲಿ 7 ಸಾವಿರ ಲೀಟರ್ ಮದ್ಯ ಪತ್ತೆಯಾಯಿತು. ‘ಗೋವಾದಿಂದ ತರಲಾದ ಮದ್ಯಕ್ಕೆ ದಾಖಲೆಗಳಿಲ್ಲ. ವಾಹನ 2 ಚೆಕ್‌ಪೋಸ್ಟ್ ದಾಟಿದ್ದು, ಅಲ್ಲಿ ತಪಾಸಣೆ ಮಾಡದಿರುವ ಕುರಿತು ತನಿಖೆ ನಡೆಸಲಾಗುವುದು’ ಎಂದು ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ಹೇಳಿದರು.

ಬಂಧನ ಭೀತಿಯಲ್ಲಿ ಹಕ್ಕಿಪಿಕ್ಕಿ ಸಮುದಾಯದ ಎಂಟು ಜನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಗಿಡಮೂಲಿಕೆಗಳ ಔಷಧ ಮಾರಾಟಕ್ಕಾಗಿ ಮಧ್ಯ ಆಫ್ರಿಕಾದ ಚಾಡ್‌ಗೆ ಹೋಗಿದ್ದ ರಾಜ್ಯದ ಹಕ್ಕಿಪಿಕ್ಕಿ ಸಮುದಾಯದ 8 ಜನರು ವೀಸಾ ಅವಧಿ ಮುಗಿದ ಕಾರಣ ಬಂಧನದ ಭೀತಿ ಎದುರಿಸುತ್ತಿದ್ದಾರೆ.

ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳ ಎಂಟು ಜನರಲ್ಲಿ ಮೂವರು ಮಹಿಳೆಯರಿದ್ದಾರೆ. ಇವರ ವೀಸಾ ಅವಧಿ 2025ರ ಡಿಸೆಂಬರ್ 22 ರಂದು ಮುಕ್ತಾಯವಾಗಿದೆ.

‘ಸೆಪ್ಟೆಂಬರ್‌ನಲ್ಲಿ ಚಾಡ್‌ನ ರಾಜಧಾನಿ ಎನ್‌ಜಮೇನಾಗೆ ಬಂದಿದ್ದೆವೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ವೀಸಾ ನವೀಕರಣಗೊಂಡಿಲ್ಲ. ತಲಾ ₹1.5 ಲಕ್ಷ ದಂಡ ಪಾವತಿಸದಿದ್ದರೆ, ಜೈಲಿಗೆ ಕಳಿಸುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದಾರೆ. ಭಾರತ ಸರ್ಕಾರ ನಮಗೆ ನೆರವು ನೀಡಬೇಕು’ ಎಂದು ಬಂಧನದ ಭೀತಿಯಲ್ಲಿರುವವರು ವಿಡಿಯೊ ಮೂಲಕ ಒತ್ತಾಯಿಸಿದ್ದಾರೆ. ‘ಕೇಂದ್ರ ಸರ್ಕಾರ ಶಾಶ್ವತ ಪರಿಹಾರ ಕಲ್ಪಿಸಲು ಕ್ರಮವಹಿಸಬೇಕು’ ಎಂದು ಕರ್ನಾಟಕ ಹಕ್ಕಿ-ಪಿಕ್ಕಿ ಬುಡಕಟ್ಟು ಸಂಘಟನೆ ಅಧ್ಯಕ್ಷ ಪುನೀತ್‌ಕುಮಾರ್ ಆಗ್ರಹಿಸಿದ್ದಾರೆ.

‘ವಿದೇಶಾಂಗ ವ್ಯವಹಾರಗಳ ಸಚಿವಾಲಯ ಅಧಿಕಾರಿಗಳ ಜೊತೆ ಚರ್ಚಿಸಿ ಪರಿಹಾರ ಒದಗಿಸಬೇಕು’ ಎಂದು ದಾವಣಗೆರೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮನವಿ ಮಾಡಿದ್ದೇವೆ’ ಎಂದೂ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಕುಸಿದ ಬೆಲೆ: ರಬ್ಬರ್ ಉಳಿಯುವುದೇ?

ಒಂದನೇ ಪುಟದಿಂದ..

ಕರ್ನಾಟಕದಲ್ಲಿ ನೈಸರ್ಗಿಕ ರಬ್ಬರ್ ಉತ್ಪಾದನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಅಗ್ರಸ್ಥಾನದಲ್ಲಿದೆ. ಉತ್ಪಾದನೆಗಿಂತ ಅಪಾರ ಪ್ರಮಾಣದಲ್ಲಿರುವ ಆಂತರಿಕ ಬೇಡಿಕೆಯನ್ನು ಸರಿದೂಗಿಸಲು ವಿಯೆಟ್ನಾಂ, ಇಂಡೊನೇಷ್ಯಾ, ಐವರಿ ಕೋಸ್ಟ್, ಥಾಯ್ಲೆಂಡ್ ಮತ್ತು ಚೀನದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ 1961ರಲ್ಲಿ ಆರಂಭಗೊಂಡ ರಬ್ಬರ್ ಕೃಷಿ, ಈಗ ಜಿಲ್ಲೆಯಾದ್ಯಂತ ವ್ಯಾಪಿಸಿದೆ. ಉಡುಪಿ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲೂ ರಬ್ಬರ್ ಬೆಳೆ ಇದೆ. ರಾಜ್ಯದ ಅಂಕಿಅಂಶವನ್ನು ತೆಗೆದುಕೊಂಡರೆ 2019- 20ರಲ್ಲಿ ಸುಮಾರು 51,450 ಹೆಕ್ಟೇರ್ ಪ್ರದೇಶದಲ್ಲಿ ವಿಸ್ತರಿಸಿದ್ದ ಈ ಬೆಳೆ, 2023-24ರಲ್ಲಿ 50,800 ಹೆಕ್ಟೇರ್‌ಗೆ ಕುಸಿದಿದೆ. ಇತ್ತೀಚಿನ ವರ್ಷಗಳಲ್ಲಿ ಈ ವಿಸ್ತೀರ್ಣ ಅತಿ ವೇಗದಲ್ಲಿ ಕಡಿಮೆ ಆಗುತ್ತಿದ್ದು, ರಬ್ಬರ್ ತೆರವುಗೊಳಿಸಿ ಅಡಿಕೆ, ವಿವಿಧ ರೀತಿಯ ಹಣ್ಣುಗಳ ಕೃಷಿ ಹೆಚ್ಚಾಗುತ್ತಿದೆ. ಇಳುವರಿ ನೀಡುವ ಮರಗಳನ್ನು ಕಡಿದು ಅಲ್ಲಿ ಬೇರೆ ಕೃಷಿ ಅಥವಾ ಪರ್ಯಾಯ ಬೆಳೆಗಳನ್ನೂ ಬೆಳೆಸಲಾಗುತ್ತಿದೆ. ಈ ಬಗ್ಗೆ ಬೆಳೆಗಾರರನ್ನು ಕೇಳಿದರೆ ಅವರ ಉತ್ತರ ಇಷ್ಟೆ: 'ಬೆಲೆ ಇಲ್ಲ; ಕೆಲಸಕ್ಕೆ ಜನರೂ ಸಿಗುತ್ತಿಲ್ಲ'.

ನೈಸರ್ಗಿಕ ರಬ್ಬರ್‌ನ ಬೆಲೆ 2011ರಲ್ಲಿ ಕೆ.ಜಿಗೆ ₹242 ಇತ್ತು. ಆಗ ಬೆಳೆಯ ವಿಸ್ತರಣೆಯೂ ಭಾರಿ ಪ್ರಮಾಣದಲ್ಲಿ ನಡೆಯಿತು. 2023ರಲ್ಲಿ ಕೆ.ಜಿಗೆ ₹140ರ ವರೆಗೆ ಕುಸಿಯಿತು. ಪ್ರತಿ ಕೆ.ಜಿ. ನೈಸರ್ಗಿಕ ರಬ್ಬರ್‌ಗೆ ಕೃಷಿ ವೆಚ್ಚ ₹258.55 ಆಗುತ್ತದೆ. ಆದರೀಗ ಮಾರುಕಟ್ಟೆಯಲ್ಲಿ ಸರಾಸರಿ ಬೆಲೆ ಪ್ರತಿ ಕೆ.ಜಿಗೆ ₹195 ಆಸುಪಾಸಿನಲ್ಲಿದೆ. ರಬ್ಬರ್ ಬೆಳೆಯ ಅಸ್ತಿತ್ವದ ಪ್ರಶ್ನೆ ಬಂದಾಗ ರೈತರು ಬೊಟ್ಟು ಮಾಡಿ ತೋರಿಸುವುದು ಕೃಷಿ ವೆಚ್ಚದಲ್ಲಿ ಹೆಚ್ಚಳ, ಕಾರ್ಮಿಕರ ಕೊರತೆ, ಬೆಲೆ ಕುಸಿತ, ಆಮದು ಮತ್ತು ಕೃಷಿಗೆ ಬೆಂಬಲದ ಕೊರತೆಯ ಕಡೆಗೆ ಎಂಬುದನ್ನು ಕೃಷಿ ಆರ್ಥಿಕ ತಜ್ಞ ಪ್ರೊ.ವಿಘ್ನೇಶ್ವರ ವರ್ಮುಡಿ ಅವರು ಕೈಗೊಂಡ ಅಧ್ಯಯನದಲ್ಲಿ ಕಂಡುಕೊಂಡಿದ್ದಾರೆ.

ಕರ್ನಾಟಕದಲ್ಲಿ ರಬ್ಬರ್ ಉತ್ಪಾದನಾ ವೆಚ್ಚ ನಿರ್ಧರಿಸಲು ಬೆಳೆ ಇರುವ ಜಿಲ್ಲೆಗಳ 200 ಬೆಳೆಗಾರರನ್ನು ಬೆಳ್ತಂಗಡಿ ತಾಲ್ಲೂಕು ರಬ್ಬರ್ ಬೆಳೆಗಾರರ ಮಾರುಕಟ್ಟೆ ಮತ್ತು ಸಂಸ್ಕರಣಾ ಸಹಕಾರ ಸಂಘದ ಮೂಲಕ ಸಂಪರ್ಕಿಸಿ ಪ್ರಾಥಮಿಕ ಮಾಹಿತಿ ಸಂಗ್ರಹಿಸಿ ಉತ್ಪಾದನಾ ವೆಚ್ಚ ಅಂದಾಜು ಮಾಡಲಾಗಿದೆ. ಸಮೀಕ್ಷೆ ಆಧಾರದಲ್ಲಿ ಲೆಕ್ಕಾಚಾರ ಮಾಡಿದಾಗ ಪ್ರತಿ ಕೆ.ಜಿ ರಬ್ಬರ್ ಉತ್ಪಾದನಾ ವೆಚ್ಚ ₹258.55 ಆಗಿದೆ. ಸಾಮಾನ್ಯವಾಗಿ ಬೆಳೆಗಾರನಿಗೆ ಶೇ 25ರಷ್ಟು ಲಾಭಗಳಿಸುವ ಅರ್ಹತೆ ಇರುವ ಕಾರಣ ಉತ್ಪಾದನಾ ವೆಚ್ಚಕ್ಕೆ ಅದನ್ನು ಸೇರಿಸಿದಾಗ ಈ ಮೊತ್ತ ಕೆಜಿಗೆ ₹323.19 ಆಗುತ್ತದೆ. ಅಂದರೆ, ರಬ್ಬರ್‌ನ ಕನಿಷ್ಠ ಬೆಲೆ ₹323.19 ಇರಲೇಬೇಕು ಎನ್ನುತ್ತಾರೆ ಪ್ರೊ. ವಿಘ್ನೇಶ್ವರ ವರ್ಮುಡಿ.

ಪರಿಹಾರೋಪಾಯ: ಆಂತರಿಕವಾಗಿ ಉತ್ಪಾದನೆ ಹೆಚ್ಚಿಸಲು ಮತ್ತು ಬೆಳೆಗಾರರನ್ನು ರಕ್ಷಿಸಲು ರಬ್ಬರ್ ಆಮದು ಸುಂಕವನ್ನು ಹೆಚ್ಚಿಸಬೇಕು. ಬೆಳೆ ಮತ್ತು ಬೆಳೆಗಾರರ ರಕ್ಷಣೆಗೆ ಪೂರಕ ನೀತಿ ರೂಪಿಸಬೇಕು.


ಹಾಲಿಳಿಸುವ ರಬ್ಬರ್ ತೋಟವೊಂದರ ದೃಶ್ಯ


ಬೆಲೆ ಸ್ಥಿರೀಕರಣ ನಿಧಿ ಸ್ಥಾಪಿಸಬೇಕು. ರಬ್ಬರ್ ಕೃಷಿ ಕ್ಷೇತ್ರದ ಅಧ್ಯಯನ ಮಾಡಲು ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಬೇಕು. ಕೇರಳ ರಾಜ್ಯದಲ್ಲಿ ಈಗಾಗಲೇ ಜಾರಿಯಲ್ಲಿರುವ ಪ್ರೋತ್ಸಾಹಧನ ಯೋಜನೆಯನ್ನು ರಾಜ್ಯದಲ್ಲೂ ಜಾರಿಗೊಳಿಸಿ ಬೆಳೆಗಾರರನ್ನು ರಕ್ಷಿಸಬೇಕು ಎಂಬ ಬೇಡಿಕೆ ಬೆಳೆಗಾರರದ್ದು.

ದ.ಕ. ಜಿಲ್ಲೆಯಲ್ಲಿ ಸುಮಾರು 38,000 ಹೆಕ್ಟೇರ್ ರಬ್ಬರ್ ಬೆಳೆ ಇದೆ. ಜಿಲ್ಲೆಯಲ್ಲಿ 40 ಸಾವಿರ ರಬ್ಬರ್ ಬೆಳೆಗಾರರಿದ್ದಾರೆ. ಕೃಷಿ ಉತ್ಪನ್ನಗಳಿಗೆ ನೀಡಲಾಗುವ ಎಲ್ಲ ಸವಲತ್ತುಗಳನ್ನು ನಮಗೂ ನೀಡಬೇಕು ಎಂಬುದು ಅವರ ಆಗ್ರಹ.

ರಬ್ಬರ್ ಬೆಳೆ ವಿಸ್ತರಣೆಗೆ ಸಂಬಂಧಿಸಿ ಹಲವು ಕ್ರಮಗಳನ್ನು ರಬ್ಬರ್ ಮಂಡಳಿ ಕೈಗೊಂಡಿದೆ. ಸಹಕಾರ ಸಂಘಗಳ ಮೂಲಕ ರಬ್ಬರ್ ಕೃಷಿ ಬಗ್ಗೆ ಪ್ರಚುರಪಡಿಸಲಾಗುತ್ತಿದೆ. ರಬ್ಬರ್ ಟ್ಯಾಪಿಂಗ್ ಕೌಶಲ ಕಲಿಸಲು ತರಬೇತಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ರಬ್ಬರ್ ಬೋರ್ಡ್ ಪ್ರಾದೇಶಿಕ ಅಧಿಕಾರಿ ಮಿನಿ ನೈನನ್ 'ಪ್ರಜಾವಾಣಿ'ಗೆ ತಿಳಿಸಿದರು.

ಟ್ಯಾಪರ್‌ಗಳ ಕೊರತೆ: ರಬ್ಬರ್ ಕೃಷಿಯಲ್ಲಿ ಹಾಲಿಳಿಸಲು (ಟ್ಯಾಪಿಂಗ್) ಕಾರ್ಮಿಕರು ಸಿಗುತ್ತಿಲ್ಲ. ಬೇರೆ ರಾಜ್ಯದಿಂದ ಬರುವ ಕಾರ್ಮಿಕರನ್ನೇ ಅವಲಂಬಿಸಬೇಕಿದೆ. ಈ ಸಮಸ್ಯೆಯಿಂದಾಗಿ ರೈತರು ತೋಟಗಳನ್ನು ಕೆಲ ವರ್ಷಗಳಿಗೆ ಗುತ್ತಿಗೆ ನೀಡುತ್ತಾರೆ. ಗುತ್ತಿಗೆ ವಹಿಸಿಕೊಂಡವರು ಹೆಚ್ಚು ಇಳುವರಿ ಪಡೆಯಲು ರಾಸಾಯನಿಕ ಬಳಸುತ್ತಾರೆ. ಇದರಿಂದ ಮರಗಳ ಆಯಸ್ಸು ಕಡಿಮೆಯಾಗಿ, ಭೂಮಿಯ ಸಾರವೂ ಹಾಳಾಗುತ್ತದೆ. ಈ ಕಾರಣಕ್ಕೆ ಬೆಳೆಗಾರರು ರಬ್ಬರ್ ಮರಗಳನ್ನು ಕಡಿಯುತ್ತಿದ್ದಾರೆ.

ಕರ್ನಾಟಕದಲ್ಲಿ ನೈಸರ್ಗಿಕ ರಬ್ಬರ್ ಉತ್ಪಾದನೆಯ ಮಾಹಿತಿ



ಸಹಕಾರ ಸಂಘಗಳಲ್ಲೂ ಖರೀದಿ: ರಾಜ್ಯದಲ್ಲಿ 84 ರಬ್ಬರ್ ಉತ್ಪಾದಕರ ಸಂಘಗಳು, 3 ಒಕ್ಕೂಟ ಸಂಸ್ಕರಣಾ ಕೇಂದ್ರಗಳು, 142 ನೋಂದಾಯಿತ ವ್ಯಾಪಾರಿಗಳು, 142 ಪರವಾನಗಿ ಪಡೆದ ರಬ್ಬರ್ ಉತ್ಪನ್ನಗಳ ಉತ್ಪಾದಕರು ಮತ್ತು ಐವರು ರಬ್ಬರ್ ಸಂಸ್ಕರಣಕಾರರು ಇದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖರೀದಿ ಮತ್ತು ಮಾರಾಟ ವ್ಯವಸ್ಥೆಯಲ್ಲಿ ಉತ್ಪಾದಕರ ಸಂಘಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಕ್ಯಾಂಪ್ಕೊ ಸಂಸ್ಥೆ ಕಾರ್ಯನಿರ್ವಹಿಸುತ್ತಿವೆ. 1985ರಲ್ಲಿ ಆರಂಭಗೊಂಡ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಉಜಿರೆಯಲ್ಲಿರುವ ಬೆಳ್ತಂಗಡಿ ತಾಲ್ಲೂಕು ರಬ್ಬರ್ ಬೆಳೆಗಾರರ ಮಾರುಕಟ್ಟೆ ಮತ್ತು ಸಂಸ್ಕರಣಾ ಸಹಕಾರ ಸಂಘವು ರಾಜ್ಯದಲ್ಲಿ ಉತ್ಪಾದನೆ ಆಗುವ ರಬ್ಬರ್‌ನ ಶೇ 40ರಷ್ಟನ್ನು ಖರೀದಿಸುತ್ತದೆ. ಈ ಸಂಘ ನಾಲ್ಕು ಜಿಲ್ಲೆಗಳಲ್ಲಿ 33 ಶಾಖೆಗಳನ್ನೂ ಹೊಂದಿದೆ ಎನ್ನುತ್ತಾರೆ ಸಂಘದ ಅಧ್ಯಕ್ಷ ಶ್ರೀಧರ ಜಿ.ಭಿಡೆ.

ಈಗ ರಬ್ಬರ್‌ನ ಧಾರಣೆಯೇ ಕುಸಿಯುತ್ತಿದ್ದು, ಇದರಿಂದಾಗಿ ರಬ್ಬರ್ ಕೃಷಿಕರ ಆಸಕ್ತಿ ಕುಂದುತ್ತಿದೆ. ಪರಿಣಾಮವಾಗಿ ರಬ್ಬರ್ ಟ್ಯಾಪಿಂಗ್ ಮಾಡದೆ ರಬ್ಬರ್ ಸೊಸೈಟಿಗಳಲ್ಲಿ ಸಂಗ್ರಹವಾಗುವ ರಬ್ಬರಿನ ಪ್ರಮಾಣ ಕಡಿಮೆ ಆಗುತ್ತಿದೆ. ರಬ್ಬರ್ ಮರಗಳನ್ನು ಬೆಳೆಗಾರರು ಕಡಿಯುತ್ತಿರುವ ಕಾರಣ ಮುಂದಿನ ದಿನಗಳಲ್ಲಿ ಈ ಸಂಸ್ಥೆಗಳು ನಷ್ಟಕ್ಕೆ ಒಳಗಾಗುವ ಲಕ್ಷಣಗಳು ಗೋಚರಿಸುತ್ತಿವೆ. ಈಗ ಸೊಸೈಟಿಗಳು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಾವಿರಾರು ಜನರಿಗೆ ಜೀವನೋಪಾಯವಾಗಿದ್ದು, ಇಲ್ಲಿನ ಸಮಸ್ಯೆಗಳಿಗೆ ಸರ್ಕಾರ ಪರಿಹಾರ ಒದಗಿಸಬೇಕಾದ ಅನಿವಾರ್ಯತೆ ಇದೆ.

ನಮ್ಮಲ್ಲಿ ರಬ್ಬರ್ ಆಧಾರಿತ ಉದ್ದಿಮೆಗಳು ಬೆಳೆಯುತ್ತಿವೆ. ಸರ್ಕಾರಗಳು ಇಲ್ಲಿನ ಸಮಸ್ಯೆಗಳಿಗೆ ಸ್ಪಂದಿಸಿ ಬೆಳೆಗಾರರನ್ನು ಮತ್ತು ಅವಲಂಬಿತ ಸಂಸ್ಥೆಗಳನ್ನು ರಕ್ಷಿಸಬೇಕು. ಇಲ್ಲದೆ ಇದ್ದರೆ ದೇಶಕ್ಕೆ ಅಗತ್ಯವಿರುವ ರಬ್ಬರ್‌ನ ಆಮದು ಹೆಚ್ಚಾಗಿ ವಿದೇಶಿ ವಿನಿಮಯದ ಹೊರಹರಿವು ಅಧಿಕ ಆಗಬಹುದು ಎನ್ನುವುದು ಆರ್ಥಿಕ ತಜ್ಞರ ಕಳವಳ.

ನಮ್ಮ ತೋಟದಲ್ಲಿ ನಾವೇ ಕೆಲಸ ಮಾಡಿದರೆ ವೆಚ್ಚ ಸರಿದೂಗಿಸಿಕೊಂಡು ಹೋಗಬಹುದು. ಹವಾಮಾನ ವೈಪರೀತ್ಯದಿಂದಾಗಿ ರಬ್ಬರ್ ಹಾಲಿನ ಪ್ರಮಾಣ ಕಡಿಮೆ ಆಗಿದೆ. ಅಲ್ಲದೆ, ಈ ಬಾರಿ ಮಳೆಯಿಂದಾಗಿ ರಬ್ಬರ್ ಟ್ಯಾಪಿಂಗ್‌ನ ದಿನಗಳೂ ಕಡಿಮೆ ಆಗಿವೆ. ಈ ಕಾರಣದಿಂದ ಆದಾಯದಲ್ಲಿ ಕೊರತೆ ಆಗಬಹುದು ಎನ್ನುತ್ತಾರೆ ಯುವ ರೈತ ಸಂದೇಶ್ ರಾಜೇಶ್ ಚಾರ್ಮಾಡಿ.

ಕೆಲಸವೂ ಕಡಿಮೆ ಆದಾಯವೂ ಅಲ್ಪ...: ಅಡಿಕೆಗೆ ಪ್ರಸ್ತುತ ಉತ್ತಮ ಧಾರಣೆ ಇದೆ. ಕಾಫಿಗೂ ಉತ್ತಮ ಬೆಲೆ ಇದೆ. ರಬ್ಬರ್ ಕೃಷಿ ಮಾಡಿದರೆ ಹಾಲಿಳಿಸಲು ಕನಿಷ್ಠ 6ರಿಂದ 7 ವರ್ಷ ಕಾಯಬೇಕು. ರಬ್ಬರ್‌ನಲ್ಲಿ ಅಂತರ ಬೆಳೆ ಸಾಧ್ಯವಿಲ್ಲ. ಇತರ ಬೆಳೆಗೆ ಹೋಲಿಸಿದರೆ ಕೆಲಸವೂ ಕಡಿಮೆ, ಆದಾಯವೂ ಕಡಿಮೆ. ಸೂಕ್ತ ವಾತಾವರಣ ಇಲ್ಲದೆ, ಮೋಡ ಕವಿದಿದ್ದರೆ ಹಾಲು ಸಂಗ್ರಹ ಪ್ರಮಾಣ ಕಡಿಮೆಯಾಗುತ್ತದೆ ಎನ್ನುತ್ತಾರೆ ನರಸಿಂಹರಾಜಪುರದ ಬೆಳೆಗಾರ ಎಸ್.ಎನ್. ಲೋಕೇಶ್ ಗೌಡ ಕಟಗಳಲೆ.

ಕೇಂದ್ರ ಸಚಿವರಿಗೆ ಪತ್ರ: ರಬ್ಬರ್ ಧಾರಣೆಗೆ ಸಂಬಂಧಿಸಿ ಕೇಂದ್ರ ಸರ್ಕಾರದ ಗಮನ ಸೆಳೆಯಲು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಪತ್ರ ಬರೆದಿದ್ದಾರೆ. ವಾಣಿಜ್ಯ ಬೆಳೆ ಎಂಬ ಕಾರಣ ನೀಡಿ ರಬ್ಬರನ್ನು ಕನಿಷ್ಠ ಬೆಂಬಲ ಬೆಲೆ ವ್ಯಾಪ್ತಿಯಿಂದ ಕೇಂದ್ರ ಸರ್ಕಾರ ಹೊರಗಿಟ್ಟಿದೆ. ಮಾರುಕಟ್ಟೆಯನ್ನೇ ಅವಲಂಬಿಸಿರುವ ಬೆಳೆಗಾರರ ಆರ್ಥಿಕ ಸ್ಥಿತಿ ಸಮಸ್ಯೆಯಲ್ಲಿದೆ ಎಂದು ವಿವರಿಸಿದ್ದಾರೆ. ಈ ಪತ್ರಕ್ಕೆ ಉತ್ತರಿಸಿರುವ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಶ್ ಗೋಯಲ್, ರಬ್ಬರ್ ಬೆಳೆಯನ್ನು ಕನಿಷ್ಠ ಬೆಂಬಲ ಬೆಲೆ ಒದಗಿಸುವ ಬೆಳೆಗಳ ಪಟ್ಟಿಗೆ ಸೇರಿಸುವ ಬೇಡಿಕೆ ಸಂಬಂಧ ಪತ್ರವನ್ನು ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಿಸಿದ ಇಲಾಖೆಗೆ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ.

ಈಗಿನ ಮಳೆ, ಹವಾಮಾನದ ಆಧಾರದಲ್ಲಿ ರಬ್ಬರ್ ಕೃಷಿ ಅತ್ಯಂತ ಸುರಕ್ಷಿತ ಬೆಳೆಯಾಗಿದೆ. ಮಳೆ ಹೆಚ್ಚಾದರೂ, ಕಡಿಮೆಯಾದರೂ ಹೆಚ್ಚು ಸಮಸ್ಯೆ ಆಗದು. ಇದೊಂದು ಬೆಳೆಗಾರ ಸ್ನೇಹಿತ ಕೃಷಿ. ಮಾಲೀಕರ ಗೈರಿನಲ್ಲೂ ಕಾರ್ಮಿಕರಿಂದಲೇ ನಿರ್ವಹಣೆ ಮಾಡಬಹುದು. ಹಾಲಿಳಿಸಲು ಆಗದೆ ಇದ್ದರೆ ಬಿಟ್ಟು ಬಿಡಬಹುದು. ಮರ ಬೆಳೆಯುತ್ತಲೇ ಇರುತ್ತದೆ ಎನ್ನುತ್ತಾರೆ ರಬ್ಬರ್ ಸೊಸೈಟಿಯ ಅಧಿಕಾರಿಗಳು.

ಅಡಿಕೆ, ಹಣ್ಣಿನ ಗಿಡಗಳ ನಿರ್ವಹಣೆ ಒಂದು ವರ್ಷ ಕಡಿಮೆಯಾದರೆ ಮುಂದಿನ ವರ್ಷ ಇಳುವರಿ ಸಂಪೂರ್ಣವಾಗಿ ಕಡಿಮೆ ಆಗುತ್ತದೆ. ಆದರೆ, ರಬ್ಬರ್ ಬೆಳೆ ಹಾಗಲ್ಲ. ರಾಜ್ಯದಲ್ಲಿ 58 ಸಾವಿರ ಹೆಕ್ಟೇರ್‌ನಲ್ಲಿ ಬೆಳೆದ ರಬ್ಬರ್‌ನಿಂದಾಗಿ ರಾಜ್ಯಕ್ಕೆ ಕಡಿಮೆಯೆಂದರೂ ₹500 ಕೋಟಿ ಆದಾಯ ಬಂದಿದೆ. ಜಿಡಿಪಿ ಬೆಳವಣಿಗೆಗೂ ಕೊಡುಗೆ ನೀಡಿದೆ. ರಬ್ಬರ್ ಅನಿವಾರ್ಯ ಬೆಳೆ. ಬೇಡಿಕೆ ಎಂದೂ ಕಡಿಮೆ ಆಗದು. ಬೇಡಿಕೆಯ ಶೇ 50ರಷ್ಟೂ ಪೂರೈಕೆ ಆಗುತ್ತಿಲ್ಲ ಎನ್ನುತ್ತಾರೆ ಬೆಳ್ತಂಗಡಿ ತಾಲ್ಲೂಕು ರಬ್ಬರ್ ಬೆಳೆಗಾರರ ಮಾರುಕಟ್ಟೆ ಮತ್ತು ಸಂಸ್ಕರಣಾ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜು ಶೆಟ್ಟಿ.

ರಾಜ್ಯದಲ್ಲಿ 33 ರಬ್ಬರ್ ಖರೀದಿ ಕೇಂದ್ರಗಳಿವೆ. ರಬ್ಬರ್ ಸೊಸೈಟಿಯ ಖರೀದಿ ಕೇಂದ್ರವಲ್ಲದೆ ಖಾಸಗಿಯವರೂ ಬೆಳೆಗಾರರಿಂದ ಖರೀದಿಸುತ್ತಿದ್ದಾರೆ. ಪುತ್ತೂರು, ಗುತ್ತಿಗಾರು, ಸಂಪಾಜೆ, ಪೆರಾಜೆ ಟಿಎಪಿಸಿಎಂಎಸ್‌ನಲ್ಲಿ ಖರೀದಿಸಲಾಗುತ್ತಿದೆ. ಉಜಿರೆ ರಬ್ಬರ್ ಸೊಸೈಟಿಯೇ ಸುಮಾರು 17 ಸಾವಿರ ಟನ್ ಖರೀದಿಸುತ್ತಿದೆ.


ರಬ್ಬರ್ ಶೀಟ್ ಮಾಡುವ ಪ್ರಕ್ರಿಯೆ

ರಬ್ಬರ್ ಗೆ ಬೆಂಬಲ ಬೆಲೆ: ಕೇಂದ್ರಕ್ಕೆ ರಾಜ್ಯದ ಶಿಫಾರಸು

ರಬ್ಬರ್ ಗೆ ಬೆಂಬಲ ಬೆಲೆ ನಿಗದಿಪಡಿಸುವ ಮತ್ತು ಕೃಷಿ ಹವಾಮಾನ ಆಧಾರಿತ ವಿಮೆ ಸೌಲಭ್ಯ ಒದಗಿಸಲು ಇರುವ ಸಾಧ್ಯತೆ ಬಗ್ಗೆ ರಬ್ಬರ್ ಮಂಡಳಿಯು ಕ್ರಮ ಕೈಗೊಳ್ಳಬೇಕಾಗುತ್ತದೆ. ಈ ಬಗ್ಗೆ ರಬ್ಬರ್ ಬೋರ್ಡ್‌ಗೆ ರಾಜ್ಯ ಸರ್ಕಾರದಿಂದ ಶಿಫಾರಸ್ಸು ಮಾಡಲಾಗುವುದು ಎಂದು ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ತಿಳಿಸಿದರು.

ವಿಧಾನ ಸಭೆಯ ಕಲಾಪದಲ್ಲಿ ಸುಳ್ಯ ಶಾಸಕಿ ಭಾಗೀರಥಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ವಾಣಿಜ್ಯ ಬೆಳೆಯಾದ ರಬ್ಬರ್‌ನ ಬೆಲೆ ವಿಷಯವು ಬಹುಪಾಲು ಕೇಂದ್ರ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ವ್ಯಾಪ್ತಿಗೆ ಒಳಪಡುತ್ತದೆ. ರಬ್ಬರ್ ಬೆಳೆಯುವ ರೈತರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದರು.


ಕೇರಳದಲ್ಲಿ ಸರ್ಕಾರದ ಪ್ರೋತ್ಸಾಹ ಧನ

ದೇಶದ ರಬ್ಬರ್ ಉತ್ಪಾದನೆಯಲ್ಲಿ ಅಗ್ರಸ್ಥಾನದಲ್ಲಿರುವ ಕೇರಳದಲ್ಲಿ ಅಲ್ಲಿನ ಸರ್ಕಾರ ರಬ್ಬರ್ ಮಾರುಕಟ್ಟೆಗೆ ಮಧ್ಯಪ್ರವೇಶ ಮಾಡಿ ಪ್ರೋತ್ಸಾಹ ಧನ ನೀಡುತ್ತಿದೆ. ಕೇರಳ ರಾಜ್ಯ ಸಚಿವ ಸಂಪುಟವು ರಬ್ಬರ್‌ಗೆ ಬೆಂಬಲ ಬೆಲೆಯನ್ನು ₹180ರಿಂದ ₹200ಕ್ಕೆ ಏರಿಕೆ ಮಾಡಿದ್ದು, ಈ ಬೆಂಬಲ ಬೆಲೆ ಕಳೆದ ವರ್ಷದ ನ.1ರಿಂದಲೇ ಜಾರಿಗೆ ಬಂದಿದೆ.

ರಬ್ಬರ್ ಉತ್ಪಾದನಾ ಪ್ರೋತ್ಸಾಹ ಯೋಜನೆಯ ಅನ್ವಯ ಈ ಕ್ರಮ ಕೈಗೊಂಡಿದೆ. 2024ರಲ್ಲಿ ಅಲ್ಲಿನ ಸರ್ಕಾರ ಮೂರು ವರ್ಷಗಳ ಬಳಿಕ ಬೆಂಬಲ ಬೆಲೆಯನ್ನು ₹170ರಿಂದ ₹180ಕ್ಕೆ ಏರಿಕೆ ಮಾಡಿತ್ತು. ಇದೇ ಮಾದರಿಯನ್ನು ಕರ್ನಾಟಕದಲ್ಲೂ ಜಾರಿಮಾಡಬೇಕು ಎಂಬ ಆಗ್ರಹ ಇದೆ.

ಆರ್‌ಎಸ್‌ಎಸ್ 4 ಮಾದರಿ ರಬ್ಬರ್‌ನ ಸರಾಸರಿ ಧಾರಣೆ

(ಪ್ರತಿ ಕ್ವಿಂಟಲ್‌ಗೆ)



ರಬ್ಬರ್‌ನಿಂದ ಹಲವು ಉಪಯೋಗಗಳಿವೆ. ತೋಟದಲ್ಲಿ ಜೇನು ಸಾಕಬಹುದು. ರಬ್ಬರ್ ಮರ ಸರಾಸರಿ 25 ವರ್ಷ ಇಳುವರಿ ಕೊಡುತ್ತದೆ. ಬಳಿಕ ಪೀಠೋಪಕರಣಕ್ಕೂ ಮರಗಳನ್ನು ಮಾರಾಟ ಮಾಡಬಹುದು. ಬೇರೆ ಬೆಳೆಯಲ್ಲಿ ಲಾಭ ಇದೆ ಎಂದು ಇದ್ದ ಮರವನ್ನು ಕಡಿಯಬಾರದು

ಡಯಾಸ್ ಚೆರಿಯನ್, ರಬ್ಬರ್ ಬೆಳೆಗಾರ, ಕೆರ್ವಾಶೆ

ಉಜಿರೆಯಲ್ಲಿ ನಡೆದ ಸಮಾವೇಶದಲ್ಲಿ ಎಲ್ಲ ಬೆಳೆಗಾರರಿಗೂ ಅಭಯ ನೀಡಿದ್ದೇವೆ. ನಮ್ಮ ಮನವಿಗೆ ಸಂಸದರು, ಶಾಸಕರು ಪೂರಕವಾಗಿ ಸ್ಪಂದಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಯಾರೂ ಭ್ರಮನಿರಸನ ಆಗುವ ಅಗತ್ಯ ಇಲ್ಲ. ತಾಳ್ಮೆ ವಹಿಸಿ ಒಂದೆರಡು ವರ್ಷ ಕಾಯಬೇಕು

ಅನಂತಭಟ್ ಎಂ., ಬೆಳ್ತಂಗಡಿ ತಾಲ್ಲೂಕು ರಬ್ಬರ್ ಬೆಳೆಗಾರರ ಸಂಘದ ಉಪಾಧ್ಯಕ್ಷ

ರಬ್ಬರ್ ಒಂದು ಕೃಷಿ ಉತ್ಪನ್ನ ಎಂದು ಕೇರಳ ಹೈಕೋರ್ಟ್ ತೀರ್ಪು ನೀಡಿದ್ದು, ಅಲ್ಲಿನ ಸರ್ಕಾರವೂ ಪ್ರೋತ್ಸಾಹ ಧನ ನೀಡುತ್ತಿದೆ. ರಬ್ಬರ್ ಕಾರ್ಯಪಡೆಯೂ ಇದನ್ನು ಕೃಷಿ ಉತ್ಪನ್ನ ಎಂದು ಪರಿಗಣಿಸಲು ಹೇಳಿದೆ. ರಬ್ಬರ್‌ಗೆ ಬೆಂಬಲ ಬೆಲೆಯೊಂದಿಗೆ ವಿಮೆ ಒದಗಿಸಬೇಕು

ಪ್ರೊ. ವಿಘ್ನೇಶ್ವರ ವರ್ಮುಡಿ, ಕೃಷಿ ಆರ್ಥಿಕ ತಜ್ಞ

1985ರ ಸಮಯದಲ್ಲಿ ಆರಂಭಗೊಂಡ ಉಜಿರೆಯಲ್ಲಿರುವ ಬೆಳ್ತಂಗಡಿ ತಾಲ್ಲೂಕು ರಬ್ಬರ್ ಬೆಳೆಗಾರರ ಮಾರುಕಟ್ಟೆ ಮತ್ತು ಸಂಸ್ಕರಣಾ ಸಹಕಾರ ಸಂಘವು ರಾಜ್ಯದಲ್ಲಿ ರಬ್ಬರ್‌ಗೆ ಸಂಬಂಧಿಸಿದ ಅತಿ ದೊಡ್ಡ ಸಂಸ್ಥೆಯಾಗಿದೆ. ರಬ್ಬರ್ ಬೆಳೆಗಾರರ ಹಿತ ಕಾಪಾಡಲು ಉಜಿರೆಯ ರಬ್ಬರು ಬೆಳೆಗಾರರ ಹಿತರಕ್ಷಣಾ ವೇದಿಕೆ ಮತ್ತು ರಾಜ್ಯ ಮಟ್ಟದ ರಬ್ಬರ್ ಬೆಳೆಗಾರರ ಸಂಘಟನೆ 'ಕೃಪಾ' ಕಾರ್ಯನಿರ್ವಹಿಸುತ್ತಿದೆ.

ಉತ್ಪಾದನಾ ವೆಚ್ಚ, ಟ್ಯಾಪರ್‌ಗಳ ಸಂಬಳ, ಆ್ಯಸಿಡ್, ಗೊಬ್ಬರ ಧಾರಣೆ ಏರುತ್ತಲೇ ಇದೆ. ಆದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯ ದರಕ್ಕಿಂತ ಕಡಿಮೆ ಬೆಲೆಗೆ ನಮ್ಮ ರಬ್ಬರ್ ಮಾರಾಟವಾಗುತ್ತಿದೆ. ರಬ್ಬರ್ ಬೆಲೆ ಕುಸಿಯಲು ನಿಖರ ಕಾರಣ ಏನು ಎಂಬುದು ತಿಳಿಯುತ್ತಿಲ್ಲ. ಟೈರ್ ಉತ್ಪಾದಕರು ಈಶಾನ್ಯ ರಾಜ್ಯಗಳಲ್ಲಿ ಭರಪೂರ ಕೊಡುಗೆಗಳನ್ನು ನೀಡಿ ರಬ್ಬರ್ ಬೆಳೆಸುತ್ತಿದ್ದಾರೆ ಎಂಬ ಆರೋಪವೂ ಇದೆ ಎನ್ನುವುದು ಬೆಳೆಗಾರರ ಮಾಹಿತಿ.

ಕಳ್ಳದಾರಿಯಲ್ಲಿ ದೇಶದ ಮಾರುಕಟ್ಟೆಗೆ ರಬ್ಬರ್ ಪ್ರವೇಶಿಸುತ್ತಿದೆ ಎಂಬ ಗುಮಾನಿ ಇದೆ. ಈ ಸಮಸ್ಯೆಯನ್ನು ಸರ್ಕಾರವೇ ನಿವಾರಿಸಬೇಕು. ಆಡಳಿತ ನಡೆಸುವವರೇ ಬೆಲೆ ಏರಿಕೆ ಮಾಡಿ ರಬ್ಬರ್ ಕೃಷಿಯನ್ನೂ ಬೆಳೆಗಾರರನ್ನೂ ಉಳಿಸಬೇಕು. ಇಲ್ಲದೆ ಇದ್ದರೆ ನಮ್ಮ ಪರಿಸ್ಥಿತಿ ಗಂಭೀರವಾಗಲಿದೆ ಎನ್ನುತ್ತಾರೆ ಸುಳ್ಯದ ಬೆಳೆಗಾರ ರವಿ.


ದೇಶದ ರಬ್ಬರ್ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು ಉತ್ಪಾದನೆ ಹೆಚ್ಚಿಸುವ ಅಗತ್ಯವಿದ್ದು, ತಮ್ಮ ಸಮಸ್ಯೆಗಳನ್ನು ಪರಿಹರಿಸಬೇಕು. ಪ್ರಸ್ತುತ ಸಿಗುತ್ತಿರುವ ಬೆಲೆಯಿಂದ ಬೆಳೆ ಉಳಿಸಿಕೊಳ್ಳಲೂ ಆಗದೆ ಸಂಕಷ್ಟ ಪಡುತ್ತಿರುವ ತಮ್ಮ ನೆರವಿಗೆ ಸರ್ಕಾರಗಳು ಬರಬೇಕು ಎಂಬುದು ಬೆಳೆಗಾರರ ಕಳಕಳಿಯ ಮನವಿ.


ಫ್ಯಾಕ್ಟರಿಯಲ್ಲಿ ರಬ್ಬರ್ ಉತ್ಪನ್ನಗಳ ತಯಾರಿಕೆ

ರಬ್ಬರ್ ಮಂಡಳಿಯಿಂದ ತರಬೇತಿ

ಕೇಂದ್ರ ಸರ್ಕಾರದ ರಬ್ಬರ್ ಮಂಡಳಿ ವ್ಯಾಪ್ತಿಯಲ್ಲಿ ರಾಜ್ಯದ ಮಂಗಳೂರು, ಪುತ್ತೂರು, ಶಿವಮೊಗ್ಗ, ಕುಂದಾಪುರದಲ್ಲಿ ಪ್ರಾದೇಶಿಕ ಕಚೇರಿಗಳಿವೆ. ಕಳೆದ ವರ್ಷಗಳಲ್ಲಿ ವಾರ್ಷಿಕವಾಗಿ ಸುಮಾರು 100 ಅರ್ಜಿಗಳು ಬೆಳೆ ವಿಸ್ತರಣೆ ಸಂಬಂಧ ಬರುತ್ತಿದ್ದವು. ಆದರೆ, ಈ ವರ್ಷ 50 ಅರ್ಜಿಗಳೂ ಬಂದಿಲ್ಲ. ರಬ್ಬರ್ ಟ್ಯಾಪರ್‌ಗಳ ಕೊರತೆ ಹಾಗೂ ಬೆಲೆಯಲ್ಲಿ ಇಳಿಕೆಯಾಗಿರುವುದೂ ಇದಕ್ಕೆ ಕಾರಣ ಇರಬಹುದು. ರಬ್ಬರ್ ಸೊಸೈಟಿಗಳ ಸಹಯೋಗದೊಂದಿಗೆ ರಬ್ಬರ್ ಬೆಳೆ ವಿಸ್ತರಣೆ ಮಾಡುವಂತೆ ಬೆಳೆಗಾರರನ್ನು ಪ್ರೇರೇಪಿಸಲಾಗುತ್ತಿದೆ. ರಬ್ಬರ್ ಬೋರ್ಡ್ ವತಿಯಿಂದಲೂ ಪ್ರತಿವರ್ಷ ತರಬೇತಿ ನೀಡಲಾಗುತ್ತಿದೆ. ಆದರೆ, ತರಬೇತಿಗೆ ಯುವ ರೈತರು ಬರುತ್ತಿಲ್ಲ. 50 ವರ್ಷ ವಯಸ್ಸಿಗಿಂತ ಹೆಚ್ಚಿನವರೇ ಬರುತ್ತಿದ್ದಾರೆ ಎನ್ನುತ್ತಾರೆ ರಬ್ಬರ್ ಮಂಡಳಿ ಅಧಿಕಾರಿಗಳು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 1-2-2001

• ಸಚಿವ ಟಿ. ಜಾನ್ ರಾಜೀನಾಮೆ

ಬೆಂಗಳೂರು, ಜ.31– ಗುಜರಾತಿನಲ್ಲಿ ಸಂಭವಿಸಿದ ಭೂಕಂಪಕ್ಕೆ ಸಂಬಂಧಿಸಿ ದಂತೆ ಶಾಲೆಯ ಸಮಾರಂಭ ಒಂದರಲ್ಲಿ ತಾವು ಆಡಿದ ಮಾತು ವಿವಾದಕ್ಕೆ ಎಡೆಮಾಡುವುದೆಂಬುದನ್ನು ಮನಗಂಡ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ವಿಮಾನಯಾನ ಸಚಿವ ಟಿ. ಜಾನ್ ಅವರು ಇಂದು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ಗುಜರಾತ್‌ನಲ್ಲಿ ಕ್ರೈಸ್ತ ಸಮುದಾಯದ ಮೇಲೆ ನಡೆದ ದೌರ್ಜನ್ಯ, ಚರ್ಚ್‌ಗಳ ಧ್ವಂಸ ಮಾಡಿದ ಪರಿಣಾಮವಾಗಿ ಅಲ್ಲಿ ಭೂಕಂಪ ಸಂಭವಿಸಿ ಸಾವಿರಾರು ಮಂದಿ ಸತ್ತಿದ್ದಾರೆ ಎಂಬ ಜಾನ್ ಅವರ ಹೇಳಿಕೆಗೆ ತೀವ್ರ ಆಕ್ರೋಶ ವ್ಯಕ್ತವಾಗಿತ್ತು.

75 ವರ್ಷಗಳ ಹಿಂದೆ

ಗುರುವಾರ, 1-2-1951

• ಕಾಲ ಮಿಂಚುವ ಮುನ್ನವೆ ಎಚ್ಚೆತ್ತುಕೊಳ್ಳಿ: ನೆಹರೂ

ಅಹ್ಮದಾಬಾದ್, ಜ. 30– 'ವೇಗದಿಂದ ಕಾಂಗ್ರೆಸ್ಸಿನ ಸತ್ವ ಕರಗಿಹೋಗುತ್ತಿದೆ, ಕಾಲ ಮೀರುವ ಮುನ್ನವೇ ಕಾಂಗ್ರೆಸ್ಸಿಗರು ಎಚ್ಚೆತ್ತುಕೊಳ್ಳಬೇಕಾದದ್ದು ಅಗತ್ಯ' ಎಂಬುದಾಗಿ ಪ್ರಧಾನಿ ಪಂಡಿತ್ ನೆಹರೂ ಅವರು ಇಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧಿವೇಶನದಲ್ಲಿ ನುಡಿದರು.

ಕಾರ್ಯ ಸಮಿತಿಯ ನಿರ್ಣಯವನ್ನು ಮಂಡಿಸುತ್ತ ನೆಹರೂ ಅವರು, 'ಜನತೆಯ ಮನ್ನಣೆಗೆ ಪಾತ್ರವಾಗಿ ಕೋಟ್ಯಾಂತರ ಜನತೆಯ ಸಹಕಾರ ತರಬಲ್ಲಂಥ ಯೋಜನೆಯನ್ನು ಸಿದ್ಧಗೊಳಿಸಬೇಕಾದ್ದೆ ಇಂದು ಕಾಂಗ್ರೆಸ್ಸಿನ ಪ್ರಥಮ ಕರ್ತವ್ಯ' ಎಂದು ಆದೇಶಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

01 ಫೆಬ್ರವರಿ 2026 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು, ತಿಥಿ: ಮಾಘ ಶುಕ್ಲ ಪೂರ್ಣಿಮಾ ಗಂ.27-39, **ನಕ್ಷತ್ರ:** ಪುಷ್ಯ ಗಂ. 23-58, **ಯೋಗ:** ಪ್ರೀತಿ ಗಂ. 10-19, **ಕರಣ:** ವಿಷ್ಟಿ ಗಂ. 16-43 ಮಕರ ಮಾಸದ 18 ನೇ ದಿನ. **ಮಳೆ ನಕ್ಷತ್ರ:** ಶ್ರವಣ 3 ನೇ ಪಾದ. **ರಾಹುಕಾಲ:** ಬೆಳಿಗ್ಗೆ 09-00 - 10-30, **ಸೂರ್ಯೋದಯ:** 07-01, **ಸೂರ್ಯಾಸ್ತ:** 06-27. **ಮುಸ್ಲಿಂ ದಿನಾಂಕ:** 12 ಶಬನ್, **ಅದೃಷ್ಟ ಸಂಖ್ಯೆ:** 6, 5

ಮೇಷ: ನೀವು ಖರೀದಿಸಿದ ನಿವೇಶನ ಈಗ ಮಾರುವುದಾದರೆ ಉತ್ತಮ ಬೆಲೆಗೆ ಮಾರಾಟ ಆಗುವುದು. ಮನೆಯಲ್ಲಿ ಸಂತೋಷದ ವಾತಾವರಣವು ಇರಲಿದೆ. ಗುರಿ ಸಾಧಿಸಲು ಕೆಲ ಹೊಸ ಬದಲಾವಣೆಗಳು ಅನಿವಾರ್ಯ ಎನಿಸಲಿದೆ.

ವೃಷಭ: ಉದ್ಯೋಗದಲ್ಲಿ ನಿಮ್ಮೊಂದಿಗೆ ಸೆಣಸಾಡಲು ಬಂದವರನ್ನು ಕ್ರೀಡಾ ಸ್ಫೂರ್ತಿಯಿಂದ ಸ್ವೀಕರಿಸಿ. ನಿಮ್ಮ ಕೆಲಸಗಳಲ್ಲಿ ಯಾವುದೇ ವಿಘ್ನಗಳು ಎದುರಾದರೂ ಅದು ಕ್ಷಣ ಮಾತ್ರದ್ದಾಗಿರುತ್ತದೆ.

ಮಿಥುನ: ಮೈಬಣ್ಣದ ಕಾರಣಕ್ಕೆ ಸಂಬಂಧದಲ್ಲಾಗಲಿ, ವ್ಯವಹಾರದಲ್ಲಾಗಲಿ ಯಾರನ್ನೂ ಕಡೆಗಣಿಸಬೇಡಿ. ಆರೋಗ್ಯಕ್ಕಿಂತ ಹಣ ಮುಖ್ಯ ಎನ್ನುವ ನಿಮ್ಮ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕಾಗುವುದು.

ಕರ್ಕಾಟಕ: ನೀವು ಯಾವುದೇ ಕಾರಣಕ್ಕೂ ಸೋಲನ್ನು ಒಪ್ಪದೇ ಇರುವುದರಿಂದ ಹಿಡಿದಂತಹ ಕಾರ್ಯಗಳಲ್ಲಿ ಜಯ ಸಾಧಿಸುವಿರಿ. ನಿಮ್ಮ ವೃತ್ತಿ ಜೀವನವು ಅಭಿವೃದ್ಧಿಯ ಪಥದಲ್ಲಿ ಸಾಗಲಿದೆ.

ಸಿಂಹ: ವಿದ್ಯಾರ್ಥಿಗಳು ಏಕಾಗ್ರತೆಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವಿರಿ. ಬಂದಂತಹ ಫಲಿತಾಂಶವು ನಿರೀಕ್ಷೆಗಿಂತ ಹೆಚ್ಚಿನ ಸಂತೋಷವನ್ನು ನೀಡುವುದು.

ಕನ್ಯಾ: ಮನೆಯಲ್ಲಿನ ಆರ್ಥಿಕ ಸ್ಥಿತಿಗತಿಯನ್ನು ಗಮನಿಸಿದ ನೀವು ಪ್ರತಿಯೊಂದು ರೂಪಾಯಿಯನ್ನು ಖರ್ಚು ಮಾಡುವಾಗ ಅನೇಕ ಬಾರಿ ಯೋಚಿಸುವಿರಿ. ಲೇಖಕರಿಗೆ ಜನ ಸಂಪರ್ಕ ಅಭಿವೃದ್ಧಿಯಾಗಲಿದೆ.

ತುಲಾ: ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ಸಹೋದರನಲ್ಲಿ ಹೇಳಿಕೊಂಡಾಗ ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ಸಹಾಯ ದೊರೆಯಲಿದೆ. ಮಾತಿಗಿಂತ ಕೃತಿ ಮುಖ್ಯ ಎನ್ನುವ ರೀತಿಯಲ್ಲಿ ನಿಮ್ಮ ಸಾಮರ್ಥ್ಯ ತೋರಿಬರಲಿದೆ.

ವೃಶ್ಚಿಕ: ನಿಮ್ಮ ಕೆಲಸಗಳಿಗೆ ಹೆಚ್ಚಿನ ಸಾಮಾಜಿಕ ಸಹಕಾರ ಸಿಗುವುದು. ಉತ್ಪಾದನಾ ಕೆಲಸಗಳು ಚುರುಕುಗತಿಯಿಂದ ಸಾಗುವುದು ಲಾಭವನ್ನು ತರಲಿದೆ. ಮದುವೆಯ ನಿಮಿತ್ತವಾಗಿ ಒಡವೆಗಳ ಖರೀದಿ ಮಾಡುವಿರಿ.

ಧನು: ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ಏಕೆಂದರೆ ನಿಮ್ಮ ಮೇಲಿರುವ ವಿಶ್ವಾಸದಿಂದಾಗಿ ಹಲವಾರು ಅವಕಾಶಗಳು ನಿಮ್ಮದಾಗಲಿವೆ. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿಯ ಕರೆಯೋಲೆ ಬರಬಹುದು.

ಮಕರ: ರಾಸಾಯನಿಕ ವಸ್ತುಗಳ ರಫ್ತು ವ್ಯಾಪಾರವನ್ನು ಮಾಡುವವರಿಗೆ ರಫ್ತು ಕಾರ್ಯದಲ್ಲಿ ಕೆಲವು ತಾಪತ್ರಯಗಳು ಕಾಣಿಸಿಕೊಳ್ಳಲಿವೆ. ಅನಾವಶ್ಯಕವಾಗಿ ಯಾರನ್ನೂ ಟೀಕಿಸುವುದು ಸರಿಯಲ್ಲ.

ಕುಂಭ: ಅಚ್ಚುಕಟ್ಟಾದ ಕೆಲಸಗಳಿಂದ ಮೇಲಾಧಿಕಾರಿಗಳಿಗೆ ನಿಮ್ಮ ಮೇಲಿನ ವಿಶ್ವಾಸ ಹೆಚ್ಚಲಿದೆ. ಬುದ್ಧಿಶಕ್ತಿಯನ್ನು ಒಳ್ಳೆಯ ಕೆಲಸಗಳಿಗಾಗಿ ಉಪಯೋಗಿಸಿಕೊಂಡಲ್ಲಿ ಯಶಸ್ಸು ಪಡೆಯುವಿರಿ.

ಮೀನ: ಹಣಕಾಸು ಸಂಸ್ಥೆಗಳನ್ನು ನಡೆಸುವವರಿಗೆ ನಷ್ಟ ಸಂಭವಿಸಲಿದೆ. ಆಫೀಸಿನ ಕಾರ್ಯದಲ್ಲಿ ಎಲ್ಲರ ಮಾತನ್ನು ತಾಳ್ಮೆಯಿಂದ ಕೇಳಿ. ಮಗನ ಪ್ರಬುದ್ಧತೆಯಿಂದ ನಿಮ್ಮ ಹೆಗಲ ಭಾರ ಕಡಿಮೆಯಾಗುತ್ತದೆ.

ಪದಬಂಧ 6302


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಜರಿಯದೇ ವಹಿಸಿಕೊಂಡ ಹೊಣೆಗಾರಿಕೆ (4)
5.ತೊಡಕು ಹೀಗೆ ಬಂದಿದೆ (3)
6.ವೇದೋಕ್ತ ವಿಧಿಗಳನ್ನು ಮಾಡಿಸುವವನು (4)
7.ರೋಗದೊಡಗೂಡುವ ಪದ (3)
9.ಮಾಂಸಾಹಾರಿಯಾದ ಪಕ್ಷಿ (3)
10.ದರ ನೀಡಿ ನೋಡಿದ ದಾಖಲೆ ಪುಸ್ತಕ (3)
11.ದುಷ್ಟ ಇಲ್ಲಿದ್ದಾನೆ (3)
13.ಕಡ ಪಡೆದು ಖರೀದಿಸಿರುವ ಚಿನ್ನ (4)
15.ಈತ ಕಬ್ಬಿಣದ ಕೆಲಸಗಾರ (3)
16.ಸೂಕ್ಷ್ಮವಾದ ಎಳೆಯಿದು (4)

ಮೇಲಿಂದ ಕೆಳಕ್ಕೆ

1.ಮರು ದಿನ ತಿಳಿದ ಸಮಾಚಾರ (4)
2.ಜಟಿಲತೆಯಿಂದ ಸಂಗ್ರಹಿಸಿದ ನೀರು (2)
3.ಪುರಿಯೊಳಗಡಗಿರುವ ಶತ್ರು (2)
4.ಬಹಿರಂಗವಲ್ಲದ್ದು (4)
8.ಕಾರನ್ನೇರಿ ನಿರಾಕರಿಸುವಿಕೆ! (3)
9.ಗಿಲಿ ಗಿಲಿ ಶಬ್ದ ಮಾಡುವ ಚಿಕ್ಕ ಮಕ್ಕಳ ಆಟಿಕೆ (3)
10.ಕತ್ತು ಬಗ್ಗಿಸಿ ಹಾಕಿದ ಸಹಿ (4)
12.ಸರವನ್ನು ಧರಿಸಿಕೊಂಡು ಮಾಡಿದ ವ್ಯಾಯಾಮ (4)
14.ನಗರದಲ್ಲಿರುವ ಮನುಷ್ಯ ತಿರುಗಿದ್ದಾನಲ್ಲಾ! (2)
15.ಮುಖ್ಯ ಬೆಳೆಯ ನಡುವೆ ಬೆಳೆಯುವ ಹುಲ್ಲು (2)



6301ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕರ್ಣಧಾರ 3.ಮಹಿಷ 5.ಸುದಾಮ 7.ಉಯಿಲು 8.ಕುತ್ತು 9.ವಿರಹತಾಪ 11.ಪ್ರಭೆ 12.ಸಾರಣೆ 13.ಧಿಮಾಕು 16.ನಗರ 17.ಖಡ್ಗಧಾರೆ

ಮೇಲಿಂದ ಕೆಳಕ್ಕೆ:
1.ಕಡಸು 2.ರಫ್ತು 3.ಮಡಿಲು 4.ಷರಬತ್ತು 6. ಮನವಿ 7.ಉದಾಹರಣೆ 10.ಪರಿಧಿ 11.ಪ್ರಹಸನ 12.ಸಾವಿರ 14.ಕುದುರೆ 15.ಸಖ

ಸುಡೊಕು 6686

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2			6	7	4		
3		4					7	2
	7			4	8		6	3
	4			3			8	
8		9		7				
	5		8		4		9	7
2				9		7	3	
		3						
6			4			5		9

6685 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074, News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hospete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತ್ರಿವಳಿ ಕೊಲೆ: ಮನೆಯಲ್ಲೇ ಹೂತಿಟ್ಟ ಪುತ್ರ

ವಿಜಯನಗರ ಜಿಲ್ಲೆ ಕೊಟ್ಟೂರಿನಲ್ಲಿ ಕೃತ್ಯ • ತಂದೆ–ತಾಯಿ, ತಂಗಿ ಹತ್ಯೆ

ಪ್ರಜಾವಾಣಿ ವಾರ್ತೆ


ಅಕ್ಷಯ್


ಭೀಮರಾಜ್


ಜಯಮ್ಮ


ಅಮೃತಾ

ಕೊಟ್ಟೂರು (ವಿಜಯನಗರ ಜಿಲ್ಲೆ): ಮೂವರ ನಾಪತ್ತೆ ಪ್ರಕರಣದ ನಿಗೂಢತೆ ಶನಿವಾರ ಬಯಲಾಗಿದೆ. ಇಲ್ಲಿನ ಲಾಲ್ ಬಹಾದ್ದೂರ್ ಶಾಸ್ತ್ರಿ ಬಡಾವಣೆಯ ವಾಸವಿದ್ದ ಬಾಡಿಗೆ ಮನೆಯಲ್ಲಿ ತೋಡಿದ್ದ ಗುಂಡಿಯಲ್ಲಿ ದಂಪತಿ, ಅವರ ಪುತ್ರಿಯ ಶವಗಳು ಪತ್ತೆಯಾದವು.

'ನಾಪತ್ತೆಯಾಗಿದ್ದಾರೆ ಎಂದು ಈ ಮೊದಲು ದೂರು ನೀಡಿದ್ದ ದಂಪತಿಯ ಪುತ್ರ ಅಕ್ಷಯ್ ಕುಮಾರ್‌ನನ್ನು ಸ್ಥಳಕ್ಕೆ ಕರೆತಂದ ಬೆಂಗಳೂರಿನ ಪೊಲೀಸರು, ಆತ ತೋರಿಸಿದ ಕಡೆ ಉಪ ವಿಭಾಗಾಧಿಕಾರಿ ಸಮಕ್ಷಮದಲ್ಲಿ ಮಣ್ಣು ಸರಿಸಿ, ಪರಿಶೀಲಿಸಿದರು. ಆಗ ಆತನ ತಂದೆ ಭೀಮರಾಜ್ (48), ತಾಯಿ ಜಯಮ್ಮ (44) ಮತ್ತು ತಂಗಿ ಅಮೃತಾ (18) ಅವರ ಶವಗಳು ಕಾಣಿಸಿದವು' ಎಂದು ಎಸ್‌ಪಿ ಎಸ್.ಜಾಹ್ನವಿ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಮೊದಲಿಗೆ ಜಯಮ್ಮ ಶವ, ಬಳಿಕ ಅಮೃತಾ ಶವ ಮತ್ತು ಕೊನೆಯಲ್ಲಿ ಭೀಮರಾಜ್ ಶವ ಇಡಲಾಗಿತ್ತು. ಭೀಮರಾಜ್ ಶವವನ್ನು ಇಡಲಾಗದೇ, ತೊಡೆಯ ಭಾಗವನ್ನು ಕತ್ತರಿಸಿ ತುಂಬಿಸಲಾಗಿತ್ತು. ಜನವರಿ 27ರಂದು ಈ ಕೊಲೆ ನಡೆದಿರುವ ಸಾಧ್ಯತೆ ಇದೆ' ಎಂದರು.

ಇಬ್ಬರ ಹೆಸರು: 'ತಂದೆ, ತಾಯಿ, ತಂಗಿ ನಾಪತ್ತೆಯಾಗಿದ್ದಾರೆ ಎಂದು ಆರೋಪಿ ಮೊದಲಿಗೆ ದೂರು ನೀಡಿದ್ದ. ಆತನ ವರ್ತನೆಯಲ್ಲಿ ಸಂಶಯ ಬಂದ ಕಾರಣ ತಿಲಕ್‌ನಗರ ಪೊಲೀಸರು ವಿಚಾರಣೆ ನಡೆಸಿದ್ದರು. ತಿಲಕ್‌ನಗರ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ. ಎಫ್‌ಐಆರ್‌ನಲ್ಲಿ ಇಬ್ಬರ ಹೆಸರು ಉಲ್ಲೇಖ ಇದೆ' ಎಂದು ತಿಳಿಸಿದರು.

ಮರಣೋತ್ತರ ಪರೀಕ್ಷೆ ನಡೆಸಿ ಶವಗಳನ್ನು ಸಂಬಂಧಿಕರಿಗೆ ಒಪ್ಪಿಸಲಾಯಿತು. ಮತ್ತೊಂದೆಡೆ ಆರೋಪಿಯನ್ನು ಪೊಲೀಸರು ಹೆಚ್ಚಿನ ವಿಚಾರಣೆಗೆ ಬೆಂಗಳೂರಿಗೆ ಕರೆದೊಯ್ದರು.

> **ಮೂವರನ್ನು ಕೊಂದಿದ್ದು ಹೇಗೆ, ಯಾವಾಗ ಮತ್ತು ಕಾರಣವೇನು ಎಂಬುದು ತನಿಖೆಯಿಂದ ಗೊತ್ತಾಗಬೇಕಿದೆ. ಸದ್ಯ ಬೆಂಗಳೂರಿನ ತಿಲಕ್‌ನಗರ ಠಾಣೆ ಪೊಲೀಸರೇ ತನಿಖೆ ನಡೆಸುತ್ತಿದ್ದಾರೆ**
>
> **ಎಸ್.ಜಾಹ್ನವಿ** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಹತ್ಯೆಗೆ ಹಣ ಕಾರಣ?

ಜಗಳೂರಿನಲ್ಲಿದ್ದ ಭೀಮರಾಜ್ ಅವರಿಗೆ ಸೇರಿದ ಆಸ್ತಿಯೊಂದನ್ನು ಈಚೆಗೆ ಮಾರಾಟ ಮಾಡಿದ್ದು, ₹1.50 ಕೋಟಿ ಹಣ ಬಂದಿತ್ತು. ಅದನ್ನು ನೀಡುವಂತೆ ಅಕ್ಷಯ್ ಕುಮಾರ್ ಕೇಳಿದ್ದ. ಆತ ದುಶ್ಚಟಗಳಿಗೆ ದಾಸನಾಗಿದ್ದರಿಂದ ಹಣ ಕೊಡಲು ಪೋಷಕರು ಒಪ್ಪಿರಲಿಲ್ಲ. 'ಮಗಳ ಮದುವೆ, ನಮ್ಮ ಖರ್ಚಿಗೆ ಬೇಕು' ಎಂದು ತಮ್ಮಲ್ಲೇ ಇಟ್ಟುಕೊಂಡಿದ್ದರು. ಇದರಿಂದ ಸಿಟ್ಟಿಗೆದ್ದು, ಇನ್ನೊಬ್ಬರ ನೆರವು ಪಡೆದು ಕೊಲೆ ನಡೆಸಿರಬೇಕು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸ್ಫೋಟ: ವಿದ್ಯಾರ್ಥಿಗೆ ಗಂಭೀರ ಗಾಯ

ವಿಜಯಪುರ(ದೇವನಹಳ್ಳಿ): ಇಲ್ಲಿನ ಉರ್ದು ಪ್ರಾಥಮಿಕ ಬಾಲಕರ ಶಾಲೆಯ ಶೌಚಾಲಯದಲ್ಲಿ ಶನಿವಾರ ಸಂಭವಿಸಿದ ಸ್ಫೋಟದಲ್ಲಿ ವಿದ್ಯಾರ್ಥಿಯೊಬ್ಬ ಗಂಭೀರವಾಗಿ ಗಾಯಗೊಂಡಿದ್ದಾನೆ.

7ನೇ ತರಗತಿಯ ವಿದ್ಯಾರ್ಥಿ ಶೌಚಾಲಯಕ್ಕೆ ಹೋಗಿದ್ದ. ಸ್ವಲ್ಪ ಹೊತ್ತಿನಲ್ಲಿಯೇ ಶೌಚಾಲಯದ ಒಳಗಿಂದ ಸ್ಫೋಟದ ಭಾರಿ ಸದ್ದು ಕೇಳಿ ಬಂದಿದೆ. ಸಹಪಾಠಿಗಳು ಹೋಗಿ ನೋಡಿದಾಗ ವಿದ್ಯಾರ್ಥಿ ಬಟ್ಟೆ ಹಾಗೂ ಮೈಕೈಗೆ ಬೆಂಕಿ ತಗುಲಿತ್ತು. ಕೂಡಲೇ ಶಿಕ್ಷಕರಿಗೆ ವಿಷಯ ತಿಳಿಸಿದ್ದಾರೆ.

ಶೌಚಾಲಯಕ್ಕೆ ಧಾವಿಸಿದ ಶಿಕ್ಷಕರು ಬೆಂಕಿ ನಂದಿಸಿದ್ದು, ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ತುರ್ತು ಚಿಕಿತ್ಸೆ ಕೊಡಿಸಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಆತನನ್ನು ದೇವನಹಳ್ಳಿಯ ಆಕಾಶ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಿದ್ಯಾರ್ಥಿ ಮೊದಲು ಶಾಲೆಯ ಪ್ರಯೋಗಾಲಯದ ಕೊಠಡಿಗೂ ಹೋಗಿದ್ದ. ಪ್ರಯೋಗಾಲಯ ಅಥವಾ ಹೊರಗಿನಿಂದ ತಂದಿದ್ದ ರಾಸಾಯನಿಕ ವಸ್ತುವನ್ನು ಶೌಚಾಲಯದ ಒಳಗೆ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡುವಾಗ ಸ್ಫೋಟ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ವಿದ್ಯಾರ್ಥಿಯ ತಂದೆ ವೆಲ್ಡಿಂಗ್ ಶಾಪ್‌ನಲ್ಲಿ ಕೆಲಸ ಮಾಡುತ್ತಾರೆ.

ಸ್ಫೋಟ ಕೃತ್ಯದಿಂದ ಸ್ಥಳದಲ್ಲಿ ಆತಂಕ ಮೂಡಿತ್ತು. ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿಯೂ ಸ್ಥಳಕ್ಕೆ ಧಾವಿಸಿದ್ದರು. ಈ ಕುರಿತು ಪ್ರಕರಣ ದಾಖಲಾಗಿದೆ.

'ಗುಂಡು ಹೊಡೆದ್ರಾ, ಹೊಡೆದುಕೊಂಡ್ರಾ?'

ಪ್ರಜಾವಾಣಿ ವಾರ್ತೆ


ಪ್ರದೀಪ್ ಈಶ್ವರ್

ಕನಕಪುರ (ರಾಮನಗರ): 'ಉದ್ಯಮಿ ಸಿ.ಜೆ. ರಾಯ್ ಅವರೇ ಗುಂಡು ಹೊಡೆದುಕೊಂಡ್ರಾ ಅಥವಾ ಯಾರಾದರೂ ಹೊಡೆದ್ರಾ? ಸ್ಥಳದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಇಲ್ಲ. ಅಲ್ಲಿದ್ದವರು ತೆರಿಗೆ ಇಲಾಖೆಯವರು ಮಾತ್ರ' ಎಂದು ಶಾಸಕ ಪ್ರದೀಪ್ ಈಶ್ವರ್ ಅನುಮಾನ ವ್ಯಕ್ತಪಡಿಸಿದ್ದಾರೆ.

ಶನಿವಾರ ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಒಳಗಡೆ ಏನಾಗಿದೆಯೊ?. ನನಗಿರುವ ಮಾಹಿತಿ ಪ್ರಕಾರ ಬಿಜೆಪಿಯವರು ಚುನಾವಣೆಗೆ ದುಡ್ಡು ಕೇಳಿದ್ದಾರೆ. ಹಣ ಕೊಡದಿದ್ದಕ್ಕೆ ಟಾರ್ಗೆಟ್ ಮಾಡಿದ್ದಾರೆ. ಇಂತಹ ಭ್ರಷ್ಟ ಬಿಜೆಪಿಯಿಂದ ದೇಶ ಅಭಿವೃದ್ಧಿಯಾಗಲ್ಲ' ಎಂದು ಹೇಳಿದರು.

'ಬಿಜೆಪಿಯ ಅಶೋಕಣ್ಣ, ಸುನೀಲಣ್ಣ, ಯತ್ನಾಳ್ ಹಾಗೂ ಮೈಸೂರಿನ ಒಬ್ಬರು ಎಲ್ಲದಕ್ಕೂ ಬಾಯಿ ಬಡಿದುಕೊಳ್ಳುತ್ತಾರೆ. ಇದರ ಬಗ್ಗೆ ಏಕೆ ಬಾಯಿ ಬಿಡುತ್ತಿಲ್ಲ?. ರಾಯ್ ಅವರಿಗೆ ಸಾಲ ಅಥವಾ ಯಾವುದೇ ಸಮಸ್ಯೆ ಇರಲಿಲ್ಲ. ಐ.ಟಿ ತಿಂಗಳಿಂದ ಅವರಿಗೆ ಕಿರುಕುಳ ನೀಡಿದೆ' ಎಂದು ಟೀಕಿಸಿದರು.

ರಾಯ್ ಆತ್ಮಹತ್ಯೆ: ತನಿಖೆಗೆ ಎಸ್‌ಐಟಿ

ಒಂದನೇ ಪುಟದಿಂದ...

'ತನಿಖೆಗೆ ಅವಶ್ಯವಿರುವ ಹೆಚ್ಚುವರಿ ಅಧಿಕಾರಿಗಳು, ಸಂಪನ್ಮೂಲಗಳನ್ನು ತಂಡಕ್ಕೆ ಸೇರಿಸಿಕೊಳ್ಳುವ ಅಧಿಕಾರವನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ನೀಡಲಾಗಿದೆ. ಕಾನೂನುಬದ್ಧ ಹಾಗೂ ಪರಿಣಾಮಕಾರಿಯಾಗಿ ತನಿಖೆ ನಡೆಸಿ ಶೀಘ್ರದಲ್ಲೇ ವರದಿ ಸಲ್ಲಿಸುವಂತೆ ತಂಡಕ್ಕೆ ಸೂಚಿಸಲಾಗಿದೆ' ಎಂದು ಸೀಮಾಂತ್‌ಕುಮಾರ್ ಸಿಂಗ್ ಹೇಳಿದರು.

ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು 'ಕಾನ್ಫಿಡೆಂಟ್ ಗ್ರೂಪ್'ನ ಕಚೇರಿಯಲ್ಲಿ ಇರುವ ಸಂದರ್ಭದಲ್ಲಿಯೇ ಶುಕ್ರವಾರ ಮಧ್ಯಾಹ್ನ 3.15ರ ಸುಮಾರಿಗೆ ತಮ್ಮ ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡು ರಾಯ್ ಆತ್ಮಹತ್ಯೆ ಮಾಡಿಕೊಂಡಿದ್ದರು. ಕೇರಳ, ಕರ್ನಾಟಕ, ದುಬೈನಲ್ಲಿ ರಾಯ್ ಅವರು ರಿಯಲ್ ಎಸ್ಟೇಟ್ ಉದ್ಯಮ ನಡೆಸುತ್ತಿದ್ದರು.

ರಾಯ್ ಅವರ ಮೊಬೈಲ್, ಲ್ಯಾಪ್‌ಟಾಪ್ ಹಾಗೂ ಡೈರಿಯನ್ನು ವಶಕ್ಕೆ ಪಡೆದುಕೊಂಡಿರುವ ಪೊಲೀಸರು, ಅವುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ಅದರ ವರದಿ ನಿರೀಕ್ಷೆಯಲ್ಲಿದ್ದಾರೆ.



> **ತನಿಖೆ ಬಳಿಕ ರಾಯ್ ಆತ್ಮಹತ್ಯೆಗೆ ಕಾರಣ ಗೊತ್ತಾಗಲಿದೆ. ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಬೇಕೇ ಬೇಡವೇ ಎಂಬುದನ್ನು ಎಸ್‌ಐಟಿ ನಿರ್ಧರಿಸಲಿದೆ**
>
> **ಜಿ. ಪರಮೇಶ್ವರ**
> ಗೃಹ ಸಚಿವ

ಎಸ್‌ಐಟಿಯಲ್ಲಿರುವ ಅಧಿಕಾರಿಗಳು

- ಪಶ್ಚಿಮ ವಲಯದ ಜಂಟಿ ಪೊಲೀಸ್ ಕಮಿಷನರ್ ಸಿ.ವಂಶಿಕೃಷ್ಣ (ತಂಡದ ನೇತೃತ್ವ)
- ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ್ (ತನಿಖಾಧಿಕಾರಿ)
- ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಎಂ. ಹಾಕೇ
- ಹಲಸೂರು ಗೇಟ್ ಉಪ ವಿಭಾಗದ ಎಸಿಪಿ ಸುಧೀರ್
- ಸಿಸಿಆರ್‌ಬಿಯ ಎಸಿಪಿ ರಾಮಚಂದ್ರ
- ಅಶೋಕನಗರ ಇನ್‌ಸ್ಪೆಕ್ಟರ್ ಕೆ.ಬಿ.ರವಿ


ಸಿ.ವಂಶಿಕೃಷ್ಣ

ಸ್ಥಳ ಮಹಜರು, ಸಿಬ್ಬಂದಿ ವಿಚಾರಣೆ

ಪ್ರಕರಣವು ಎಸ್‌ಐಟಿಗೆ ವರ್ಗಾವಣೆಯಾದ ಬೆನ್ನಲ್ಲೇ ತನಿಖೆ ಮತ್ತಷ್ಟು ಚುರುಕು ಪಡೆದಿದೆ. ಎಸ್‌ಐಟಿ ಅಧಿಕಾರಿಗಳು ಶನಿವಾರ ರಾತ್ರಿಯೇ ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ 'ಕಾನ್ಫಿಡೆಂಟ್ ಗ್ರೂಪ್'ನ ಕಚೇರಿಗೆ ಭೇಟಿ ನೀಡಿ ಮಹಜರು ನಡೆಸಿದರು. ಅಲ್ಲದೇ ಕಚೇರಿ ಸಿಬ್ಬಂದಿಯಿಂದಲೂ ಹೇಳಿಕೆ ದಾಖಲಿಸಿಕೊಂಡಿದ್ದಾರೆ ಎಂದು ಗೊತ್ತಾಗಿದೆ.

ಸಮಗ್ರ ತನಿಖೆಗೆ ಸಿಪಿಎಂ, ಯುಡಿಎಫ್ ಒತ್ತಾಯ

ತಿರುವನಂತಪುರ (ಪಿಟಿಐ): ರಿಯಲ್ ಎಸ್ಟೇಟ್ ಕಂಪನಿಯಾದ 'ಕಾನ್ಫಿಡೆಂಟ್ ಗ್ರೂಪ್' ಮುಖ್ಯಸ್ಥ ಸಿ.ಜೆ.ರಾಯ್ ಅವರ ಸಾವಿನ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಕೇರಳದ ಆಡಳಿತಾರೂಢ ಸಿಪಿಎಂ ಮತ್ತು ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳ ಒಕ್ಕೂಟ ಯುಡಿಎಫ್ ಶನಿವಾರ ಒತ್ತಾಯಿಸಿವೆ.

ಸಿಪಿಎಂ ರಾಜ್ಯ ಕಾರ್ಯದರ್ಶಿ ಎಂ.ವಿ. ಗೋವಿಂದನ್, ರಾಜ್ಯಸಭಾ ಸದಸ್ಯ ಎ.ಎ.ರಹೀಮ್ ಮತ್ತು ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಅವರು ರಾಯ್ ಅವರ ಸಾವಿನ ಹಿಂದಿನ ಕಾರಣಗಳ ಪತ್ತೆಗೆ ತನಿಖೆ ಕೈಗೊಳ್ಳಬೇಕಿದೆ ಎಂದು ಅಭಿಪ್ರಾಯಪಟ್ಟರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಗೋವಿಂದನ್, 'ಆದಾಯ ತೆರಿಗೆ ಇಲಾಖೆ (ಐ.ಟಿ) ಸೇರಿದಂತೆ ಕೇಂದ್ರದ ಸಂಸ್ಥೆಗಳ ಅಧಿಕಾರಿಗಳು ಶೋಧಕಾರ್ಯ ನಡೆಸುವಾಗ ಮಾನವೀಯ ರೀತಿಯಲ್ಲಿ ಏಕೆ ವರ್ತಿಸುತ್ತಿಲ್ಲ' ಎಂದು ಪ್ರಶ್ನಿಸಿದರು. 'ಉದ್ಯಮಿಯ ಸಾವಿನ ಹಿಂದೆ 'ನಿಗೂಢತೆ' ಇದ್ದು, ಆ ಬಗ್ಗೆ ತನಿಖೆ ನಡೆಯಬೇಕು. ಐ.ಟಿ ಅಧಿಕಾರಿಗಳ ಕೈಯಲ್ಲಿ ಅವರು ಯಾವ ರೀತಿಯ ಕಿರುಕುಳ ಎದುರಿಸಿದರು ಎಂಬುದು ಸ್ಪಷ್ಟವಾಗಿಲ್ಲ' ಎಂದು ವಿ.ಡಿ. ಸತೀಶನ್ ಹೇಳಿದ್ದಾರೆ.

ಉದ್ಯಮಿಯ ಸಾವಿಗೆ ಮಲಯಾಳ ನಟ ಮೋಹನ್‌ಲಾಲ್ ಆಘಾತ ವ್ಯಕ್ತಪಡಿಸಿದ್ದು, 'ನನ್ನ ಆತ್ಮೀಯ ಗೆಳೆಯ ರಾಯ್ ಅವರ ಸಾವು ತೀವ್ರ ದುಃಖ ಉಂಟುಮಾಡಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.


ವಿಶ್ವಶಾಂತಿ ಸೇವಾ ಸಮಿತಿ ಮತ್ತು ಬೆಳಗಾವಿಯ ಜೈನ ಯುವ ಸಂಘಟನೆ ವತಿಯಿಂದ ಧರ್ಮನಾಥ ಭವನದಲ್ಲಿ ಶನಿವಾರ, ವಿಶ್ವದಾಖಲೆಗಾಗಿ ಜಿನಸಹಸ್ರಾಷ್ಟ ನಾಮಾರ್ಚನೆ ನಡೆಯಿತು. 860 ಶ್ರಾವಕ, ಶ್ರಾವಕಿಯರು ಪುಷ್ಪಾರ್ಚನೆ ಮೂಲಕ 1008 ಬಾರಿ ನಾಮಾರ್ಚನೆ ಮಾಡಿದರು. ರಾಜ್ಯದ 27 ಸ್ಥಳಗಳಲ್ಲಿ ಇದು ಏಕಕಾಲಕ್ಕೆ ನಡೆಯಿತು ಚಿತ್ರ: ಏಕನಾಥ ಅಗಸಿಮನಿ

'ತೆರಿಗೆ ಭಯೋತ್ಪಾದನೆಯಿಂದ ರಕ್ಷಿಸಿ'

ಒಂದನೇ ಪುಟದಿಂದ...

'ತೆರಿಗೆ ಭಯೋತ್ಪಾದನೆಗೆ ನಾವು ಕಾಫಿ ಡೇ ಸಂಸ್ಥಾಪಕ ಸಿದ್ಧಾರ್ಥ್ ಅವರನ್ನು ಕಳೆದುಕೊಂಡೆವು. ತೆರಿಗೆ ಅಧಿಕಾರಿಗಳ ದಾಳಿಗೆ ಬಹಳಷ್ಟು ಜನರು ಹೆದರಿ ಹೋಗಿದ್ದಾರೆ. ನಾಗರಿಕರ ಹಕ್ಕುಗಳ ಮೇಲಿನ ದಾಳಿ ಇದು. ದೇಶವನ್ನು ನಡೆಸಬೇಕಾದ ರೀತಿ ಇದಲ್ಲ. ನಿರ್ಮಲಾ ಸೀತಾರಾಮನ್ ಅವರೇ, ಈ ಬಗ್ಗೆ ಅತ್ಯಂತ ಪಾರದರ್ಶಕ ತನಿಖೆ ನಡೆಯಬೇಕು' ಎಂದು ಆಗ್ರಹಿಸಿದ್ದಾರೆ.

'ಪ್ರಾಮಾಣಿಕ ತೆರಿಗೆ ಪಾವತಿದಾರರ ಮೇಲೆ ತೆರಿಗೆ ಅಧಿಕಾರಿಗಳು ನಡೆಸುವ ದಾಳಿ ಅತ್ಯಂತ ಭೀಕರವಾಗಿರುತ್ತದೆ. ನಮ್ಮ ಹಣಕಾಸು ಸಚಿವರು, ಅಂತಹ ಅಧಿಕಾರಿಗಳ ಅಧಿಕಾರವನ್ನು ಹೆಚ್ಚಿಸುತ್ತಲೇ ಇದ್ದಾರೆ. ತೆರಿಗೆ ಪಾವತಿದಾರರನ್ನು ರಕ್ಷಿಸುವುದು ಯಾರು? ತಪ್ಪಾಗಿ ದಾಳಿ ನಡೆಸಿದ ಅಧಿಕಾರಿಗಳನ್ನು ಶಿಕ್ಷಿಸುವುದು ಯಾರು? ಪ್ರಧಾನಿ ಸರ್, ಇಂತಹ ತೆರಿಗೆ ಅಧಿಕಾರಿಗಳಿಂದ ನಮ್ಮನ್ನು ರಕ್ಷಿಸಿ' ಎಂದು ಪೈ ಕೋರಿದ್ದಾರೆ.

'ಮೂರು ವರ್ಷಗಳಲ್ಲಿ ನೇರ ತೆರಿಗೆ ಮೂಲಕ ₹72 ಲಕ್ಷ ಕೋಟಿ ಸಂಗ್ರಹಿಸಲಾಗಿದೆಯೇ? ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ಮೂಲಕ ಎಷ್ಟು ಕೋಟಿ ಸಂಗ್ರಹಿಸಲಾಗಿದೆ? ನ್ಯಾಯಾಲಯಗಳ ವ್ಯಾಜ್ಯಗಳಲ್ಲಿ ಎಷ್ಟು ಹಣ ಸಿಲುಕಿಕೊಂಡಿದೆ ಎಂಬುದರ ಕುರಿತಾದ ಸಂಪೂರ್ಣ ದತ್ತಾಂಶವನ್ನು ನಿರ್ಮಲಾ ಸೀತಾರಾಮನ್ ಒದಗಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಮರಳು ಅಕ್ರಮ: ಸಿಬಿಐ ತನಿಖೆ ಅಗತ್ಯ'

ಒಂದನೇ ಪುಟದಿಂದ...

ಗೃಹ ಸಚಿವರ ಹೇಳಿಕೆ: 'ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ದೊಡ್ಡ ದಂಧೆಯಾಗಿದೆ. ಪ್ರಕರಣ ಸಂಬಂಧ ಯಾರ ಹೆಸರನ್ನು ಪ್ರಸ್ತಾಪಿಸುತ್ತಿಲ್ಲ. ಯಾರನ್ನೂ ದೂಷಣೆ ಮಾಡುತ್ತಿಲ್ಲ. ಏಕೆಂದರೆ ಇದು ಅತ್ಯಂತ ಮುಜುಗರದ ಸಂಗತಿಯಾಗಿದೆ. ಈ ಸಂಬಂಧ ಸೀಮಿತವಾಗಿ ಉತ್ತರವನ್ನು ನೀಡುತ್ತಿದ್ದು, ಅನೇಕ ಪ್ರಭಾವಿಗಳು ಈ ದಂಧೆಯಲ್ಲಿ ಭಾಗಿಯಾಗಿದ್ದಾರೆ. ಈ ವಿಷಯವನ್ನು ಚರ್ಚಿಸುವುದಕ್ಕಾಗಿ ಸಭೆ ಕರೆಯಲಾಗುವುದು' ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಇದೇ 27ರಂದು ವಿಧಾನಸಭೆಯ ಕಲಾಪದಲ್ಲಿ ನೀಡಿರುವ ಹೇಳಿಕೆಯನ್ನು ಯಥಾವತ್ತಾಗಿ ಅರ್ಜಿಯಲ್ಲಿ ಉದ್ಧರಿಸಿದೆ.

'ಕೃಷ್ಣಾ ನದಿ ಜಲಾನಯನ ಪ್ರದೇಶದಲ್ಲಿ ರಾತ್ರಿ ಸಂದರ್ಭಗಳಲ್ಲಿ ನಿರಂತರವಾಗಿ ಮರಳು ಗಣಿಗಾರಿಕೆ ನಡೆಯುತ್ತಿದೆ. ಇದರಿಂದ ಉಂಟಾಗುವ ದೂಳಿನಿಂದ ಈ ಭಾಗದ ರೈತರು ಬೆಳೆಯುವ ಬೆಳೆಗಳಿಗೆ ಹಾನಿಯಾಗಲಿದೆ ಎಂಬುದಾಗಿ ಅಲ್ಲಿಯ ರೈತರು ತಿಳಿಸಿರುವ ಕುರಿತೂ ಮಾಧ್ಯಮಗಳಲ್ಲಿ ವರದಿಯಾಗಿದೆ. ಮರಳು ಗಣಿಗಾರಿಕೆ ಪ್ರದೇಶಗಳಲ್ಲಿನ ವಾಹನ ಚಲನವಲನಗಳ ಮೇಲ್ವಿಚಾರಣೆ ಮಾಡಲು ಸಿ.ಸಿ.ಟಿ.ವಿ ಕ್ಯಾಮೆರಾ ಮತ್ತು ಚೆಕ್‌ಪೋಸ್ಟ್‌ಗಳು ಇಲ್ಲದ ಕಾರಣ ಅಕ್ರಮ ಮರಳು ಗಣಿಗಾರಿಕೆಯಲ್ಲಿ ತೊಡಗಿರುವ ವಾಹನಗಳಿಂದ ಹಲವು ಸಾವು ನೋವುಗಳು ಸಂಭವಿಸಿವೆ' ಎಂಬುದನ್ನು ಅರ್ಜಿಯಲ್ಲಿ ವಿವರಿಸಲಾಗಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಸ್ಫೋಟ: 6 ಜನಕ್ಕೆ ಗಾಯ

ಒಂದನೇ ಪುಟದಿಂದ...

ಬೆಳಿಗ್ಗೆ 8.30ರಿಂದ 9 ಗಂಟೆಯ ನಡುವೆ ಸ್ಫೋಟ ಸಂಭವಿಸಿದೆ. ಮನೆಯೊಂದರ ಎದುರು ಭಾರಿ ಶಬ್ದದೊಂದಿಗೆ ಸ್ಫೋಟ ಸಂಭವಿಸಿತು. ಸುಮಾರು 80ರಿಂದ 100 ಮೀಟರ್ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ಲಾಸ್ಟಿಕ್ ಸೇರಿದಂತೆ ಇತರೆ ವಸ್ತುಗಳ ಚೂರುಗಳು ಹಾರಿ ಬಿದ್ದಿವೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

'ಭಾರಿ ಶಬ್ದದಿಂದ ಬೆಚ್ಚಿಬಿದ್ದೆವು. ಸ್ಥಳಕ್ಕೆ ಹೋಗಿ ನೋಡುವಷ್ಟರಲ್ಲಿ ಮಕ್ಕಳು ಹಾಗೂ ಕೆಲವರು ರಕ್ತಸಿಕ್ತವಾಗಿ ನೆಲದ ಮೇಲೆ ಬಿದ್ದು ಒದ್ದಾಡುತ್ತಿದ್ದರು. ಕೂಡಲೇ ಆಂಬುಲೆನ್ಸ್ ಕರೆಸಿ, ಅವರನ್ನು ಆಸ್ಪತ್ರೆಗೆ ಕಳಿಸಿಕೊಡಲಾಯಿತು. ನಂತರ ಪೊಲೀಸರು ಬಂದು, ಸ್ಫೋಟದ ಸ್ಥಳದಲ್ಲಿ ಬ್ಯಾರಿಕೇಡ್ ಹಾಕಿದರು' ಎಂದು ಗ್ರಾಮಸ್ಥರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಬಾಂಬ್ ನಿಷ್ಕ್ರಿಯ ದಳ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು. ಶ್ವಾನದಳದ ಸೇವೆ ಪಡೆಯಲಾಯಿತು.

ಕಲಬುರಗಿ ವಲಯದ ಡಿಐಜಿಪಿ ಶಾಂತನು ಸಿನ್ಹಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು.

ಬೆಳ್ಳಿ ದರ ₹72 ಸಾವಿರ ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶನಿವಾರ ಬೆಳ್ಳಿ ದರವು ಒಂದೇ ದಿನ ಕೆ.ಜಿಗೆ ₹72,500 (ಶೇ 18.85ರಷ್ಟು) ಇಳಿಕೆ ಆಗಿದೆ. 1 ಕೆ.ಜಿ ಬೆಳ್ಳಿ ದರವು ₹3.12 ಲಕ್ಷದಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

2025ರ ಡಿಸೆಂಬರ್ 31ರಂದು ಕೆ.ಜಿ ಬೆಳ್ಳಿ ದರವು ₹2.39 ಲಕ್ಷವಿತ್ತು. ಅದು ಈಗ ₹3.12 ಲಕ್ಷಕ್ಕೆ ತಲುಪಿದ್ದು, ಒಂದೇ ತಿಂಗಳಲ್ಲಿ ₹73 ಸಾವಿರ (ಶೇ 30ರಷ್ಟು) ಹೆಚ್ಚಳವಾಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧ) ದರವು ಶನಿವಾರದಂದು ₹3,500 ಕಡಿಮೆಯಾಗಿ, ₹1,65,500ಕ್ಕೆ ಇಳಿದಿದೆ. ಕಳೆದ ಡಿಸೆಂಬರ್ 31ರಂದು ಚಿನ್ನದ ದರವು ₹1,37,700 ಇತ್ತು. ಒಂದು ತಿಂಗಳಲ್ಲಿ ಬೆಲೆಯು ₹27,800 ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಲಾಭದ ಗಳಿಕೆಗಾಗಿ ಹೂಡಿಕೆದಾರರು ಚಿನ್ನ, ಬೆಳ್ಳಿ ಮಾರಾಟಕ್ಕೆ ಮುಂದಾಗಿದ್ದಾರೆ. ಇದು ದರ ಇಳಿಕೆಗೆ ಕಾರಣ ಎಂದು ತಿಳಿಸಿದೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆ.ಜಿ)

ಶೇಂಗಾ (ರಿಫೈನ್ಡ್)	₹1800 (1820)
ಸೋಯಾ (ರಿಫೈನ್ಡ್)	₹1405 (1410)
ಸೂರ್ಯಕಾಂತಿ (ರಿಫೈನ್ಡ್)	₹1625 (1630)
ಪಾಮೊಲಿನ್	₹1325 (1330)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹575
	12 ಕ್ಕೆ	₹80
ಮೈಸೂರು	100 ಕ್ಕೆ	₹577

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕೆ)	₹335-763
ದ್ವಿತಳಿ (ಪ್ರ.ಕೆ)	₹130-927

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ)

ಆರ್‌ಎಸ್‌ಎಸ್-4	₹199
ಆರ್‌ಎಸ್‌ಎಸ್-5	₹194
ಗುಡ್ ಲಾಟ್	₹182

ಮುದ್ರಿಗೆರೆ ಕಾಫಿ (50 ಕೆ.ಜಿ)

ಎಪಿ	₹26000
ಎಸಿ	₹14150
ಆರ್‌ಪಿ	₹17850
ಆರ್‌ಸಿ	₹10600

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹30188-30188
ದಾವಣಗೆರೆ	₹12000-12000
ಪುತ್ತೂರು	₹6000-22000
ತುಮಕೂರು	₹27500-29600

ಹೂಡಿಕೆ, ವಿಸ್ತರಣೆಗೆ ದಾವೋಸ್ ಭೂಮಿಕೆ

25ಕ್ಕೂ ಹೆಚ್ಚು ಬಹುರಾಷ್ಟ್ರೀಯ, 15ಕ್ಕೂ ಹೆಚ್ಚು ಭಾರತೀಯ ಕಂಪನಿಗಳ ಜೊತೆ ಸಭೆ: ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ವೈಮಾನಿಕ ಮತ್ತು ರಕ್ಷಣೆ, ಸುಧಾರಿತ ತಯಾರಿಕಾ ವಲಯ, ಪಾನೀಯ ಮತ್ತು ಆಹಾರ ಸಂಸ್ಕರಣೆ, ಬಾಹ್ಯಾಕಾಶ ತಂತ್ರಜ್ಞಾನ, ಜೀವ ವಿಜ್ಞಾನ, ದತ್ತಾಂಶ ಕೇಂದ್ರಗಳು, ಡಿಜಿಟಲ್ ಮೂಲಸೌಕರ್ಯ, ಶುದ್ಧ ಇಂಧನ ಮುಂತಾದ ವಲಯಗಳಲ್ಲಿ ಹೂಡಿಕೆ ಸಂಬಂಧಿಸಿದಂತೆ 25ಕ್ಕೂ ಹೆಚ್ಚು ಬಹುರಾಷ್ಟ್ರೀಯ ಮತ್ತು 15ಕ್ಕೂ ಹೆಚ್ಚು ಭಾರತೀಯ ಕಂಪನಿಗಳ ಜೊತೆ ದಾವೋಸ್‌ನಲ್ಲಿ ಸಭೆ ನಡೆಸಲಾಗಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ದಾವೋಸ್‌ನ ವಿಶ್ವ ಆರ್ಥಿಕ ವೇದಿಕೆ ಸಮಾವೇಶದಲ್ಲಿ ಭಾಗವಹಿಸಿ ಮರಳಿರುವ ಅವರು ಸುದ್ದಿಗೋಷ್ಠಿಯಲ್ಲಿ ಶನಿವಾರ ಈ ಮಾಹಿತಿ ಹಂಚಿಕೊಂಡರು.

'ರಾಜ್ಯದಲ್ಲಿ ಹೊಸ ಬಂಡವಾಳ ಹೂಡಿಕೆ, ಉದ್ಯಮ ವಿಸ್ತರಣೆ ಮತ್ತು ಪಾಲುದಾರಿಕೆಗಳು ತ್ವರಿತವಾಗಿ ಸಾಕಾರಗೊಳ್ಳಲು ಈ ಸಮಾವೇಶವು ಉತ್ತಮ ಭೂಮಿಕೆ ಸಿದ್ಧಪಡಿಸಿದೆ. ಆದರೆ, ದೇಶಿ ಉದ್ಯಮಗಳ ಜೊತೆ ಯಾವುದೇ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಲಾಗಿಲ್ಲ. ಬದಲಿಗೆ ಭವಿಷ್ಯದ ಹೂಡಿಕೆಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಗಿದೆ' ಎಂದರು.



ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಗುಂಜನ್ ಕೃಷ್ಣ, ಸೆಲ್ವಕುಮಾರ್ ಇದ್ದರು

'ಕರ್ನಾಟಕದಲ್ಲಿ ಉದ್ಯಮ ಸ್ಥಾಪನೆ, ವಿಸ್ತರಣೆಯ ವ್ಯಾಪ್ತಿಗಳನ್ನು ಆದ್ಯತೆಯಲ್ಲಿ ಕಾರ್ಯಗತಗೊಳಿಸಲು ವಿವಿಧ ಕಂಪನಿಗಳ ಮುಖ್ಯಸ್ಥರು ಒಲವು ತೋರಿಸಿದ್ದಾರೆ. ಉದ್ಯಮ ಸ್ನೇಹಿ ಕೈಗಾರಿಕಾ ನೀತಿ ಅಳವಡಿಸಿಕೊಂಡಿರುವ ಸರ್ಕಾರದ ಧೋರಣೆಯನ್ನು ಉದ್ಯಮ ದಿಗ್ಗಜರು ಶ್ಲಾಘಿಸಿದರು' ಎಂದರು.

'ರಾಜ್ಯಕ್ಕೆ ಜಂಟಿಯಾಗಿ ಹೂಡಿಕೆಗಳನ್ನು ಆಕರ್ಷಿಸುವುದರ ಬಗ್ಗೆ ಲಿಚೆನ್‌ಸ್ಟೈನ್ ಮತ್ತು ಸಿಂಗಪುರ ಸರ್ಕಾರದ ಜೊತೆ ಮಾತುಕತೆ ನಡೆಸಲಾಗಿದೆ. ಎಐ, ರೊಬೋಟಿಕ್ಸ್, ಕ್ವಾಂಟಂ ಮತ್ತಿತರ ಭವಿಷ್ಯದ ತಂತ್ರಜ್ಞಾನಗಳು ಒಡ್ಡಿರುವ ಸವಾಲುಗಳನ್ನು ಎದುರಿಸುವ ಹೊಸ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯದ ಬಗ್ಗೆಯೂ ದಾವೋಸ್ ಭೇಟಿಯಲ್ಲಿ ಮನವರಿಕೆ ಆಯಿತು. ಈ ನಿಟ್ಟಿನಲ್ಲಿ ಸರ್ಕಾರ ಕಾರ್ಯಪ್ರವೃತ್ತವಾಗಲಿದೆ' ಎಂದು ಸಚಿವರು ತಿಳಿಸಿದರು.

'ಕೃತಕ ಬುದ್ಧಿಮತ್ತೆ, ರೊಬೋಟಿಕ್ಸ್, ಕ್ವಾಂಟಂ ತಂತ್ರಜ್ಞಾನದಂತಹ ಭವಿಷ್ಯದ ತಂತ್ರಜ್ಞಾನಗಳು ಈಗ ಸಾಫ್ಟ್‌ವೇರ್‌ಗಷ್ಟೇ ಸೀಮಿತವಾಗಿಲ್ಲ. ತಯಾರಿಕಾ ವಲಯಕ್ಕೂ ಕಾಲಿಟ್ಟಿವೆ. ಉದ್ಯೋಗ ಅವಕಾಶಗಳು ಕಡಿಮೆಯಾಗುವ ಭೀತಿ ಸೃಷ್ಟಿಸಿವೆ. ಭವಿಷ್ಯದ ತಂತ್ರಜ್ಞಾನಗಳು ಒಳಿತಿನ ಜೊತೆಗೆ ಕೆಲವು ಕೆಡುಕುಗಳನ್ನೂ ಒಳಗೊಂಡಿವೆ. ನಮ್ಮಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಇರುವ ಯುವಜನರಿಗೆ ಹಾಗೂ ಮಹಿಳೆಯರಿಗೆ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲು ನಾವು ಆದ್ಯತೆ ನೀಡುತ್ತಿದ್ದೇವೆ' ಎಂದರು.

'ರಾಜ್ಯದ ಮಹತ್ವಾಕಾಂಕ್ಷೆಯ 'ಕ್ವಿನ್ ಸಿಟಿ' ಯೋಜನೆಯ ಭಾಗವಾಗುವುದಕ್ಕೆ ಟಾಟಾ ಸನ್ಸ್ ಆಸಕ್ತಿ ವ್ಯಕ್ತಪಡಿಸಿದೆ. ಈ ಸಂಬಂಧ ಮಾತುಕತೆ ಮುಂದುವರಿಸಲು ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಒಲವು ವ್ಯಕ್ತಪಡಿಸಿದ್ದಾರೆ' ಎಂದು ಸಚಿವರು ವಿವರಿಸಿದರು.

ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, 'ಇನ್ವೆಸ್ಟ್ ಕರ್ನಾಟಕ ಫೋರಂ' ಸಿಇಒ ಜ್ಯೋತಿ [illegible], ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಹೇಶ್, ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜ ಉಪಸ್ಥಿತರಿದ್ದರು.

'ಬೆಂಗಳೂರಿನಾಚೆಗೂ ಹೂಡಿಕೆಗೆ ಒಲವು'

'ರಾಜ್ಯದ 2 ಮತ್ತು 3ನೇ ಶ್ರೇಣಿಯ ನಗರಗಳಲ್ಲಿ ಹೂಡಿಕೆ ಹಾಗೂ ವಿಸ್ತರಣೆ ಬಗ್ಗೆ ಹಲವು ಕಂಪನಿಗಳು ಒಲವು ವ್ಯಕ್ತಪಡಿಸಿವೆ' ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.

'ಬೆಂಗಳೂರು ಆಚೆಗಿನ ನಗರಗಳ ಬೆಳವಣಿಗೆಗೆ ರಾಜ್ಯ ಸರ್ಕಾರ ನೀಡುತ್ತಿರುವ ಆದ್ಯತೆಗೆ ಪೂರಕವಾಗಿ, 2ನೇ ಸ್ತರದ ನಗರಗಳಲ್ಲಿ ವಿಸ್ತರಣೆಗೆ ಟೆಕ್ ಮಹೀಂದ್ರ, ಡೇಟಾ ಕೇಂದ್ರಗಳನ್ನು ಸ್ಥಾಪಿಸಲು ಭಾರ್ತಿ ಎಂಟರ್‌ಪ್ರೈಸಸ್ ಮತ್ತು ಸಿಫಿ ಟೆಕ್ನಾಲಜೀಸ್ ಆಸಕ್ತಿ ತೋರಿಸಿವೆ. ಕೃತಕ ಬುದ್ಧಿಮತ್ತೆ (ಎಐ), ದತ್ತಾಂಶ ಕೇಂದ್ರಗಳು, ಸೆಮಿಕಂಡಕ್ಟರ್‌ಗಳು, ಸ್ಪೇಸ್‌ಟೆಕ್, ಇಂಡಸ್ಟ್ರಿ 4.0, ಒಳಗೊಂಡಂತೆ ಹೊಸ ವಲಯಗಳ ಕೈಗಾರಿಕೆಗಳಿಗೆ ರಾಜ್ಯವು ಆದ್ಯತೆಯ ತಾಣವಾಗಿದೆ ಎಂದು ಜಾಗತಿಕ ಹೂಡಿಕೆದಾರರು ಮತ್ತು ತಂತ್ರಜ್ಞಾನ ದಿಗ್ಗಜರಿಗೆ ಮನದಟ್ಟು ಮಾಡಿಕೊಡಲಾಗಿದೆ' ಎಂದು ವಿವರಿಸಿದರು.

ಭಾರತದ ಸರಕುಗಳು ಸುಂಕರಹಿತವಾಗಿ ಇ.ಯು ಮಾರುಕಟ್ಟೆಗೆ

ಭಾರತ-ಇ.ಯು: ರಫ್ತು ದುಪ್ಪಟ್ಟು ನಿರೀಕ್ಷೆ

ನವದೆಹಲಿ (ಪಿಟಿಐ): 'ಭಾರತ ಮತ್ತು ಐರೋಪ್ಯ ಒಕ್ಕೂಟದ (ಇ.ಯು) ನಡುವಿನ ಮುಕ್ತ ವ್ಯಾಪಾರ ಒಪ್ಪಂದದಿಂದ ಮುಂದಿನ ಐದು ವರ್ಷಗಳಲ್ಲಿ ಐರೋಪ್ಯ ಒಕ್ಕೂಟದ ದೇಶಗಳಿಗೆ ದೇಶದ ರಫ್ತು ದುಪ್ಪಟ್ಟಾಗುವ ನಿರೀಕ್ಷೆ ಇದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.



ಅಮೆರಿಕ ಜೊತೆಗಿನ ಭಾರತದ ಮಹತ್ವದ ಒಪ್ಪಂದದ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದು
ಪೀಯೂಷ್ ಗೋಯಲ್, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

ಐರೋಪ್ಯ ಒಕ್ಕೂಟಕ್ಕೆ ಸರಕು ಮತ್ತು ಸೇವೆಗಳ ರಫ್ತಿನಲ್ಲಿ ಭಾರತವು ಈಗಾಗಲೇ ಮುಂಚೂಣಿಯಲ್ಲಿದೆ ಎಂದ ಸಚಿವರು, ಈ ಒಪ್ಪಂದ ಅನುಷ್ಠಾನಗೊಂಡ ಮೊದಲ ದಿನದಿಂದಲೇ ದೇಶದ ಶೇ 99ರಷ್ಟು ಸರಕುಗಳು ಇ.ಯು ದೇಶಗಳ ಮಾರುಕಟ್ಟೆಯನ್ನು ಸುಂಕರಹಿತವಾಗಿ ಪ್ರವೇಶಿಸಲಿವೆ. ಇದರಿಂದ ದೇಶದ ರಫ್ತು ಐದು ವರ್ಷಗಳಲ್ಲಿ ದ್ವಿಗುಣಗೊಳ್ಳುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ.

ಈ ದೇಶಗಳಿಗೆ 2024-25ರ ಆರ್ಥಿಕ ವರ್ಷದಲ್ಲಿ ದೇಶದ ಸರಕುಗಳ ರಫ್ತು ಹಣಕಾಸಿನ ಮೌಲ್ಯದಲ್ಲಿ ₹6.96 ಲಕ್ಷ ಕೋಟಿ ಮತ್ತು ಸೇವಾ ರಫ್ತು ಮೌಲ್ಯವು ₹4.21 ಲಕ್ಷ ಕೋಟಿಯಷ್ಟಾಗಿದೆ.

ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ಒಪ್ಪಂದವನ್ನು (ಎಫ್‌ಟಿಎ) ಅತ್ಯಂತ ದೊಡ್ಡ ಒಪ್ಪಂದ ಎಂದು ಬಣ್ಣಿಸಲಾಗಿದೆ.

ಈ ಒಪ್ಪಂದದಿಂದ ಐರೋಪ್ಯ ಒಕ್ಕೂಟದ 27 ರಾಷ್ಟ್ರಗಳು ಮತ್ತು ಭಾರತ ಸೇರಿ 28 ದೇಶಗಳಿಗೆ ಪ್ರಯೋಜನವಾಗಲಿದೆ. ಈ ಒಪ್ಪಂದವು ಕಠಿಣವು ಅಲ್ಲ, ಸೌಮ್ಯವೂ ಅಲ್ಲ. ಈ ಒಪ್ಪಂದವು ಕಾಳಜಿಯಿಂದ ಕೂಡಿದೆ ಎಂದು ಸುದ್ದಿಸಂಸ್ಥೆ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ದೇಶದ ಒಟ್ಟು ರಫ್ತು 2 ಟ್ರಿಲಿಯನ್ ಡಾಲರ್ (₹183 ಲಕ್ಷ ಕೋಟಿ) ಗುರಿ ಹೊಂದಲಾಗಿದೆ. ಇದು 2032ರ ವೇಳೆಗೆ ಸಾಧಿಸುವ ನಿರೀಕ್ಷೆ ಇದೆ ಎಂದು ಭರವಸೆ ವ್ಯಕ್ತಪಡಿಸಿದ್ದಾರೆ.

ಒಪ್ಪಂದದ ಕುರಿತು ಮಾತುಕತೆ ಪೂರ್ಣಗೊಂಡಿದೆ ಎಂದು ಉಭಯ ಪಕ್ಷಗಳು ಘೋಷಿಸಿದ್ದು, ಈ ವರ್ಷವೇ ಜಾರಿಗೆ ಬರುವ ಸಾಧ್ಯತೆಯಿದೆ.

ಬಜೆಟ್: ಷೇರುಪೇಟೆ ವಹಿವಾಟು ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು ಬಜೆಟ್ ಮಂಡಿಸಲಿದ್ದು, ಅಂದು ದೇಶದ ಷೇರುಪೇಟೆ ವಹಿವಾಟು ನಡೆಯಲಿದೆ.

ಬೆಳಿಗ್ಗೆ 9.15ರಿಂದ ಮಧ್ಯಾಹ್ನ 3.30ರ ವರೆಗೆ ಷೇರುಪೇಟೆ ಕಾರ್ಯನಿರ್ವಹಿಸಲಿದೆ ಎಂದು ಈಗಾಗಲೇ ಬಿಎಸ್‌ಇ ಮತ್ತು ಎನ್‌ಎಸ್‌ಇ ತಿಳಿಸಿದೆ.

ಸಾಮಾನ್ಯವಾಗಿ ಭಾನುವಾರ ಷೇರುಪೇಟೆಗೆ ರಜೆ ಇರಲಿದ್ದು, ವಹಿವಾಟು ನಡೆಯುವುದಿಲ್ಲ. ಆದರೆ, ಈ ಬಾರಿ ಭಾನುವಾರ ಬಜೆಟ್ ಮಂಡನೆ ಆಗಲಿದ್ದು, ವಿಶೇಷ ವಹಿವಾಟು ನಡೆಯಲಿದೆ.

ತಂಬಾಕು ಉತ್ಪನ್ನಗಳ ಮೇಲೆ ಹೆಚ್ಚುವರಿ ಸುಂಕ ಇಂದಿನಿಂದ



ನವದೆಹಲಿ (ಪಿಟಿಐ): ಸಿಗರೇಟು, ತಂಬಾಕು ಉತ್ಪನ್ನಗಳು ಸೇರಿ 'ಅನಾರೋಗ್ಯಕಾರಿ ಸರಕು'ಗಳ ಮೇಲೆ ವಿಧಿಸಲಾಗುವ ಹೆಚ್ಚುವರಿ ಸುಂಕವು ಫೆಬ್ರುವರಿ 1ರಿಂದ ಜಾರಿಗೆ ಬರಲಿದೆ.

2017ರ ಜುಲೈ 1ರಂದು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಜಾರಿಗೆ ಬಂದಿತು. ಅಂದಿನಿಂದ ಈ ವಸ್ತುಗಳ ಮೇಲೆ ಶೇ 28ರಷ್ಟು ಜಿಎಸ್‌ಟಿ ಮತ್ತು ಪರಿಹಾರ ಸೆಸ್ ಇತ್ತು. ಇದೀಗ ಈ ಉತ್ಪನ್ನಗಳ ಮೇಲಿನ ಜಿಎಸ್‌ಟಿ ದರವನ್ನು ಶೇ 40ಕ್ಕೆ ಹೆಚ್ಚಿಸಲಾಗಿದೆ. ಇದು ಭಾನುವಾರದಿಂದ ಜಾರಿಗೆ ಬರಲಿದೆ.

ಫೆಬ್ರುವರಿ 1ರಿಂದ ತಂಬಾಕು ಉತ್ಪನ್ನಗಳಿಗೆ ಹೊಸ ಎಂಆರ್‌ಪಿ ಜಾರಿಗೆ ಬರಲಿದೆ. ತಂಬಾಕು ಉತ್ಪನ್ನಗಳ ಪೊಟ್ಟಣಗಳ ಮೇಲೆ ನಮೂದಿಸಲಾದ ರಿಟೇಲ್ ಬೆಲೆಯನ್ನು ಆಧರಿಸಿ ಜಿಎಸ್‌ಟಿ ದರ ನಿರ್ಧರಿಸಲಾಗುತ್ತದೆ.

ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್ ಅಡಿಯಲ್ಲಿ ಪಾನ್ ಮಸಾಲಾ ತಯಾರಕರು, ಫೆ.1ರಿಂದ ನೋಂದಣಿಗೆ ಹೊಸದಾಗಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಉತ್ಪನ್ನಗಳ ತಯಾರಕರು, ಪ್ಯಾಕಿಂಗ್ ಯಂತ್ರಗಳ ಬಳಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಕನಿಷ್ಠ 2 ವರ್ಷಗಳವರೆಗೆ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿ ಸಂರಕ್ಷಿಸಬೇಕು.

ತಯಾರಕರು ತಮ್ಮ ಬಳಿ ಇರುವ ಯಂತ್ರಗಳ ಸಂಖ್ಯೆ ಮತ್ತು ಸಾಮರ್ಥ್ಯವನ್ನು ಜಿಎಸ್‌ಟಿ ಪ್ರಾಧಿಕಾರಕ್ಕೆ ತಿಳಿಸಬೇಕು.

ಫೆಬ್ರುವರಿ 1ರಿಂದ ಕೇಂದ್ರ ಎಕ್ಸೈಸ್ ಸುಂಕ ಜಾರಿಗೆ ಬರಲಿದ್ದು, ಇದಕ್ಕಾಗಿ ಕೇಂದ್ರ ಎಕ್ಸೈಸ್ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಇದರ ಪ್ರಕಾರ, ಸಿಗರೇಟಿನ ಉದ್ದದ ಆಧಾರದ ಮೇಲೆ ಪ್ರತಿ ಸಿಗರೇಟಿಗೆ ₹2.05ರಿಂದ ₹8.50ರವರೆಗೆ ಎಕ್ಸೈಸ್ ಸುಂಕ ವಿಧಿಸಲಾಗುತ್ತದೆ.

ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್ ಕಾಯ್ದೆಯು ಪಾನ್ ಮಸಾಲಾ ಘಟಕಗಳ ತಯಾರಿಕಾ ಸಾಮರ್ಥ್ಯದ ಮೇಲೆ ಸೆಸ್ ವಿಧಿಸುತ್ತದೆ. ಶೇ 40ರಷ್ಟು ಜಿಎಸ್‌ಟಿಯನ್ನು ಗಣನೆಗೆ ತೆಗೆದುಕೊಂಡ ನಂತರ ಪಾನ್ ಮಸಾಲಾದ ಮೇಲಿನ ಒಟ್ಟು ತೆರಿಗೆಯನ್ನು ಪ್ರಸ್ತುತ ಶೇ 88ರ ಮಟ್ಟದಲ್ಲಿಯೇ ಉಳಿಸಿಕೊಳ್ಳಲಾಗುತ್ತದೆ.

ಹೆಚ್ಚುವರಿ ಎಕ್ಸೈಸ್ ಸುಂಕ ಹೇರಿಕೆಯಿಂದ ದೇಶದ ಸಿಗರೇಟು ಉದ್ಯಮದ ಬೆಳವಣಿಗೆಯು ಮುಂದಿನ ಆರ್ಥಿಕ ವರ್ಷದಲ್ಲಿ ಶೇ 6ರಿಂದ ಶೇ 8ರಷ್ಟು ಕಡಿಮೆ ಆಗಬಹುದು ಎಂದು ಕ್ರಿಸಿಲ್ ರೇಟಿಂಗ್ಸ್ ವರದಿ ಇತ್ತೀಚೆಗೆ ಹೇಳಿತ್ತು.

ಬಲೂಚಿಸ್ತಾನ: 70 ಉಗ್ರರು, 10 ಭದ್ರತಾ ಸಿಬ್ಬಂದಿ ಹತ್ಯೆ

ಕರಾಚಿ (ಪಿಟಿಐ): 'ಬಲೂಚಿಸ್ತಾನ ಪ್ರಾಂತ್ಯದ ಸುಮಾರು 12 ಸ್ಥಳಗಳಲ್ಲಿ ಭದ್ರತಾ ಪಡೆಗಳು, ಪೊಲೀಸರು ಮತ್ತು ನಾಗರಿಕರ ಮೇಲೆ ದಾಳಿ ನಡೆಸಿದ 70 ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ. ಇವರಲ್ಲಿ ಬಲೂಚಿಸ್ತಾನ ವಿಮೋಚನಾ ಸೇನೆಗೆ ಸೇರಿದವರೂ ಇದ್ದಾರೆ' ಎಂದು ಅಧಿಕಾರಿಗಳು ಹೇಳಿದರು.

ಭದ್ರತಾ ಪಡೆಗಳ ಮೂಲಗಳ ಪ್ರಕಾರ, 108 ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ. ಆದರೆ, ಬಲೂಚಿಸ್ತಾನದ ಮುಖ್ಯಮಂತ್ರಿ ಸರ್ಫರಾಜ್ ಬುಗ್ತಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡು, '70 ಭಯೋತ್ಪಾದಕರು ಮೃತಪಟ್ಟಿದ್ದಾರೆ' ಎಂದು ಶನಿವಾರ ಮಾಹಿತಿ ನೀಡಿದ್ದಾರೆ.

ಗುರುವಾರ ಮತ್ತು ಶುಕ್ರವಾರದಂದು ಭಯೋತ್ಪಾದಕರು ದಾಳಿ ನಡೆಸಿದ್ದರು. ಇದಕ್ಕೆ ಪ್ರತಿಯಾಗಿ ಭದ್ರತಾ ಪಡೆಗಳು ವಿವಿಧ ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಿ ಭಯೋತ್ಪಾದಕರನ್ನು ಹತ್ಯೆ ಮಾಡಿದ್ದಾರೆ. ಈ ವೇಳೆ 10 ಮಂದಿ ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಾರೆ. ಶುಕ್ರವಾರ ರಾತ್ರಿ ಆರಂಭವಾಗಿರುವ ಕಾರ್ಯಾಚರಣೆಯು ಶನಿವಾರ ರಾತ್ರಿಯೂ ಮುಂದುವರಿದಿತ್ತು.

30 ಪ್ಯಾಲೆಸ್ಟೀನಿಯನ್ನರ ಹತ್ಯೆ

ದಾರ್ ಅಲ್-ಬಲಾ (ಎಪಿ): ಗಾಜಾದ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಮಕ್ಕಳು ಸೇರಿದಂತೆ ಕನಿಷ್ಠ 30 ಮಂದಿ ಮೃತಪಟ್ಟಿದ್ದಾರೆ.

ಹಮಾಸ್- ಇಸ್ರೇಲ್ ನಡುವಿನ ಸಂಘರ್ಷಕ್ಕೆ ಅಂತ್ಯ ಹಾಡಲಿಕ್ಕಾಗಿಯೇ ಅಕ್ಟೋಬರ್‌ನಲ್ಲಿ ಏರ್ಪಟ್ಟ ಕದನ ವಿರಾಮದ ಬಳಿಕ, ಇಸ್ರೇಲ್ ನಡೆಸಿದ ಭೀಕರ ದಾಳಿ ಇದಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಕದನ ವಿರಾಮವು ಉಲ್ಲಂಘನೆ ಆಗುತ್ತಿದೆ ಎಂಬ ಆರೋಪ ಕೇಳಿ ಬಂದ ಮರುದಿನವೇ ಇಸ್ರೇಲ್, ಗಾಜಾ ಹಾಗೂ ಖಾನ್ ಯೂನಿಸ್ ನಗರವನ್ನು ಗುರಿಯಾಗಿಸಿಕೊಂಡು ದಾಳಿ ನಡೆ ಸಿದೆ. ಗಾಜಾದ ನಗರ ಪೊಲೀಸ್ ಠಾಣೆಯೊಂದರ ಮೇಲೆ ನಡೆದ ವೈಮಾನಿಕ ದಾಳಿಯಲ್ಲಿ ಇಬ್ಬರು ಮಹಿಳೆಯರು, ಆರು ಮಕ್ಕಳು ಸೇರಿದಂತೆ ಕನಿಷ್ಠ 14 ಮಂದಿ ಗಾಯಗೊಂಡಿದ್ದಾರೆ ಎಂದು ಶಿಫಾ ಆಸ್ಪತ್ರೆಯ ನಿರ್ದೇಶಕ ಮೊಹಮ್ಮದ್ ಅಬು ಸೆಲ್ಮಿಯಾ ತಿಳಿಸಿದ್ದಾರೆ.

ಎನ್‌ಟಿಪಿಸಿ ಲಾಭ ಶೇ 8ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮವು (ಎನ್‌ಟಿಪಿಸಿ) ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹5,597 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹5,169 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದ ಪ್ರಮಾಣದಲ್ಲಿ ಶೇ 8ರಷ್ಟು ಹೆಚ್ಚಳವಾಗಿದೆ ಎಂದು ನಿಗಮವು ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)

31-01-2026	
ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9800-9900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1810 (1820)
ಒಂದು ವಾರದ ಡೆಲಿವರಿ	1805 (1815)
ಪಾಮ್ ವಾರದ ಡೆಲಿವರಿ	1323 (1328)
ಸೂರ್ಯಕಾಂತಿ ಎಣ್ಣೆ ಕಚ್ಚಾ	1530 (1535)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,56,000 (1,61,000)
ಬೆಳ್ಳಿ ಕೆ.ಜಿಗೆ	3,95,000 (3,20,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸಕ್ಕರೆ ಉತ್ಪಾದನೆ ಶೇ 18ರಷ್ಟು ಹೆಚ್ಚಳ



ನವದೆಹಲಿ (ಪಿಟಿಐ): ಪ್ರಸಕ್ತ ಸಕ್ಕರೆ ಮಾರುಕಟ್ಟೆ ವರ್ಷದ ಜನವರಿ 31ರವರೆಗೆ ದೇಶದಲ್ಲಿ 1.95 ಕೋಟಿ ಟನ್ ಸಕ್ಕರೆ ಉತ್ಪಾದನೆ ಆಗಿದೆ ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಒಕ್ಕೂಟ (ಐಎಸ್‌ಎಂಎ) ತಿಳಿಸಿದೆ.

ಅಕ್ಟೋಬರ್‌ನಿಂದ ಸೆಪ್ಟೆಂಬರ್ ವರೆಗಿನ ಅವಧಿಯು ಸಕ್ಕರೆ ಮಾರುಕಟ್ಟೆ ವರ್ಷವಾಗಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ಸಕ್ಕರೆ ಉತ್ಪಾದನೆಯು 1.64 ಕೋಟಿ ಟನ್‌ನಷ್ಟಿತ್ತು. ಇದಕ್ಕೆ ಹೋಲಿಸಿದರೆ ಉತ್ಪಾದನೆಯಲ್ಲಿ ಶೇ 18.35ರಷ್ಟು ಹೆಚ್ಚಳವಾಗಿದೆಎಂದುಶನಿವಾರತಿಳಿಸಿದೆ.

ವಿವಿಧ ರಾಜ್ಯಗಳಲ್ಲಿನ ಕಬ್ಬು ಇಳುವರಿ ಹೆಚ್ಚಳವೇ ಉತ್ಪಾದನೆ ಹೆಚ್ಚಳಕ್ಕೆ ಕಾರಣ ಎಂದು ಒಕ್ಕೂಟ ತಿಳಿಸಿದೆ.

ಸಕ್ಕರೆ ಉತ್ಪಾದನೆ ಮಾಡುವ ಕಾರ್ಖಾನೆಗಳ ಸಂಖ್ಯೆ ಒಂದು ವರ್ಷದ ಅವಧಿಯಲ್ಲಿ 501ರಿಂದ 515ಕ್ಕೆ ಹೆಚ್ಚಳವಾಗಿದೆ.

ಮಹಾರಾಷ್ಟ್ರವು ದೇಶದಲ್ಲಿ ಅತಿಹೆಚ್ಚು ಸಕ್ಕರೆ ಉತ್ಪಾದನೆ ಮಾಡುವ ರಾಜ್ಯವಾಗಿದ್ದು, ಸಕ್ಕರೆ ಉತ್ಪಾದನೆಯಲ್ಲಿ ಶೇ 42ರಷ್ಟು ಹೆಚ್ಚಳವಾಗಿ, 78.7 ಲಕ್ಷ ಟನ್ ಉತ್ಪಾದನೆ ಆಗಿದೆ. ಮಹಾರಾಷ್ಟ್ರದಲ್ಲಿ ಸಕ್ಕರೆ ಕಾರ್ಖಾನೆಗಳು 190ರಿಂದ 206ಕ್ಕೆ ಏರಿಕೆಯಾಗಿದೆ.

ಉತ್ತರಪ್ರದೇಶದಲ್ಲಿ 55.1 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿದ್ದು, ಶೇ 5ರಷ್ಟು ಹೆಚ್ಚಳವಾಗಿದೆ. ಕರ್ನಾಟಕದಲ್ಲಿ ಶೇ 15ರಷ್ಟು ಸಕ್ಕರೆ ಉತ್ಪಾದನೆಯಲ್ಲಿ ಏರಿಕೆ ಆಗಿದೆ ಎಂದು ತಿಳಿಸಿದೆ.

ಪ್ರಸಕ್ತ ವರ್ಷದ ಸಕ್ಕರೆ ಮಾರುಕಟ್ಟೆ ವರ್ಷದಲ್ಲಿ ಸಕ್ಕರೆ ಉತ್ಪಾದನೆಯು ಶೇ 18.6ರಷ್ಟು ಏರಿಕೆಯಾಗಿ, 3.09 ಕೋಟಿ ಟನ್ ಉತ್ಪಾದನೆ ಆಗುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

ಕಾಂಗೊದಲ್ಲಿ ಭೂಕುಸಿತ: 200 ಮಂದಿ ಸಾವು

ಗೋಮಾ (ಕಾಂಗೊ) (ಎಪಿ): ಕಾಂಗೊದ ಕೊಲ್ಟನ್ ಗಣಿಗಾರಿಕೆ ಪ್ರದೇಶದಲ್ಲಿ ಭೂಕಂಪ ಸಂಭವಿಸಿ, ಹಲವು ಗಣಿಗಳು ಕುಸಿದು 200 ಮಂದಿ ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ಎಂ23 ಬಂಡುಕೋರರ ನಿಯಂತ್ರಣದಲ್ಲಿರುವ ರುಬಾಯಾದಲ್ಲಿ ಬುಧವಾರ ಅವಘಡ ಸಂಭವಿಸಿದೆ. 'ಅತಿಯಾದ ಮಳೆಯಿಂದ ಭೂಕುಸಿತ ಸಂಭವಿಸಿದೆ' ಎಂದು ಬಂಡುಕೋರರ ವಕ್ತಾರ ಲುಮುಂಬಾ ಕಾಂಬೆರೆ ಮುಯಿಷಾ ಅವರು ತಿಳಿಸಿದರು.

'ಇಲ್ಲಿಯವರೆಗೆ 200 ಮಂದಿ ಮೃತಪಟ್ಟಿದ್ದಾರೆ. ಮೃತರ ಪೈಕಿ ಇನ್ನೂ ಹಲವರ ಶವಗಳನ್ನು ಹೊರತೆಗೆಯಲಾಗಿಲ್ಲ. ಗಾಯಾಳುಗಳಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸದ್ಯ ಸ್ಥಳದಲ್ಲಿ ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿದ್ದು, ಅಲ್ಲಿ ಗುಡಿಸಲಿನಲ್ಲಿ ವಾಸಿಸುವ ಜನರನ್ನು ಸ್ಥಳಾಂತರಿಸಲು ಆದೇಶಿಸಲಾಗಿದೆ' ಎಂದರು.

'ಕೈಗಳಿಂದಲೇ ಸುರಂಗಗಳನ್ನು ಕೊರೆಯಲಾಗಿದ್ದು, ಅವುಗಳ ನಿರ್ಮಾಣ ಕಳಪೆಯಾಗಿದೆ. ಸುರಂಗಗಳನ್ನು ನಿರ್ವಹಣೆ ಮಾಡಲಾಗಿಲ್ಲ. ಯಾವುದೇ ಸುರಕ್ಷತಾ ಕ್ರಮಗಳನ್ನು ಅನುಸರಿಸದೆಯೇ ಜನರು ಎಲ್ಲೆಂದರಲ್ಲಿ ಅಗೆಯುತ್ತಾರೆ. ಗಣಿಗಾರಿಕೆಗಾಗಿ ಕೊರೆದ ಒಂದೇ ಸುರಂಗದಲ್ಲಿ ಸುಮಾರು 500ರಷ್ಟು ಕಾರ್ಮಿಕರೂ ಇರುತ್ತಾರೆ' ಎಂದು ಈ ಗಣಿಗಾರಿಕೆಯಲ್ಲಿ ಹಿಂದೆ ಕೆಲಸ ಮಾಡಿದ ಅನುಭವ ಹೊಂದಿರುವ ಕ್ಲೊವಿಸ್ ಮಾಫೇರ್ ಹೇಳಿದರು.

'ಎಲ್ಲಾ ಸುರಂಗಗಳೂ ಸಮಾನಾಂತರವಾಗಿರುವುದರಿಂದ ಒಂದು ಕುಸಿದರೂ ಅದು ಉಳಿದ ಸುರಂಗಗಳ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ದುರಂತ ಸಂಭವಿಸಿದೆ' ಎಂದೂ ತಿಳಿಸಿದರು.

ಕ್ಷಮಾದಾನ ಮಸೂದೆ ಘೋಷಣೆ

ಕರಾಕಸ್ (ಎಪಿ): ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರಾಡ್ರಿಗಸ್ ಅವರು ಶುಕ್ರವಾರ ಕ್ಷಮಾದಾನ ಮಸೂದೆಯನ್ನು ಘೋಷಿಸಿದ್ದಾರೆ.

ರಾಜಕೀಯ ಕಾರಣಗಳಿಗಾಗಿ ಬಂಧನದಲ್ಲಿರುವ ವಿರೋಧ ಪಕ್ಷಗಳ ನಾಯಕರು, ಪತ್ರಕರ್ತರು, ಮಾನವ ಹಕ್ಕುಗಳ ಕಾರ್ಯಕರ್ತರು ಸೇರಿದಂತೆ ನೂರಾರು ಕೈದಿಗಳು ಬಿಡುಗಡೆ ಆಗುವ ಸಾಧ್ಯತೆಯಿದೆ. ಇದು ಅಮೆರಿಕ ಬೆಂಬಲಿತ ವಿರೋಧ ಪಕ್ಷದ ಬಹು ದಿನಗಳ ಬೇಡಿಕೆಯಾಗಿತ್ತು.

ಜನವರಿ 3ರಂದು ಅಮೆರಿಕದ ಪಡೆಗಳು ಮಿಂಚಿನ ಕಾರ್ಯಾಚರಣೆ ನಡೆಸಿ ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೊರೊ ಮತ್ತು ಅವರ ಪತ್ನಿಯನ್ನು ವಶಕ್ಕೆ ಪಡೆದು, ನ್ಯೂಯಾರ್ಕ್‌ಗೆ ಕರೆದೊಯ್ದ ನಂತರ, ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ರಾಡ್ರಿಗಸ್ ಈ ಮಸೂದೆ ತರುವುದಾಗಿ ಹೇಳಿದ್ದರು.

ಆರ್ಥಿಕ ಸ್ಥಿರತೆ, ಅಭಿವೃದ್ಧಿ ಸಮನ್ವಯಕ್ಕೆ ಯತ್ನ?

ಒಂದನೇ ಪುಟದಿಂದ...

ಬಜೆಟ್ ಮಂಡನೆಗೆ ಎರಡು ದಿನ ಬಾಕಿ ಇದ್ದಾಗಲೇ ಕೇಂದ್ರ ಸರ್ಕಾರ ಜಿಡಿಪಿ ದರ ಮತ್ತು ಗ್ರಾಹಕ ಬೆಲೆ ಸೂಚ್ಯಂಕವನ್ನು (ಸಿಪಿಐ) ಪರಿಷ್ಕರಿಸಿದಂತೆ ಬಜೆಟ್ ಅಂಕಿ ಅಂಶಗಳನ್ನೂ ಪರಿಷ್ಕರಿಸುತ್ತದೆಯೇ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಪ್ರಶ್ನಿಸಿದ್ದಾರೆ.

'ಬಜೆಟ್ ಪೂರ್ವದಲ್ಲಿನ ಜಿಡಿಪಿ ಪರಿಷ್ಕರಣೆಯು, ನೀತಿ ನಿರೂಪಣೆಯ ಮೇಲೆ ಕೆಟ್ಟದಾದ ಪರಿಣಾಮ ಬೀರುತ್ತದೆ ಎಂದು ಅವರು ಹೇಳಿದ್ದಾರೆ.

ಸರ್ಕಾರದ ಹಿಂದಿನ ದಾಖಲೆ ನೋಡಿದರೆ ಬಜೆಟ್ ಬಡವರ ನೋವು ಕಡಿಮೆ ಮಾಡುವ ಸಾಧ್ಯತೆ ಕಡಿಮೆ
ಕಪಿಲ್ ಸಿಬಲ್, ರಾಜ್ಯಸಭಾ ಸದಸ್ಯ

ರಾಜ್ಯಗಳಿಗೆ ಏನು ಸಿಗಲಿದೆ?

16ನೇ ಹಣಕಾಸು ಆಯೋಗದ ಶಿಫಾರಸುಗಳ ಅನುಷ್ಠಾನವನ್ನು ಹಣಕಾಸು ಸಚಿವರು ಬಜೆಟ್‌ನಲ್ಲಿ ಘೋಷಿಸುವುದರಿಂದ, ರಾಜ್ಯಗಳು ತಮ್ಮ ಪಾಲಿಗಾಗಿ ಕಾತರದಿಂದ ಕಾಯುತ್ತಿವೆ. ಕೇಂದ್ರವು ಸಂಗ್ರಹಿಸಿದ ತೆರಿಗೆ ಆದಾಯದಲ್ಲಿ ರಾಜ್ಯಗಳ ಪಾಲು, ಈ ಪಾಲನ್ನು ರಾಜ್ಯಗಳಿಗೆ ವಿತರಿಸುವುದು ಮತ್ತು ಐದು ವರ್ಷಗಳ ಅವಧಿಗೆ (2026-27 ರಿಂದ 2030-31ರವರೆಗೆ) ವಿಶೇಷ ಅನುದಾನವನ್ನು ಹಣಕಾಸು ಆಯೋಗವು ಶಿಫಾರಸು ಮಾಡುತ್ತದೆ.

2030ರ ವೇಳೆಗೆ ಮೂರನೇ ದೈತ್ಯ ಆರ್ಥಿಕತೆ

ಭಾರತವು ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ. ಸದ್ಯ ವಿಶ್ವದ ನಾಲ್ಕನೆಯ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆದಿರುವ ಭಾರತ, 2030ರ ವೇಳೆಗೆ ಜಪಾನನ್ನು ಹಿಂದಿಕ್ಕಿ ವಿಶ್ವದ ಮೂರನೆಯ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಗುರುವಾರ ಸಂಸತ್ತಿನಲ್ಲಿ ಮಂಡಿಸಲಾದ ಆರ್ಥಿಕ ಸಮೀಕ್ಷಾ ವರದಿಯಲ್ಲಿ ಮುಂದಿನ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6.8ರಿಂದ ಶೇ 7.2ರ ಮಟ್ಟದಲ್ಲಿ ಇರಲಿದೆ ಎಂದು ಅಂದಾಜು ಮಾಡಲಾಗಿದೆ ಎಂದು ತಿಳಿಸಿದೆ.

ಚಟಿಕೆ ಸುದ್ದಿ

‘ರಾಮ್‌ಸರ್’ ಮಾನ್ಯತೆ

ನವದೆಹಲಿ (ಪಿಟಿಐ): ಗುಜರಾತ್‌ನ ಕಛ್ ಮತ್ತು ಉತ್ತರ ಪ್ರದೇಶದ ಎಟಾ ಜೌಗು ಪ್ರದೇಶಗಳನ್ನು ‘ರಾಮ್‌ಸರ್’ (ಜೌಗು ಪ್ರದೇಶಗಳಿಗೆ ನೀಡುವ ಅಂತರರಾಷ್ಟ್ರೀಯ ಮಾನ್ಯತೆ) ಪ್ರದೇಶ ಎಂದು ಗುರುತಿಸಲಾಗಿದೆ.

‘ಕಛ್‌ನ ಧರಿ– ಢಂಡ್ ಮತ್ತು ಎಟಾದಲ್ಲಿನ ಪಟನಾ ಪಕ್ಷಿಧಾಮಕ್ಕೆ ‘ರಾಮ್‌ಸರ್’ ಮಾನ್ಯತೆ ನೀಡಲು ಶ್ರಮಿಸಿದವರಿಗೆ ಹಾಗೂ ಅಲ್ಲಿನ ಸ್ಥಳೀಯ ಜನರಿಗೆ ಅಭಿನಂದನೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ‘ಎಕ್ಸ್’ ಮೂಲಕ ತಿಳಿಸಿದ್ದಾರೆ.

‘ಇದರೊಂದಿಗೆ ಭಾರತದಲ್ಲಿ ‘ರಾಮ್‌ಸರ್’ ಮಾನ್ಯತೆ ಪಡೆದ ಜೌಗು ಪ್ರದೇಶಗಳ ಸಂಖ್ಯೆ 98ಕ್ಕೆ ಏರಿಕೆಯಾಗಿದೆ. ಇದು ಜೀವವೈವಿಧ್ಯ ಮತ್ತು ಪರಿಸರ ವ್ಯವಸ್ಥೆಯ ರಕ್ಷಣೆಗೆ ಸರ್ಕಾರಕ್ಕಿರುವ ಬದ್ಧತೆಯನ್ನು ಸಂಕೇತಿಸುತ್ತದೆ’ ಎಂದು ಅವರು ಹೇಳಿದ್ದಾರೆ.

ಏಮ್ಸ್: ವಾಂಗ್ಚುಕ್ ಆರೋಗ್ಯ ತಪಾಸಣೆ

ಜೋಧಪುರ (ಪಿಟಿಐ): ಜೋಧಪುರ ಕೇಂದ್ರ ಕಾರಾಗೃಹದಲ್ಲಿರುವ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರನ್ನು ನಗರದಲ್ಲಿರುವ ಏಮ್ಸ್ ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ತಪಾಸಣೆ ನಡೆಸಲಾಯಿತು.


ಸೋನಮ್ ವಾಂಗ್ಚುಕ್

ಮಲಿನಗೊಂಡಿರುವ ನೀರು ಕುಡಿದು ಹೊಟ್ಟೆಯಲ್ಲಿ ಸಮಸ್ಯೆ ಕಾಣಿಸಿಕೊಂಡಿದೆ ಎಂದು ವಾಂಗ್ಚುಕ್ ಅವರು ದೂರು ನೀಡಿದ್ದರು.

ತಜ್ಞ ವೈದ್ಯರಿಂದ ವಾಂಗ್ಚುಕ್ ಅವರ ವೈದ್ಯಕೀಯ ತಪಾಸಣೆ ನಡೆಸಿ, ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸೋಮವಾರ ಸಲ್ಲಿಸುವಂತೆ ಸುಪ್ರೀಂಕೋರ್ಟ್ ಸೂಚಿಸಿತ್ತು. ನ್ಯಾಯಾಲಯದ ಆದೇಶದಂತೆ ವಾಂಗ್ಚುಕ್ ಅವರ ಆರೋಗ್ಯ ತಪಾಸಣೆಯನ್ನು ಶನಿವಾರ ನಡೆಸಲಾಯಿತು.

‘ಶೇ 25ರಷ್ಟು ಪಠ್ಯಕ್ರಮ ಕಡಿತಕ್ಕೆ ನಿರ್ಧಾರ’

ಕೊಲ್ಲಂ (ಪಿಟಿಐ): ಕೇರಳದಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ 10ನೇ ತರಗತಿಯ ಪಠ್ಯಪುಸ್ತಕಗಳಲ್ಲಿ ಪಠ್ಯಕ್ರಮವನ್ನು ಶೇಕಡ 25ರಷ್ಟು ಕಡಿತಗೊಳಿಸಲಾಗುವುದು ಎಂದು ಶಿಕ್ಷಣ ಸಚಿವ ವಿ. ಶಿವನ್‌ಕುಟ್ಟಿ ತಿಳಿಸಿದ್ದಾರೆ.


ವಿ.ಶಿವನ್‌ಕುಟ್ಟಿ

ಹೆಚ್ಚಿನ ಶೈಕ್ಷಣಿಕ ಹೊರೆ ಬಗ್ಗೆ ವಿದ್ಯಾರ್ಥಿಗಳು ದೂರು ನೀಡಿದ್ದಾರೆ. ಇದನ್ನು ಪರಿಗಣಿಸಿ ರಾಜ್ಯ ಸರ್ಕಾರವು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿದೆ ಎಂದು ಹೇಳಿದರು.

‘ಈಗಿನ ಪಠ್ಯಪುಸ್ತಕಗಳಲ್ಲಿ ಇರುವ ಪಠ್ಯಕ್ರಮದಲ್ಲಿ ಶೇ 25ರಷ್ಟು ಪ್ರಮಾಣವನ್ನು ತೆಗೆಯಲಾಗುವುದು. ಆದರೆ ಪುಸ್ತಕಗಳಲ್ಲಿ ಇರುವ ವಿಷಯ ಬದಲಾಯಿಸುವುದಿಲ್ಲ. ಪಠ್ಯಪುಸ್ತಕ ಸಮಿತಿ ಈ ನಿರ್ಧಾರ ಅನುಮೋದಿಸಿದೆ’ ಎಂದು ಮಾಹಿತಿ ನೀಡಿದರು.

ಸಿಬಿಐ ತನಿಖೆಗೆ ಶಿಫಾರಸು


ಪಟ್ನಾ (ಪಿಟಿಐ): ಪಟ್ನಾದಲ್ಲಿ ನೀಟ್ ಆಕಾಂಕ್ಷಿ ಯುವತಿಯೊಬ್ಬರು ಮೃತಪಟ್ಟಿರುವ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಬಿಹಾರ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ.

‘ಸಮಗ್ರ ತನಿಖೆಗಾಗಿ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸಲಾಗಿದೆ’ ಎಂದು ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ಶನಿವಾರ ತಿಳಿಸಿದ್ದಾರೆ.

ಜೆಹಾನಾಬಾದ್‌ನ ಯುವತಿ ಪಟ್ನಾದ ವಸತಿ ನಿಲಯವೊಂದರಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಬಳಿಕ ಜನವರಿ 11ರಂದು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು.

ಸಿ.ಎಂ ನಾಯ್ಡು ಗಿನ್ನಿಸ್ ದಾಖಲೆ

ಕುಪ್ಪಂ (ಆಂಧ್ರಪ್ರದೇಶ) (ಪಿಟಿಐ): ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಶನಿವಾರ ಚಿತ್ತೂರು ಜಿಲ್ಲೆಯಲ್ಲಿ 24 ಗಂಟೆ ಅವಧಿಯಲ್ಲಿ ಮಹಿಳೆಯರಿಗೆ 5,500 ಇ–ಸೈಕಲ್‌ಗಳನ್ನು ವಿತರಿಸಿ, ಗಿನ್ನಿಸ್ ವಿಶ್ವ ದಾಖಲೆ ನಿರ್ಮಿಸಿದ್ದಾರೆ.


ಚಂದ್ರಬಾಬು

ಮಹಿಳಾ ಸಬಲೀಕರಣ ಬೆಂಬಲಿಸುವ ನಿಟ್ಟಿನಲ್ಲಿ ಮಹಿಳೆಯರಿಗೆ 5555 ಇ–ಸೈಕಲ್‌ಗಳನ್ನು ವಿತರಿಸಲಾಗಿದೆ. ಇವು ಮಹಿಳೆಯರಲ್ಲಿ ಆತ್ಮ ವಿಶ್ವಾಸ ಹೆಚ್ಚಿಸುವುದರ ಜತೆಗೆ ಅವರಿಗೆ ಮಾಸಿಕವಾಗಿ ₹1500 ಉಳಿತಾಯ ಮಾಡಲು ಸಹಕಾರಿಯಾಗುತ್ತವೆ. ಅಲ್ಲದೇ, ಪರಿಸರ ಸುಸ್ಥಿರತೆಯನ್ನೂ ಉತ್ತೇಜಿಸುತ್ತವೆ ಎಂದು ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಿದೆ.

ಸಿಜೆಐ ಅಭಿಮತಕ್ಕೆ ಸಂಘಟನೆಗಳ ಖಂಡನೆ

ಕೈಗಾರಿಕಾ ಬೆಳವಣಿಗೆಗೆ ಸಂಘಟನೆಗಳು ಮಾರಕ ಎಂದಿದ್ದ ನ್ಯಾ. ಸೂರ್ಯ ಕಾಂತ್

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮನೆಗೆಲಸದವರಿಗೆ ಕನಿಷ್ಠ ವೇತನ ನಿಗದಿ ಮಾಡಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದೆ. ಈ ವೇಳೆ, ‘ಕಾರ್ಮಿಕರು ಸಂಘಟನೆಗಳನ್ನು ರಚಿಸಿಕೊಂಡಿರುವುದು ಮತ್ತು ಅವುಗಳ ಕಾರ್ಯವಿಧಾನವೇ ದೇಶದ ಕೈಗಾರಿಕಾ ಬೆಳವಣಿಗೆಗೆ ಕುತ್ತಾಗಿದೆ’ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೀಡಿದ ಅಭಿಪ್ರಾಯವನ್ನು ದೇಶದ ಕಾರ್ಮಿಕ ಸಂಘಟನೆಗಳು ಖಂಡಿಸಿವೆ.

ಅರ್ಜಿ ವಜಾ ಮಾಡಿದ್ದನ್ನು ಐಎನ್‌ಟಿಯುಸಿ, ಎಐಟಿಯುಸಿ, ಎಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲುಎ, ಎಐಸಿಸಿಟಿಯು, ಎಲ್‌ಪಿಎಲ್ ಮತ್ತು ಯುಟಿಯುಸಿ ಸಂಘಟನೆಗಳು ವಿರೋಧಿಸಿವೆ. ‘ಸಿಜೆಐ ಸೂರ್ಯ ಕಾಂತ್ ಅವರು ತಮ್ಮ ಹೇಳಿಕೆಯನ್ನು ವಾಪಸು ಪಡೆಯಬೇಕು’ ಎಂದೂ ಈ ಸಂಘಟನೆಗಳು ಒತ್ತಾಯಿಸಿವೆ.

ಈ ಬಗ್ಗೆ ಶನಿವಾರ ಹೇಳಿಕೆ ಬಿಡುಗಡೆ ಮಾಡಿರುವ ಸಂಘಟನೆಗಳು, ‘ನ್ಯಾಯದಾನದ ವೇಳೆ ಅಭಿಪ್ರಾಯ ವ್ಯಕ್ತಪಡಿಸುವಾಗ ‘ವರ್ಗ ತಾರತಮ್ಯ’ದ ಮನಃಸ್ಥಿತಿ ಇರುವುದು ಇದರಿಂದ ತಿಳಿಯುತ್ತದೆ. ಸಾಂವಿಧಾನಿಕವಾಗಿ ಇರುವ ಕಲ್ಯಾಣ ರಾಜ್ಯ ಪರಿಕಲ್ಪನೆಯನ್ನು ಈ ಅಭಿಪ್ರಾಯವು ಕಡೆಗಣಿಸಿದೆ. ಸಂವಿಧಾನ ನೀಡಿರುವ ಸಾಮಾಜಿಕ ನ್ಯಾಯ, ಸಮಾನತೆ, ಕಾರ್ಮಿಕರಿಗೆ ಘನತೆಯ ಬದುಕು ಇರಬೇಕು ಎನ್ನುವುದಕ್ಕೆ ಇದು ತದ್ವಿರುದ್ಧವಾಗಿದೆ’ ಎಂದಿವೆ.

‘ಕಾರ್ಮಿಕರ ಹಕ್ಕುಗಳನ್ನು ಮತ್ತು ಕಾರ್ಮಿಕರ ಸಂಘರ್ಷವನ್ನು ನಿರಾಕರಿಸುವ ಲಾಗಾಯಿತಿನ ಸಂಕಥನಕ್ಕೆ ಇಂಥ ಅಭಿಪ್ರಾಯವು ಮುದ್ರೆ ಒತ್ತಿದಂತಾಗಿದೆ. ಆರ್ಥಿಕ ಅಭಿವೃದ್ಧಿಗೆ ಕಾರ್ಮಿಕ ಸಂಘಟನೆಗಳು ಯಾವತ್ತಿಗೂ ಮಾರಕ ಅಥವಾ ತೊಡಕಾಗಿಲ್ಲ. ಇವುಗಳು ಪ್ರಜಾಸತ್ತಾತ್ಮಕವಾದ ಸಂಸ್ಥೆಗಳು. ಕಾರ್ಮಿಕರ ಉತ್ತಮ ಜೀವನಕ್ಕೆ, ಅವರ ಘನತೆಯ ಬದುಕಿಗೆ ಮತ್ತು ಅವರ ಹಕ್ಕುಗಳನ್ನು ರಕ್ಷಿಸುವುದಕ್ಕೆ ಇರುವ ಸಂಸ್ಥೆಗಳಿವು’ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿವೆ.

ಸಂಘಟನೆಗಳು ಹೇಳಿದ್ದೇನು?

- ಮನೆಗೆಲಸದವರಿಗೆ ಸರಿಯಾಗಿ ವೇತನ ನೀಡುವುದಿಲ್ಲ, ಬಹಳ ಹೊತ್ತು ಅವರಿಂದ ಕೆಲಸ ಮಾಡಿಸಿಕೊಳ್ಳಲಾಗುತ್ತದೆ, ಯಾವಾಗ ಬೇಕಾದರೂ ಅವರನ್ನು ಕೆಲಸದಿಂದ ತೆಗೆದು ಹಾಕಲಾಗುತ್ತದೆ. ಜೊತೆಗೆ, ಅವರ ಕುರಿತು ತೀರಾ ಕೀಳಾಗಿ ಮಾತನಾಡಲಾಗುತ್ತದೆ, ಮಾತಿನ ಮೂಲಕವೇ ಹಿಂಸಿಸಲಾಗುತ್ತದೆ. ಈ ಯಾವುದನ್ನೂ ತಡೆಯಲು ಸೂಕ್ತ ಕಾನೂನುಗಳಿಲ್ಲ
- ಕಾರ್ಮಿಕರ ಹಕ್ಕುಗಳ ಮೇಲೆ ಕೇಂದ್ರ ಸರ್ಕಾರವು ದಾಳಿ ನಡೆಸುತ್ತಿದೆ. ಉದ್ಯಮ ಸ್ನೇಹಿಯಾಗಿರುವ ಕಾರ್ಮಿಕ ಸಂಹಿತೆಗಳು, ಶ್ರಮ ಶಕ್ತಿ ನೀತಿ ಸೇರಿದಂತೆ ಹಲವು ಕಾನೂನುಗಳ ಮೂಲಕ ಸರ್ಕಾರ ಕಾರ್ಮಿಕರನ್ನು ಹಿಂಸಿಸುತ್ತಿದೆ. ನರೇಗಾವನ್ನು ದುರ್ಬಲಗೊಳಿಸಲಾಗಿದೆ. ಕೇಂದ್ರ ಸರ್ಕಾರವು ವಿದ್ಯುತ್ ತಿದ್ದುಪಡಿ ಕಾಯ್ದೆ 2025 ಮತ್ತು ಬೀಜ ಮಸೂದೆಗಳನ್ನು ಮುಂದಿಡುತ್ತಿರುವ ಈ ಹೊತ್ತಿನಲ್ಲಿ ನ್ಯಾಯಾಲಯಗಳು ನೀಡುವ ಅಭಿಪ್ರಾಯಗಳು ಪ್ರಮುಖ ಪಾತ್ರವಹಿಸುತ್ತವೆ. ತಪ್ಪು ಸಂದೇಶ ನೀಡುತ್ತವೆ

ಮನೆಗಳು ಯುದ್ಧಭೂಮಿ ಆಗುತ್ತವೆ: ಸಿಜೆಐ


ಸೂರ್ಯ ಕಾಂತ್

ದೇಶದಲ್ಲಿ ಎಷ್ಟೊಂದು ಕಾರ್ಖಾನೆಗಳು ಮುಚ್ಚಿವೆ. ಇದಕ್ಕೆ ಕಾರ್ಮಿಕ ಸಂಘಟನೆಗಳಿಗೆ ಧನ್ಯವಾದ ಹೇಳಲೇಬೇಕು. ನಿಜಾಂಶ ತಿಳಿದುಕೊಳ್ಳೋಣ. ದೇಶದ ಎಲ್ಲ ಸಾಂಪ್ರದಾಯಿಕ ಕಾರ್ಖಾನೆಗಳು ಇಂಥ ‘ಬಾವುಟ’ ಸಂಘಟನೆಗಳಿಂದ ಮುಚ್ಚಿವೆ. ಅವರಿಗೆ ಕೆಲಸ ಮಾಡಲು ಇಷ್ಟವಿಲ್ಲ. ಇಂಥ ಸಂಘಟನೆಗಳ ನಾಯಕರೇ ದೇಶದ ಕೈಗಾರಿಕಾ ಬೆಳವಣಿಗೆಯನ್ನು ತಡೆಯುತ್ತಿದ್ದಾರೆ. ಮನೆಗೆಲಸದವರಿಗೆ ಕನಿಷ್ಠ ವೇತನ ನಿಗದಿ ಮಾಡಿದರೆ, ಜನರು ಮನೆಗೆಲಸದವರನ್ನು ನೇಮಕ ಮಾಡಿಕೊಳ್ಳುವುದಕ್ಕೇ ನಿರಾಕರಿಸುತ್ತಾರೆ. ಎಲ್ಲ ಮನೆಗಳು ಯುದ್ಧಭೂಮಿಯಾಗುತ್ತವೆ. ಕನಿಷ್ಠ ವೇತನ ನಿಗದಿ ಮಾಡಿದರೆ, ಈ ಸಂಘಟನೆಗಳು ಎಲ್ಲ ಮನೆಯವರನ್ನು ನ್ಯಾಯಾಲಯಕ್ಕೆ ಎಳೆದು ತರುತ್ತಾರೆ

ಸೂರ್ಯ ಕಾಂತ್, ಭಾರತದ ಮುಖ್ಯ ನ್ಯಾಯಮೂರ್ತಿ

‘ಕಡ್ಡಾಯ ಸೇವಾ ಬಾಂಡ್ ಅವಧಿ ಮುಂದೂಡಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಸರ್ಕಾರಿ ಕಡ್ಡಾಯ ಸೇವಾ ಬಾಂಡ್ ಅವಧಿಯನ್ನು ಮುಂದೂಡುವ ಮೂಲಕ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಸೂಪರ್ ಸ್ಪೆಷಾಲಿಟಿ ಕೋರ್ಸ್ ತೆಗೆದುಕೊಳ್ಳಲು ಅನುವು ಮಾಡಿಕೊಡುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕು’ ಎಂದು ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ.

‘ಸೂಪರ್ ಸ್ಪೆಷಾಲಿಟಿ ಕೋರ್ಸ್ ಪೂರ್ಣಗೊಳಿಸುವ ಅಭ್ಯರ್ಥಿಗಳು ರಾಜ್ಯದಲ್ಲೇ ಸೇವೆ ಸಲ್ಲಿಸುವುದರಿಂದ ಹಲವು ಪ್ರಯೋಜನಗಳೂ ಆಗುತ್ತವೆ’ ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ನೇತೃತ್ವದ ಪೀಠ ಹೇಳಿದೆ.

ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವುದನ್ನು ಅನೇಕ ರಾಜ್ಯಗಳು ಕಡ್ಡಾಯಗೊಳಿಸಿವೆ.

‘ಸೇವಾ ಬಾಂಡ್ ಸಲ್ಲಿಸಿದ ಅಭ್ಯರ್ಥಿಗಳು ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆಗಳಲ್ಲಿ ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳಿಗೆ ಅರ್ಹತೆಯ ಆಧಾರದ ಮೇಲೆ ಪ್ರವೇಶ ಪಡೆದಾಗ, ಅವರು ಆ ಕೋರ್ಸ್ ಅನ್ನು ಪೂರ್ಣಗೊಳಿಸುವವರೆಗೆ ಬಾಂಡ್‌ನಡಿ ಸೇವೆ ಸಲ್ಲಿಸುವುದನ್ನು ಮುಂದೂಡಲು ರಾಜ್ಯಗಳು ಕ್ರಮ ಕೈಗೊಳ್ಳಬೇಕು’ ಎಂದು ಪೀಠ ಸೂಚಿಸಿದೆ.

‘ಒಂದು ವೇಳೆ ಅಭ್ಯರ್ಥಿಯು ಕಡ್ಡಾಯ ಸೇವೆಯನ್ನು ಪೂರ್ಣಗೊಳಿಸಿ, ಆ ನಂತರ ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳಾದ ಎಂಸಿಎಚ್ ಮತ್ತು ಡಿಎಂಗೆ ಅರ್ಜಿ ಸಲ್ಲಿಸಬೇಕೆಂಬ ನಿಯಮವಿದ್ದರೆ, ಅಂತಹ ಸಂದರ್ಭಗಳಲ್ಲಿ ಕೆಲವು ಅಭ್ಯರ್ಥಿಗಳು ವಯೋಮಿತಿ ಅಥವಾ ಇತರ ಕಾರಣಗಳಿಂದ ಆ ಕೋರ್ಸ್‌ಗಳಿಗೆ ಸೇರಲು ಅನರ್ಹರಾಗುವ ಸಾಧ್ಯತೆ ಇರುತ್ತದೆ’ ಎಂದು ಹೇಳಿದೆ.

ದೆಹಲಿ ಗಲಭೆ: ಫೈಜಾನ್ ಖುಲಾಸೆ

ನವದೆಹಲಿ (ಪಿಟಿಐ): 2020ರ ದೆಹಲಿ ಗಲಭೆಯಲ್ಲಿ ಹಿಂಸಾಚಾರ ನಡೆಸಿದ ಹಾಗೂ ಬೆಂಕಿ ಹಚ್ಚಿದ ಆರೋಪ ಹೊತ್ತಿದ್ದ ಫೈಜಾನ್ ಅವರನ್ನು ಇಲ್ಲಿನ ನ್ಯಾಯಾಲಯವು ಖುಲಾಸೆಗೊಳಿಸಿದೆ.


ಗಲಭೆಯ ವೇಳೆ ಬ್ರಿಜ್‌ಪುರಿ ರಸ್ತೆಯಲ್ಲಿರುವ ಅರುಣ್ ಮಾಡರ್ನ್ ಪಬ್ಲಿಕ್ ಸೀನಿಯರ್ ಸೆಕೆಂಡರಿ ಶಾಲೆಗೆ ಬೆಂಕಿ ಹಚ್ಚಿದ ಆರೋಪವನ್ನು ಫೈಜಾನ್ ಅಲಿಯಾಸ್ ಅರ್ಯಾನ್ ವಿರುದ್ಧ ಹೊರಿಸಲಾಗಿತ್ತು.

ಈ ಪ್ರಕರಣದ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಪರ್ವೀನ್ ಸಿಂಗ್ ಅವರು ಅರ್ಯಾನ್ ಅವರನ್ನು ದೋಷಮುಕ್ತಗೊಳಿಸಿ ಜ.28ರಂದು ಆದೇಶ ಹೊರಡಿಸಿದ್ದಾರೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರ ಸಾಕ್ಷ್ಯವನ್ನೇ ಅವಲಂಬಿಸಿರುವುದು ಒಳ್ಳೆಯದಲ್ಲ. ಆರೋಪ ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ’ ಎಂದು ನ್ಯಾಯಾಲಯ ಆದೇಶದಲ್ಲಿ ತಿಳಿಸಿದೆ.

ವಂಚನೆ ಪ್ರಕರಣ: ನೋಟಿಸ್ ಸ್ವೀಕರಿಸಲು ಅದಾನಿ ಒಪ್ಪಿಗೆ

ನ್ಯೂಯಾರ್ಕ್/ನವದೆಹಲಿ (ಪಿಟಿಐ): ವಂಚನೆ ಪ್ರಕರಣದಲ್ಲಿ ಉದ್ಯಮಿ ಗೌತಮ್ ಅದಾನಿ ಮತ್ತು ಅವರ ಸೋದರಳಿಯ ಸಾಗರ್ ಅದಾನಿ ಅಮೆರಿಕದ ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್ (ಎಸ್‌ಇಸಿ) ಜಾರಿಗೊಳಿಸಿರುವ ಕಾನೂನು ನೋಟಿಸ್ ಸ್ವೀಕರಿಸಲು ಒಪ್ಪಿಕೊಂಡಿದ್ದು, 90 ದಿನಗಳಲ್ಲಿ ಪ್ರತಿಕ್ರಿಯಿಸುವುದಾಗಿ ಕೋರ್ಟ್‌ಗೆ ತಿಳಿಸಿದ್ದಾರೆ.


ಗೌತಮ್ ಅದಾನಿ

ಗೌತಮ್ ಮತ್ತು ಸಾಗರ್ ಅದಾನಿ ಪರ ವಕೀಲರು ನ್ಯೂಯಾರ್ಕ್‌ನ ಬ್ರೂಕ್ಲಿನ್‌ನಲ್ಲಿರುವ ಫೆಡರಲ್ ನ್ಯಾಯಾಲಯಕ್ಕೆ ಸಲ್ಲಿಸಿರುವ ಮನವಿಯಲ್ಲಿ, ನೋಟಿಸ್ ಸ್ವೀಕರಿಸಲು ಒಪ್ಪಿರುವುದಾಗಿ ತಿಳಿಸಿದ್ದಾರೆ.

ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ (ಎಜಿಇಎಲ್) ಬಗ್ಗೆ ಅಮೆರಿಕದ ಷೇರುಪೇಟೆಗೆ ತಪ್ಪು ಮಾಹಿತಿ ನೀಡಿದ ಆರೋಪದಡಿ, ‘ಎಸ್‌ಇಸಿ’ 2024ರ ನವೆಂಬರ್‌ನಲ್ಲಿ ಅದಾನಿ ಸಮೂಹದ ವಿರುದ್ಧ ಪ್ರಕರಣ ದಾಖಲಿಸಿತ್ತು.

ಮೂರು ತಿಂಗಳೊಳಗೆ ಪ್ರಕರಣವನ್ನು ವಜಾಗೊಳಿಸುವ ಮನವಿ ಅಥವಾ ಪ್ರತಿವಾದವನ್ನು ಸಲ್ಲಿಸುವಂತೆ ಕೋರ್ಟ್ ಅದಾನಿ ಪರ ವಕೀಲರಿಗೆ ಸೂಚಿಸಿದೆ. ಅದಾನಿ ಸಮೂಹ ಸಲ್ಲಿಸುವ ಮನವಿಗೆ ಎಸ್‌ಇಸಿ 60 ದಿನಗಳ ಒಳಗೆ ಆಕ್ಷೇಪ ಸಲ್ಲಿಸಬಹುದು.

ಸೌರ ವಿದ್ಯುತ್ ಗುತ್ತಿಗೆ ಪಡೆಯಲು ಭಾರತದಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿದ ಆರೋಪ ಎಜಿಇಎಲ್ ಮೇಲಿದೆ.

‘ಶೇ 50ರಷ್ಟು ಮತ ಪಡೆಯುವ ಗುರಿ’

ಕಾರ್ಯಕರ್ತರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಬಿಜೆಪಿ ಅಧ್ಯಕ್ಷ ನಿತಿನ್


ಗೋವಾದ ಪಣಜಿಯಲ್ಲಿ ಶನಿವಾರ ನಡೆದ ಬಿಜೆಪಿ ಕಾರ್ಯಕರ್ತರ ಸಮಾವೇಶಕ್ಕೆ ಬಂದ ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಅವರಿಗೆ ಹೂ ಮಳೆಗರೆದು ಸ್ವಾಗತಿಸಲಾಯಿತು ಪಿಟಿಐ ಚಿತ್ರ

ಪಣಜಿ (ಪಿಟಿಐ): ಬೂತ್ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಪಕ್ಷದ ಸಂಘಟನೆಯನ್ನು ಬಲಿಷ್ಠಗೊಳಿಸುವಂತೆ ಕಾರ್ಯಕರ್ತರಿಗೆ ಕರೆ ನೀಡಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ‘2027ರಲ್ಲಿ ನಡೆಯುವ ಗೋವಾ ವಿಧಾನಸಭಾ ಚುನಾವಣೆಯಲ್ಲಿ ಪ್ರತಿ ಬೂತ್‌ನಲ್ಲಿ ಕನಿಷ್ಠ ಶೇಕಡ 50ರಷ್ಟು ಮತಗಳನ್ನು ಪಡೆಯುವ ಗುರಿಯೊಂದಿಗೆ ಕಾರ್ಯನಿರ್ವಹಿಸಬೇಕು’ ಎಂದರು.

ಪಕ್ಷದ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, 2027ರ ಚುನಾವಣೆಯು ‘ವಿಕಸಿತ ಗೋವಾ’ದ ದೂರದೃಷ್ಟಿ ಸಾಧನೆಗೆ ಅತ್ಯಂತ ಮಹತ್ವದ್ದಾಗಿದೆ. ರಾಜ್ಯದ ಅಭಿವೃದ್ಧಿಗಾಗಿ ಸ್ಥಿರ ಸರ್ಕಾರ ಮುಂದುವರಿಯಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಪಕ್ಷದ ಸಂಘಟನೆಯಲ್ಲಿ ಬೂತ್ ಹಂತದ ಮುಖ್ಯಸ್ಥರದ್ದು ಮಹತ್ವದ ಪಾತ್ರ. ತಳಮಟ್ಟದಲ್ಲಿ ಜನರ ಬೆಂಬಲ ಪಡೆಯುವ ಮೂಲಕ ಅವರು ಪಕ್ಷವನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕು ಎಂದು ಅವರು ಹೇಳಿದರು.

‘ಗ್ರಾಮೀಣ ಮತ್ತು ಬಡ ಜನರು ಬಲಿಷ್ಠವಾದರೆ ಬಿಜೆಪಿ ಬಲಿಷ್ಠವಾಗುತ್ತದೆ. ಇದು ಕ್ರಮೇಣ ರಾಜ್ಯ ಮತ್ತು ದೇಶದ ಪ್ರಗತಿಗೂ ಕಾರಣವಾಗುತ್ತದೆ ಎಂಬುದು ಪ್ರಧಾನಿ ನರೇಂದ್ರ ಮೋದಿ ಅವರ ನಂಬಿಕೆ. ಅದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಎಲ್ಲರೂ ಶ್ರಮಿಸಬೇಕಿದೆ’ ಎಂದು ಅವರು ಕರೆ ನೀಡಿದರು.

ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮಾತನಾಡಿ, ‘ರಾಜ್ಯದಲ್ಲಿ 2027ರಲ್ಲಿ ಬಿಜೆಪಿ ಪುನಃ ಅಧಿಕಾರಕ್ಕೆ ಬರುವುದು ಖಚಿತ’ ಎಂದರು.

‘ರಾಜಕೀಯವು 100 ಮೀಟರ್ ಓಟದ ಸ್ಪರ್ಧೆಯಲ್ಲ, ಅದು ಮ್ಯಾರಥಾನ್ ಓಟ. ಇದರಲ್ಲಿ ವೇಗದ ಬದಲಿಗೆ ಮನೋಬಲದ ಪರೀಕ್ಷೆ ಆಗುತ್ತದೆ’ ಎಂದು ಹೇಳಿದರು.

ಮಮತಾ ಸರ್ಕಾರ ಕಿತ್ತೊಗೆಯಿರಿ: ಶಾ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಆಡಳಿತವನ್ನು ಮೂಲದಿಂದ ಕಿತ್ತೊಗೆದು, ದೇಶಭಕ್ತರು ಮತ್ತು ರಾಷ್ಟ್ರೀಯವಾದಿಗಳ ಸರ್ಕಾರ ಸ್ಥಾಪಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಮತದಾರರಲ್ಲಿ ಮನವಿ ಮಾಡಿದರು.

ಉತ್ತರ 24 ಪರಗಣದಲ್ಲಿ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚನೆಯು ರಾಜ್ಯಕ್ಕಷ್ಟೇ ಅಲ್ಲದೆ, ರಾಷ್ಟ್ರೀಯ ಭದ್ರತೆಗೂ ನಿರ್ಣಾಯಕವಾಗಿದೆ ಎಂದರು.

‘ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರ್ಕಾರವು ನುಸುಳುಕೋರರಿಗೆ ಆಶ್ರಯ ನೀಡುತ್ತಿದೆ, ಭ್ರಷ್ಟಾಚಾರವನ್ನು ಸಾಂಸ್ಥೀಕರಣಗೊಳಿಸುತ್ತಿದೆ ಮತ್ತು ಚುನಾವಣಾ ಲಾಭಕ್ಕಾಗಿ ಗಡಿ ಭದ್ರತಾ ಕ್ರಮಗಳನ್ನು ತಡೆಯುತ್ತಿದೆ’ ಎಂದು ಆರೋಪಿಸಿದರು.

ವಿಫಲ ಗೃಹ ಸಚಿವ: ಅಭಿಷೇಕ್

‘ಅಮಿತ್ ಶಾ ಅವರು ದೇಶ ಕಂಡ ಅತ್ಯಂತ ವಿಫಲ ಗೃಹ ಸಚಿವ’ ಎಂದು ತೃಣಮೂಲ ಕಾಂಗ್ರೆಸ್‌ನ ನಾಯಕ ಅಭಿಷೇಕ್ ಬ್ಯಾನರ್ಜಿ ಟೀಕಿಸಿದ್ದಾರೆ.

ದೇಶದ ಆಂತರಿಕ ಭದ್ರತೆಯನ್ನು ಖಚಿತಪಡಿಕೊಳ್ಳುವಲ್ಲಿ ವಿಫಲರಾಗಿರುವ ಅವರು ರಾಜಕೀಯ ವಿರೋಧಿಗಳ ಮೇಲೆ ಆರೋಪ ಮಾಡುವುದರಲ್ಲಿಯೇ ತೊಡಗಿದ್ದಾರೆ ಎಂದು ಆರೋಪಿಸಿದ್ದಾರೆ.

‘ಸಿಲಿಗುರಿ ದೇಶದ ಸ್ವತ್ತು’

ಸಿಲಿಗುರಿ (ಪಿಟಿಐ): ‘ಸಿಲಿಗುರಿ ಕಾರಿಡಾರ್’ ಭಾರತಕ್ಕೆ ಸೇರಿದ್ದು. ಅದರ ಮೇಲೆ ಯಾರೂ ಕೈ ಇಡಲಾರರು. ಈ ವಿಚಾರವಾಗಿ ಯಾವುದೇ ಬೆದರಿಕೆ ಒಡ್ಡುವುದಕ್ಕೂ ಆಸ್ಪದ ನೀಡುವುದಿಲ್ಲ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಪ್ರತಿಪಾದಿಸಿದ್ದಾರೆ.

ಇಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿರುವ ಸಚಿವ, ‘ದೆಹಲಿಯಲ್ಲಿ ಕೆಲವು ಮಂದಿ ಸಿಲಿಗುರಿ ಕಾರಿಡಾರ್ ಅನ್ನು ದೇಶದಿಂದ ವಿಭಜಿಸುವುದಾಗಿ ಘೋಷಣೆ ಕೂಗಿದ್ದರು. ಅದು ಹೇಗೆ ಸಾಧ್ಯವಾಗುತ್ತದೆ? ಸಿಲಿಗುರಿ ಕಾರಿಡಾರ್ ಏನು ನಿಮ್ಮ ಅಪ್ಪನದ್ದೇ? ಇದು ಭಾರತದ ಭೂಮಿ. ಯಾರೂ ಅದರ ಮೇಲೆ ಕೈ ಹಾಕಲಾಗದು’ ಎಂದಿದ್ದಾರೆ.

‘ಸಿಲಿಗುರಿಯನ್ನು ದೇಶದಿಂದ ವಿಭಜಿಸುವ ಮಾತನಾಡಿದವರನ್ನು ಪೊಲೀಸರು ಕಂಬಿಗಳ ಹಿಂದೆ ಕೂರುವಂತೆ ಮಾಡಿದ್ದರು. ಆದರೆ, ಇಂಡಿಯಾ ಕೂಟದ ಕೆಲವು ಮಂದಿ ಅವರನ್ನು ಜೈಲಿನಿಂದ ಹೊರತರಲು ಬಹಳ ಪ್ರಯತ್ನ ಮಾಡಿದ್ದರು’ ಎಂದೂ ಅಮಿತ್ ಶಾ ಆರೋಪಿಸಿದ್ದಾರೆ.

‘ಅಲ್ಲದೇ, ಇಂಡಿಯಾ ಕೂಟದ ಸಂಸದರು ಆರೋಪಿಗಳ ಪರವಾಗಿ ವಾದ ಮಂಡಿಸಲು ಸುಪ್ರೀಂ ಕೋರ್ಟ್‌ವರೆಗೂ ಹೋಗಿದ್ದರು. ಆದರೆ, ಕಡೆಯಲ್ಲಿ ಸತ್ಯಕ್ಕೆ ಜಯ ಸಂದಿತು. ಸುಪ್ರೀಂ ಕೋರ್ಟ್ ಕೂಡ ಅವರಿಗೆ ಜಾಮೀನು ನೀಡಲು ನಿರಾಕರಿಸಿತು’ ಎಂದೂ ಹೇಳಿದ್ದಾರೆ.

ಗಗನಯಾನಕ್ಕೆ ಸಿದ್ಧತೆ: ಇಸ್ರೊ

ಚೆನ್ನೈ (ಪಿಟಿಐ): ದೇಶದ ಮಹತ್ವಾಕಾಂಕ್ಷೆಯ ಮಾನವ ರಹಿತ ಮೊದಲ ಗಗನಯಾನಕ್ಕೆ ಸಿದ್ಧತೆ ಶುರುವಾಗಿದೆ ಎಂದು ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಧ್ಯಕ್ಷ ವಿ. ನಾರಾಯಣನ್ ಶುಕ್ರವಾರ ತಡರಾತ್ರಿ ಇಲ್ಲಿ ತಿಳಿಸಿದರು.

ಗಗನಯಾನ ಮಿಷನ್ ಪ್ರಸ್ತುತ ಅಭಿವೃದ್ಧಿಯಲ್ಲಿರುವ ಮಾನವ ಸಹಿತ ಮೊದಲ ಬಾಹ್ಯಾಕಾಶ ಕಾರ್ಯಕ್ರಮ. ಮೂವರ ತಂಡವನ್ನು ಮೂರು ದಿನ ಬಾಹ್ಯಾಕಾಶಕ್ಕೆ ಸುರಕ್ಷಿತವಾಗಿ ಕಳುಹಿಸಿಕೊಟ್ಟು, ಅವರನ್ನು ಅಲ್ಲಿಂದ ವಾಪಸ್ ಕರೆಸಿಕೊಳ್ಳುವುದು ಇದರ ಉದ್ದೇಶವಾಗಿದೆ.

‘ಗಗನಯಾನವು 2027ಕ್ಕೆ ನಿಗದಿಯಾಗಿದೆ. ಅದಕ್ಕೂ ಮೊದಲು, ಮಾನವ ರಹಿತ ಮೂರು ಕಾರ್ಯಾಚರಣೆಗಳನ್ನು ಯೋಜಿಸಲಾಗಿದೆ. ನಾವು ಮೊದಲು ಮಾನವ ರಹಿತ ಕಾರ್ಯಾಚರಣೆಯತ್ತ ಕೆಲಸ ಮಾಡುತ್ತಿದ್ದೇವೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ಗಗನಯಾನದ ಯಶಸ್ಸಿಗಾಗಿ ವಿಜ್ಞಾನಿಗಳು ಹಲವು ಪರೀಕ್ಷೆಗಳನ್ನು ನಡೆಸುತ್ತಿದ್ದಾರೆ ಎಂದರು.

‘ಹಲವು ಪರೀಕ್ಷೆಗಳು ನಡೆಯುತ್ತಿವೆ. ಗಗನಯಾತ್ರಿಯ ಸುರಕ್ಷತೆ ಬಹಳ ಮುಖ್ಯ. ಆದ್ದರಿಂದ ನಾವು ಬಹಳ ಜಾಗರೂಕರಾಗಿರಬೇಕು. ಪ್ರತಿಯೊಂದು ವ್ಯವಸ್ಥೆಗೂ ನಾವು ಅರ್ಹತೆ ಪಡೆಯಬೇಕು. ರಾಕೆಟ್ ವ್ಯವಸ್ಥೆಯಲ್ಲಿ ಶೇಕಡ 100ರ ಸಾಧನೆ ಮಾಡಬೇಕು. ನಮ್ಮ ಗುರಿ (ಗಗನಯಾನದ ಯಶಸ್ಸು) ತಲುಪುವುದಕ್ಕಾಗಿ ನಾವು ಪರಿಪೂರ್ಣ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದ್ದೇವೆ’ ಎಂದು ಹೇಳಿದರು.

ಆರ್‌ಟಿಐ ಮರುಪರಿಶೀಲನೆ: ವಿರೋಧ

ನವದೆಹಲಿ (ಪಿಟಿಐ): ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆ 2005ರ ಮರುಪರಿಶೀಲನೆಗೆ ಕರೆ ನೀಡಿರುವ ಈಚಿನ ಆರ್ಥಿಕ ಸಮೀಕ್ಷೆಗೆ ತೀವ್ರ ವಿರೋಧ ವ್ಯಕ್ತಪಡಿಸಿ, ಸಿಪಿಐನ ರಾಜ್ಯಸಭಾ ಸಂಸದ ಪಿ. ಸಂದೋಷ್ ಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶನಿವಾರ ಪತ್ರ ಬರೆದಿದ್ದಾರೆ.

‘ಆಂತರಿಕ ಚರ್ಚೆಗಳನ್ನು ರಕ್ಷಿಸಲಿಕ್ಕಾಗಿ ಆರ್‌ಟಿಐ ಕಾಯ್ದೆಯ ಮರುಪರಿಶೀಲನೆಯ ಅಗತ್ಯವಿರುವ ಸಲಹೆಯು, ಭ್ರಷ್ಟಾಚಾರವನ್ನು ನ್ಯಾಯಸಮ್ಮತಗೊಳಿಸುವ ಮತ್ತು ಆಡಳಿತಾತ್ಮಕ ದಕ್ಷತೆಯ ಸೋಗಿನಲ್ಲಿ ತಪ್ಪುಗಳನ್ನು ರಕ್ಷಿಸುವ ಅಪಾಯವನ್ನು ಎದುರಿಸುತ್ತದೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಎಡಪಕ್ಷಗಳ ನಿರ್ಣಾಯಕ ಬೆಂಬಲದೊಂದಿಗೆ ಯುಪಿಎ–1 ಸರ್ಕಾರ ಜಾರಿಗೆ ತಂದ ಆರ್‌ಟಿಐ ಕಾಯ್ದೆಯು, ಪಾರದರ್ಶಕತೆ ಮತ್ತು ಪ್ರಜಾಪ್ರಭುತ್ವದ ಹೊಣೆಗಾರಿಕೆಯನ್ನು ಸಾಂಸ್ಥಿಕಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದಿದ್ದಾರೆ.

‘ನಾಗರಿಕರ ಸಬಲೀಕರಣ, ಭ್ರಷ್ಟಾಚಾರ ನಿಗ್ರಹಿಸುವುದು ಪ್ರಜ್ಞಾಪೂರ್ವಕ ರಾಜಕೀಯ ಆಯ್ಕೆಯಾಗಿದೆ. ಇದರ ಚೈತನ್ಯವನ್ನೇ ದುರ್ಬಲಗೊಳಿಸುವ ಪ್ರಯತ್ನವು ಸಾಂವಿಧಾನಿಕ ಆಡಳಿತದ ಆಶಯವನ್ನೇ ಬುಡಮೇಲುಗೊಳಿಸಲಿದೆ’ ಎಂದಿದ್ದಾರೆ.

‘ಪ್ರಜಾಪ್ರಭುತ್ವ ಆಡಳಿತವು ಮುಕ್ತತೆಯಿಂದ ಬಳಲುತ್ತಿಲ್ಲ. ಇದು ಗೋಪ್ಯತೆ, ಅನಿಯಂತ್ರಿತತೆ ಮತ್ತು ಗೋಚರಿಸದ ಪ್ರಭಾವದಿಂದ ಬಳಲುತ್ತಿದೆ. ಕಳೆದ ದಶಕದಲ್ಲೇ ಆರ್‌ಟಿಐ ಕಾಯ್ದೆಯನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸಲಾಗಿದೆ. ಮತ್ತಷ್ಟು ದುರ್ಬಲಗೊಳಿಸುವಿಕೆಯು ಪ್ರಜಾಪ್ರಭುತ್ವದ ಹೊಣೆಗಾರಿಕೆ ಮತ್ತು ಸಾರ್ವಜನಿಕ ನಂಬಿಕೆಗೆ ಹಾನಿಕಾರಕವಾಗಿದೆ’ ಎಂದಿರುವ ಸಂದೋಷ್, ಈ ನಿಲುವನ್ನು ಮರುಪರಿಶೀಲಿಸಿ ಎಂದು ಪ್ರಧಾನಿಯನ್ನು ಒತ್ತಾಯಿಸಿದ್ದಾರೆ.

‘ಕಾಂಗ್ರೆಸ್ ಗೆಲುವನ್ನು ಬಯಸುವೆ’

ತಿರುವನಂತಪುರ (ಪಿಟಿಐ): ‘ಮುಂಬರುವ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಅದರ ನೇತೃತ್ವದ ಯುಡಿಎಫ್ ಮೈತ್ರಿಯ ಗೆಲುವನ್ನು ಮಾತ್ರ ನಾನು ಬಯಸುತ್ತೇನೆ’ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಶನಿವಾರ ಹೇಳಿದರು.

‘ನನ್ನ ಪಕ್ಷವಾದ ಕಾಂಗ್ರೆಸ್ ಮತ್ತು ಅದರ ಮೈತ್ರಿಕೂಟದ ಅಭ್ಯರ್ಥಿಗಳ ಗೆಲುವಿಗಾಗಿ ಪ್ರಚಾರದಲ್ಲಿ ಭಾಗಿಯಾಗುತ್ತೇನೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ನನಗಿರುವುದು ಒಂದೇ ಪಕ್ಷ, ಅದು ಕಾಂಗ್ರೆಸ್. ಅದನ್ನು ಬಿಟ್ಟು ಎಲ್ಲಿಯೂ ಹೋಗುವುದಿಲ್ಲ’ ಎಂದು ಪುನರುಚ್ಚರಿಸಿದ ಅವರು, ‘ಈ ಕುರಿತು ಪ್ರಶ್ನೆ ಕೇಳುವುದನ್ನು ಮಾಧ್ಯಮಗಳು ನಿಲ್ಲಿಸಬೇಕು’ ಎಂದು ಮನವಿ ಮಾಡಿದರು.

ಕೊಚ್ಚಿಯಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ತರೂರ್ ಅವರನ್ನು ಕೆಲವು ನಾಯಕರು ಸರಿಯಾಗಿ ನಡೆಸಿಕೊಂಡಿರಲಿಲ್ಲ. ಇದರ ಬೆನ್ನಲ್ಲೇ, ತರೂರ್ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರನ್ನು ಗುರುವಾರ ಭೇಟಿಯಾಗಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದರು. ಬಳಿಕ ‘ಎಲ್ಲವೂ ಸರಿಯಾಗಿದೆ’ ಎಂದು ಹೇಳಿದ್ದರು.

‘ಶಾಂತಿ ಬಯಸುವವರಿಗೆ ಬೆಂಬಲ’

ನವದೆಹಲಿ (ಪಿಟಿಐ): ‘ಮಧ್ಯಪ್ರಾಚ್ಯ ದೇಶಗಳು ಬಹುಸ್ತರದ ಸವಾಲುಗಳನ್ನು ಎದುರಿಸುತ್ತಿವೆ. ಸ್ಥಿರತೆ, ಶಾಂತಿ ಮತ್ತು ಸಮೃದ್ಧಿಯನ್ನು ಬೆಂಬಲಿಸುವವರಿಗೆ ನಮ್ಮ ಬೆಂಬಲ. ಗಾಜಾದಲ್ಲಿ ಯುದ್ಧ ನಿಲ್ಲಿಸುವುದೇ ನಮ್ಮೆಲ್ಲರ ಒಮ್ಮತದ ಆದ್ಯತೆ’ ಎಂದು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಶನಿವಾರ ಅಭಿಪ್ರಾಯಪಟ್ಟರು.

ಭಾರತ–ಅರಬ್ ದೇಶಗಳ ವಿದೇಶಾಂಗ ಸಚಿವರ ಎರಡನೇ ಸಭೆಯಲ್ಲಿ ಅವರು ಮಾತನಾಡಿದರು. ಈ ಬಾರಿಯ ಸಭೆಯನ್ನು ಭಾರತವು ಆಯೋಜಿಸಿದೆ.

‘ವಿವಿಧ ಕಾರಣಗಳಿಂದ ವಿಶ್ವವು ರೂಪಾಂತರಗೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ ನಾವು ಇಲ್ಲಿ ಸಭೆ ಸೇರಿದ್ದೇವೆ. ಮಧ್ಯಪ್ರಾಚ್ಯ ಮತ್ತು ಪಶ್ಚಿಮ ಏಷ್ಯಾ ಪ್ರದೇಶಗಳಲ್ಲಿ ಕಳೆದ ವರ್ಷ ತೀವ್ರ ಬದಲಾವಣೆಗಳಾಗಿವೆ. ಇವೆಲ್ಲವೂ ನಮ್ಮೆಲ್ಲರ ಮೇಲೆಯೂ ಪರಿಣಾಮ ಬೀರುತ್ತವೆ. ಅರಬ್ ದೇಶಗಳು ಮತ್ತು ಭಾರತದ ಸಂಬಂಧದ ಮೇಲೆಯೂ ತುಸು ಪರಿಣಾಮ ಬೀರುತ್ತವೆ’ ಎಂದರು.

ಅಶಿಸ್ತು: ಕಾನ್‌ಸ್ಟೆಬಲ್‌ಗೆ ಹಿಂಬಡ್ತಿ

ಇಂದೋರ್ (ಪಿಟಿಐ): ‘ಡ್ಯಾನ್ಸಿಂಗ್ ಕಾಪ್’ ಎಂದೇ ಹೆಸರಾಗಿದ್ದ ಮಧ್ಯಪ್ರದೇಶದ ಇಂದೋರ್‌ನ ಹೆಡ್ ಕಾನ್‌ಸ್ಟೆಬಲ್ ರಂಜಿತ್ ಸಿಂಗ್ ಅವರಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ಅಶಿಸ್ತು ಪ್ರದರ್ಶಿಸುತ್ತಿದ್ದ ಆರೋಪದ ಕಾರಣಕ್ಕಾಗಿ ಕಾನ್‌ಸ್ಟೆಬಲ್ ಆಗಿ ಹಿಂಬಡ್ತಿ ನೀಡಲಾಗಿದೆ.

ಸಿಂಗ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಇತ್ತೀಚೆಗೆ ಹಂಚಿಕೊಂಡಿರುವ ಫೋಟೊ ಮತ್ತು ವಿಡಿಯೊ ಅಶಿಸ್ತಿನಿಂದ ಕೂಡಿವೆ. ಹಾಗಾಗಿ ಅವರಿಗೆ ಹಿಂಬಡ್ತಿ ನೀಡಲಾಗಿದೆ ಎಂದು ಹೆಚ್ಚುವರಿ ಉಪ ಪೊಲೀಸ್ ಕಮಿಷನರ್ ರಾಜೇಶ್ ಡಂಡೋತಿಯಾ ತಿಳಿಸಿದ್ದಾರೆ.

ಸಂಚಾರ ದಟ್ಟಣೆಯನ್ನು ನಿಯಂತ್ರಿಸುವಾಗ ‘ಮೂನ್ ವಾಕ್’ ನೃತ್ಯ ಮಾಡುವ ಮೂಲಕ ಸಿಂಗ್ ಜನಪ್ರಿಯರಾಗಿದ್ದರು.

ಸುನೇತ್ರಾ ಪವಾರ್ ಪದಗ್ರಹಣ


ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಸುನೇತ್ರಾ ಪವಾರ್ ಅವರು ರಾಜ್ಯಪಾಲ ಆಚಾರ್ಯ ದೇವವ್ರತ ಅವರಿಗೆ ನಮಿಸಿದರು. ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ (ಎಡ) ಮತ್ತು ಉಪ ಮುಖ್ಯಮಂತ್ರಿ ಏಕನಾಥ ಶಿಂದೆ (ಬಲದಿಂದ ಎರಡನೆಯವರು) ಪಾಲ್ಗೊಂಡಿದ್ದರು ಪಿಟಿಐ ಚಿತ್ರ

ಒಂದನೇ ಪುಟದಿಂದ...

ಬಿಜೆಪಿ-ಶಿವಸೇನಾ-ಎನ್‌ಸಿಪಿ ಒಳಗೊಂಡ ‘ಮಹಾಯುತಿ’ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಹುದ್ದೆ ಹಾಗೂ ಹಣಕಾಸು ಖಾತೆ ಹೊಂದಿದ್ದ ಅಜಿತ್ ಪವಾರ್ ಅವರು ಜನವರಿ 28ರಂದು ಬಾರಾಮತಿಯಲ್ಲಿ ನಡೆದ ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದರು. ಸುನೇತ್ರಾ ಅವರು ಪ್ರಮಾಣ ವಚನ ಸ್ವೀಕರಿಸಲು ಎದ್ದು ನಿಂತಾಗ ‘ಅಜಿತ್ ದಾದಾ ಅಮರ್ ರಹೇ’ ಎಂಬ ಘೋಷಣೆ ಮೊಳಗಿತು.

ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಉಪ ಮುಖ್ಯಮಂತ್ರಿ ಏಕನಾಥ ಶಿಂದೆ, ಎನ್‌ಸಿಪಿ ನಾಯಕರಾದ ಪ್ರಫುಲ್ ಪಟೇಲ್, ಸುನಿಲ್ ತಟ್ಕರೆ ಮತ್ತು ಛಗನ್ ಭುಜಬಲ್ ಸೇರಿದಂತೆ ಹಲವರು ಈ ವೇಳೆ ಹಾಜರಿದ್ದರು. ಸುನೇತ್ರಾ ಅವರ ಕಿರಿಯ ಪುತ್ರ ಜಯ್ ಪವಾರ್ ಹಾಗೂ ಸೊಸೆ ಸಮಾರಂಭಕ್ಕೆ ಸಾಕ್ಷಿಯಾದರು.

ಸುನೇತ್ರಾ ಅವರು ರಾಜ್ಯ ವಿಧಾನಸಭೆಯ ಎರಡೂ ಸದನಗಳ ಸದಸ್ಯರಲ್ಲ. ಆರು ತಿಂಗಳಲ್ಲಿ ಅವರು ಯಾವುದಾದರೂ ಒಂದು ಸದನದ ಸದಸ್ಯರಾಗಬೇಕಾಗುತ್ತದೆ. ತಮ್ಮ ದಿವಂಗತ ಪತಿ ಪ್ರತಿನಿಧಿಸುವ ಬಾರಾಮತಿ ವಿಧಾನಸಭಾ ಕ್ಷೇತ್ರಕ್ಕೆ ನಡೆಯುವ ಉಪ ಚುನಾವಣೆಯಲ್ಲಿ ಅವರು ಸ್ಪರ್ಧಿಸುವ ನಿರೀಕ್ಷೆಯಿದೆ.

ಬಿಜೆಪಿ ಮತ್ತು ಏಕನಾಥ ಶಿಂದೆ ನೇತೃತ್ವದ ಶಿವಸೇನಾದೊಂದಿಗೆ ಸಮನ್ವಯದಿಂದ ಕೆಲಸ ಮಾಡುತ್ತಾ ಮೈತ್ರಿ ರಾಜಕೀಯವನ್ನು ನಿರ್ವಹಿಸುವ ಜತೆಯಲ್ಲೇ ಎನ್‌ಸಿಪಿಯನ್ನು ಒಟ್ಟಿಗೆ ಹಿಡಿದಿಟ್ಟುಕೊಳ್ಳುವ ಕಠಿಣ ಸವಾಲು ಸುನೇತ್ರಾ ಮುಂದಿದೆ. ಅದೇ ರೀತಿ, ಎನ್‌ಸಿಪಿಯ ಎರಡು ಬಣಗಳ ಬಹುನಿರೀಕ್ಷಿತ ವಿಲೀನಕ್ಕೆ ಸಂಬಂಧಿಸಿದ ಮಾತುಕತೆಯನ್ನು ಮುಂದುವರಿಸಬೇಕೇ ಎಂದು ನಿರ್ಧರಿಸುವುದು ಅವರ ಮುಂದಿರುವ ತಕ್ಷಣದ ಸವಾಲಾಗಿದೆ.

‘ವಿಲೀನ ಪ್ರಕ್ರಿಯೆಗೆ ಹಿನ್ನಡೆ ಸಾಧ್ಯತೆ’

ಪುಣೆ: ಅಜಿತ್ ಪವಾರ್ ಅವರ ನಿಧನವು ಎನ್‌ಸಿಪಿಯ ಎರಡು ಬಣಗಳ ವಿಲೀನ ಪ್ರಕ್ರಿಯೆಗೆ ಅಡ್ಡಿಯಾಗಬಹುದು ಎಂದು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಶನಿವಾರ ಹೇಳಿದರು.

ಅಜಿತ್ ಪವಾರ್ ಮತ್ತು ಜಯಂತ ಪಾಟೀಲ್ ಅವರು ಎರಡೂ ಬಣಗಳನ್ನು ವಿಲೀನಗೊಳಿಸುವ ಪ್ರಕ್ರಿಯೆಯನ್ನು ಕಳೆದ ನಾಲ್ಕು ತಿಂಗಳುಗಳಿಂದ ನಡೆಸುತ್ತಿದ್ದರು ಎಂದು ಶರದ್ ಪವಾರ್ ಅವರು ಬಾರಾಮತಿಯಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಎಲ್ಲಾ ಮಾತುಕತೆಗಳು ಅವರಿಬ್ಬರ ನೇತೃತ್ವದಲ್ಲಿ ನಡೆದಿವೆ. ಆದರೆ ಅಜಿತ್ ಅವರ ಹಠಾತ್ ನಿಧನವು ಈ ಪ್ರಕ್ರಿಯೆಗೆ ಅಡ್ಡಿಯಾಗಬಹುದು ಎಂದು ಈಗ ತೋರುತ್ತದೆ. ಮಾತುಕತೆ ಸಕಾರಾತ್ಮಕ ದಿಕ್ಕಿನಲ್ಲಿ ಸಾಗುತ್ತಿತ್ತು. ವಿಮಾನ ಅಪಘಾತ ಇಡೀ ಪ್ರಕ್ರಿಯೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿತು’ ಎಂದರು.

ರಾಜಕೀಯದಿಂದ ದೂರವೇ ಇದ್ದರು

ದಶಕಗಳ ಕಾಲ ಸಕ್ರಿಯ ರಾಜಕೀಯದಿಂದ ದೂರವೇ ಉಳಿದುಕೊಂಡಿದ್ದ ಸುನೇತ್ರಾ ಪವಾರ್ ಇದೀಗ ರಾಜ್ಯ ಸಂಪುಟದಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ. ಈ ಬೆಳವಣಿಗೆಯು ಎನ್‌ಸಿಪಿಯಲ್ಲಿ ಹೊಸ ಅಧ್ಯಾಯದ ಆರಂಭವನ್ನು ಸೂಚಿಸಿದೆ.

2024ರ ಲೋಕಸಭಾ ಚುನಾವಣೆಯವರೆಗೂ ಸುನೇತ್ರಾ ಅವರು ರಾಜಕೀಯ ಕ್ಷೇತ್ರದಿಂದ ದೂರವೇ ಇದ್ದರು. ಆ ವರ್ಷ ನಡೆದ ಲೋಕಸಭಾ ಚುನಾವಣೆಯಲ್ಲಿ ಅವರು ಬಾರಾಮತಿಯಿಂದ ಎನ್‌ಸಿಪಿ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದರು. ಆದರೆ, ತನ್ನ ನಾದಿನಿ ಎನ್‌ಸಿಪಿಯ (ಎಸ್‌ಪಿ) ಸುಪ್ರಿಯಾ ಸುಳೆ ಎದುರು ಪರಾಭವಗೊಂಡರು. ಸುನೇತ್ರಾ ಆ ಬಳಿಕ ರಾಜ್ಯಸಭೆಗೆ ಆಯ್ಕೆಯಾದರು.

1963ರ ಅಕ್ಟೋಬರ್ 18ರಂದು ಉಸ್ಮಾನಾಬಾದ್ ಜಿಲ್ಲೆಯಲ್ಲಿ (ಈಗಿನ ಧಾರಾಶಿವ) ಹುಟ್ಟಿದ ಸುನೇತ್ರಾ ಅವರು ಛತ್ರಪತಿ ಸಂಭಾಜಿನಗರದ (ಹಿಂದಿನ ಔರಂಗಾಬಾದ್) ಎಸ್.ಬಿ. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಬಿ.ಕಾಂ. ಪದವಿ ಪಡೆದರು. 1985ರಲ್ಲಿ ಅಜಿತ್ ಪವಾರ್ ಅವರನ್ನು ವಿವಾಹವಾದರು. ದಂಪತಿಗೆ ಪಾರ್ಥ್ (35) ಮತ್ತು ಜಯ್ (25) ಹೆಸರಿನ ಪುತ್ರರಿದ್ದಾರೆ.

ಚಿತ್ರಕಲೆ, ಸಂಗೀತ, ಛಾಯಾಗ್ರಹಣ ಮತ್ತು ಕೃಷಿಯಲ್ಲಿ ಆಸಕ್ತಿ ಹೊಂದಿರುವ ಅವರು ಮದುವೆಯ ನಂತರ, ಕಾಟೇವಾಡಿ ಗ್ರಾಮದಲ್ಲಿ ಕೃಷಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು.

ಪರಿಸರ ಜಾಗೃತಿ ಮೂಡಿಸುವ ಉದ್ದೇಶದಿಂದ ಸರ್ಕಾರೇತರ ಸಂಸ್ಥೆಯಾದ ಎನ್ವಿರಾನ್ಮೆಂಟ್ ಫೋರಮ್ ಆಫ್ ಇಂಡಿಯಾ (ಇಎಫ್‌ಒಐ) ಸಂಸ್ಥೆಯನ್ನು 2010ರಲ್ಲಿ ಸ್ಥಾಪಿಸಿದರು.

ಸುನೇತ್ರಾ ಅವರು ಬಾರಾಮತಿ ಹೈಟೆಕ್ ಜವಳಿ ಪಾರ್ಕ್‌ನ ಅಧ್ಯಕ್ಷೆಯೂ ಆಗಿದ್ದಾರೆ. ಈ ಅತ್ಯಾಧುನಿಕ ಸಿದ್ಧ ಉಡುಪು ತಯಾರಿಕಾ ಘಟಕವು ಗ್ರಾಮೀಣ ಭಾಗದ 15,000ಕ್ಕೂ ಹೆಚ್ಚು ಮಹಿಳೆಯರಿಗೆ ಉದ್ಯೋಗ ಕಲ್ಪಿಸಿದೆ.

> ಸುನೇತ್ರಾ ಅವರು ಮಹಾರಾಷ್ಟ್ರದ ಜನರ ಕಲ್ಯಾಣಕ್ಕಾಗಿ ಅವಿಶ್ರಾಂತವಾಗಿ ದುಡಿಯುವ ಹಾಗೂ ದಿವಂಗತ ಅಜಿತ್ ಪವಾರ್ ಅವರ ಕನಸನ್ನು ನನಸಾಗಿಸುವ ವಿಶ್ವಾಸ ನನಗಿದೆ
> **ನರೇಂದ್ರ ಮೋದಿ**, ಪ್ರಧಾನಿ

> ಸುನೇತ್ರಾ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಬಗ್ಗೆ ತಮ್ಮ ಪಕ್ಷದ ಮುಖ್ಯಸ್ಥ ಶರದ್ ಪವಾರ್, ಇತರ ನಾಯಕರಿಗೆ ಮಾಹಿತಿ ಇರಲಿಲ್ಲ
> **ಶಶಿಕಾಂತ ಶಿಂದೆ,** ಎನ್‌ಸಿಪಿ (ಎಸ್‌ಪಿ) ಮಹಾರಾಷ್ಟ್ರ ಘಟಕದ ಅಧ್ಯಕ್ಷ

ಅಬಕಾರಿ, ಕ್ರೀಡಾ ಖಾತೆ: ಅಜಿತ್ ಪವಾರ್ ಅವರು ಉಪ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಹಣಕಾಸು, ಯೋಜನೆ, ಅಬಕಾರಿ, ಕ್ರೀಡಾ ಮತ್ತು ಯುವ ಸಬಲೀಕರಣ, ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ವಕ್ಫ್ ಖಾತೆಗಳನ್ನು ಹೊಂದಿದ್ದರು.

ಇದರಲ್ಲಿ ಸುನೇತ್ರಾ ಅವರಿಗೆ ಅಬಕಾರಿ, ಕ್ರೀಡಾ ಮತ್ತು ಯುವ ಸಬಲೀಕರಣ, ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ವಕ್ಫ್ ಖಾತೆಗಳನ್ನು ನೀಡಲಾಗಿದೆ. ಹಣಕಾಸು ಮತ್ತು ಯೋಜನೆ ಖಾತೆಗಳನ್ನು ಮುಖ್ಯಮಂತ್ರಿ ತಮ್ಮ ಬಳಿ ಇಟ್ಟುಕೊಂಡಿದ್ದಾರೆ.



ಭುಜ್‌ನ ಸ್ಮೃತಿ ಭವನದೊಳಗೆ
ಗುಜರಾತ್‌ನಲ್ಲಿ 2001ರಲ್ಲಿ ಸಂಭವಿಸಿದ ಭೂಕಂಪದ ಕರಾಳ ನೆನಪುಗಳಲ್ಲಿ ಹೆಜ್ಜೆ ಹಾಕುತ್ತಾ.... 13

ನೂರು ವರ್ಷ ಆದರೂ ನಿಲ್ಲದು ಈ ಪಯಣ!



ಶಿವಮೊಗ್ಗದಲ್ಲಿ ಆಯುಧ ಪೂಜೆಯ ದಿನ ಸಿಂಗಾರಗೊಂಡ ಈಗಿನ ಎಂಎಂಎಸ್ & ಎಸ್‌ಟಿಎ ಬಸ್‌ಗಳು


ಮೀರ್ ಮೊಯಿದ್ದೀನ್ ಸಾಹೇಬ್ ಅವರು 108 ವರ್ಷಗಳ ಹಿಂದೆ ಕೋಲಾರದಿಂದ ಶಿವಮೊಗ್ಗಕ್ಕೆ ಬಂದರು. ಅವರು ಅಲ್ಲಿ ಮೊದಲ ಬಾರಿಗೆ ಶಿವಮೊಗ್ಗ–ತೀರ್ಥಹಳ್ಳಿ–ಆಗುಂಬೆ ಮಾರ್ಗದಲ್ಲಿ ಬಸ್ ಸಂಚಾರ ಆರಂಭಿಸಿದರು. ಅವರ ಸಾಹಸಗಾಥೆ ಮತ್ತು ಆಸಕ್ತಿದಾಯಕ ಸಂಗತಿಗಳು ನಿಮ್ಮ ಓದಿಗಾಗಿ...

• ವೆಂಕಟೇಶ ಜಿ.ಎಚ್

‘ಅದು 1917ರ ಡಿಸೆಂಬರ್. ಇದ್ದಿಲು ಉರಿದು ಅದರಿಂದ ಹಾಯುತ್ತಿದ್ದ ಉಗಿಯಿಂದ ಓಡುತ್ತಿದ್ದ ಬಸ್, ಹಸಿರುಹಾದಿಯಲ್ಲಿ ಏದುಸಿರು ಬಿಡುತ್ತಾ ಶಿವಮೊಗ್ಗದಿಂದ ಆಗುಂಬೆಯತ್ತ ಹೊರಟಿತ್ತು. ಈಗಿನಂತೆ ಆಗ ರಸ್ತೆ ಇರಲಿಲ್ಲ. ದಟ್ಟ ಕಾನನದ ನಡುವೆ ಇದ್ದದ್ದು ಬಂಡಿ ದಾರಿ. ಅದರಲ್ಲೇ ಸಾಗಿತ್ತು ಬಸ್‌ನ ಸವಾರಿ. ಚಾಲಕ ಆಗಾಗ ಇಳಿದು–ಹತ್ತುತ್ತಾ ರಸ್ತೆಗೆ ಅಡ್ಡಲಾಗಿದ್ದ ಗಿಡ–ಗಂಟಿ, ಮರಗಳ ಕೊಂಬೆ ಕತ್ತರಿಸುತ್ತಾ ದಾರಿ ಮಾಡಿಕೊಂಡು ತೀರ್ಥಹಳ್ಳಿ ದಾಟಿಕೊಂಡು ಆಗುಂಬೆ ಮುಟ್ಟಿದಾಗ ಬರೋಬ್ಬರಿ ಒಂದು ವಾರ ಕಳೆದಿತ್ತು..’

108 ವರ್ಷಗಳ ಹಿಂದೆ ದೂರದ ಕೋಲಾರದಿಂದ ಶಿವಮೊಗ್ಗಕ್ಕೆ ಬಂದು ಇಲ್ಲಿ ಮೊದಲ ಬಾರಿಗೆ ಬಸ್ ಸಂಚಾರ ಆರಂಭಿಸಿ ಸಾಹಸ ಮೆರೆದಿದ್ದ ತನ್ನಜ್ಜ ಮೀರ್ ಮೊಯಿದ್ದೀನ್ ಸಾಬ್ ಅವರ ಯಶೋಗಾಥೆಯನ್ನು ಮೊಮ್ಮಗ ಮೀರ್ ಅಲ್ತಾಫ್ ಹುಸೇನ್ ಹೇಳುತ್ತಿದ್ದರು.

ಮೀರ್ ಮೊಯಿದ್ದೀನ್ ಸಾಬ್ ಕೋಲಾರದವರು. ಬ್ರಿಟಿಷ್ ಸರ್ಕಾರದಲ್ಲಿ ಅಂಚೆ ಗುತ್ತಿಗೆದಾರ. ಕೋಲಾರದಲ್ಲಿದ್ದಾಗ ಅಲ್ಲಿನ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಸ್ಟ್ ಆ್ಯಂಡ್ ಟೆಲಿಗ್ರಾಫ್ ಹಡ್ಸನ್ ಅವರೊಂದಿಗೆ ಸ್ನೇಹ ಬೆಳೆದಿತ್ತು. ಆ ಅಧಿಕಾರಿ ಮುಂದೆ ಬಳ್ಳಾರಿ ಅಂಚೆ ವಿಭಾಗೀಯ ಕಚೇರಿ ವ್ಯಾಪ್ತಿಗೆ ಒಳಪಟ್ಟಿದ್ದ ಶಿವಮೊಗ್ಗಕ್ಕೆ ವರ್ಗವಾಗಿ ಬರುತ್ತಾರೆ. ಹಡ್ಸನ್ ಒತ್ತಾಸೆಯಂತೆ ಮೊಯಿದ್ದೀನ್ ಕೂಡ ಶಿವಮೊಗ್ಗಕ್ಕೆ ಬಂದರು. ಇಲ್ಲಿನ ಗಾಂಧಿ ಬಜಾರ್‌ನಲ್ಲಿ ನೆಲೆಸಿದರು. ಶಿವಮೊಗ್ಗದಿಂದ ನಿತ್ಯ ತೀರ್ಥಹಳ್ಳಿ, ಆಗುಂಬೆ ಹಾಗೂ ಚಿತ್ರದುರ್ಗಕ್ಕೂ ಅಂಚೆ ಸಾಗಣೆಯ ಗುತ್ತಿಗೆ ಪಡೆದಿದ್ದರು. ಆರಂಭದಲ್ಲಿ ಕುದುರೆ ಗಾಡಿಯಲ್ಲಿ ಅಂಚೆ ಸಾಗಣೆ ನಡೆಯಿತು. ನಂತರ ಅದೇ ಬ್ರಿಟಿಷ್ ಅಂಚೆ ಅಧಿಕಾರಿಯ ಪ್ರೋತ್ಸಾಹದಿಂದ ಬಸ್ ಖರೀದಿಸಲು ಮುಂದಾದರು. ಆತನದ್ದೇ ಶಿಫಾರಸು ಪಡೆದು ಇಂಗ್ಲೆಂಡ್‌ನಿಂದ ಬಸ್ ಖರೀದಿಸಿ ತಂದರು. ಅಂಚೆ ಪಾರ್ಸೆಲ್ ಸಾಗಣೆಗಾಗಿ ಮೊದಲಿಗೆ ತೀರ್ಥಹಳ್ಳಿ–ಆಗುಂಬೆ ಮಾರ್ಗದಲ್ಲಿಯೇ ಅದರ ಓಡಾಟ ಶುರುವಾಯಿತು.



ಮೀರ್ ಮೊಯಿದ್ದೀನ್ ಸಾಬ್



50ರ ದಶಕದಲ್ಲಿ ಹೀಗಿತ್ತು ಎಂಎಂಎಸ್ ಆ್ಯಂಡ್ ಎಸ್‌ಟಿಎ ಬಸ್

ಬಿದಿರು ಸುಟ್ಟು ಭದ್ರಾವತಿಯ ಕಾಗದದ ಕಾರ್ಖಾನೆಗೆ ಇದ್ದಿಲು ಪೂರೈಸುತ್ತಿದ್ದವರೇ ಮೊಯಿದ್ದೀನ್ ಅವರ ಬಸ್‌ಗೂ ಇದ್ದಿಲು ಕೊಡುತ್ತಿದ್ದರು. ಇದ್ದಿಲಿನ ಉಗಿಯಿಂದ ಓಡುತ್ತಿದ್ದ ಬಸ್‌ಗೆ ‘17 ಟಿನ್’ ಸಾಮರ್ಥ್ಯದ ಟ್ಯೂಬ್ ಇಲ್ಲದ ಸಾಲಿಡ್ ಟೈರ್ ಇದ್ದವು. ಕೆಳಗೆ ಎತ್ತಿನಗಾಡಿಯ ರೀತಿ ಹಲಗೆ ಜೋಡಿಸಲಾಗಿತ್ತು. ಪ್ರಯಾಣಿಕರು ಕೂರಲು ಎರಡು ಕಡೆ ಬೆಂಚ್ ಕೂರಿಸಿದ್ದರು. ಬಸ್‌ನ ಯಾವುದೇ ಭಾಗದಿಂದ ಬೇಕಾದರೂ ಪ್ರಯಾಣಿಕರು ಇಳಿಯಬಹುದಿತ್ತು.

ಹಳ್ಳಿ ಪಂಚಾಯ್ತಿ..

ಬಸ್ ಹೊರಟರೆ ಉಗಿಯ ಕೊಳವೆಯಿಂದ ದಟ್ಟ ಹೊಗೆ ಹೊರ ಬರುತ್ತಿತ್ತು. ಜೊತೆಗೆ ‘ಗಡ್ ಗಡ್’ ಜೋರು ಸದ್ದು. ಬಸ್‌ನ ಆರ್ಭಟಕ್ಕೆ ರಸ್ತೆಯ ಅಕ್ಕಪಕ್ಕದ ಹಳ್ಳಿಗಳ ಜನರು ಬೆದರುತ್ತಿದ್ದರು. ಯಾವುದೋ ‘ದಯ್ಯ’ ಬಂದಿತೆಂದು ಬಾಗಿಲು ಹಾಕಿಕೊಂಡು ಮನೆಯೊಳಗೆ ಸೇರಿಕೊಳ್ಳುತ್ತಿದ್ದರು. ಮೂರು ತಿಂಗಳು ಬಸ್‌ನ ಸನಿಹಕ್ಕೆ ಯಾರೂ ಬಂದಿರಲಿಲ್ಲ. ಹೀಗಾಗಿ ದಾರಿ ಮಧ್ಯದಲ್ಲಿ ಬಸ್ ಹತ್ತುವವರ ಸುಳಿವೇ ಇರಲಿಲ್ಲ. ಶಿವಮೊಗ್ಗದಿಂದ ಕರೆದೊಯ್ಯುತ್ತಿದ್ದ ಪ್ರಯಾಣಿಕರನ್ನೇ ವಾಪಸ್ ಕರೆತರಬೇಕಿತ್ತು. ಇಲ್ಲವೇ ಅಂಚೆ ಪಾರ್ಸೆಲ್ ಮಾತ್ರ ಒಯ್ಯಬೇಕಿತ್ತು.

‘ಇದು ಹೀಗಾದರೆ ಸರಿ ಹೋಗುವುದಿಲ್ಲ ಎಂದು ಭಾವಿಸಿದ ಮೊಯಿದ್ದೀನ್ ಸಾಬ್, ಕುದುರೆಗಾಡಿಯಲ್ಲಿ ಅಂಚೆ ಪಾರ್ಸಲ್ ಒಯ್ಯುತ್ತಿದ್ದಾಗ ಪರಿಚಯವಾಗಿದ್ದ ಊರುಗಳ ಮುಖಂಡರ ಕಂಡು ಅಂಚೆ ಸಾಗಣೆ ಹಾಗೂ ಜನರ ಓಡಾಟಕ್ಕೆ ಬಸ್ ಆರಂಭಿಸಿದ್ದು, ಅದು ಜನರ ಅನುಕೂಲಕ್ಕಾಗಿಯೇ ಇರುವುದು ಎಂಬುದನ್ನು ಮನದಟ್ಟು ಮಾಡಿದರು. ಅವರ ಸಹಕಾರದಿಂದ ಕ್ರಮೇಣ ಜನರ ವಿಶ್ವಾಸ ಗಳಿಸಿದರು’ ಎಂದು ಅಜ್ಜನ ಬಸ್ ಉದ್ಯಮದ ಆರಂಭದ ದಿನಗಳ ಹೋರಾಟವನ್ನು ಅಲ್ತಾಫ್ ಮೆಲುಕು ಹಾಕಿದರು.

ಬಸ್ ಹತ್ತಿದರೆ ಹೊಗೆಯ ರೇಜಿಗೆ ಪ್ರಯಾಣಿಕರ ಮೈಯೆಲ್ಲ ಕಪ್ಪಿಡುತ್ತಿತ್ತು. ಬಸ್ ಇಳಿದವರೇ ಮನೆಗೆ ಹೋಗಿ ಸ್ನಾನ ಮಾಡಬೇಕಿತ್ತು. ಬಸ್ ಆರಂಭಿಸಿದ ಮೊದಲ ದಿನಗಳಲ್ಲಿ ಟಿಕೆಟ್ ಇರಲಿಲ್ಲ. ಆಗ ಅಂಚೆ ಪಾರ್ಸಲ್ ಸಾಗಣೆಗೆ ಮೊದಲ ಆದ್ಯತೆ. ಪ್ರಯಾಣಿಕರು ಹತ್ತಿದರೂ ಅವರು ಹಣದ ಬದಲು ಅಕ್ಕಿ, ರಾಗಿ, ಬಾಳೆಹಣ್ಣು, ಹಲಸು ಹೀಗೆ ತಾವು ಬೆಳೆದದ್ದನ್ನು ತಂದುಕೊಡುತ್ತಿದ್ದರು.

ಬೆಡ್‌ಫೋರ್ಡ್ ಬಸ್‌ಗೆ ಬಡ್ತಿ..

ಆಗುಂಬೆ ಮಾರ್ಗದಲ್ಲಿ ಇದ್ದಿಲು ಬಸ್‌ನ ಓಡಾಟ ಯಶಸ್ವಿಯಾಗುತ್ತಿದ್ದಂತೆಯೇ ಮೊಯಿದ್ದೀನ್ ಚಿತ್ರದುರ್ಗಕ್ಕೂ ಬಸ್ ಆರಂಭಿಸಿದರು. ಮೊದಲ ಬಸ್‌ಗೆ ಇಟ್ಟಿದ್ದ ಎಂಎಂಎಸ್–ಎಸ್‌ಟಿಎ (ಮೀರ್ ಮೊಯಿದ್ದೀನ್ ಸಾಬ್–ಶಿವಮೊಗ್ಗ, ತೀರ್ಥಹಳ್ಳಿ ಹಾಗೂ ಆಗುಂಬೆ) ಹೆಸರನ್ನೇ ಚಿತ್ರದುರ್ಗ ಮಾರ್ಗದ ಬಸ್‌ಗೂ ಮುಂದುವರೆಸಿದರು. ಆರಂಭದಲ್ಲಿ ಸುಮಾರು 20 ವರ್ಷ ಇದ್ದಿಲು ಬಸ್ ಓಡಾಟ ನಡೆಸಿತ್ತು. ನಂತರ ಪೆಟ್ರೋಲ್‌ನಿಂದ ಓಡುವ ಫೋರ್ಡ್ ಕಂಪನಿಯ ಬೆಡ್‌ಫೋರ್ಡ್ ಬಸ್ಸನ್ನು ಇಂಗ್ಲೆಂಡ್‌ನಿಂದಲೇ ಖರೀದಿಸಿ ತಂದರು. ಇದು ಕೂಡ ಟ್ಯೂಬ್ ಇಲ್ಲದ ಸಾಲಿಡ್ ಟೈರ್ ಬಸ್ ಆಗಿತ್ತು. ಇದು ಕಂಪನಿಯ ಸ್ಥಿತ್ಯಂತರದ ಕಾಲ.

1952ರಲ್ಲಿ ಪೆಟ್ರೋಲ್ ಎಂಜಿನ್‌ನ ಬೆಂಜ್ ಬಸ್ಸನ್ನು ಇಂಗ್ಲೆಂಡ್‌ನಿಂದ ₹12,500 ಕೊಟ್ಟು ಖರೀದಿಸಿ ತಂದಿದ್ದರು. ಅದು ಟ್ಯೂಬ್ ಇರುವ ಟೈರ್ ಹೊಂದಿತ್ತು.

ಡ್ರೈವರ್ ಅಲ್ಲ, ಬಸ್ ಪೈಲಟ್!

ಲಂಡನ್‌ನಿಂದ ಮದ್ರಾಸ್‌ನ ಬಂದರಿಗೆ ಬಂದಿಳಿದ ಬಸ್ಸನ್ನು ಓಡಿಸಲು ಬೆಂಜ್ ಕಂಪನಿಯವರು ಅಲ್ಲಿಂದಲೇ ಚಾಲಕನನ್ನೂ ಕಳಿಸಿದ್ದರು. ವಿಮಾನದ ಪೈಲಟ್ ರೀತಿ ಬಿಳಿ ಪ್ಯಾಂಟ್, ಷರ್ಟ್, ಹ್ಯಾಟ್, ಟೈ ಧರಿಸಿ ಟಾಕು ಟೀಕಾಗಿರುತ್ತಿದ್ದ ಆ ಚಾಲಕನಿಗೆ ಮೂರು ತಿಂಗಳು ಶಿವಮೊಗ್ಗದ ಸರ್ಕಿಟ್ ಹೌಸ್‌ನಲ್ಲಿ ವಾಸ್ತವ್ಯ ವ್ಯವಸ್ಥೆ ಮಾಡಲಾಗಿತ್ತು. ಇಲ್ಲಿ ಇಬ್ಬರಿಗೆ ಚಾಲನೆ ಕಲಿಸಿ ಆತ ವಾಪಸ್ ಮರಳಿದ.

ಬೆಂಜ್ ನಂತರ ಅದೇ ವರ್ಷ ಶೆವರ್ಲೆ ಬಸ್ ಕೂಡ ತರಿಸಿದ್ದರು. ಮುಂದೆ ಲೇಲ್ಯಾಂಡ್ ಬಸ್ಸುಗಳು ಆರಂಭವಾದವು. 2 ಪೈಸೆ, 10 ಪೈಸೆ, ನಾಲ್ಕಾಣೆ ಟಿಕೆಟ್ ಆರಂಭವಾಯಿತು. ಡ್ರೈವರ್ ಹಾಗೂ ಕಂಡಕ್ಟರ್‌ಗೆ ದಿನಕ್ಕೆ 2 ಕಾಸು ಕೊಡುತ್ತಿದ್ದರು. ಮುಂದೆ ಸಾಗರ, ಶಿಕಾರಿಪುರ, ಶಿರಾಳಕೊಪ್ಪ, ಆನವಟ್ಟಿ, ಹಿರೇಕೆರೂರು, ಶಿರಸಿ, ಹಾನಗಲ್, ಹಾವೇರಿ, ಬಳ್ಳಾರಿ, ದಾವಣಗೆರೆ ಮಾರ್ಗದಲ್ಲೂ ಬಸ್ ಓಡಾಟ ಆರಂಭಿಸಿದರು.

11ನೇ ಪುಟಕ್ಕೆ...

ಇದೇ ಬಸ್‌ಗಳಲ್ಲಿ ಬಂಗಾರಪ್ಪ–ಯಡಿಯೂರಪ್ಪ ಓಡಾಟ..

ಮಾಜಿ ಮುಖ್ಯಮಂತ್ರಿಗಳಾದ ಎಸ್.ಬಂಗಾರಪ್ಪ ಹಾಗೂ ಬಿ.ಎಸ್.ಯಡಿಯೂರಪ್ಪ ತಮ್ಮ ರಾಜಕೀಯದ ಆರಂಭದ ದಿನಗಳಲ್ಲಿ ಎಂಎಂಎಸ್ ಬಸ್‌ಗಳಲ್ಲಿ ಓಡಾಟ ನಡೆಸಿದ್ದರು. ಬಂಗಾರಪ್ಪ ಮೊದಲು ಶಾಸಕರಾದಾಗ ಬೆಂಗಳೂರಿನಿಂದ ಶಿವಮೊಗ್ಗಕ್ಕೆ ರೈಲಿನಲ್ಲಿ ಹೊರಡುವ ಮೊದಲು ಎಂಎಂಎಸ್ ಬಸ್ ಕಚೇರಿಗೆ ಕರೆ ಮಾಡಿ ಹೇಳುತ್ತಿದ್ದರಂತೆ.

‘ಬಂಗಾರಪ್ಪ ಸಾಹೇಬರು ನಸುಕಿನಲ್ಲಿ ಶಿವಮೊಗ್ಗಕ್ಕೆ ಬಂದು ಎಚ್‌ಪಿಸಿ ಟಾಕೀಸ್ ಪಕ್ಕದ ಬೃಂದಾವನ ಲಾಡ್ಜ್‌ಗೆ ತೆರಳಿ ಸ್ನಾನ, ಉಪಾಹಾರ ಮುಗಿಸಿ 9 ಗಂಟೆಗೆ ಬಸ್ ನಿಲ್ದಾಣಕ್ಕೆ ಬರುತ್ತಿದ್ದರು. ಆಗ ಆನವಟ್ಟಿಗೆ ಹೋಗುವ ಎಂಎಂಎಸ್ ಬಸ್ ಸಿದ್ಧವಾಗಿರುತ್ತಿತ್ತು. ಅವರು ಬರುವುದು ಐದೋ, ಹತ್ತು ನಿಮಿಷ ತಡವಾದರೂ ಕಾಯುತ್ತಾ ನಿಲ್ಲುತ್ತಿದ್ದೆವು. ಅವರಿಗೆಂದೇ ಮೊದಲ ಸೀಟು ಮೀಸಲಿರಿಸುತ್ತಿದ್ದೆವು. ಆನವಟ್ಟಿಗೆ ಬಸ್ ಕೊನೆಯಾದರೂ ಅಲ್ಲಿಂದ ಕುಬಟೂರಿನ ಅವರ ಮನೆಗೆ ಕರೆದೊಯ್ದು ಬಿಟ್ಟು ಬರುತ್ತಿದ್ದೆವು. ಇದನ್ನು ಮುಖ್ಯಮಂತ್ರಿ ಆದಾಗಲೂ ಬಂಗಾರಪ್ಪ ಅವರು ಹಲವಾರು ಬಾರಿ ನೆನಪಿಸಿಕೊಂಡಿದ್ದರು’ ಎಂದು ಮೀರ್ ಅಲ್ತಾಫ್ ಹೇಳುತ್ತಾರೆ.

‘ಯಡಿಯೂರಪ್ಪ ಸಾಹೇಬರು ಶಿಕಾರಿಪುರ ಪುರಸಭೆ ಅಧ್ಯಕ್ಷರಾಗಿದ್ದಾಗ ಶಿವಮೊಗ್ಗಕ್ಕೆ ಪ್ರತಿಭಟನೆ, ಪಕ್ಷದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನಮ್ಮ ಬಸ್‌ನಲ್ಲೇ ಬರುತ್ತಿದ್ದರು’ ಎಂದು ಅವರು ನೆನೆಯುತ್ತಾರೆ.



ವಿದ್ಯಾರ್ಥಿಗಳೊಂದಿಗೆ ಸಂವಾದದ ಸಂದರ್ಭ...

ಮಧುಸೂದನ್ ಮೇಷ್ಟ್ರಿಗೆ ನಾವೀನ್ಯದ್ದೇ ಧ್ಯಾನ

• ಪುಷ್ಕರ್ ವಿ.

ಮೈಸೂರಿನ ಹಿನಕಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗಂಟೆ ಆಗಷ್ಟೇ ರಿಂಗಣಿಸಿತ್ತು. ಒಂದು ಮೂಲೆಯಲ್ಲಿ ವರ್ಚುವಲ್ ರಿಯಾಲಿಟಿ (ವಿಆರ್) ಹೆಡ್‌ಸೆಟ್‌ಗಳನ್ನು ಧರಿಸಿದ್ದ ಮಕ್ಕಳು ಲ್ಯಾಪ್‌ಟಾಪ್ ಪರದೆಯ ಮುಂದೆ ನಿಂತಿದ್ದರು. ಇದೇ ವೇಳೆ, ವಿದ್ಯಾರ್ಥಿಗಳ ಇನ್ನೊಂದು ಗುಂಪು 3ಡಿ ಪ್ರಿಂಟರ್ ಚಾಲೂ ಆಗುವುದನ್ನೇ ಕಾಯುತ್ತಿತ್ತು. ಈ ವಿದ್ಯಾರ್ಥಿಗಳ ಗುಂಪುಗಳ ನಡುವೆ ವಿಜ್ಞಾನ ಶಿಕ್ಷಕ ಮಧುಸೂದನ್ ಕೆ.ಎಸ್. ನಿಂತಿದ್ದರು. ವಿಆರ್ ಹೆಡ್‌ಸೆಟ್‌ಗಳು, 3ಡಿ ಪ್ರಿಂಟರ್‌ಗಳನ್ನು ಆ ಶಾಲೆಯ ವಿದ್ಯಾರ್ಥಿಗಳು ಬಳಸುತ್ತಿರುವುದರ ಹಿಂದೆ ಇರುವುದು ಈ ಮೇಷ್ಟ್ರು. ಅವರು ಒಂದು ಸಾಮಾನ್ಯ ಸರ್ಕಾರಿ ಶಾಲೆಯನ್ನು ಪುಟ್ಟ ನಾವಿನ್ಯ ಕಲ್ಪನೆಗಳ ಕೇಂದ್ರವನ್ನಾಗಿ (ಇನೊವೇಶನ್ ಹಬ್) ರೂಪಿಸಿದ್ದಾರೆ.

2025ರ ರಾಷ್ಟ್ರೀಯ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿರುವ ಶಿಕ್ಷಕ ಮಧುಸೂದನ್, ಮೈಸೂರು ಜಿಲ್ಲೆಯ ಕೇದಗ ಗ್ರಾಮದವರು. ಬೋಧನೆಯೇ ಜೀವನದ ವಿಧಾನವಾಗಿದ್ದ ಕುಟುಂಬಕ್ಕೆ ಸೇರಿದವರು. ಅವರ ತಂದೆ ಸರ್ಕಾರಿ ಶಾಲೆಯಲ್ಲಿ ಗಣಿತ ಶಿಕ್ಷಕರಾಗಿದ್ದರು. ಅವರ ಶಿಸ್ತಿನ ಜೀವನವು ಮಧುಸೂದನ್ ಬದುಕು ಮತ್ತು ವ್ಯಕ್ತಿತ್ವವನ್ನು ರೂಪಿಸಿತು. ಕ್ರೀಡೆಯನ್ನು ಇಷ್ಟಪಡುವ ಅವರು ತರಗತಿಯಲ್ಲಿ ಮಕ್ಕಳಿಗೆ ಪಾಠ ಮಾಡುವ ವೃತ್ತಿಯನ್ನು ಬಿಟ್ಟು ಬೇರೆ ಉದ್ಯೋಗದ ಬಗ್ಗೆ ಯೋಚಿಸಿಯೂ ಇರಲಿಲ್ಲ.

ಹಾಗಾಗಿ, ಬಿಎಸ್‌ಸಿ ಪದವಿ ಪಡೆದ ನಂತರ ಬಿಇ.ಡಿ ಮಾಡಿದರು. ವಿದ್ಯಾರ್ಥಿಯಾಗಿ ಒಂದು ಬಾರಿ ತರಗತಿಯಿಂದ ಓಡಿ ಹೋಗಲು ಯತ್ನಿಸಿದ್ದ ಅವರು, ಆ ತರಗತಿಯೇ ತಮ್ಮ ಆಟದ ಮೈದಾನ ಎಂಬುದನ್ನು ಬಹುಬೇಗ ಅರಿತುಕೊಂಡರು. ಶಿಕ್ಷಕರಾಗಿದ್ದುಕೊಂಡೇ ತಮ್ಮ ಆಸಕ್ತಿಯ ವಿಷಯವಾದ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನೂ ಪಡೆದಿದ್ದಾರೆ.

ಮಧುಸೂದನ್ ಅವರ ವೃತ್ತಿ ಜೀವನ 2008ರಲ್ಲಿ ಮೈಸೂರು ಜಿಲ್ಲೆಯ ಕುಗ್ರಾಮವೊಂದರ ಸರ್ಕಾರಿ ಶಾಲೆಯಲ್ಲಿ ಆರಂಭವಾಯಿತು. ಮುಂದಿನ 11 ವರ್ಷಗಳಲ್ಲಿ ಅವರು ಹಲವು ಗ್ರಾಮೀಣ ಶಾಲೆಗಳಿಗೆ ನಿಯೋಜನೆಗೊಂಡರು. ಅಲ್ಲಿ, ಕೃಷಿಯೊಂದಿಗೆ ಮನೆ ಕೆಲಸಗಳ ಜವಾಬ್ದಾರಿಗಳನ್ನೂ ಹೊಂದಿರುವ ಮಕ್ಕಳೇ ಇವರ ವಿದ್ಯಾರ್ಥಿಗಳಾಗಿದ್ದರು. ಇದು ಅವರಿಗೆ ಜೀವನದ ಬಹುದೊಡ್ಡ ಪಾಠ ಕಲಿಸಿತು.

2019ರಲ್ಲಿ ಹಿನಕಲ್ ಹಿರಿಯ ಪ್ರಾಥಮಿಕ ಶಾಲೆಗೆ ವರ್ಗವಾದರು. ಅಲ್ಲಿ ಮಕ್ಕಳು ವಸ್ತುಗಳನ್ನು ಮುಟ್ಟುವ, ಮುರಿಯುವ, ಅದನ್ನು ರಿಪೇರಿ ಮಾಡುವ ಮತ್ತು ಪುನಃ ಅದನ್ನು ಸಿದ್ಧಪಡಿಸುವುದಕ್ಕೆ ಅವಕಾಶ ಕಲ್ಪಿಸುವ ವಾತಾವರಣವನ್ನು ಸೃಷ್ಟಿಸಲು ಮಧುಸೂದನ್ ಹೊರಟರು. ‘ಈ ಪ್ರಪಂಚದಲ್ಲಿ ಬದುಕುಳಿಯಲು ಮತ್ತು ಅರ್ಥಪೂರ್ಣ ಜೀವನ ನಡೆಸಲು ಒಂದು ಮಗುವಿಗೆ ಏನೆಲ್ಲ ತಿಳಿದಿರಬೇಕು’ ಎಂಬ ಮೂಲಪ್ರಶ್ನೆಯನ್ನು ತಮಗೆ ತಾವು ಕೇಳಿಕೊಂಡರು.

ತರಗತಿ ಕೊಠಡಿಯೇ ವರ್ಕ್‌ಶಾಪ್

ಈ ಪ್ರಶ್ನೆಗೆ ಉತ್ತರವಾಗಿ ತಯಾರಾಗಿದ್ದು, ಬೋರ್ಡ್ ಹೊಂದಿರುವ ತರಗತಿ ಬದಲಿಗೆ, ಆಧುನಿಕ ‘ವರ್ಕ್‌ಶಾಪ್’ ಅನ್ನು ಹೋಲುವ ಕೊಠಡಿ. ಅದರ ಒಂದು ಗೋಡೆಯಲ್ಲಿ ನೇತುಹಾಕಲಾಗಿರುವ ಮರದ ಹಲಗೆಯಲ್ಲಿ ವಿವಿಧ ಸಲಕರಣೆಗಳನ್ನು ಒಪ್ಪವಾಗಿ ಜೋಡಿಸಿಡಲಾಗಿದೆ. ಆ ಹಲಗೆಯನ್ನು ರೂಪಿಸಿದವರೂ ವಿದ್ಯಾರ್ಥಿಗಳೇ. ಪ್ರಾಯೋಗಿಕ ಅನುಭವ ಸಹಿತ ಕಲಿಕೆಯ ಭಾಗವಾಗಿ ಅದು ರೂಪುಗೊಂಡಿದೆ. ಮಕ್ಕಳಿಗೆ ಮೇಲ್ಮೈ ಅಳತೆ ಅಳೆಯುವುದು, ಜಿಯಾಮೆಟ್ರಿಯನ್ನು ಹೇಳಿಕೊಡಲು ಮಧುಸೂದನ್ ಅವರು ಈ ಫಲಕವನ್ನು ಬಳಸುತ್ತಾರೆ. ಅವರು ಗಣಿತ ಕಲಿಸುವಾಗ ಪಠ್ಯದ ಬದಲಿಗೆ ಮರದ ತುಂಡು, ಪುಟ್ಟ ಹಲಗೆಗಳನ್ನು ಉಪಯೋಗಿಸುತ್ತಾರೆ. 5ನೇ ಮತ್ತು 6ನೇ ತರಗತಿಯ ವಿದ್ಯಾರ್ಥಿಗಳು ಮರದ ಹಲಗೆಯನ್ನು ಕತ್ತರಿಸಿ, ನಂತರ ಅವುಗಳನ್ನು ಜೋಡಿಸಿ ಕೋನಗಳ ಬಗ್ಗೆ ತಿಳಿದುಕೊಳ್ಳುತ್ತಾರೆ.

ಮಧುಸೂದನ್ ತಮ್ಮದೇ ಹಣದಿಂದ ಸಲಕರಣೆಗಳು, ವಿಆರ್ ಹೆಡ್‌ಸೆಟ್‌ಗಳು, ರೊಬೊಟಿಕ್ ಕಿಟ್‌ಗಳನ್ನು ಖರೀದಿಸಿದ್ದಾರೆ. ಈವರೆಗೆ ಪ್ರಯೋಗಾಲಯ ಮತ್ತು ಅದಕ್ಕೆ ಸಂಬಂಧಿಸಿದ ಇತರ ವ್ಯವಸ್ಥೆಗಳಿಗಾಗಿ ₹6 ಲಕ್ಷ ವ್ಯಯಿಸಿದ್ದಾರೆ. ಸ್ನೇಹಿತರು, ಹಿತೈಷಿಗಳು ಕೂಡ ನೆರವಾಗಿದ್ದಾರೆ. ಸ್ಥಳೀಯವಾಗಿ ಸಂಗ್ರಹಿಸಿದ ನಿಧಿಯಿಂದ ಮೊದಲು ಪ್ರಯೋಗಾಲಯ ಆರಂಭಿಸಲಾಗಿತ್ತು. ಆ ಪ್ರಯತ್ನ ಯಶಸ್ವಿಯಾಗಿದ್ದರಿಂದ ಇನ್ನಷ್ಟು ದೊಡ್ಡ ಯೋಜನೆಗಳಿಗೆ ಕೈಹಾಕಲು ಅವರಿಗೆ ಪ್ರೇರಣೆ ಸಿಕ್ಕಿದೆ.


ಓದು ಮತ್ತು ಆಸಕ್ತಿ

ಇಂತಹ ಕೆಲಸ ಮಾಡಲು ಮಧುಸೂದನ್ ಅವರಿಗೆ ಪ್ರೇರಣೆ ನೀಡಿದ್ದು, ಅವರ ಓದು ಮತ್ತು ಶಿಕ್ಷಣ ಕ್ಷೇತ್ರದ ಮೇಲಿದ್ದ ಆಸಕ್ತಿ. ಜಾಗತಿಕ ಮಟ್ಟದಲ್ಲಿ ಶೈಕ್ಷಣಿಕ ವಲಯದಲ್ಲಿ ಆಗಿರುವ ಮತ್ತು ಈಗ ಆಗುತ್ತಿರುವ ಸಾಧನೆಗಳ ಬಗ್ಗೆ ಓದುವ ಹವ್ಯಾಸವನ್ನು ಅವರು ಇಟ್ಟುಕೊಂಡಿದ್ದಾರೆ. ಅದರಲ್ಲಿ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಮೌಲ್ಯಮಾಪನ (ಪಿಐಎಸ್‌ಎ) ಎಂಬ ಕಾರ್ಯಕ್ರಮ ಅವರ ಗಮನ ಸೆಳೆಯಿತು. ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಲು 15 ವರ್ಷದ ಮಕ್ಕಳು ಓದು, ಗಣಿತ ಮತ್ತು ವಿಜ್ಞಾನದ ಜ್ಞಾನವನ್ನು ಹೇಗೆ ಬಳಸಿಕೊಳ್ಳುತ್ತಾರೆ ಎಂಬುದನ್ನು ಈ ಕಾರ್ಯಕ್ರಮದಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ.

ಇದರೊಂದಿಗೆ ಸಮಾನತೆ ಮತ್ತು ಕೌಶಲಗಳನ್ನು ಕೇಂದ್ರೀಕರಿಸಿರುವ ನಾರ್ವೆಯ ಶಿಕ್ಷಣ ವ್ಯವಸ್ಥೆಯೂ ಅವರಿಗೆ ಪ್ರಭಾವ ಬೀರಿತ್ತು. ಇವೆಲ್ಲವನ್ನೂ ಅವರು ತಮ್ಮ ಶಾಲೆಯಲ್ಲೂ ಅಳವಡಿಸಿಕೊಳ್ಳಲು ತೀರ್ಮಾನಿಸಿದರು.

ಅವರ ನವೀನ ಪರಿಕಲ್ಪನೆಗಳು ಹಾರ್ಡ್‌ವೇರ್‌ಗಷ್ಟೇ ಸೀಮಿತವಾಗಿಲ್ಲ. ಮಧುಸೂದನ್ ಅವರು ಕಲಿಕಾ ನಿರ್ವಹಣಾ ವ್ಯವಸ್ಥೆಯೊಂದನ್ನು (ಎಲ್‌ಎಂಎಸ್) ಖರೀದಿಸಿ, ಅದನ್ನು ತಮಗೆ ಬೇಕಾದಂತೆ ಮಾರ್ಪಡಿಸಿಕೊಂಡಿದ್ದಾರೆ.

11ನೇ ಪುಟಕ್ಕೆ...



ಮಧುಸೂದನ್

ತಾರಸಿ ತೋಟ, ಅದ್ಭುತ ನೋಟ

• ಅಬ್ದುಲ್ ರಹಿಮಾನ್

ದಟ್ಟವಾಗಿ ಆವರಿಸಿರುವ ಗಿಡ-ಬಳ್ಳಿಗಳ ನಡುವೆ ಅಲ್ಲಲ್ಲಿ ತಲೆಎತ್ತಿ ನಿಂತಿರುವ ಮರಗಳು, ಕಾಯಿ ಬಿಟ್ಟಿರುವ ಹಣ್ಣಿನ ಗಿಡಗಳು, ಎತ್ತರಕ್ಕೆ ಬೆಳೆದಿರುವ ಕಬ್ಬಿನಜಲ್ಲೆ, ಗೊನೆಯ ಭಾರದಿಂದ ಬಾಗಿರುವ ಬಾಳೆಗಿಡ, ಹೂವಿನಿಂದ ಹೂವಿಗೆ ಹಾರಿ ಮಕರಂದ ಹೀರುವ ದುಂಬಿಗಳು, ಜೇನು ಹುಳುಗಳ ಝೇಂಕಾರ, ಮರದಕೊಂಬೆಯಲ್ಲಿ ಕುಳಿತಿರುವ ಜೋಡಿ ಗುಬ್ಬಿಗಳ ಚಿಲಿಪಿಲಿ, ಮೂಗನ್ನು ಅರಳಿಸುವ ಮಲ್ಲಿಗೆ ಸುಗಂಧ, ಕೆಸುವಿನ ಎಲೆ ಮೇಲೆ ಜಾರುತ್ತಿರುವ ಮುತ್ತಿನಂಥ ನೀರ ಹನಿಗಳು, ಬಳ್ಳಿಗಳ ಛಾವಣಿಯನ್ನು ಸೀಳಿಕೊಂಡು ಬಂದು ಚಿತ್ತಾರ ಮೂಡಿಸುವ ಸಂಜೆ ಸೂರ್ಯನ ಕಿರಣಗಳು...

ಬೆಂಗಳೂರಿನ ಶ್ರೀರಾಮಪುರದಲ್ಲಿರುವ ತಮ್ಮ ಕಚೇರಿ ಕಟ್ಟಡದ ನಾಲ್ಕನೇ ಮಹಡಿಯ ತಾರಸಿಯ ಸಣ್ಣ ಜಾಗದಲ್ಲಿ ಉದ್ಯಮಿ ವೆಂಕಟ್‌ರಾಮನ್ ಕೆ. ಆಗಾ ಅವರು ಇಂಥ ತೋಟವನ್ನು ನಿರ್ಮಾಣ ಮಾಡಿದ್ದಾರೆ!


ಶ್ರೀರಾಮಪುರ ಮೆಟ್ರೊ ನಿಲ್ದಾಣದಲ್ಲಿ ನಿಂತು ನೋಡಿದರೆ ಈ ಕಟ್ಟಡದ ಮೇಲೆ ದಟ್ಟ ಹಸಿರು ಗೋಚರಿಸುತ್ತದೆ. ಮಲೆನಾಡಿನ ಸಸ್ಯವೈವಿಧ್ಯ ಹಾಗೂ ವಾತಾವರಣವನ್ನು ನಿರ್ಮಿಸುವ ಅವರ ಕನಸು ಸಾಕಾರಗೊಂಡಿದ್ದು ತಾರಸಿ ತೋಟದ ಮೂಲಕ.

600 ಚದರ ಅಡಿ ವಿಸ್ತೀರ್ಣ

ಈ ತೋಟದಲ್ಲಿ ಹೂ, ಹಣ್ಣು, ತರಕಾರಿ ಸೇರಿ ನೂರಕ್ಕೂ ಹೆಚ್ಚು ವಿವಿಧ ಸಸಿ, ಬಳ್ಳಿಗಳು, ಮರಗಳಿವೆ. ಕಾಫಿ, ಕರಿಮೆಣಸು ಮುಂತಾದ ಮಲೆನಾಡಿನ ಪ್ರಮುಖ ಬೆಳೆಗಳಿವೆ. ಕುಂಡಗಳ ಬದಲಿಗೆ ತಾರಸಿ ಮೇಲೆ ಮಣ್ಣು ತುಂಬಿ ತೋಟ ನಿರ್ಮಿಸಿರುವುದು ವಿಶೇಷ. ‘ಇಲ್ಲಿ ಕೆಲ ಹೊತ್ತು ವಿರಮಿಸಿದರೆ ಕೆಲಸದ ಒತ್ತಡವೆಲ್ಲ ನೀಗಿ ಮನಸು ಹಗುರಾಗುತ್ತದೆ’ ಎನ್ನುತ್ತಾರೆ ವೆಂಕಟ್.

ಐಐಎಂ ಬಾಂಬೆಯಿಂದ ಮೆಕ್ಯಾನಿಕಲ್ ಎಂಜಿನಿಯರ್ ಪದವಿ ಪಡೆದಿರುವ ವೆಂಕಟ್‌ಗೆ, ಮಲೆನಾಡು ಎಂದರೆ ವಿಶೇಷ ಪ್ರೀತಿ. ಹೀಗಾಗಿ ತಮ್ಮ ಕಟ್ಟಡದಲ್ಲಿ ಪುಟ್ಟ ಮಲೆನಾಡನ್ನು ಸೃಷ್ಟಿಸಬೇಕೆಂಬ ಅವರ ಕನಸು ಸಾಧ್ಯವಾಗಿದ್ದು 2020ರಲ್ಲಿ. ಈ ತೋಟ ನಿರ್ಮಾಣದ ಹಿಂದೆ ಇರುವುದು ತಾಯಿ ಮೇಲಿನ ಪ್ರೀತಿ. ಅವರ ನೆನಪುಗಳು ತೋಟದ ಮೂಲಕ ಹಸಿರಾಗಿವೆ.

‘ಅಮ್ಮನಿಗೆ ಪ್ರಕೃತಿಯೆಂದರೆ ಅಚ್ಚುಮೆಚ್ಚು. 50 ವರ್ಷ ಹಳೆಯ ನಮ್ಮ ಮನೆಯಲ್ಲಿ ಕೆಲವು ಸಸಿಗಳನ್ನು ಕುಂಡಗಳಲ್ಲಿಟ್ಟುಕೊಂಡು ಪೋಷಿಸಿದ್ದರು. ಅವರಿಗೆ ಗೌರವ ಸಲ್ಲಿಸುವ ಸಲುವಾಗಿ ನಾನು ಆ ಕೆಲಸ ಮುಂದುವರಿಸಿದೆ. ಕುಂಡಗಳ ಬದಲಿಗೆ ಡ್ರಮ್‌ಗಳಲ್ಲಿ ನುಗ್ಗೆ, ಸೀಬೆ, ಕರಿಬೇವು, ದಾಳಿಂಬೆ ಗಿಡಗಳನ್ನು ನೆಟ್ಟೆ. ಅವು ಸಮೃದ್ಧವಾಗಿ ಬೆಳೆದವು. ಆ ಮನೆಯನ್ನು ಒಡೆದು ಹೊಸ ಕಟ್ಟಡ ಕಟ್ಟುವಾಗ ತಾರಸಿಯಲ್ಲಿ ಮಲೆನಾಡಿನಂಥ ವಾತಾವರಣವನ್ನು ಸೃಷ್ಟಿಸಬೇಕು ಎಂದುಕೊಂಡಿದ್ದೆ. ನಾನಂದುಕೊಂಡದ್ದಕ್ಕಿಂತ ದೊಡ್ಡ ಪ್ರಮಾಣದಲ್ಲಿ ಈಗ ತೋಟ ಬೆಳೆದಿದೆ’ ಎನ್ನುತ್ತಾರೆ ವೆಂಕಟ್.



ವೆಂಕಟ್‌ರಾಮನ್ ಕೆ. ಅವರ ತಾರಸಿ ತೋಟದ ಪಕ್ಷಿನೋಟ ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.

> ಇಲ್ಲಿ ವಿಜ್ಞಾನ, ಮನಃಶಾಸ್ತ್ರ ಹಾಗೂ ಅಧ್ಯಾತ್ಮಗಳ ಮಿಳಿತ ಇದೆ. ತೋಟದೊಳಗೆ ನಡೆದರೆ ಮನಸ್ಸು ಪ್ರಫುಲ್ಲಗೊಳ್ಳುತ್ತದೆ, ತೂಗುಮಂಚದಲ್ಲಿ ಕುಳಿತರೆ ಗೆಲುವಾಗುತ್ತದೆ. ತೋಟದೊಳಗೆ ತಾಪಮಾನವೂ ಕಡಿಮೆ ಇರುತ್ತದೆ. ನಗರದ ಗಡಿಬಿಡಿ ಮರೆಯಾಗಿ ಹಸಿರು ಆವರಿಸುತ್ತದೆ
> **ವೆಂಕಟ್**, ಮಾಲೀಕರು

ತೋಟ ನಿರ್ಮಾಣ ಹೀಗೆ?

ತಾರಸಿಯ ಮೇಲೆ ಮಣ್ಣು ಹಾಕಿ ಅದರಲ್ಲಿ ತೋಟ ನಿರ್ಮಿಸಬೇಕು ಎಂದು ಎಂಜಿನಿಯರ್‌ಗೆ ಹೇಳಿದಾಗ ‘ಕಷ್ಟ’ ಎಂದಿದ್ದರಂತೆ.

11ನೇ ಪುಟಕ್ಕೆ...



ತಾರಸಿ ತೋಟದಲ್ಲಿ ವೆಂಕಟರಾಮನ್

ಎಂಜಿನಿಯರಿಂಗ್, ಸುಸ್ಥಿರತೆ

ನೀರು ಸೋರಿಕೆಯಾಗದಂತೆ ತಾರಸಿಯನ್ನು ವಿನ್ಯಾಸ ಮಾಡಲಾಗಿದೆ. ಬೇರುಗಳು ಒಳಹೊಕ್ಕು ತಾರಸಿ ಬಿರುಕು ಬಿಡದಂತೆ ರಬ್ಬರ್ ಹಾಸಿಗೆ ಹಾಕಿ ಅದರ ಮೇಲೆ ಮಣ್ಣು ತುಂಬಲಾಗಿದೆ. ಮಳೆ ನೀರು ನಿಲ್ಲದ ಹಾಗೆ ರೂಪಿಸಲಾಗಿದೆ. ಮಳೆ ನೀರು ಸಂಗ್ರಹವಾಗಿ ಮರುಬಳಕೆಯಾಗುತ್ತದೆ. ಕೃತಕವಾಗಿ ಮಳೆ ಬರಿಸುವ ವ್ಯವಸ್ಥೆಯೂ ಇದ್ದು, ಅದರ ಶೇಕಡ 80 ರಷ್ಟು ನೀರು ಪುನರ್ ಬಳಕೆಗೆ ಸಿಗುತ್ತದೆ. ಹೆಚ್ಚೆಂದರೆ ದಿನಕ್ಕೆ 200 ಲೀಟರ್ ನೀರು ಬೇಕು.

ಎಲ್ಲವೂ ನೈಸರ್ಗಿಕವಾಗಿಯೇ ಇದೆ ಎನ್ನುವಂತೆ ರೂಪುಗೊಂಡಿರುವುದರಿಂದ ನಿರ್ವಹಣೆ ವೆಚ್ಚವಿಲ್ಲ. ದಿನಕ್ಕೆ ಹೆಚ್ಚೆಂದರೆ 40-50 ನಿಮಿಷ ಮೀಸಲಿಡುತ್ತಾರೆ. ಮನೆಯ ಹಸಿಕಸ ಗೊಬ್ಬರವಾಗಿ ಗಿಡಗಳ ಬುಡ ಸೇರುತ್ತದೆ. ವರ್ಷಕ್ಕೊಮ್ಮೆ ಸೆಗಣಿ ಗೊಬ್ಬರ ಬೇಕು. ಉದುರಿದ ಎಲೆಗಳು ಮಣ್ಣಿನಲ್ಲೇ ಹೂತು ಫಲವತ್ತತೆ ಹೆಚ್ಚಿಸುತ್ತವೆ. ಕುಂಡಗಳಲ್ಲಿ ಇರಿಸಿದರೆ ಎಲೆಗಳ ವಿಲೇವಾರಿ ಮಾಡಬೇಕು. ಇಲ್ಲಿ ಎಲ್ಲವೂ ನೈಸರ್ಗಿಕವಾಗಿಯೇ ನಡೆಯುತ್ತದೆ. ಭಾರಿ ಗಾಳಿ ಮಳೆಗೂ ಜಗ್ಗದೆ ತೋಟ ಗಟ್ಟಿಯಾಗಿ ನಿಂತಿದೆ.

‘ಖರ್ಚು, ತಾರಸಿ ಸೋರಿಕೆ ಬಗ್ಗೆಯೇ ಬಹುತೇಕರು ಕೇಳುತ್ತಾರೆ. ಇದರ ಹಿಂದಿನ ಪರಿಶ್ರಮ, ಹಸಿರಿನಿಂದ ಆಗುವ ಲಾಭದ ಬಗ್ಗೆ ಯಾರಿಗೂ ಉತ್ಸಾಹವಿಲ್ಲ. ಇದರ ನಿರ್ಮಾಣಕ್ಕೆ ₹6 ಲಕ್ಷ ಖರ್ಚಾಗಿದೆ. ನಿರ್ವಹಣೆ ವೆಚ್ಚ ತೀರಾ ಕಡಿಮೆ. ಇಂತಹ ಕೆಲಸಕ್ಕೆ ಗಿಡಗಳ ಮೇಲೆ ಪ್ರೀತಿ ಇರಬೇಕು. ಮನೆಯ ಐಷಾರಾಮಿ ವಸ್ತುಗಳಿಗೆ ಖರ್ಚು ಮಾಡುವ ಬದಲು ಇಂತಹದ್ದು ಮಾಡಿದರೆ, ಮನಸ್ಸಿಗೂ ದೇಹಕ್ಕೂ ಒಳ್ಳೆಯದು. ಸಣ್ಣ ಪ್ರಯತ್ನಗಳೇ ದೊಡ್ಡ ಬದಲಾವಣೆಗಳಿಗೆ ನಾಂದಿ ಹಾಡುತ್ತದೆ. ದೊಡ್ಡ ಕಟ್ಟಡಗಳಲ್ಲಿಯೂ ಇದನ್ನು ಪ್ರಯೋಗ ಮಾಡಬಹುದು’ ಎಂದರು ವೆಂಕಟ್.

ಮೆಟ್ರೊದಲ್ಲಿ ಪ್ರಯಾಣಿಸುವಾಗ ತೋಟ ಕಂಡ ಹಲವರು ಭೇಟಿ ನೀಡಿದ್ದಾರೆ. ಇಂತಹದೇ ತೋಟ ನಿರ್ಮಾಣದ ಉತ್ಸಾಹ ತೋರಿದ್ದಾರೆ. ಬಂದವರಿಗೆಲ್ಲಾ ಧೈರ್ಯ ತುಂಬಿ ಪ್ರೋತ್ಸಾಹ ನೀಡುತ್ತಿದ್ದಾರೆ.

‘ಇದರ ನಿರ್ವಹಣೆ ಯಾವತ್ತೂ ಹೊರೆ ಅನಿಸಿಲ್ಲ. ಪ್ರೀತಿಯಿಂದ ಮಾಡುತ್ತಿರುವುದರಿಂದ ಮನಸ್ಸಿಗೆ ಖುಷಿಯನ್ನೇ ನೀಡಿದೆ. ತೆರಿಗೆಯಲ್ಲಿ ಕಡಿತ, ಪ್ರೋತ್ಸಾಹ ಧನ ಮುಂತಾದ ವಿನಾಯಿತಿ ನೀಡಿದರೆ ಬೇರೆಯವರಿಗೂ ಇದು ಪ್ರೇರಣೆಯಾಗಬಹುದು’ ಎನ್ನುವುದು ವೆಂಕಟ್ ಅವರ ಅಭಿಪ್ರಾಯ.

ಮಕ್ಕಳ ರಂಗಭೂಮಿಗೆ ಚಿಂತನೆಯ ಬೆಸುಗೆ



ಹಂಬಲ್ಪುರ ನಾಟಕದ ದೃಶ್ಯ

• ಜಿ ಎನ್ ಮೋಹನ್

'ಒಳ್ಳೆ ಸಮಯ ಒಳ್ಳೆ ಸಮಯ ಒಳ್ಳೆ ಸಮಯವು, ಕಳ್ಳತನವ ಮಾಡಲಿಕ್ಕೆ ಒಳ್ಳೆ ಸಮಯವು' ಎನ್ನುವ ಸದಾರಮೆಯ ಕಳ್ಳನಂತೆಯೇ ಇಲ್ಲಿಯೂ ತುಡುಗು ಮಾಡುವ ಒಂದು ಪಡ್ಡೆ ಹೈಕಳ ತಂಡವಿದೆ. ಅವರಿಗೆ ಸಿಕ್ಕ ಸಿಕ್ಕ ಕಡೆ ಕನ್ನ ಹಾಕದಿದ್ದರೆ ನೆಮ್ಮದಿ ಇಲ್ಲ. ಊರಿಗೆ ಊರೇ ಹೌಹಾರುವಂತೆ ಮಾಡಿರುವ ಈ ಕಳ್ಳರ ಗ್ಯಾಂಗ್ ಇನ್ನೇನು ಸಿಕ್ಕಿಹಾಕಿಕೊಂಡು ಬಿಡುತ್ತದೆ ಎನ್ನುವಾಗ ಎದ್ದು ಬಿದ್ದು ಈಜಿ ಊರು ಬಿಟ್ಟು ಪರಾರಿಯಾಗಿಬಿಡುತ್ತದೆ. ಹಾಗೆ ಅವರು ಎದ್ದು ಬಿದ್ದು ಸೇರಿದ್ದು 'ಹಂಬಲ್ಪುರ'ವನ್ನು.

ಹಂಬಲ್ಪುರದಲ್ಲಿ ದುಡಿಮೆಗೆ ಮಾತ್ರ ಬೆಲೆ ಉಳಿದದ್ದಕ್ಕಲ್ಲ. ಇಲ್ಲಿ ಹಣ ಸದ್ದೇ ಮಾಡುವುದಿಲ್ಲ, ಗುಣ ಮಾತ್ರ. ಬಾಳೆಹಣ್ಣಿನ ಗೊನೆ ಹೊತ್ತೊಯ್ದರೂ ಕೇಳುವವರಿಲ್ಲ, ಊಟ ಮಾಡಿದ ಗ್ಯಾಂಗ್ ತಿರುಗಿ ನೋಡದೆ ಹೋದರೂ ಯಾಕೆ ಎನ್ನುವವರಿಲ್ಲ. ಎಲ್ಲರೂ ನೆಮ್ಮದಿಯಿಂದ ಇರಬೇಕು ಎನ್ನುವುದೊಂದೇ ಸೂತ್ರ.

ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೇನು ಕೆಲಸ ಎನ್ನುವಂತೆ ಹಣ ಇಲ್ಲದ, ದುರಾಸೆ ಇಲ್ಲದ ಕಡೆ ಕಳ್ಳರಿಗೇನು ಕೆಲಸ? ಕೊನೆಗೆ ಅವರು ಅನಿವಾರ್ಯವಾಗಿ ತಮ್ಮ ದುರ್ಗುಣಗಳನ್ನು ಕಳಚಿ ಬಿಸಾಕಿ ಒಳ್ಳೆಯ ಮನುಷ್ಯರಾಗಬೇಕಾಗಿ ಬರುತ್ತದೆ.

ಬಾದಲ್ ಸರ್ಕಾರ್ ಈ ನಾಟಕ ಬರೆದದ್ದು 1977 ರಲ್ಲಿ. 'ಹಟ್ಟಮಲಾರ್ ಒಪಾರೆ' ಎನ್ನುವ ನಾಟಕ ಇದು. ಇದರ ಅರ್ಥ ಹಟ್ಟಮಲಾರ್‌ನ ಆಚೆಗೆ. ಅಂದರೆ ಇದು ಹಟ್ಟಮಲಾರ್‌ನ ಕಥೆ ಮಾತ್ರವಲ್ಲ. ಜಾಗತೀಕರಣದಿಂದಾಗಿ ದುರಾಸೆ, ದಗಲಬಾಜಿತನ, ಸೊಕ್ಕು, ಹಣವೇ ಎಲ್ಲವೂ ಆಗಿರುವ ಎಲ್ಲಾ ನೆಲದ ಕಥೆಯಾಗಿ ಇದು ಅರಳಿ ನಿಲ್ಲುತ್ತದೆ.

ಬೆಂಗಳೂರಿನ 'ವಿಜಯನಗರ ಬಿಂಬ' ರಂಗಭೂಮಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಅದರಲ್ಲೂ ಮಕ್ಕಳ ರಂಗಭೂಮಿಗೆ. ಮಕ್ಕಳ ನಾಟಕ ಆಡಿಸುವುದು ಈ ತಂಡಕ್ಕೆ ಎಷ್ಟು ಇಷ್ಟ ಎನ್ನುವುದು ಇತ್ತೀಚೆಗೆ ಅವರು ರಂಗಕ್ಕೇರಿಸಿದ ಎರಡು ಮಕ್ಕಳ ನಾಟಕಗಳು ಸಾಬೀತುಪಡಿಸಿದವು.

ಬಾದಲ್ ಸರ್ಕಾರ್ ಅವರ ನಾಟಕ ಅದರಲ್ಲಿ ಒಂದು. ಬಾದಲ್ ಸರ್ಕಾರ್ ಅವರು ನಿಜಕ್ಕೂ ಯಾವುದಕ್ಕೆ ಒತ್ತು ನೀಡಲು ಬಯಸಿದ್ದಾರೋ ಅದನ್ನು ಸಮರ್ಥವಾಗಿ ಮಕ್ಕಳ ನಾಟಕಗಳಲ್ಲಿ ತಮ್ಮದೇ ಛಾಪು ಮೂಡಿಸಿರುವ ಸುಷ್ಮಾ ಎಸ್. ವಿ. ಚೆನ್ನಾಗಿ ಹಿಡಿದಿದ್ದಾರೆ. ಈ ಕಾರಣಕ್ಕಾಗಿಯೇ ಈ ನಾಟಕ ನೋಡಲು ಒಂದು ಹಾಸ್ಯದ ನಾಟಕ ಎನಿಸಿದರೂ 'ಕಣ್ಣೀರಿನ ಕಡಲಿನ ಪಾಲು ಹಾಸ್ಯದ ಹರಿಗೋಲು' ಎಂದು ಕೈಲಾಸಂ ಹೇಳುವ ಹಾಗೆ ನಾಟಕದ ಉದ್ದಕ್ಕೂ ಶಾಲ್ಮಲೆಯಂತೆ ಈ ಸಮಾಜದ ದುರಂತವನ್ನು ಸುಷ್ಮಾ ಕಟ್ಟಿಕೊಡುತ್ತಲೇ ಹೋಗಿದ್ದಾರೆ.



ಕಾಪಿಚಟ್ ಕಳ್ಳೇಕಾಯ್ ನಾಟಕದ ದೃಶ್ಯ

ಚಿತ್ರಗಳು: ತಾಯಿ ಲೋಕೇಶ್

ನಾಟಕ ಮೊದಲು ಗೆಲ್ಲುವುದೇ ಅದನ್ನು ರೂಪಾಂತರಿಸುವ ರೀತಿಯಲ್ಲಿ. ಎಸ್.ವಿ.ಕಶ್ಯಪ್‌ಗೆ ನಾಟಕ ಕಟ್ಟುವುದು ಮಕ್ಕಳಾಟದಂತೆ. ಇದು ನಮ್ಮ ಊರಿನ, ನಮ್ಮ ಹಟ್ಟಿಯದ್ದೇ ಕಥೆ ಎನ್ನುವಂತೆ ಮಾಡಿ ಬಿಟ್ಟಿದ್ದಾರೆ. ವಿಶ್ವನಾಥ ಮಂಡಿ ಅವರ ಸೆಟ್ ಮಕ್ಕಳ ಕಲ್ಪನಾ ಲೋಕವನ್ನು ಮತ್ತಷ್ಟು ವಿಸ್ತರಿಸುತ್ತದೆ, ಹರಿವ ನದಿ, ಗೋಡೆಗೆ ಕೊರೆವ ಕಿಂಡಿ, ದನದ ಕೊಟ್ಟಿಗೆ ಎಲ್ಲವೂ ನಾಟಕಕ್ಕೆ ಕಳೆ ಕಟ್ಟುತ್ತದೆ. ಬೆಳಕೂ ನಾಟಕದ ಯಶಸ್ಸಿಗೆ ಅಷ್ಟೇ ದುಡಿದಿದೆ.

'ಕಾಪಿಚಟ್ ಕಳ್ಳೇಕಾಯ್'

'ಕಾಪಿಚಟ್ ಕಳ್ಳೇಕಾಯ್' ನಾವು ನಾವಾಗಿಯೇ ಇರುವುದರ ಮಹತ್ವವನ್ನು ಹೇಳುವ ನಾಟಕ. ಬೆಕ್ಕಿಗೆ ಹುಲಿಯಾಗುವ, ಪಟ್ಟದ ಗೊಂಬೆಗೆ ಬಾರ್ಬಿಯಾಗುವ, ಅವರಿಗೆ ಇವರಾಗುವ, ಇವರಿಗೆ ಅವರಾಗುವ ಕನಸು. ಇವತ್ತಿನ ಮಾರಾಟ ಜಾಲ ಎಲ್ಲರಿಗೂ ಕನಸುಗಳನ್ನು ಮಾರುತ್ತಿದೆ. ಬೇರೊಬ್ಬರಂತೆ ಬದುಕಿದರೆ ಸಾರ್ಥಕತೆ ಎಂದು ನಂಬಿದವರ ಭ್ರಮೆಯನ್ನು ಕಳಚಿ ಹಾಕಿ ಸ್ವಂತಿಕೆಯ ಮಹತ್ವ ಏನು ಎನ್ನುವುದನ್ನು ಗುರುತಿಸುವುದೇ ಈ ನಾಟಕದ ಹೂರಣ.

ಮೂವರು ಕಥೆಗಾರರು ಕಥೆ ಕಟ್ಟುವುದರಿಂದ ಶುರುವಾಗುವ ಆಟ ನೋಡ ನೋಡುತ್ತಿದ್ದಂತೆಯೇ ಆ ಕಥೆಗಾರರ ಕೈ ತಪ್ಪಿಸಿ ಬೆಳೆಯುತ್ತದೆ. ಈ ನಾಟಕದ ರಚನೆ, ವಿನ್ಯಾಸ ಹಾಗೂ ನಿರ್ದೇಶನ ಎಸ್.ವಿ. ಕಶ್ಯಪ್ ಅವರದ್ದೇ. ನಾಟಕದುದ್ದಕ್ಕೂ ಲವಲವಿಕೆಯನ್ನು ಕಾಪಾಡುವಲ್ಲಿ ಕಶ್ಯಪ್ ಯಶಸ್ವಿಯಾಗಿದ್ದಾರೆ. ವಸ್ತ್ರ ವಿನ್ಯಾಸ ಈ ನಾಟಕದ ವಿಶೇಷ ಹೈಲೈಟ್.

ಮಕ್ಕಳು ಎರಡು ನಾಟಕದಲ್ಲೂ ಇಡೀ ರಂಗಸ್ಥಳವನ್ನು ಆವರಿಸಿಕೊಂಡುಬಿಡುತ್ತಾರೆ. ಹಾಡಿ ಕುಣಿದು ಮನಸ್ಸು ಗೆದ್ದುಬಿಡುತ್ತಾರೆ. ಎರಡು ನಾಟಕಗಳಿಗೂ ಸಂಗೀತ (ಸ್ಕಂದ, ಅಚಿಂತ್ಯ) ಪ್ರಸಾದನ (ಮಾಲತೇಶ್ ಬಡಿಗೇರ್) ವಸ್ತ್ರ ವಿನ್ಯಾಸ (ಶೋಭಾ ವೆಂಕಟೇಶ್) ನಿರ್ವಹಣೆ (ಬೃಂದಾ ಕಶ್ಯಪ್, ಎಸ್ ಆರ್ ವೆಂಕಟೇಶ್) ಉತ್ತಮವಾಗಿತ್ತು.

ನೂರು ವರ್ಷ ಆದರೂ ನಿಲ್ಲದು ಈ ಪಯಣ!

10ನೇ ಪುಟದಿಂದ...



ಮೀರ್ ಅಲ್ತಾಫ್ ಹುಸೇನ್

ಒಂದು ಬಸ್‌ನಿಂದ ಆರಂಭವಾದ ಯಾನ 70 ಬಸ್‌ಗಳಿಗೆ ತಲುಪಿತು. ಮೊದಲ ರೂಟ್‌ನ ಹೆಸರನ್ನೇ (ಎಂಎಂಎಸ್-ಎಸ್‌ಟಿಎ) ಕಂಪನಿಗೆ ಇಟ್ಟರು. ಜೊತೆಗೆ ಹೊಸ ಮಾರ್ಗಗಳ ಅಂಚೆ ಗುತ್ತಿಗೆಯ ಹೊಣೆಯೂ ಇವರದ್ದಾಯಿತು. 1962ರಲ್ಲಿ ಮೀರ್ ಮೊಯಿದ್ದೀನ್ ಸಾಬ್ ನಿಧನರಾದ ನಂತರ ಅವರ ನಾಲ್ವರು ಮಕ್ಕಳು ಸೇರಿ (ಮೀರ್ ಆಜಮ್, ಮೀರ್ ಅಬ್ದುಲ್ ಮತೀನ್, ಮೀರ್ ಅಬ್ದುಲ್ ಸಲಾಂ, ಮೀರ್ ಅಕ್ಮಲ್ ಪಾಷಾ) ಬಸ್‌ಗಳನ್ನು ಮುನ್ನಡೆಸಿದರು.

1976ರಲ್ಲಿ ಬಸ್ ಮಾರ್ಗಗಳ ರಾಷ್ಟ್ರೀಕರಣದ ಫಲವಾಗಿ ಸುಮಾರು 70 ಬಸ್‌ಗಳನ್ನು ಸರ್ಕಾರ ವಶಕ್ಕೆ ಪಡೆಯಿತು. ಈಗ ಶಿವಮೊಗ್ಗ-ಆನವಟ್ಟಿ-ಹಾನಗಲ್, ಶಿವಮೊಗ್ಗ-ಬನವಾಸಿ-ಶಿರಸಿ, ಶಿವಮೊಗ್ಗ- ಆನವಟ್ಟಿ ಹಾಗೂ ಸಾಗರ-ಹಾವೇರಿ ಮಾರ್ಗದಲ್ಲಿ 12 ಬಸ್‌ಗಳು ಓಡಾಟ ನಡೆಸುತ್ತಿವೆ. ಈಗ ಮೀರ್ ಮೊಯಿದ್ದೀನ್ ಅವರ ನಾಲ್ಕನೇ ತಲೆಮಾರು ಈ ಬಸ್‌ಗಳ ಕಾಳಜಿ ಮಾಡುತ್ತಿದೆ.

ಆಂಬುಲೆನ್ಸ್ ರೀತಿಯೂ ಕೆಲಸ

'ಎಂಎಂಎಸ್ ಬಸ್‌ಗಳಲ್ಲಿ ಮಿಡ್ಲ್‌ಸ್ಕೂಲ್‌ವರೆಗಿನ ಮಕ್ಕಳಿಗೆ ಪ್ರಯಾಣ ಸಂಪೂರ್ಣ ಉಚಿತ, ಹೈಸ್ಕೂಲ್, ಕಾಲೇಜು ವಿದ್ಯಾರ್ಥಿಗಳಿಗೆ ಅರ್ಧ ಚಾರ್ಜು ಪಡೆಯುತ್ತಿದ್ದರು' ಎನ್ನುತ್ತಾರೆ ಶಿವಮೊಗ್ಗ ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಆರ್.ರಂಗಪ್ಪ (ಮೀಸೆ ರಂಗಣ್ಣ).

'ಆಗ ಈ ಬಸ್‌ಗಳು ಆಂಬುಲೆನ್ಸ್ ರೀತಿಯೂ ಕಾರ್ಯನಿರ್ವಹಿಸಿವೆ. ಗ್ರಾಮೀಣ ಪ್ರದೇಶಗಳಲ್ಲಿ ಆಸ್ಪತ್ರೆ ಸೌಲಭ್ಯ ಇರಲಿಲ್ಲ. ಗರ್ಭಿಣಿಯರನ್ನು ಅಲ್ಲಿಂದ ಕರೆತಂದು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಬಿಡುತ್ತಿದ್ದರು. ಬಹಳಷ್ಟು ಬಾರಿ ಬಸ್‌ನಲ್ಲಿಯೇ ಹೆರಿಗೆ ಆಗಿದೆ. ಬಸ್‌ಗಳ ಓಡಾಟವನ್ನು ಬರೀ ಉದ್ಯಮವನ್ನಾಗಿ ನೋಡದೇ ಮಾನವೀಯ ಹಾದಿಯಲ್ಲಿ ಓಡಿಸಿ ಮಲೆನಾಡಿನ ಜನರ ಮನಸ್ಸು ಗೆದ್ದವರು ಮೀರ್ ಮೊಯಿದ್ದೀನ್ ಸಾಹೇಬರು. ಇದೇ ಕಾರಣಕ್ಕೆ ಆ ಸಂಸ್ಥೆಯ ಬಸ್‌ಗಳು ಶತಮಾನದ ಹಾದಿ ಪೂರೈಸಿವೆ' ಎಂದು ರಂಗಪ್ಪ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

'ಕೆಲ ವರ್ಷಗಳ ಹಿಂದೆ ಹೈಕೋರ್ಟ್‌ನಲ್ಲಿ ಪ್ರಕರಣವೊಂದರ ವಿಚಾರಣೆಗೆ ಹೋದಾಗ ಅಲ್ಲಿ ಎಂಎಂಎಸ್ ಬಸ್‌ನವರ ಕೇಸ್ ಎಂದು ತಿಳಿದು ನ್ಯಾಯಮೂರ್ತಿ ರಾಮಾ ಜೋಯಿಸ್, ತಮ್ಮ ಬಾಲ್ಯದ ಬಗ್ಗೆ ಮಾತನಾಡಿದ್ದರು. ತಾವು ಶಾಲೆಯಲ್ಲಿ ಓದುವಾಗ ತೀರ್ಥಹಳ್ಳಿಯಿಂದ ಶಿವಮೊಗ್ಗಕ್ಕೆ ಹೊರಟ ಎಂಎಂಎಸ್ ಬಸ್, ಮಂಡಗದ್ದೆಗೆ ಬಂದರೆ ಆಗ ಸಂಜೆ 5 ಗಂಟೆ. ನಮ್ಮ ಶಾಲೆ ಬಿಟ್ಟಿತು ಎಂದರ್ಥ. ನಾವು ಆ ಬಸ್ ಬರುವುದನ್ನೇ ಕಾಯುತ್ತಿದ್ದೆವು. ಅವರು ಶಾಲೆ ಮಕ್ಕಳನ್ನು ಉಚಿತವಾಗಿ ಕರೆದೊಯ್ಯುತ್ತಿದ್ದರು ಎಂದು ನೆನಪಿಸಿಕೊಂಡಿದ್ದರು' ಎಂದು ಮೀರ್ ಅಲ್ತಾಫ್ ಹುಸೇನ್ ಖುಷಿಯಿಂದ ಹೇಳುತ್ತಾರೆ.

ಇದು ಒಂದು ಬಸ್ಸಿನ ಕಥೆ ಅಷ್ಟೇ ಅಲ್ಲ, ನೂರು ವರ್ಷಗಳಲ್ಲಿ ಸಾರಿಗೆ ವ್ಯವಸ್ಥೆಯಲ್ಲಿ ಕಂಡುಬಂದ ಅದ್ಭುತ ಸುಧಾರಣೆಯ ಹೆಜ್ಜೆ ಗುರುತುಗಳೂ ಇವೆ. ಇತಿಹಾಸದಿಂದ ಕಲಿಯುವುದು, ತಿಳಿಯುವುದು, ಅನುಸರಿಸುವುದು, ಅನುಭವಿಸುವುದು ತುಂಬಾ ಇದೆ.

ಮಧುಸೂದನ್ ಮೇಷ್ಟ್ರಿಗೆ ನಾವೀನ್ಯದ್ದೇ ಧ್ಯಾನ

10ನೇ ಪುಟದಿಂದ...

ಅದರ ಮೂಲಕ 50 ವಿದ್ಯಾರ್ಥಿಗಳ ಹಾಜರಾತಿಯನ್ನು ಅವರು ಕ್ಯೂಆರ್ ಕೋಡ್ ಮೂಲಕ ಪರಿಶೀಲಿಸುತ್ತಿದ್ದಾರೆ. ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಗಳನ್ನು ಅಪ್‌ಲೋಡ್ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ನೀಡುವ ಹೋಂವರ್ಕ್‌ಗಳನ್ನು ನಿರ್ವಹಿಸುತ್ತಿದ್ದಾರೆ ಮತ್ತು ರಸಪ್ರಶ್ನೆಗಳನ್ನೂ ನಡೆಸುತ್ತಿದ್ದಾರೆ. ಪೋಷಕರು ಕೂಡ ಈ ವ್ಯವಸ್ಥೆಗೆ ಲಾಗಿನ್ ಆಗಿ ಮಕ್ಕಳ ಶೈಕ್ಷಣಿಕ ಸಾಧನೆಯನ್ನು, ಉತ್ತರ ಪತ್ರಿಕೆಗಳನ್ನು ವೀಕ್ಷಿಸಬಹುದು. ಇದು ಪ್ರಾಯೋಗಿಕ ಯೋಜನೆಯಾಗಿದ್ದು, ಅದನ್ನು ಇನ್ನಷ್ಟು ಸುಧಾರಿಸುವ, ವಿಸ್ತರಿಸುವ ವಿಶ್ವಾಸವನ್ನು ಅವರು ವ್ಯಕ್ತಪಡಿಸುತ್ತಾರೆ.

'ನಾನು ಈವರೆಗೆ ಟಿವಿಯಲ್ಲಿ ಮಾತ್ರ ವಿಆರ್ ಹೆಡ್‌ಸೆಟ್, ರೊಬೋಟಿಕ್ಸ್ ಮತ್ತು ಸ್ಮಾರ್ಟ್ ಬೋರ್ಡ್‌ಗಳನ್ನು ನೋಡಿದ್ದೆ' ಎಂಬುದು ಐದನೇ ತರಗತಿ ವಿದ್ಯಾರ್ಥಿನಿ ಪ್ರೇಕ್ಷಾಳ ಮಾತು. ಆಕೆ ಈಗ ಪಠ್ಯಪುಸ್ತಕದಲ್ಲಿರುವ ಪಠ್ಯವನ್ನು ಬಾಯಿಪಾಠ ಮಾಡುವುದರ ಬದಲು ಶಾಲೆಯ ಪ್ರಯೋಗಾಲಯದಲ್ಲಿ ವಿವಿಧ ಚಟುವಟಿಕೆಗಳಲ್ಲಿ ತೊಡಗುತ್ತಾ ಸಮಯ ಕಳೆಯುತ್ತಾಳೆ.

ಮಧುಸೂದನ್ ಅವರ ಪ್ರಯತ್ನ ಖಾಸಗಿ ಶಾಲೆಗಳ ಗಮನಸೆಳೆದಿದೆ. ತಮ್ಮಲ್ಲಿಗೆ ಬರುವಂತೆ ಕೇಳಿಕೊಂಡಿವೆ. ಆದರೆ, ಅವರು ಸರ್ಕಾರಿ ಶಾಲಾ ವ್ಯವಸ್ಥೆಯಲ್ಲೇ ಉಳಿಯಲು ಬಯಸಿದ್ದಾರೆ. 'ಇಲ್ಲಿನ ಮಕ್ಕಳಿಗೆ ಈ ಮಾದರಿಯ ಶಿಕ್ಷಣದ ಅಗತ್ಯ ಹೆಚ್ಚಿದೆ' ಎಂಬುದು ಅವರ ಅಭಿಪ್ರಾಯ. ಅತ್ಯಂತ ವ್ಯವಸ್ಥಿತವಾದ ರೊಬೋಟಿಕ್ಸ್ ಪ್ರಯೋಗಾಲಯವನ್ನು ಸ್ಥಾಪಿಸುವುದು ಅವರ ಮುಂದಿನ ಗುರಿ. ಅದು ಸುತ್ತಮುತ್ತಲಿನ ಸರ್ಕಾರಿ ಶಾಲೆಗಳ ಮಕ್ಕಳಿಗೆ ತೆರೆದಿರಬೇಕು ಎಂಬುದು ಅವರ ಆಶಯ.

ಮೈಸೂರು ಡಯಟ್‌ನಲ್ಲಿ ಉಪನ್ಯಾಸಕಿಯಾಗಿರುವ ಭಾಗ್ಯಲಕ್ಷ್ಮಿ ಎ. ಅವರು ಮಧುಸೂದನ್ ಅವರ ಕೆಲಸವನ್ನು ಬಹಳ ಹತ್ತಿರದಿಂದ ನೋಡಿದ್ದಾರೆ. 'ಅವರಷ್ಟೇ ಶ್ರದ್ಧೆ, ಬದ್ಧತೆಯಿಂದ ಕೆಲಸ ಮಾಡುವ ಶಿಕ್ಷಕರು ನಮಗೆ ಸಿಕ್ಕಿದರೆ, ಅವರು ರೂಪಿಸಿರುವ ಶಿಕ್ಷಣ, ಬೋಧನೆಯ ಮಾದರಿಯು ಇನ್ನಷ್ಟು ಎತ್ತರಕ್ಕೆ ಬೆಳೆಯಲಿದೆ' ಎಂಬುದು ಅವರ ಮೆಚ್ಚುಗೆಯ ಮಾತು.

ಒಂದು ಕಾಲದಲ್ಲಿ ಚೆಂಡನ್ನು ಹಿಡಿಯುವುದಕ್ಕಾಗಿ ತರಗತಿಗಳಿಂದ ಓಡುತ್ತಿದ್ದ ಬಾಲಕನ ಜೀವನ ಪಯಣವು ಈಗ ಪೂರ್ತಿ ಚಕ್ರದಂತೆ ತಿರುಗಿದೆ. ಈಗ ಸಲಕರಣೆಗಳು, ಯಂತ್ರಗಳನ್ನು ಹೊಂದಿರುವ ಪ್ರಯೋಗಾಲಯವೇ ಅವರ ಆಟದ ಮೈದಾನವಾಗಿದೆ. ಪ್ರಯೋಗಾಲಯದಲ್ಲಿರುವ ವಸ್ತುಗಳ ಮೇಲೆ ಕೈಯಾಡಿಸುವ ಮಕ್ಕಳು ಏನು ಸಾಧಿಸಬಲ್ಲರು ಎಂಬುದನ್ನೂ ಅವರು ಅರಿತುಕೊಂಡಿದ್ದಾರೆ.

ಅನುವಾದ: ಸೂರ್ಯನಾರಾಯಣ ವಿ.

ತಾರಸಿ ತೋಟ, ಅದ್ಭುತ ನೋಟ

10ನೇ ಪುಟದಿಂದ...




ತಾರಸಿ ತೋಟದಲ್ಲೊಂದು ನಡಿಗೆ ಪಥ

ಮಣ್ಣು, ಗಿಡಗಳ ಭಾರದಿಂದ ತಾರಸಿ ಕುಸಿಯಬಹುದು, ನೀರು ಸೋರಿಕೆ ಆಗಬಹುದು ಎಂದು ಎಚ್ಚರಿಸಿದ್ದರಂತೆ. ತೋಟ ಮಾಡಲೇಬೇಕು ಎಂದು ತೀರ್ಮಾನಿಸಿದ್ದ ವೆಂಕಟ್, ತಜ್ಞರ ಅಭಿಪ್ರಾಯ ಪಡೆದರು. ಅಲ್ಲದೆ, ಬೇರೆ ದೇಶಗಳ ತಾರಸಿ ತೋಟಗಳ ಬಗ್ಗೆ ಅಧ್ಯಯನ ಮಾಡಿದರು. ಜೊತೆಗೆ ತಮ್ಮ ಎಂಜಿನಿಯರಿಂಗ್ ಅನುಭವ ಬಳಸಿಕೊಂಡರು. ತೋಟ ನಿರ್ಮಾಣಕ್ಕೆ ತಕ್ಕಂತೆ ಕ್ಷಮತೆಯುಳ್ಳ ಕಟ್ಟಡ ನಿರ್ಮಿಸಿ, ಅದಕ್ಕೆ ತಕ್ಕಂತೆ ತಾರಸಿಯನ್ನೂ ವಿನ್ಯಾಸ ಮಾಡಿಸಿದರು.

ಮಣ್ಣಿಗೆ ಕೊಕೊಪಿಟ್ ಬೆರೆಸಿ 9 ಅಡಿ ದಪ್ಪಕ್ಕೆ ಹಾಸಿ ಅದರಲ್ಲಿ ಗಿಡಗಳನ್ನು ಹಾಕಿದರು. 2020ರಲ್ಲಿ ತೋಟ ನಿರ್ಮಾಣ ಆರಂಭವಾಯಿತು. ಕೋವಿಡ್ ಲಾಕ್‌ಡೌನ್‌ನಿಂದಾಗಿ ತೋಟ ನಿರ್ಮಾಣಕ್ಕೆ, ಸಸಿಗಳ ಪೋಷಣೆಗೆ ಹೆಚ್ಚಿನ ಸಮಯ ಸಿಕ್ಕಿತು. ಮಲೆನಾಡು ಅನಿಸಬೇಕು. ತೋಟದಲ್ಲಿ ಕುಳಿತರೆ ಪರಿಮಳ ಬರಬೇಕು ಎಂದು ಕಾಫಿ, ಏಲಕ್ಕಿ ಬಾಳೆ, ಕೆಸುವು, ಮಲ್ಲಿಗೆ, ಕರಿಮೆಣಸು, ಮುಂತಾದವುಗಳನ್ನು ಹಾಕಿದ್ದಾರೆ. ಇವುಗಳ ಜೊತೆಗೆ ಸಪೋಟ, ದಾಳಿಂಬೆ, ಸೀತಾಫಲ, ಹಿಪ್ಪುನೇರಳೆ, ಚೆರಿ, ಡ್ರ್ಯಾಗನ್ ಫ್ರೂಟ್, ಅಂಜೂರ, ಬೆಣ್ಣೆಹಣ್ಣು, ನೆಲ್ಲಿ, ಅವರೆಬಳ್ಳಿ, ಹೇರಳೆಕಾಯಿ, ನಿಂಬೆಹಣ್ಣು, ಕಬ್ಬು, ಬನ್ನಿಮರ, ಜಾಜಿ, ಪಾರಿಜಾತ, ತೇಜಪತ್ರೆ, ಆಡುಸೋಗೆ, ಮಧುನಾಶಿನಿ, ಲಾವಂಚ, ಅಮೃತಬಳ್ಳಿ, ಸಂಪಿಗೆ, ದೊಡ್ಡಪತ್ರೆ, ವೆನಿಲಾ, ವೀಳ್ಯದೆಲೆ, ಶುಂಠಿ, ಸುವರ್ಣಗೆಡ್ಡೆ ಸೇರಿ ನೂರಕ್ಕೂ ಅಧಿಕ ವಿಧದ ಗಿಡ-ಮರಗಳಿವೆ.

ಈ ಬಾರಿ ಎರಡು ಕೆ.ಜಿಯಷ್ಟು ಕಾಫಿ ಬೀಜ ಹಾಗೂ ನೆಲ್ಲಿ, 15 ಕೆ.ಜಿಯಷ್ಟು ಅವರೆಕಾಯಿ ಸಿಕ್ಕಿದೆ. ಮೂರು ವರ್ಷಗಳಿಂದ ತಾರಸಿಯಲ್ಲಿ ಬೆಳೆದ ಕಬ್ಬನ್ನೇ ಸಂಕ್ರಾಂತಿ ಹಬ್ಬಕ್ಕೆ ಬಳಸುತ್ತಿದ್ದಾರೆ. ತಾಯಿಯ ನೆನಪಿಗಾಗಿ ಅವರು ಬೆಳೆದ ನಿಂಬೆಗಿಡವೂ ತಾರಸಿಯಲ್ಲಿದೆ. ವೈವಿಧ್ಯ ಗಿಡಗಳ ಆಯ್ಕೆ ವೆಂಕಟ್ ಪತ್ನಿಯದ್ದು.

ನಾನು ತಾರಸಿ ತೋಟದಲ್ಲಿ ಸ್ವಲ್ಪ ಕಾಲ ಕಳೆದು ಹೊರಡುವಾಗ ಮನಸ್ಸು ಮಲೆನಾಡು ತೊರೆದು ಬರುವಂತೆ ಭಾಸವಾಯಿತು.



ಬಾಳೆದಿಂಡಿನ ಫ್ರಿಜ್ ಗೊತ್ತೆ?

• ಬೀರಣ್ಣ ನಾಯಕ ಮೊಗಟಾ

ಈಗೆಲ್ಲ ಟಿ.ವಿ, ಫ್ರಿಜ್, ವಾಷಿಂಗ್ ಮಷಿನ್ ಇತ್ಯಾದಿ ಗೃಹೋಪಯೋಗಿ ಉಪಕರಣಗಳು ಸಾಮಾನ್ಯ ವರ್ಗದವರ ಮನೆಯಲ್ಲಿಯೂ ಕಾಣಸಿಗುತ್ತವೆ. ಆದರೆ, ತೊಂಬತ್ತರ ದಶಕದಲ್ಲಿ ಮಲೆನಾಡಿನಲ್ಲಿ ಟಿ.ವಿ, ಫ್ರಿಜ್ ಇದೆ ಎಂದರೆ, ಅವರ ಮನೆಯಲ್ಲಿ ಬಹಳ ಶ್ರೀಮಂತಿಕೆ ಇದೆ ಎಂಬ ಭಾವನೆ ಇತ್ತು. ಅದಕ್ಕೂ ಸ್ವಲ್ಪ ಹಿಂದಕ್ಕೆ ಹೋದರೆ ಹಳ್ಳಿಗಳಲ್ಲಿ ವಿದ್ಯುತ್ ಸಂಪರ್ಕವೇ ಇರಲಿಲ್ಲ. ಆ ಕಾಲದಲ್ಲಿ ಹಳ್ಳಿಗಳಲ್ಲಿ ನೈಸರ್ಗಿಕ ಫ್ರಿಜ್ ಬಳಕೆಯಲ್ಲಿತ್ತು!

ನಮ್ಮ ಪೂರ್ವಜರು ತಮ್ಮದೇ ಆದ ಜ್ಞಾನವನ್ನು ಬಳಸಿಕೊಂಡು ಆಹಾರ ವಸ್ತುಗಳು ಕೆಡದಂತೆ ಇಡುತ್ತಿದ್ದರು. ಅದುವೇ ಬಾಳೆಗಿಡದಿಂದ ಸಿದ್ಧಗೊಂಡ ನೈಸರ್ಗಿಕ ಫ್ರಿಜ್.

ಅಂಗಳದಲ್ಲಿ ಅಥವಾ ತೋಟದಲ್ಲಿ ಗೊನೆ ತೆಗೆದ ದಪ್ಪ ಬಾಳೆದಿಂಡನ್ನು ಹಾಗೆಯೇ ಇಟ್ಟು, ಅದನ್ನು ಫ್ರಿಜ್‌ನಂತೆ ಬಳಸುತ್ತಿದ್ದರು. ಬಾಳೆದಿಂಡಿನ ಬುಡದಿಂದ ಸುಮಾರು ಎರಡೂವರೆ ಅಡಿಯ ಅಂತರದಲ್ಲಿ ಚೌಕಾಕಾರದಲ್ಲಿ ಆಳವಾಗಿ ಕತ್ತರಿಸಿ, ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ಇಡಲು ಜಾಗ ಮಾಡುತ್ತಿದ್ದರು. ಅದರಲ್ಲಿ ಬೇಗನೆ ಕೆಡುವ ವಸ್ತುಗಳನ್ನು ಇಡುತ್ತಿದ್ದರು. ಅದರಲ್ಲೂ ಮಾಂಸಾಹಾರಿಗಳು ಮೀನನ್ನು ತುಂಬಿಡುತ್ತಿದ್ದರು. ಅದಕ್ಕೆ ಬಾಗಿಲಿನಂತೆ ಮೇಲಿಂದ ತೆಗೆದ ಬಾಳೆಯ ತುಂಡನ್ನು ತೆಳ್ಳಗೆ ಲೇಪಿಸಿ ಭದ್ರಪಡಿಸುತ್ತಿದ್ದರು. ಈ ರೀತಿಯಲ್ಲಿ ಮೀನು, ಮಾಂಸಗಳನ್ನು ಒಂದೆರಡು ದಿನ ಕಾಪಾಡಿಕೊಳ್ಳುತ್ತಿದ್ದರು. ಮಾಂಸವಾದರೆ ಅದಕ್ಕೆ ತೆಂಗಿನೆಣ್ಣೆ ಹಾಗೂ ಅರಿಸಿನ ಬಳಿದು ತುಂಬಿಡುತ್ತಿದ್ದರು. ಇದರಿಂದ ಅದು ಬೇಗ ಕೆಡುತ್ತಿರಲಿಲ್ಲ ಎನ್ನುತ್ತಾರೆ ಅನುಭವಿಗಳು.

ಮುನ್ನೋಟ 01-02-2026 ರಿಂದ 07-02-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಹಲವಾರು ವಿಚಾರಗಳ ಬಗ್ಗೆ ತಲೆಕೆಡಿಸಿಕೊಳ್ಳುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸ್ಥಿರಾಸ್ತಿ ವ್ಯವಹಾರ ಮಾಡುವವರಿಗೆ ಲಾಭ ಹೆಚ್ಚುತ್ತದೆ. ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಹೆಚ್ಚು ಶ್ರಮ ವಹಿಸಬೇಕು. ಕೆಲಸದ ಒತ್ತಡದಿಂದ ಅನಾರೋಗ್ಯವಾಗಬಹುದು. ಸಂಗಾತಿಗೆ ವೃತ್ತಿಯಲ್ಲಿ ಅಭಿವೃದ್ಧಿ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಬುದ್ಧಿವಂತಿಕೆಯಿಂದ ಮುನ್ನಡೆಯುವಿರಿ. ಆದಾಯವು ನಿಮ್ಮ ಅಗತ್ಯವನ್ನು ಮೀರಿಸುತ್ತದೆ. ಕೃಷಿಭೂಮಿಯನ್ನು ಕೊಳ್ಳಬಹುದು. ಈಗ ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶವಿರುತ್ತದೆ. ಪ್ರಸೂತಿ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಸಂಗಾತಿಗೆ ಆಸ್ತಿ ದೊರಕುವ ಯೋಗವಿದೆ. ಕೆಲವೊಂದು ಅನಿರೀಕ್ಷಿತ ಖರ್ಚುಗಳು ಬರಬಹುದು. ವಿದೇಶದಲ್ಲಿ ವೃತ್ತಿ ಅರಸುತ್ತಿರುವವರಿಗೆ ಈಗ ಸಿಗುತ್ತದೆ. ಕಬ್ಬಿಣದ ವ್ಯಾಪಾರಿಗಳಿಗೆ ಹೆಚ್ಚು ಲಾಭವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಜನರಿಂದ ಬಹಳ ಗೌರವವನ್ನು ಪಡೆಯುವಿರಿ. ಆದಾಯವು ಉತ್ತಮವಾಗಿರುತ್ತದೆ. ಆಸ್ತಿ ಮಾಡುವ ವಿಚಾರದಲ್ಲಿ ಸ್ವಲ್ಪ ವ್ಯತ್ಯಾಸವಾಗಬಹುದು. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆಯನ್ನು ಕಾಣಬಹುದು. ಸಂಗಾತಿಯು ನಿಮಗೆ ಉತ್ತಮ ಗೌರವವನ್ನು ಕೊಡುವರು. ಕೆಲವೊಂದು ವ್ಯವಹಾರಗಳಲ್ಲಿ ಅನಿರೀಕ್ಷಿತ ಲಾಭವನ್ನು ಕಾಣಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಮನಸಿನಲ್ಲಿ ಒಂದು ರೀತಿಯ ಹೊಸ ಆನಂದ ತುಂಬಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ನಿಮ್ಮೆಲ್ಲ ಕೆಲಸ ಕಾರ್ಯಗಳಿಗೂ ಸಂಗಾತಿ ಕಡೆಯವರು ಸಹಕಾರ ನೀಡುವರು. ಸಂಗಾತಿಯ ಸಹಕಾರದಿಂದ ಆಸ್ತಿಯನ್ನು ಖರೀದಿ ಮಾಡಬಹುದು. ಹಿರಿಯರಿಗೆ ಆರೋಗ್ಯ ತಪ್ಪುವ ಸಂಭವವಿದೆ. ವಿದೇಶಿ ವ್ಯವಹಾರ ಮಾಡುವವರಿಗೆ ಅನಿರೀಕ್ಷಿತ ಲಾಭಬರುವ ಸಾಧ್ಯತೆ ಇದೆ. ಕೃಷಿಯಿಂದ ಆದಾಯ ಹೆಚ್ಚುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಬಂಧುಗಳ ವಿರೋಧ ನಿಮಗೆ ಎದುರಾಗುತ್ತದೆ. ಭೂ ವ್ಯವಹಾರವನ್ನು ಮಾಡುವವರ ಆದಾಯ ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ. ವಿದ್ಯಾರ್ಥಿಗಳಿಗೆ ಸ್ವಲ್ಪ ಉತ್ತಮ ಫಲಿತಾಂಶ ಬರುತ್ತದೆ. ಮಕ್ಕಳಿಗೆ ಉತ್ತಮ ಅಭಿವೃದ್ಧಿ ಇರುತ್ತದೆ. ಚರ್ಮ ಸಂಬಂಧಿ ಕಾಯಿಲೆ ಕೆಲವರನ್ನು ಕಾಡಬಹುದು. ಈಗ ಸಂಗಾತಿಯೊಡನೆ ಮುಸುಕಿನ ಗುದ್ದಾಟಗಳಿರುತ್ತವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆದಾಯವು ಚೇತರಿಕೆಯತ್ತ ಹೊರಳುತ್ತದೆ. ಉದ್ಯೋಗ ಸಂಬಂಧಿತ ವಿಷಯದಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಸಿಗುತ್ತದೆ. ಕೀಲು ಸಂಬಂಧಿ ನೋವು ನಿಮ್ಮನ್ನು ಕಾಡಬಹುದು. ನಿಮ್ಮ ಸಂಗಾತಿಯ ಶ್ರಮದಿಂದ ಸಂಸಾರಕ್ಕೆ ಅನುಕೂಲವಾಗುತ್ತದೆ. ಕೃಷಿಯಿಂದ ನಿರೀಕ್ಷಿತ ಆದಾಯವನ್ನು ಕಾಣಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮ ದ್ವಂದ್ವ ನಿಲುವುಗಳು ನಿಮಗೆ ಸಮಸ್ಯೆ ತರುತ್ತವೆ. ಹಣದ ಹರಿವು ಸ್ವಲ್ಪ ಉತ್ತಮಗೊಳ್ಳುತ್ತದೆ. ಹಿರಿಯರನ್ನು ಓಲೈಸಿ ನಿಮ್ಮ ಕೆಲಸ ಸಾಧಿಸಿಕೊಳ್ಳಲು ಪ್ರಯತ್ನಪಡುವಿರಿ. ಸ್ಥಿರಾಸ್ತಿ ವಿಚಾರದಲ್ಲಿ ಮುನ್ನಡೆಯನ್ನು ಕಾಣಬಹುದು. ವಾಯು ಪ್ರಕೋಪ ಸ್ವಲ್ಪ ಬಾಧಿಸಬಹುದು. ಸಂಸಾರದಲ್ಲಿ ಕಾವೇರಿದ ವಾತಾವರಣ ಮೂಡುವ ಸಾಧ್ಯತೆಯಿದೆ. ಆಭರಣ ವ್ಯಾಪಾರಿಗಳಿಗೆ ಅನಿರೀಕ್ಷಿತ ಲಾಭ ಸಿಗುತ್ತದೆ. ತಂದೆಯಿಂದ ಸಾಕಷ್ಟು ಸಹಕಾರ ದೊರೆಯುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟು ಮುನ್ನಡೆಯುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಬಂಧುಗಳ ನಡುವೆ ಒಗ್ಗಟ್ಟನ್ನು ತರಲು ಪ್ರಯತ್ನ ಪಡುವಿರಿ. ವಿದೇಶದಲ್ಲಿ ವಾಸಿಸುತ್ತಿರುವವರಿಗೆ ಆಸ್ತಿ ಮಾಡಿಕೊಳ್ಳುವ ಅವಕಾಶ ದೊರೆಯುತ್ತದೆ. ಗಣಿ ಸಂಶೋಧಕರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಆಹಾರ ಸಂಬಂಧಿ ಅನಾರೋಗ್ಯವಾಗುವ ಸಾಧ್ಯತೆಗಳಿವೆ. ವೃತ್ತಿಯ ಸ್ಥಳದಲ್ಲಿ ಹೊಸ ಸ್ಥಾನ ಸಿಗುವ ಸಾಧ್ಯತೆಯಿದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಬಂಧುಗಳಿಂದ ಗೌರವ ದೊರೆಯುತ್ತದೆ. ಆದಾಯವು ಉತ್ತಮಗೊಳ್ಳುತ್ತ ಹೋಗುತ್ತದೆ. ಕೃಷಿಭೂಮಿ ಅಭಿವೃದ್ಧಿಯಲ್ಲಿ ಪ್ರಗತಿಯನ್ನು ಕಾಣಬಹುದು. ಮಕ್ಕಳಿಂದ ಆರ್ಥಿಕ ಸಹಕಾರ ಸಿಗುವ ಸಾಧ್ಯತೆಗಳಿವೆ. ಕೆಲವರಿಗೆ ಹಲ್ಲಿನ ತೊಂದರೆ ಕಾಣಿಸಬಹುದು. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಸ್ವಲ್ಪ ಹಿನ್ನಡೆ ಇರುತ್ತದೆ. ಪರಂಪರಾಗತ ವಿದ್ಯೆಯನ್ನು ಮುಂದುವರಿಸಬಹುದು. ವೃತ್ತಿಯಲ್ಲಿ ಆದಾಯ ಹೆಚ್ಚುವ ಸಾಧ್ಯತೆಯಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಹೊಸ ಹುಮ್ಮಸ್ಸಿನಿಂದ ಕೆಲಸ ಮಾಡುವಿರಿ. ಆದಾಯವು ಕಡಿಮೆ ಇದ್ದರೂ, ತೊಂದರೆ ಇರುವುದಿಲ್ಲ. ವಿದೇಶಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ರಾಸಾಯನಿಕ ವಸ್ತುಗಳ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವೈರಿಗಳಿಗೆ ಸಾಕಷ್ಟು ಪ್ರತಿರೋಧ ತೋರುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಸಿಗುವ ಯೋಗವಿದೆ. ಉದರ ಸಂಬಂಧಿ ದೋಷಗಳು ಕೆಲವರನ್ನು ಕಾಡುತ್ತವೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಆದಾಯವು ಕಡಿಮೆ ಇರುತ್ತದೆ. ಶ್ರಮಪಟ್ಟಲ್ಲಿ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು. ಬಂಧುಗಳಿಂದ ಸಹಕಾರ ದೊರೆಯುವುದು ಕಡಿಮೆ. ಆಸ್ತಿ ವ್ಯವಹಾರಗಳು ನಿರೀಕ್ಷಿತ ರೀತಿಯಲ್ಲಿ ನಡೆಯುವುದಿಲ್ಲ. ವಿದ್ಯಾರ್ಥಿಗಳಿಗೆ ಬಹಳ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಶೀತ ಬಾಧೆ ಕೆಲವರನ್ನು ಕಾಡಬಹುದು. ನಿಮ್ಮ ವ್ಯಾಪಾರದಲ್ಲಿ ಅನಿರೀಕ್ಷಿತ ಏರುಪೇರುಗಳಾಗುತ್ತವೆ. ವೃತ್ತಿಯಲ್ಲಿ ಅಲ್ಪ ಯಶಸ್ಸನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಕೆಲಸ ಮಾಡಲು ಮನಸ್ಸು ಇರುವುದಿಲ್ಲ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೃಷಿಯಿಂದ ಹೆಚ್ಚು ಆದಾಯ ಬರುವ ಸಾಧ್ಯತೆಗಳಿವೆ. ಒಡಹುಟ್ಟಿದವರಿಂದ ಸೂಕ್ತ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶದ ಯೋಗವಿದೆ. ಕೆಲವರಿಗೆ ಉದರದಲ್ಲಿ ಗಂಟುಗಳು ಕಾಣಿಸಬಹುದು.

ಪದಬಂಧ 2929



ಮೇಲಿನಿಂದ ಕೆಳಕ್ಕೆ

1. ಹಾಲು-ನೀರು ಬೇರ್ಪಡಿಸುವ ಬಿಳಿ ಹಕ್ಕಿಯ ನ್ಯಾಯ 4
2. ನಿಗವಹಿಸಿ ನಡೆದಲ್ಲಿ ವೇದ ಆಗಮವಾಗುತ್ತದೆ 5
3. ಮನಸ್ಸನ್ನು ಸೆರೆಹಿಡಿವ ಆನೆಯಂತಹ ನಡಿಗೆ 5
4. ದಿವ್ಯ ಮತಿಯನ್ನು ಕೊಡುವ ವಿದ್ಯಾಧಿದೇವತೆ 4
7. ಸತಿಯಲ್ಲಿ ತೋರುವ ಸಮಾಧಾನದ ಅಕ್ಕರೆಯ ಮಾತು 5
9. ಯಾವುದೂ ಅತಿಯಾಗದೆ ನಡುವಿನಲ್ಲಿದ್ದರೂ ಸಂಗೀತ ಕಛೇರಿಯ ಕೊನೆಯಲ್ಲಿ ಹಾಡುವ ರಾಗ 5
11. ಮನುಷ್ಯನಾದವ ಅನುಭವಿಸಬೇಕಾದ ಸ್ವರ್ಗದ ವ್ಯತಿರಿಕ್ತ ಸ್ಥಿತಿ 3
12. ಕ್ಯಾರಟ್, ಕುಂಬಳ, ಬಾಳೆ ಹಣ್ಣಿನಿಂದ ಮಾಡುವ ಉತ್ತರಭಾರತದ ಸಿಹಿ ವಿರಳವಾಗಿದೆ 3
13. ಸಮಯದಲ್ಲಿ ಸೂಕ್ತ ಕಟ್ಟಳೆ ಪಾಲಿಸುವ ಚಾರನೇ ಇವನು? 5
14. ರಾಮನವಮಿಯಂದು ನಾಲಿಗೆಗೆ ರುಚಿ ಹೆಚ್ಚಿಸುವ ದ್ರವ 5
15. ಸುಲಭವಾದ ಈ ಪದಕ್ಕೆ ಅನಾವಶ್ಯಕ ಪ್ರಯಾಸಪಡಬೇಡಿ 4
17. ಒಳ್ಳೆಯ ಪರಿಮಳ ಬೀರುವ ಹೆಣ್ಣು 4

ಎಡದಿಂದ ಬಲಕ್ಕೆ

1. ವಾತಾಪಿ ಗಣಪತಿಯನ್ನು ಭಜಿಸುವ ಪಕ್ಷಿಯ ಉಲಿ 4
3. ಗಮನಿಸುವ ದೃಷ್ಟಿಯಲ್ಲಿ ಸಂಗೀತದ ನಾಲ್ಕು ಸ್ವರಗಳು ಸೇರಿವೆ 4
5. ವಿಷ್ಣುವಾಹನ ಹಾರಿಸುವ ಬಾವುಟ 5
6. ಆಸ್ವಾದಿಸುವಾಗ ಉಂಟಾಗುವ ತೊಡಕು 4
8. ಜೇನಿನಂತಹ ಬುದ್ಧಿಯುಳ್ಳ ದೇವತೆ 4
10. ಆಂತರ್ಯವನ್ನು ಆಕರ್ಷಿಸುವ ಕೃಷ್ಣನಂತಹ ಸುಂದರ 5
13. ಎಲ್ಲಾ ಸಪ್ತಾಹಗಳನ್ನೊಳಗೊಂಡಿದ್ದು 5
15. ಮಿತಿಮೀರಿದ ವ್ಯವಸ್ಥೆ ಕಾನೂನಿಗೆ ವಿರೋಧ 4
16. ಒಳ್ಳೆಯ ಮತಿಯಿಂದ ಒಪ್ಪಿಗೆ ಕೊಡು 4
18. ಸುಂದರ ಚತುರನಂತೆ ಆಕರ್ಷಕ ಮುಖವುಳ್ಳವ 5
19. ಚಾಚೂ ತಪ್ಪದೆ ಎಲ್ಲಾ ಅಂಶಗಳಿಂದ ಕೂಡಿದ್ದು 4
20. ಕೈಯಲ್ಲಿ ತಲೆ ಬುರುಡೆ ಹಿಡಿದವನ ಕೈ ಹಿಡಿದ ದುರ್ಗಿ 4

ಪದಬಂಧ ಉತ್ತರ -2928

ಮೇಲಿಂದ ಕೆಳಕ್ಕೆ

1.ಕಡುಕೋಪ 2.ರಾಜಭವನ 3.ವ್ಯಾಸಂಗಪರ 4.ಯದುನಂದನ 7.ಮಧುರಸ್ವರ 9.ರಣಪಂಡಿತ 11.ವರಾಹಿ 12.ಸಕಲವೇದ 14.ಜತೆಗಾರರು 15.ತವರುಮನೆ 18.ಸರಪಳಿ

ಎಡದಿಂದ ಬಲಕ್ಕೆ

1.ಕನಕಧಾರಾ 3.ವ್ಯಾಸರಾಯ 5.ಭವರೋಗ 6.ಪರಮಶಿವ 8.ಪರವಾದ 10.ನವತೋರಣ 13.ಸ್ವಜನಹಿತ 16.ಕಠೋರತೆ 17.ವಸಂತಮಾಸ 19.ಗಾವಿಲರು 20.ದನಕರು 21.ನೆರೆಹಾವಳಿ

‘ಸಂಗೀತದಿಂದ ಸಮನ್ವಯತೆ ಸಾಧಿಸಬಹುದು’

• ಉಮಾ ಅನಂತ್

ಐದೂವರೆ ದಶಕಗಳಿಗಿಂತಲೂ ಹೆಚ್ಚು ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ನೀಡಿದ ಅನನ್ಯ ಕೊಡುಗೆಗಾಗಿ ಖ್ಯಾತ ಪಿಟೀಲು ವಿದ್ವಾಂಸರಾದ ಗಣೇಶ್–ಕುಮರೇಶ್ ಅವರಿಗೆ ಬೆಂಗಳೂರಿನ ಭಾರತೀಯ ಸಾಮಗಾನ ಸಭಾ ನೀಡುವ 2026ರ ‘ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ’ ಒಲಿದಿದೆ. ಫೆಬ್ರುವರಿ 7ರಂದು ಶನಿವಾರ ಸಂಜೆ ಐದು ಗಂಟೆಗೆ ಚೌಡಯ್ಯ ಸ್ಮಾರಕ ಭವನದಲ್ಲಿ ಈ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಈ ಇಬ್ಬರು ವಿದ್ವಾಂಸರು ತಮ್ಮ ಸಂಗೀತ ಪರಂಪರೆ, ಪಯಣದ ಬಗ್ಗೆ ಭಾನುವಾರದ ಪುರವಣಿಯೊಂದಿಗೆ ಮಾತನಾಡಿದ್ದಾರೆ.



ಗಣೇಶ್–ಕುಮರೇಶ್

• ವಯೊಲಿನ್ ನುಡಿಸಾಣಿಕೆ ಮೂಲಕ ಜಗತ್ತಿನಾದ್ಯಂತ ನಾದಾನುಸಂಧಾನ ನಡೆಸಿದ್ದೀರಿ. ನಿಮ್ಮ ನುಡಿಸಾಣಿಕೆ ವೈಜ್ಞಾನಿಕ ತಳಹದಿಯ ಮೇಲೆ ನಿಂತಿದೆ ಎಂದು ಹೇಳುತ್ತಲೇ ಬಂದಿದ್ದೀರಿ. ಅದು ಹೇಗೆ?

ನಾವಿಬ್ಬರು ಚಿಕ್ಕ ಮಕ್ಕಳಿದ್ದಾಗಿನಿಂದಲೂ ಯುಗಳ ಕಛೇರಿ ನಡೆಸುತ್ತಾ ಬಂದಿದ್ದೇವೆ. ಸಂಗೀತ ಎಂಬುದು ಅನಂತ. ನಮಗೆ ಯಾವಾಗಲೂ ಸವಾಲುಗಳನ್ನು ಎದುರಿಸುವ ಆಸೆ. ದಿನಾ ಬೆಳಗಿನ ಜಾವ ಎದ್ದು ಅಭ್ಯಾಸ ಮಾಡ್ತೀವಿ. ವಾದಿ–ಸಂವಾದಿ, ಒಂದೇ ರಾಗವನ್ನು ಬೇರೆ ಬೇರೆ ರೀತಿಯಲ್ಲಿ ಪ್ರಸ್ತುತಪಡಿಸುವುದು, ಸ್ವರ ಪ್ರಸ್ತಾರವನ್ನು ಹೇಗೆ ವಿಭಿನ್ನವಾಗಿ ಅಭಿವ್ಯಕ್ತಿಸಬಹುದು ಎಂಬುದರ ಬಗ್ಗೆ ಚರ್ಚೆ ನಡೆಸುತ್ತೇವೆ. ಸಂಗೀತ ಮತ್ತು ಸತ್ಯ ಒಂದೇ. ಸತ್ಯ ಎಂದರೆ ದೈವಿಕ. ಹಾಗೆಯೇ ಸಂಗೀತವೂ. ಸಂಗೀತ ಎಂಬುದು ವಿಜ್ಞಾನ. ಈ ವೈಜ್ಞಾನಿಕತೆ ಸಂಗೀತದಲ್ಲಿರುವ ರಾಗ ಮತ್ತು ತಾಳಗಳ ತಳಹದಿಯ ಮೇಲೆಯೇ ನಿಂತಿವೆ. ನಾವಿಬ್ಬರೂ ಇದೇ ತತ್ವದ ಮೂಲಕ ಸಂಗೀತ ಕಛೇರಿಗಳನ್ನು ನಡೆಸುತ್ತಾ ಬಂದಿದ್ದೇವೆ.

• ಜುಗಲಬಂದಿ ಕಛೇರಿ ಮೂಡಿಸುವ ಅನುಬಂಧ ವಿಶಿಷ್ಟ ಬಗೆಯದು. ನಿಮ್ಮಿಬ್ಬರ ಯುಗಳ ವಾದನ ಕಛೇರಿ ಕೇಳುಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುವುದು ಸ್ವಾರಸ್ಯಕರ. ಇದರ ಗುಟ್ಟೇನು?

ನಾವಿಬ್ಬರೂ ಸಂಗೀತದಲ್ಲೇ ಬದುಕು ರೂಪಿಸಿಕೊಂಡಿದ್ದೇವೆ. ಈ ತಂತಿವಾದ್ಯ ಸೃಷ್ಟಿಸುವುದು ಬರೀ ನಾದವಲ್ಲ, ಅದೊಂದು ಸಂವೇದನೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಮೋಹನ, ಹಂಸಧ್ವನಿ, ಶಂಕರಾಭರಣ, ಕೀರವಾಣಿ, ಕಲ್ಯಾಣಿ, ನಾಟಕುರಂಜಿ, ಭೈರವಿ, ಚಾರುಕೇಶಿ, ಸಾವೇರಿ, ಹಂಸಾನಂದಿ... ಹೀಗೆ ಯಾವುದೇ ರಾಗಗಳಿರಲಿ, ಅವು ಕೇಳುಗರಲ್ಲಿ ಸಂಚಲನ ಮೂಡಿಸಬೇಕು. ಕೇಳಿದರೆ ಮತ್ತಷ್ಟು ಕೇಳಬೇಕು ಎನಿಸಬೇಕು. ಇಲ್ಲಿ ಬಂಧ–ಅನುಬಂಧ ಎರಡೂ ಭಾವನೆಗಳು ಹೊರಹೊಮ್ಮುತ್ತವೆ.

ಯುಗಳ ಕಛೇರಿಯಲ್ಲಿ ನಾವು ಸಂಗೀತ ಸಂಭಾಷಣೆ ನಡೆಸುತ್ತೇವೆ. ಇದೊಂದು ಅಧ್ಯಯನ, ನಮ್ಮಲ್ಲಿರುವ ಕಲೆಯನ್ನು ಮತ್ತೊಬ್ಬರೊಂದಿಗೆ ಕನೆಕ್ಟ್ ಮಾಡುವುದು ಬಹಳ ಮುಖ್ಯ. ಹಿಂದೂಸ್ತಾನಿ ಸಂಗೀತದೊಂದಿಗೆ ಸಹ ನಾವು ಬಾಂಧವ್ಯ ಬೆಸೆದಿದ್ದೇವೆ, ಕರ್ನಾಟಕ–ಹಿಂದೂಸ್ತಾನಿ ಎರಡೂ ಶೈಲಿಗಳಲ್ಲಿರುವ ಸಮಾನ ರಾಗಗಳನ್ನೇ ನುಡಿಸುತ್ತೇವೆ. ಕರ್ನಾಟಕ ಸಂಗೀತದ ಶಂಕರಾಭರಣ ರಾಗ ಹಿಂದೂಸ್ತಾನಿಯಲ್ಲಿ ಬಿಲಾವಲ್, ಇದೇ ರೀತಿ ಮೋಹನ ಕಲ್ಯಾಣಿ–ಶುದ್ಧ ಕಲ್ಯಾಣ್, ಹಿಂದೋಳ–ಮಾಲ್‌ಕೌಂಸ್, ಧರ್ಮಾವತಿ– ಮಧುವಂತಿ, ಅಭೇರಿ–ಭೀಮಪಲಾಸಿ... ಹೀಗೆ ಫ್ಲೇವರ್ ಬೇರೆ, ಸಂಗೀತ ಒಂದೇ, ಇದರ ಸೌಂದರ್ಯ ಒಂದೇ. ಹೀಗಾಗಿ ಜುಗಲ್‌ಬಂದಿ ಕಛೇರಿಗಳು ಕೇಳುಗರನ್ನು ಬಹುಬೇಗ ತಟ್ಟುತ್ತದೆ, ಹೃದಯ ಮುಟ್ಟುತ್ತದೆ.

• ನಿಮ್ಮ ನುಡಿಸಾಣಿಕೆಯಲ್ಲಿ ಪ್ರಕೃತಿಯ ನಾದ ವಿಶಿಷ್ಟವಾಗಿ ಅನುರಣನಗೊಳ್ಳುತ್ತದೆ. ಪ್ರಾಣಿ–ಪಕ್ಷಿಗಳ ದನಿ ತಂತಿಗಳಲ್ಲಿ ಮಾರ್ದನಿಸುತ್ತವೆ. ಈ ಮಾಂತ್ರಿಕತೆ ಸೃಷ್ಟಿಯಾಗುವುದು ಹೇಗೆ?

ವಯೊಲಿನ್ ನುಡಿಸಾಣಿಕೆ ಇತರ ಕಲಾವಿದರಿಗಿಂತ ವಿಭಿನ್ನವಾಗಿರಬೇಕು ಎಂಬುದು ನಮ್ಮ ಅಭಿಲಾಷೆ. ಇದು ನಮ್ಮ ‘ಐಡೆಂಟಿಟಿ’ಯೂ ಹೌದು. ಹೀಗಾಗಿ ರಾಗಗಳಲ್ಲಿ ಅನುರಾಗ ಮೂಡುವಂತೆ ನುಡಿಸುತ್ತೇವೆ. ನಾಟ ರಾಗದಲ್ಲಿ ಸಿಂಹ ಗರ್ಜನೆ ಮಾಡುತ್ತೇವೆ. ಅಮೃತವರ್ಷಿಣಿ ಎಂಬ ಮಳೆ ರಾಗದಲ್ಲಿ ನವಿಲು ತನ್ನ ಸುಂದರವಾದ ರೆಕ್ಕೆ ಬಿಚ್ಚಿ ನರ್ತಿಸುವ ನಿನಾದ ತರುತ್ತೇವೆ, ‘ವರ್ಣಂ’ ಅನ್ನು ತಂತಿಯಲ್ಲಿ ಮೀಟಿ ಕೋಳಿಯ ಕೊ ಕೊ ಕ್ಕೋ ದನಿ ಇಂಪಾಗಿ ಮೊಳಗಿಸುತ್ತೇವೆ, ಈ ನಾದದಲ್ಲಿ ರಾಗ, ತಾಳ, ಭಾವ, ಲಯ ಲಹರಿ, ಸುಮಧುರ ಝೇಂಕಾರ, ಓಂಕಾರದ ಮಾಂತ್ರಿಕತೆ ಸೃಷ್ಟಿಯಾಗುವುದನ್ನು ಕೇಳುಗರು ಮನದುಂಬಿ ಇಷ್ಟಪಡುತ್ತಾರೆ ಎಂಬುದೇ ನಮ್ಮಲ್ಲಿ ಸಾರ್ಥಕ್ಯದ ಭಾವನೆ ಮೂಡಿಸುತ್ತದೆ. ಅಲ್ಲದೆ ವಯೊಲಿನ್‌ನಲ್ಲಿ ‘ರಾಗ ಪ್ರವಾಹಂ’ ಎಂಬ ವಿಶಿಷ್ಟ ಪರಿಕಲ್ಪನೆಯನ್ನು ಪರಿಚಯಿಸಿದ್ದೇವೆ. ಇದೂ ಕೂಡ ಜನಮೆಚ್ಚುಗೆ ಗಳಿಸಿದೆ.

• ಮಕ್ಕಳಿಗಾಗಿಯೇ ನೀವು ನುಡಿಸಿದ ‘ಚಾಕೊಲೇಟ್ ಮೆಲೊಡೀಸ್’, ‘ವೈಬ್ರಂಟ್ ನಾದಂ’ ಯುಟ್ಯೂಬ್ ಸೀರೀಸ್ ಬಹಳ ಖ್ಯಾತಿ ಗಳಿಸಿದೆ. ಇಟಲಿ ಮೂಲದ ಈ ತಂತಿವಾದ್ಯದಲ್ಲಿ ನೀವಿಬ್ಬರು ಸಮನ್ವಯತೆ ಸಾಧಿಸುವುದು ಹೇಗೆ?

ಸಂಗೀತದ ಮೂಲಕ ಸಮನ್ವಯತೆ ಸಾಧಿಸಬಹುದು. ರಾಗವನ್ನು ಪ್ರಸ್ತುತಪಡಿಸುತ್ತಾ, ಸೌಹಾರ್ದ ಹಾಗೂ ಸಮರಸವನ್ನು ಮೂಡಿಸುವ ಪ್ರಯತ್ನ ಮಾಡುತ್ತಿದ್ದೇವೆ. ಪ್ರತೀ ಕಛೇರಿಯಲ್ಲೂ ಹೊಸತನ್ನು ನೀಡಲು ಬೇರೆ ಬೇರೆ ಪ್ರಯೋಗಗಳನ್ನು ಮಾಡುತ್ತೇವೆ. ಪರಂಪರೆಯ ಸಂಗೀತವಾದರೂ ಇಂದಿನ ಕೇಳುಗರು ಬಯಸುವುದು ಹೊಸ ಬಗೆಯ ನಾದವನ್ನು. ಇದಕ್ಕಾಗಿ ಮಕ್ಕಳಿಗಾಗಿಯೇ ‘ಚಾಕೊಲೇಟ್ ಮೆಲೊಡೀಸ್’ ಸೀರೀಸ್ ತಂದಿದ್ದೇವೆ. ಇದರಲ್ಲಿ ಹೊಸ ಭಾವ ಮತ್ತು ಸಂಚಲನ ಮೂಡುವಂತೆ ಮಾಡಿದ್ದೇವೆ. ಈ ಪ್ರಯೋಗ ಜಗತ್ತಿನಾದ್ಯಂತ ಹಲವಾರು ಮಕ್ಕಳಿಗೆ ಇಷ್ಟವಾಗಿದೆ. ನಮ್ಮಲ್ಲಿ ಕಲಿಯಲು ಬರುವ ಮಕ್ಕಳೂ ಇದೇ ರೀತಿಯ ಸಂಗೀತ ಕಲಿಸುವಂತೆ ಬೇಡಿಕೆ ಸಲ್ಲಿಸುವುದು ನಮಗೆ ಸಮಾಧಾನದ ವಿಚಾರ.

• ನಾದಾಭಿವ್ಯಕ್ತಿಯನ್ನು ಬಿಂಬಿಸಲು ವಯೊಲಿನ್ ಅತ್ಯುತ್ತಮ ವಾದ್ಯ ಎನಿಸಿಕೊಂಡಿದೆ. ನಿಮ್ಮ ಅನಿಸಿಕೆ ಏನು?

ಖಂಡಿತ, ಮನೋಧರ್ಮ ಸಂಗೀತದ ಅಭಿವ್ಯಕ್ತಿಗೆ ವಯೊಲಿನ್‌ನಷ್ಟು ಸುಂದರ, ಸುಮಧುರ, ಅತ್ಯುತ್ತಮ ವಾದ್ಯ ಬೇರೊಂದಿಲ್ಲ ಎನ್ನಬಹುದು. ಒಬ್ಬ ಕಲಾವಿದನ ಮನೋಧರ್ಮ ಇನ್ನೊಬ್ಬನದಕ್ಕಿಂತ ಭಿನ್ನ. ಉದಾಹರಣೆಗೆ ಕಲ್ಯಾಣಿ ರಾಗವನ್ನೇ ತೆಗೆದುಕೊಂಡರೆ ರಾಗ ಒಂದೇ ಆದರೂ ನಮ್ಮ ನುಡಿಸಾಣಿಕೆ ಭಿನ್ನ. ದಿಗ್ಗಜರಾದ ಲಾಲ್‌ಗುಡಿಯಾಗಲಿ, ಎಂ.ಎಸ್. ಗೋಪಾಲಕೃಷ್ಣನ್, ಟಿ.ಎನ್. ಕೃಷ್ಣನ್... ಹೀಗೆ ಯಾರೇ ಆಗಲಿ ನುಡಿಸಾಣಿಕೆ ಮಾತ್ರ ಭಿನ್ನ. ಒಬ್ಬೊಬ್ಬರದ್ದು ಒಂದೊಂದು ತರದ ಮನೋಧರ್ಮ. ಆದರೆ ಉದ್ದೇಶ ಎಲ್ಲರದ್ದೂ ಒಂದೇ. ರಾಗ, ಕಲ್ಪನಾಸ್ವರದಲ್ಲಿ ನಮ್ಮ ಸಾಮರ್ಥ್ಯ, ಕೈಚಳಕ ಅನಾವರಣವಾಗುತ್ತದೆ.

• ಈ ತಲೆಮಾರಿನ ಮಕ್ಕಳು ಪಿಟೀಲು ವಾದನ ಕಷ್ಟ ಎಂಬ ಕಾರಣಕ್ಕೆ ಈ ವಾದ್ಯ ಕಲಿಯಲು ಹಿಂಜರಿಯುತ್ತಿದ್ದಾರೆ ಎಂಬುವುದಕ್ಕೆ ಯುವ ಪಿಟೀಲು ಕಲಾವಿದರ ಸಂಖ್ಯೆ ಕಡಿಮೆಯಾಗುತ್ತಿರುವುದೇ ಸಾಕ್ಷಿಯಲ್ಲವೇ?


ವಯೊಲಿನ್ ಅನ್ನು ಯಾವ ವಯಸ್ಸಿನವರು ಬೇಕಾದರೂ ಕಲಿಯಬಹುದು. ಆದರೆ ಪಿಟೀಲು ನುಡಿಸುವುದು ಕಷ್ಟ ಎಂಬ ಮನೋಭಾವನೆ ಹೊಸ ತಲೆಮಾರಿನವರಲ್ಲಿದೆ. ಈಗ ನಾವು ಡಿಜಿಟಲ್ ಯುಗದಲ್ಲಿದ್ದೇವೆ. ಮಕ್ಕಳಿಗೆ ಬೇಗನೆ ಅರ್ಥ ಆಗುತ್ತದೆ. ಆನ್‌ಲೈನ್‌ನಲ್ಲಿಯೂ ಪಿಟೀಲು ಕಲಿಸುತ್ತಿದ್ದೇವೆ. ತಂತಿ ಮೀಟುವ ವಿಧಾನ, ಗಮಕ ತರುವುದು, ಫಿಂಗರಿಂಗ್ ಟೆಕ್ನಿಕ್ ಎಲ್ಲವನ್ನೂ ಶಿಷ್ಯಂದಿರು ಬಹಳ ಚೆನ್ನಾಗಿ ಕಲಿತಿದ್ದಾರೆ. ವಿಡಿಯೊ ಮಾಡಿ ಕಳಿಸಿದ ಕೆಲವೇ ಗಂಟೆಗಳಲ್ಲಿ ಹಾಗೆಯೇ ಆ ರಾಗವನ್ನು ಪ್ರಸ್ತುತಪಡಿಸುವ ಪರಿ ನಮಗೇ ಅಚ್ಚರಿ ತರುತ್ತದೆ. ನಮ್ಮ ಬಳಿ ಅನೇಕ ಶಿಷ್ಯಂದಿರು ಕಲಿಯುತ್ತಿದ್ದು, ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ನಾದ ತಲುಪಲು ಸಾಧ್ಯವಾಗುತ್ತಿರುವುದು ತಂತ್ರಜ್ಞಾನದ ಕೊಡುಗೆಯೇ ಆಗಿದೆ. ❖

ಸಮಕಾಲೀನ ಕಲಾವಿದರು!

ಮೂಲತಃ ಉತ್ತರ ಪ್ರದೇಶದ ಕಾನ್ಪುರದವರಾದ ಗಣೇಶ್– ಕುಮರೇಶ್ ಸುಮಾರು 50ಕ್ಕೂ ಹೆಚ್ಚು ವರ್ಷಗಳಿಂದ ಪಿಟೀಲಿನಲ್ಲಿ ಹೊಸ ಅಧ್ಯಯನ, ಸಂಶೋಧನೆ, ಅನ್ವೇಷಣೆಗಳನ್ನು ಮಾಡುತ್ತಾ ವಿಶ್ವದಾದ್ಯಂತ ಸಂಗೀತ ಕಂಪನ್ನು ಪಸರಿಸಿದವರು. ತಂದೆ ಟಿ.ಎಸ್. ರಾಜಗೋಪಾಲನ್ ಅವರೇ ಮೊದಲ ಗುರು. ಅನೇಕ ಶಿಷ್ಯಂದಿರನ್ನು ತಯಾರು ಮಾಡಿದ ಈ ಸಹೋದರರು, ತಮ್ಮ ಅಧ್ಯಾಪನದ ಪ್ರತಿ ಪಾಠವನ್ನೂ ವಿಡಿಯೊ ರೆಕಾರ್ಡ್ ಮಾಡಿ ದಾಖಲಿಸಿಕೊಂಡಿದ್ದು, ಹೊಸ ಪೀಳಿಗೆಗೆ ನೆರವಾಗಿದ್ದಾರೆ. ಇವರನ್ನು ‘ಆಧುನಿಕ ಸಮಕಾಲೀನ ಕಲಾವಿದರು’ ಎಂದು ಭಾರತೀಯ ಶಾಸ್ತ್ರೀಯ ಸಂಗೀತ ಕರೆದಿರುವುದು ಇವರ ಹೆಚ್ಚುಗಾರಿಕೆ.

ಮೊದಲ ಓದು

ಧೀಮಂತರ ಬದುಕಿನ ಆರ್ದ್ರಚಿತ್ರಗಳು



ಧೀಮಂತರ ಸಾವು
ಲೇ: ರಹಮತ್ ತರೀಕೆರೆ
ಪ್ರ: ನವಕರ್ನಾಟಕ
ಸಂ: 080 22161900

ರಹಮತ್ ತರೀಕೆರೆ ಅವರ ‘ಧೀಮಂತರ ಸಾವು’ ವ್ಯಕ್ತಿಚಿತ್ರಗಳ ಸಂಕಲನ. ಶೀರ್ಷಿಕೆಯಲ್ಲಿ ಸಾವು ಎಂದಿದ್ದರೂ, ಈ ಕೃತಿ ಮಾತನಾಡುವುದು ಸಾವು ಕೊನೆಗಾಣಿಸಲಾಗದ ಬದುಕಿನ ಸಾಧ್ಯತೆಗಳ ಬಗ್ಗೆ. ಧೀಮಂತರ ಭೌತಿಕ ಬದುಕಿಗೆ ಕೊನೆಯಿರಬಹುದು. ಆದರೆ, ತಮ್ಮ ಚಿಂತನೆಗಳ ಮೂಲಕ ಅವರು ಜೀವಂತವಾಗಿರುತ್ತಾರೆ, ಸಮಾಜವನ್ನು ಪ್ರಭಾವಿಸುತ್ತಿರುತ್ತಾರೆ. ರಹಮತ್ ಅವರು ಕಾಣಿಸುವ ಇಲ್ಲಿನ ಪ್ರತಿಯೊಂದು ವ್ಯಕ್ತಿಚಿತ್ರವೂ ಕಾಲಕ್ಕೆ ಸವಾಲಾಗಿ ಉಳಿಯುವಂತಹದ್ದು.

‘ಧೀಮಂತರ ಸಾವಿಗೆ ಯಾವತ್ತೂ ಪೂರ್ಣವಿರಾಮ ಇರುವುದಿಲ್ಲ’ ಎನ್ನುವ ಲೇಖಕರ ನಂಬಿಕೆಯೇ ಇಲ್ಲಿನ ನಲವತ್ತು ವ್ಯಕ್ತಿಚಿತ್ರಗಳನ್ನು ರೂಪಿಸಿದಂತಿದೆ. ರಹಮತ್ ಅವರು ಮತ್ತೆ ಮತ್ತೆ ಭೇಟಿಯಾದ, ಒಡನಾಡಿದ, ಹತ್ತಿರದಿಂದ ಕಂಡ ಹಾಗೂ ದೂರದಿಂದಲೇ ಗೌರವಿಸಿದ ವ್ಯಕ್ತಿತ್ವಗಳೆಲ್ಲ ಈ ಕೃತಿಯಲ್ಲಿ ಹಣತೆಸಾಲುಗಳಾಗಿವೆ. ಲೇಖಕರೇ ಹೇಳಿರುವಂತೆ–ಸಮಾನತೆಯ ಕನಸಿದ್ದ, ಆಸುಪಾಸಿನ ಸಮಾಜ ಬದಲಾಗಬೇಕೆಂದು ಚಡಪಡಿಸಿದ ಧೀಮಂತರ ಬದುಕು ಸಾಧನೆ ವ್ಯಕ್ತಿತ್ವದ ಕುರಿತ ಆರ್ದ್ರಚಿತ್ರಗಳು ಇಲ್ಲಿವೆ.

ಆಧುನಿಕ ಕರ್ನಾಟಕದ ಸಾಕ್ಷಿಪ್ರಜ್ಞೆಗಳಂಥ ವ್ಯಕ್ತಿತ್ವಗಳು ಧೀಮಂತರ ಸಾವು ಕೃತಿಯಲ್ಲಿ ಕಿಕ್ಕಿರಿದಿದ್ದಾರೆ. ಗಿರೀಶ ಕಾರ್ನಾಡ, ಪಿ.ಲಂಕೇಶ್, ವಿಜಯಾ ದಬ್ಬೆ, ಪುಣೇಕರ, ಜಿ. ರಾಜಶೇಖರ, ಕಿ.ರಂ. ನಾಗರಾಜ, ಎಸ್.ಆರ್.ಹಿರೇಮಠ, ಜಿ.ಎಚ್.ನಾಯಕ, ರಾಜೀವ ತಾರಾನಾಥ, ಎಂ.ಎಂ. ಕಲಬುರ್ಗಿ, ಗೌರಿ ಲಂಕೇಶ್, ಚಂಪಾ, ಕೆ.ರಾಮದಾಸ್, ಕೆ.ವಿ. ಸುಬ್ಬಣ್ಣ ಮುಂತಾದ ನಾಯಕ ನಾಯಕಿಯರ ಬದುಕು ವ್ಯಕ್ತಿತ್ವದಲ್ಲಿ ಕೆಲವು ಸಾಮ್ಯತೆಗಳಿವೆ. ನಿಷ್ಠುರತೆ ಇವರೆಲ್ಲರ ವ್ಯಕ್ತಿತ್ವದ ಭಾಗವಾಗಿತ್ತು. ಸತ್ಯ ಹೇಳಲು ಇವರಾರೂ ಹಿಂಜರಿದವರಲ್ಲ. ಸತ್ಯದ ದಾರಿಯಲ್ಲಿ ನಂಜುಂಡವರು, ಸಾವಿಗಂಜದವರು ಹಾಗೂ ಸತ್ಯವನ್ನು ನುಡಿದಿದ್ದಕ್ಕಾಗಿಯೇ ಜೀವತೆತ್ತವರು ಇಲ್ಲಿದ್ದಾರೆ. ಹಾಗೆಯೇ, ಭಿನ್ನ ಭಿನ್ನ ಕ್ಷೇತ್ರಗಳ ಈ ಸಾಧಕರ ಒಟ್ಟಾರೆ ಬದುಕು ಕನ್ನಡ ಸಮಾಜದ ಆರೋಗ್ಯವನ್ನು ಹೆಚ್ಚಿಸುವ ಪ್ರಯತ್ನಕ್ಕೆ ಮುಡಿಪಾಗಿತ್ತು ಎನ್ನುವುದನ್ನೂ ಗಮನಿಸಬೇಕು.

ಈ ಅಸಾಧಾರಣ ವ್ಯಕ್ತಿತ್ವಗಳ ಮೂಲಕ ರಹಮತ್ ಅವರು ಕಟ್ಟಿಕೊಡುತ್ತಿರುವ ಸ್ಮೃತಿಗಳು ಸಹೃದಯರ ಭಾವಕೋಶವನ್ನು ಉದ್ದೀಪಿಸುವಂತಿವೆ; ಅದಕ್ಕೂ ಮುಖ್ಯವಾಗಿ, ವರ್ತಮಾನದ ಕ್ಷೋಭೆಗಳನ್ನು ನಾವು ಅರಿಯುವ ಹಾಗೂ ಎದುರಿಸುವ ಬಗೆ ಯಾವುದು ಎನ್ನುವುದಕ್ಕೆ ಉತ್ತರ ರೂಪದಲ್ಲಿಯೂ ಈ ಧೀಮಂತರು ಒದಗಿಬರುವಂತಿದ್ದಾರೆ. ‘ಧೀಮಂತರ ಸಾವು’ ನಮಗೆ ಬದುಕಾಗಿ ಪರಿಣಮಿಸುವಂತಿದೆ. ಎಳೆಯರು ಹಾಗೂ ಯುವಜನರಿಗೆ ನಾಡಿನ ವಿವೇಕ ಪರಂಪರೆ ಹಾಗೂ ಬದುಕಿನ ಮೌಲ್ಯಗಳನ್ನು ಪರಿಚಯಿಸಲು ಈ ಕೃತಿ ಪಥ್ಯದಂತಿದೆ. ❖

ಪುಟ: 216 ₹260

ಕಥೆ
ತಿರುಪತಿ ಭಂಗಿ ಅವರ **ಮಸಾರಿ ಹ್ವಲಾ..**
prajavani.net/short-story

ಕವನ
ಜಗದೀಶ ಬ ಹಾದಿಮನಿ ಅವರ **ಗೊಂಬಿಯೊಂದಿಗೆ ಮಗಳು**
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಜಾಣಪದ ಆಟ

1.ಇಲ್ಲಿ ಕೊಟ್ಟಿರುವ ಮಧ್ಯದ ಪದಕ್ಕೆ ಪದ ಪಟ್ಟಿಯಿಂದ ಹಿಂದೊಂದು ಪದ ಮುಂದೊಂದು ಪದ ಸೇರಿಸಿ ಅರ್ಥಬದ್ಧ ಮೂರು ಪದಗಳ ಒಂದು ಅರೆವಾಕ್ಯವನ್ನು ಮಾಡಿ

1		ಮೇಲೆ	
2		ತಿಂದ	
3		ಸುಟ್ಟ	
4		ಬಂತು	
5		ತಪ್ಪಿದ	
6		ಹೋದದ್ದೇ	
7		ಆಡಿದ	
8		ತಂದ	
9		ಬೇಲಿ	
10		ತನ್ನ	

ಪದ ಪಟ್ಟಿ

ತೋಳ	ಇಂಗು	ಗುಬ್ಬಿ	ದಾರಿ	ಜಾಣ
ತೋಳ	ಬಾಲ	ಸೊಸೆ	ತಾಳ	ಬ್ರಹ್ಮಾಸ್ತ್ರ
ವೈರಿ	ಬೆಕ್ಕು	ಮಂಗ	ಆನೆ	ಮಾತು
ಸಿಟ್ಟು	ಸೌಭಾಗ್ಯ	ಬಾಳು	ಓತಿಕ್ಯಾತಕ್ಕೆ	ಸಾಕ್ಷಿ

2.ಇಲ್ಲಿ ಕೊಟ್ಟಿರುವ ‘ಪರಿ’ ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಪ	ರಿ		
2	ಪ	ರಿ		
3	ಪ	ರಿ		
4	ಪ	ರಿ		
5	ಪ	ರಿ		

ಅಕ್ಷರ ಪಟ್ಟಿ


ಮ	ದ್ಧ	ಹಾ	ತಿ	ಭಾ
ಷೆ	ಮಿ	ಸ	ಶು	ಳ

ಡಶ್ಗ ಚಕ್ಕು ಕೀಶ್ರಷ್ಟ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಅಡಗಿದ ಹಾವು

ಮನೆಯ ಹಿತ್ತಲಿಗೆ ಬಂದ ಕಪ್ಪು–ಬಿಳಿ ಬಣ್ಣದ ಹಾವನ್ನು ಗುಂಡ ಓಡಿಸುತ್ತಿದ್ದ. ಕೋಲನ್ನು ಕಂಡ ಹಾವು ಸರಸರನೆ ಓಡಿ ಗದ್ದೆಯಲ್ಲಿದ್ದ ಕಪ್ಪು–ಬಿಳಿ ಬಣ್ಣದ ದನದ ಹತ್ತಿರ ಬಂದಿತು. ಗುಂಡನಿಂದ ತಪ್ಪಿಸಿಕೊಳ್ಳಲು ಮೆಲ್ಲನೆ ದನದ ಮೈ ಏರಿ ಅವಿತುಕೊಂಡಿತು. ಹಾವು ಎಲ್ಲಿ ಹೋಯಿತು ಎಂದು ಗುಂಡ ಹುಡುಕಾಡತೊಡಗಿದ.



ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮೋಜಿನ ಇಂಗ್ಲಿಷ್

ವಿನೋದ ವಾಕ್ಯ

The notable doctor was not able to do the operation because there was no table in the operation theatre.

ಹೊಂದಿಸು ಆನಂದಿಸು

1	ವಿಶ್ವ ರೆಡ್ ಕ್ರಾಸ್ ದಿನ	A	ಆಗಸ್ಟ್ 21
2	ವಿಶ್ವ ಕುಟುಂಬ ದಿನ	B	ಸಪ್ಟೆಂಬರ್ 27
3	ಕಾಮನ್‌ವೆಲ್ತ್ ದಿನ	C	ನವೆಂಬರ್ 14
4	ವಿಶ್ವ ಪರಿಸರ ದಿನ	D	ಸಪ್ಟೆಂಬರ್ 8
5	ವಿಶ್ವ ಮಧುಮೇಹ ದಿನ	E	ಮೇ 15
6	ವಿಶ್ವ ಜನಸಂಖ್ಯಾ ದಿನ	F	ಜೂನ್ 5
7	ವಿಶ್ವ ಸಾಕ್ಷರತಾ ದಿನ	G	ಮೇ 24
8	ವಿಶ್ವ ಓಝೋನ್ ದಿನ	H	ಮೇ 8
9	ವಿಶ್ವ ಪ್ರವಾಸೋದ್ಯಮ ದಿನ	I	ಸಪ್ಟೆಂಬರ್ 16
10	ವಿಶ್ವ ಹಿರಿಯರ ದಿನ	J	ಜುಲೈ 11

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಕಾಳು	+	ರಣ	+	ಕೇ	=	
2	ರಮಾ	+	ಗಡಿ	+	ಸ್ತೆ	=	
3	ಸಿಳ್ಳು	+	ನದಿ	+	ಕೊ	=	
4	ಹದ	+	ರಣ	+	ಭಾ	=	
5	ಕಳ್ಳಿ	+	ಬಾಲ	+	ಹ	=	

ವರ್ಡ್ ಗೇಮ್

ಇಲ್ಲಿರುವ ಪದಕ್ಕೆ ಒಂದಕ್ಷರ ಸೇರಿಸಿ, ಎಲ್ಲ ಅಕ್ಷರಗಳ ಒಂದೇ ಪದ ಮಾಡಿ.

ROSE+H=__________

ಶಬ್ದಾಟ

ಇಲ್ಲಿರುವ ಪದಗಳ ಎಲ್ಲ ಅಕ್ಷರ ಕೂಡಿಸಿ ಒಂದೇ ಪದ ಮಾಡಿ.

ಸತ್ತು+ಸರಿ+ಕಾರ+ಲವ= __________

ಕೊಂಚ ತಂತ್ರ

TVS ಈ ವಾಹನದ ಹೆಸರು ನೆನಪಿಟ್ಟುಕೊಂಡರೆ ಭಾರತದಲ್ಲಿ ತ್ರಿಪದಿಗಳಲ್ಲಿ ಪದ್ಯ ರಚಿಸಿ ಪ್ರಸಿದ್ಧರಾದವರ ಹೆಸರನ್ನು ಸುಲಭವಾಗಿ ಹೇಳಬಹುದು.

T=ತಿರುವಳ್ಳುವರ್
V=ವೇಮನ
S=ಸರ್ವಜ್ಞ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಶವದಹನ 2.ರಗಳೆಕವಿ 3.ಹಾಡಿನರಾಗ 4.ಗಾಯನಮಾಡು 5.ನಗರಸುತ್ತು

ಪದಶೋಧ: ಬಿಳಿಗಿರಿಯ ಬನದಲ್ಲಿ

ಮೋಜಿನ ಇಂಗ್ಲಿಷ್: 1.P, 2.C, 3.D, 4.E, 5.G, 6.L, 7.M, 8.R, 9.T, 10.X

ಜಾಣಪದ ಆಟ: 1.ಮಹಾದೇವಿ 2.ಮಹಾಪ್ರಾಣ 3.ಮಹಾರಥ 4.ಮಹಾದ್ವಾರ 5.ಮಹಾಜನ


ಶಬ್ದಾಟ: ಕಡಿದಮರ

ಮ್ಯಾಚಿಕ್: ⊏ = X X X

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು




ಅಭಿಷೇಕ್ ಎಂ.
ಪುತ್ತೂರು



ಅಂಕಿತ್ ಸುರೇಶ ಬಣಕಾರ
ಕುಮಾರಪಟ್ಟಣಂ



ನಿಯತಿ ನಾವಡ
ಕುಂದಾಪುರ



ಬೃಂದಾ ಭಾರದ್ವಾಜ್
ಚಿಕ್ಕಮಗಳೂರು



ಅಕ್ಷರ ಎಂ.ಎಸ್.
ಮೈಸೂರು



ಸನ್ಮಿತ ಎಸ್.
ಮಂಡ್ಯ

ಏಳು 'ಆರ್'ಗಳ ಭುಜ್‌ನ ಸ್ಮೃತಿ ಭವನ



ಸ್ಮೃತಿ ಭವನದ ಪಕ್ಷಿನೋಟ

ಗುಜರಾತ್‌ನ ಭುಜ್ ಮತ್ತು ಸುತ್ತಲಿನ ಪ್ರದೇಶದಲ್ಲಿ ನಡೆದ ಭೂಕಂಪ ಸುಮಾರು ಹದಿಮೂರು ಸಾವಿರ ಜನರನ್ನು ಬಲಿ ಪಡೆದಿತ್ತು. ಈ ಘಟನೆ ನಡೆದು 25 ವರ್ಷ ಉರುಳಿದ. ಅಂದಿನ ನೆನಪುಗಳು ಮತ್ತು ಅನುಭವಗಳನ್ನು ಮುಂದಿನ ತಲೆಮಾರಿಗೆ ತಿಳಿಸುವುದಕ್ಕಾಗಿ ತಲೆಎತ್ತಿರುವ 'ಸ್ಮೃತಿ ಭವನ'ದಲ್ಲೊಂದು ಸುತ್ತು...

• ಪಿ.ಬಿ. ಪ್ರಸನ್ನ

ಪ್ರವಾಸ

ಜನವರಿ 26, 2001ರ ಬೆಳಿಗ್ಗೆ ಸರಿಯಾಗಿ 8:46 ಗಂಟೆಗೆ ಇಡೀ ದೇಶ ಗಣರಾಜ್ಯೋತ್ಸವದ ಸಂಭ್ರಮದಲ್ಲಿ ಮುಳುಗಿತ್ತು. ಮಕ್ಕಳು ಉತ್ಸಾಹದಿಂದ ದೇಶದ ಕುರಿತಾದ ಘೋಷಣೆಗಳನ್ನು ಕೂಗುತ್ತ ಧ್ವಜಾರೋಹಣ ಸಂಭ್ರಮದಲ್ಲಿ ಭಾಗವಹಿಸಲು ಸಾಲಾಗಿ ಬರುತ್ತಿದ್ದರು. ಜನಸಾಮಾನ್ಯರು ಅವರವರ ಕೆಲಸದಲ್ಲಿ ಮಗ್ನರಾಗಿದ್ದರು. ಆಗ ಇದ್ದಕ್ಕಿದ್ದಂತೆ ಗುಜರಾತಿನ ಭುಜ್ ಮತ್ತು ಹತ್ತಿರದ ಪ್ರದೇಶಗಳಲ್ಲಿ ಬರೋಬ್ಬರಿ 90 ಸೆಕೆಂಡುಗಳು ಭೂಮಿ ಕಂಪಿಸಿತು. ರಿಕ್ಟರ್ ಮಾಪನದಲ್ಲಿ 7.9 ಕಂಪನಾಂಕವನ್ನು ತೋರಿಸಲಾಗಿತ್ತು. ಏನಾಯಿತು ಎಂದು ತಿಳಿಯಲು ಕೆಲವು ಹೊತ್ತು ಬೇಕಾಯಿತು. ನೋಡು ನೋಡುತ್ತಿದ್ದಂತೆ ಅನೇಕ ಕಟ್ಟಡಗಳು ಕುಸಿದವು. ಮೊದಲಿಗೆ ಅಪಾಯ ಕಡಿಮೆ ಇರಬಹುದು ಎಂದು ಯೋಚಿಸಲಾಗಿತ್ತು. ಆದರೆ ಸತ್ತವರ ಸಂಖ್ಯೆ ಹದಿಮೂರು ಸಾವಿರದ ಆಸುಪಾಸು ಇತ್ತು. ಗಾಯಗೊಂಡವರು, ಸಂತ್ರಸ್ತರ ಸಂಖ್ಯೆ ಅಂದಾಜು ಹದಿನೈದು ಲಕ್ಷ. ಆ ದಿನಗಳನ್ನು ನೆನಪು ಮಾಡಿಕೊಂಡರೆ ಮೈ ಜುಂ ಅನ್ನುತ್ತದೆ. ಲಕ್ಷಾಂತರ ಮಂದಿ ಮನೆ ಮಠ ಕಳೆಕೊಂಡು ಬೀದಿಗೆ ಬಂದು ಬಿದ್ದದ್ದು, ಕ್ಷಣ ಮಾತ್ರದಲ್ಲಿ ಕೋಟಿಗಟ್ಟಲೆ ಇದ್ದವರು ಭಿಕ್ಷೆ ಬೇಡಬೇಕಾದ ಸ್ಥಿತಿ ತಲುಪಿದ್ದು, ಹೀಗೆ ಒಂದೇ ಎರಡೇ... ಆ ಕರಾಳ ಅನುಭವಕ್ಕೆ ಈಗ ಇಪ್ಪತ್ತೈದು ವರ್ಷಗಳು.

ಭುಜ್ ನಗರವು ಆ ಹೊಡೆತವನ್ನು ಎದುರಿಸಿ ಮತ್ತೆ ತಲೆಎತ್ತಿ ನಿಂತಿದೆ. ಅಂದಿನ ನೆನಪುಗಳು ಮತ್ತು ಅನುಭವಗಳು ಹತ್ತಾರು. ಅವುಗಳೆಲ್ಲವನ್ನೂ ಮುಂದಿನ ತಲೆಮಾರಿನವರಿಗೆ ತಿಳಿಸುವುದು ಮತ್ತು ಪ್ರಕೃತಿ ಕುರಿತಾಗಿ ಕಾಳಜಿ ಸ್ವಲ್ಪವಾದರೂ ಇರುವಂತೆ ಮಾಡಲು ಗುಜರಾತ್ ಸರ್ಕಾರದ ಪ್ರವಾಸೋದ್ಯಮ ಇಲಾಖೆಯು 2022 ರಲ್ಲಿ 'ಸ್ಮೃತಿ ಭವನ' ಎನ್ನುವ ಭೂಕಂಪದ ಕರಾಳ ನೆನಪನ್ನು ಪರಿಚಯಿಸುವ ಮ್ಯೂಸಿಯಂ ಅನ್ನು ಸ್ಥಾಪಿಸಿದೆ.

ನನ್ನ ಇತ್ತೀಚಿಗಿನ ಗುಜರಾತ್ ಪ್ರವಾಸದಲ್ಲಿ ಆ ವಸ್ತುಸಂಗ್ರಹಾಲಯವನ್ನು ಸಂದರ್ಶಿಸುವ ಅವಕಾಶ ನನಗೆ ಸಿಕ್ಕಿತು. ನಮ್ಮ ಡ್ರೈವರ್ 'ನೀವು ಆ ವಸ್ತುಸಂಗ್ರಹಾಲಯವನ್ನು ಖಂಡಿತವಾಗಿಯೂ ನೋಡಬೇಕು' ಎಂದು ಹೇಳಿದಾಗ, ಅದೊಂದು ಮಾಮೂಲಿ ಮ್ಯೂಸಿಯಂ ಇರಬೇಕು ಎಂದು ಭಾವಿಸಿದ್ದೆ. ಆದರೆ ಅಲ್ಲಿಗೆ ಹೋದ ಮೇಲೆ ಅದರ ಮಹತ್ವ ಏನು ಎಂದು ತಿಳಿಯಿತು.

'ಸ್ಮೃತಿ ಭವನ'ವು ನಗರದ ಹೊರವಲಯದಲ್ಲಿರುವ ಎತ್ತರವಾದ ಗುಡ್ಡದ ಮೇಲೆ ನಿರ್ಮಾಣವಾಗಿದೆ. ಇದರಲ್ಲಿ ಏಳು ಹಂತಗಳು ಇವೆ. ಟಿಕೆಟ್ ಪಡೆದುಕೊಂಡು ಒಳಗೆ ಹೋಗುತ್ತಿದ್ದಂತೆ ಮೊದಲ ಹಂತದಲ್ಲಿ ಕಿರುಚಿತ್ರವನ್ನು ಪ್ರದರ್ಶಿಸಲಾಗುತ್ತದೆ. ಇದರಲ್ಲಿ ಪುರಾತನ ವ್ಯಾಪಾರದ ರಸ್ತೆಗಳು, ಅವುಗಳ ವಿಕಾಸ ಇತ್ಯಾದಿಗಳ ಬಗ್ಗೆ ಮಾಹಿತಿಗಳು ಸಿಗುತ್ತವೆ. ಮರುಹುಟ್ಟು (Rebirth) ಎಂದು ಇದಕ್ಕೆ ಹೆಸರು ಇಡಲಾಗಿದೆ.



ಸ್ಮೃತಿ ಭವನ ಹೀಗೆ ನೋಡಿ...

ಎರಡನೆಯ ಹಂತದಲ್ಲಿ ಅಲ್ಲಾಹ್ ಬಂದ್ ಮೂಲಕ 1819 ರಲ್ಲಿ ಗುಜರಾತ್ ಎದುರಿಸಿದ ಪ್ರಾಕೃತಿಕ ಸಮಸ್ಯೆ ಹಾಗೂ ಇದರ ಪ್ರಾಕೃತಿಕ ವಿಕೋಪಗಳ ಕುರಿತಾದ ವಿವರಣೆಗಳು ಸಿಗುತ್ತವೆ. ಮರು ಅನ್ವೇಷಣೆ (Rediscover) ಎಂದು ಈ ಹಂತಕ್ಕೆ ಹೆಸರು.

ಮೂರನೆಯ ಹಂತದಲ್ಲಿ ಭೂಕಂಪ ಸಂಭವಿಸಿದ ದಿನದಂದು ಜನಸಾಮಾನ್ಯರ ದೈನಂದಿನ ಚಟುವಟಿಕೆ ಹೇಗಿತ್ತು? ಮನೆಗಳು ಯಾವ ರೀತಿ ಇದ್ದವು ಕುಸಿದಾಗ ಏನಾಯಿತು ಎನ್ನುವುದನ್ನು ಒಂದು ಮಾದರಿಯಾಗಿ ಇಟ್ಟು ತೋರಿಸಲಾಗಿದೆ. ಯಥಾ ಸ್ಥಿತಿಯ ದರ್ಶನ (Restore) ಎನ್ನುವುದು ಈ ಹಂತ.

ನಾಲ್ಕನೆಯ ಹಂತದಲ್ಲಿ ಭೂಕಂಪದ ನಂತರ ಮರು ನಿರ್ಮಾಣವನ್ನು ಹೇಗೆ ಮಾಡಲಾಯಿತು. ಲಕ್ಷಾಂತರ ಜನರಿಗೆ ಮೂಲಸೌಕರ್ಯಗಳನ್ನು ಪುನರ್ ನಿರ್ಮಾಣ ಮಾಡುವ ಸಂದರ್ಭದಲ್ಲಿ ಯಾವೆಲ್ಲ ಸವಾಲುಗಳನ್ನು ಎದುರಿಸಬೇಕಾಯಿತು ಎಂಬುದರ ಕುರಿತಾದ ವಿವರಗಳಿವೆ. ಮರು ನಿರ್ಮಾಣ (Rebuild) ಎನ್ನುವುದು ಈ ಹಂತಕ್ಕೆ ಇಟ್ಟ ಹೆಸರು.

ಐದನೇ ಹಂತಕ್ಕೆ ಮರುಯೋಚನೆ (Rethink) ಎಂದು ಹೆಸರಿಡಲಾಗಿದೆ. ನಡೆದ ಆಪತ್ತು ಮತ್ತೆ ಘಟಿಸದೇ ಇರಲು ಯಾವೆಲ್ಲ ಪ್ರಯತ್ನಗಳನ್ನು ಮಾಡಬೇಕು, ಒಂದೊಮ್ಮೆ ಪ್ರಾಕೃತಿಕ ವಿಕೋಪಗಳು ಸಂಭವಿಸಿದರೆ ಹೇಗೆ ಎದುರಿಸಬೇಕು ಎಂಬುದರ ಕುರಿತಾದ ಪರಿಕಲ್ಪನೆಯ ಚಿತ್ರಣಗಳು ಇವೆ.

ಆರನೆಯ ಹಂತದಲ್ಲಿ ಭೂಕಂಪದ ಅನುಭವವನ್ನು ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಿದ ಪ್ರತಿಯೊಬ್ಬರಿಗೂ ಅನುಭವಕ್ಕೆ ಬರುವಂತೆ ಮಾಡುವ ವ್ಯವಸ್ಥೆ ಇದೆ. 5.5 ರಿಕ್ಟರ್ ಮಾಪಕದಲ್ಲಿ ದೊಡ್ಡ ಪರದೆಯಲ್ಲಿ ಶಬ್ದ ಮತ್ತು ಚಿತ್ರಗಳ ಮೂಲಕ ಕಟ್ಟಡಗಳು ಕುಸಿಯುವುದು, ಜನರ ಆರ್ತನಾದವನ್ನು ತೋರಿಸಲಾಗುತ್ತದೆ. ನಡುವೆ ಒಂದು ವೃತ್ತಾಕಾರದ ಭೂಮಿಕೆಯಲ್ಲಿ ಒಂದು ಹಿಡಿಕೆಯನ್ನು ಮಾಡಿ ಆರಾರು ಮಂದಿ ಅದನ್ನು ಹಿಡಿದುಕೊಳ್ಳುವಂತೆ ಹೇಳಲಾಗುತ್ತದೆ. ಸುಮಾರು ಒಂದು ನಿಮಿಷ ಭೂಕಂಪದ ಅನುಭವ ಆ ವೇದಿಕೆಯಲ್ಲಿ ನಿಂತ ಪ್ರತಿಯೊಬ್ಬರಿಗೂ ಆಗುತ್ತದೆ. ಇಲ್ಲಿ ಐದು ವರ್ಷಗಳ ಕೆಳಗಿನ ಮಕ್ಕಳು ಹಾಗೂ ಗರ್ಭಿಣಿಯರಿಗೆ ಪ್ರವೇಶವಿಲ್ಲ. ಪುನರ್ ಅನುಭವ (Relive) ಎನ್ನುವುದು ಆರನೆಯ ಹಂತದ ಹೆಸರು. ಕಡಿಮೆ ಕಂಪನದಲ್ಲಿ ನಮಗಾದ ಅನುಭವವೇ ಭಯಂಕರವಾಗಿತ್ತು. ಇನ್ನು ಹೆಚ್ಚು ಕಂಪನಾಂಕದಲ್ಲಿ ಆದಾಗಿನ ಅನುಭವ ಹೇಗೆ ಆಗಿದ್ದಿರಬಹುದು? ಎಂದು ಯೋಚಿಸಿದಾಗ ಭಯವಾಯಿತು.

ಏಳನೆಯ ಹಂತದಲ್ಲಿ ದುರಂತದಲ್ಲಿ ಮಡಿದವರಿಗೆ ನೊಂದವರಿಗೆ ಮೌನ ಪ್ರಾರ್ಥನೆಯ ಮೂಲಕ ಸಹಾನುಭೂತಿಯನ್ನು ವ್ಯಕ್ತಪಡಿಸುವ ವಿಭಾಗವಿದೆ. (Renew) ಇದರ ಹೆಸರು. ನೊಂದವರ ಕತೆಗಳನ್ನು ಅಲ್ಲಲ್ಲಿ ವಿಡಿಯೊ ಮಾಡಿ ಕೇಳಿಸಲಾಗುತ್ತದೆ. ಆ ಕಾಲದಲ್ಲಿ ಯುವಕರಾಗಿದ್ದವರು, ಸಣ್ಣಪ್ರಾಯದವರು ಅದನ್ನು ಒಂದು ದುಃಸ್ವಪ್ನದಂತೆ ವಿವರಿಸುತ್ತಾರೆ. ಅವರ ಮಾತುಗಳನ್ನು ಕೇಳಿದಾಗ ಕಣ್ಣು ಹನಿಗೂಡುತ್ತದೆ.

ಹೀಗೆ ಏಳು ಹಂತಗಳಲ್ಲಿ ಇರುವ ಮ್ಯೂಸಿಯಂ ಅನ್ನು ಸಂಪೂರ್ಣವಾಗಿ ವೀಕ್ಷಿಸಲು ಸುಮಾರು ಎರಡೂವರೆಯಿಂದ ಮೂರು ಗಂಟೆ ಬೇಕಾಗುತ್ತದೆ. ಪ್ರತಿ ಹಂತದಲ್ಲಿಯೂ ಹಿಂದಿಯಲ್ಲಿ ವಿವರಿಸುವ ವಿವರಣೆಗಾರರು ಇದ್ದಾರೆ. ಮೂರು ನಾಲ್ಕು ನಿಮಿಷಗಳ ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಹಾಗಾಗಿ ಘಟನೆಗಳ ಕುರಿತು ತಿಳಿಯುವ ಉತ್ಸಾಹ ಮೂಡುತ್ತದೆ. 25 ವರ್ಷಗಳ ಹಿಂದೆ ನಡೆದ ಭಾರತದ ಕರಾಳ ದಿನವೊಂದರ ನೈಜ ಚಿತ್ರಣ ಇಲ್ಲಿ ದೊರಕುತ್ತದೆ.

ಪ್ರವೇಶ ದರ ಪ್ರತಿಯೊಬ್ಬರಿಗೆ ₹300. ಸೋಮವಾರ ರಜಾ ದಿನವಾಗಿರುತ್ತದೆ. ಗುಜರಾತ್ ಪ್ರವಾಸಕ್ಕೆ ಭುಜ್ ಕಡೆಗೆ ಹೋದವರು ಈ ವಸ್ತುಸಂಗ್ರಹಾಲಯವನ್ನು ಅನ್ನು ನೋಡದೇ ಬರಬೇಡಿ.



ಭೂಕಂಪದ ಕರಾಳ ನೆನಪು ಮೂಡಿಸುವ ಕಲಾಕೃತಿ



ಭೂಕಂಪದ ವಿವರ ನೀಡುವ ಪ್ರದರ್ಶನಗಳು



ಮ್ಯೂಸಿಯಂ ಒಳಗಿರುವ ಕಲಾಕೃತಿ

ADVERTORIAL

ದಿ ಗೋಲ್ಡನ್ ರೋಡ್



ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

ರಾತ್ರಿ ಮಲಗುವುದಕ್ಕೆ ಮುನ್ನ ಒಂದಷ್ಟು ಪುಟಗಳನ್ನು ಓದೋಣವೆಂದು ವಿಲಿಯಂ ಡಾಲ್ರಿಂಪಲ್‌ನ 'ದಿ ಗೋಲ್ಡನ್ ರೋಡ್: ಹೌ ಏನ್ಸಿಯೆಂಟ್ ಇಂಡಿಯಾ ಟ್ರಾನ್ಸ್‌ಫಾರ್ಮ್ಡ್ ದಿ ವರ್ಲ್ಡ್' ಕೃತಿಯನ್ನು ಕೈಗೆತ್ತಿಕೊಂಡೆ. ಆದರೆ, ಪುಟದಿಂದ ಪುಟಕ್ಕೆ ಓದುತ್ತಾ ಹೋದಂತೆ ಅದರಲ್ಲಿ ಮುಳುಗುಬಿಟ್ಟೆ. ಎಷ್ಟರಮಟ್ಟಿಗೆಂದರೆ ಅದೊಂದು ಓದು ಎನ್ನಿಸುವ ಬದಲಿಗೆ ಪರ್ಯಟನೆ ಎನ್ನಿಸಿಬಿಟ್ಟಿತು.

ಅದರ ಅಧ್ಯಾಯಗಳನ್ನು ಓದುತ್ತಿರುವಾಗ ನಡುನಡುವೆ ನನ್ನ ಬಗ್ಗೆ ನನಗೇ ಏನೋ ಅರಿವಾಗತೊಡಗಿತು. ಅಂದಂತೆ, ನಾನು ಯಾವುದೇ ಪುಸ್ತಕ ಓದುತ್ತಾ ಕುಳಿತಾಗಲೂ ನನಗೇ ಗೊತ್ತಿಲ್ಲದಂತೆ ನನ್ನ ಒಳಮನಸ್ಸು ಪರ್ಯಟನೆಗೆ ಸಂಬಂಧಿಸಿದ ಅಂಶಗಳನ್ನೇ ಬಯಸುತ್ತಿರುತ್ತದೆ. ಈ ಪುಸ್ತಕ ಓದುತ್ತಿರುವಾಗ ಡಾಲ್ರಿಂಪಲ್ ನನ್ನ ಪ್ರವಾಸಿ ಮಾರ್ಗದರ್ಶಿಯಾದರೆ ಪುಸ್ತಕವೇ ನನ್ನ ಪಾಸ್‌ಪೋರ್ಟ್ ಆಗಿಬಿಟ್ಟಿತು. ರೇಷ್ಮೆ, ಸಾಂಬಾರ ಪದಾರ್ಥಗಳು ಹಾಗೂ ಪಿಂಗಾಣಿ ಸಾಮಗ್ರಿಗಳ ಸಾಗಣೆಯ ಮೂಲಕ ವಿವಿಧ ಖಂಡಗಳ ನಡುವೆ ಬೃಹತ್ ವಾಣಿಜ್ಯ ವಹಿವಾಟಿನ ಮಾರ್ಗವಾಗಿದ್ದ ಸಿಲ್ಕ್ ರೋಡ್ ಬಗ್ಗೆ ಹಲವು ವರ್ಷಗಳ ಹಿಂದೆಯೇ ನಾನು ಕೇಳಿ ತಿಳಿದಿದ್ದೆ. ಅಂದಿನ ವರ್ತಕರು ಸಾಗಿದ್ದ ಮಾರ್ಗಗಳಲ್ಲಿ ಪ್ರವಾಸ ಮಾಡಬೇಕೆಂಬ ಯೋಜನೆಯನ್ನೂ ಹಾಕಿಕೊಂಡಿದ್ದೆ.

ಆದರೆ, ಡಾಲ್ರಿಂಪಲ್ ತನ್ನ ಕೃತಿಯ ಮೂಲಕ ವಿಭಿನ್ನ ದೃಷ್ಟಿಕೋನವನ್ನೇ ನೀಡಿದ. ಸಿಲ್ಕ್ ರೋಡ್‌ನ ಗುಂಟ ಸಾಮಾನು ಸರಂಜಾಮುಗಳು ಸಾಗಣೆಯಾದರೆ, ಗೋಲ್ಡನ್ ರೋಡ್ ಎಂದು ಅವನು ಹೆಸರಿಸಿದ ಮಾರ್ಗದಲ್ಲಿ ಚಿಂತನೆಗಳು ಸಾಗಿದವು. ಜೀವನ ತತ್ವಗಳು, ಧರ್ಮಗಳು, ಗಣಿತ ಶಾಸ್ತ್ರ, ಕತೆಗಳು ಹಾಗೂ ಚಿಂತನಾ ವಿಧಾನಗಳು ಭಾರತದಿಂದ ಅನ್ಯ ದೇಶಗಳಿಗೆ ಪಸರಿಸಿದವು. ಜೊತೆಗೆ, ನಾಡಿನ ಗಡಿಗಳಾಚೆಗೂ ನಾಗರಿಕತೆಗಳನ್ನು ರೂಪಿಸಿದವು. ಡಾಲ್ರಿಂಪಲ್ ಪ್ರಕಾರ, ಭೌತಿಕ ಸಂಪತ್ತಿಗಿಂತ ಹೆಚ್ಚು ಬೆಲೆಬಾಳುವ ಚಿಂತನೆಗಳು ಭಾರತದ ಅತ್ಯಂತ ದೊಡ್ಡ ನಿರ್ಯಾತವಾಗಿದ್ದವು.

ಆ ಪುಸ್ತಕ ಓದುತ್ತಿರುವಂತೆ ನಾನು ಈ ಗೋಲ್ಡನ್ ರೋಡ್‌ನಲ್ಲಿ ಈಗಾಗಲೇ ಸಂಚರಿಸುತ್ತಿರುವಂತೆ ಭಾಸವಾಯಿತು. ಬಹುಶಃ ನಿಮಗೂ ಹೀಗೆಯೇ ಅನ್ನಿಸಿರಬಹುದು. ಹೀಗಾಗಿ, ನಾವೀಗ ಭಾರತದ ಪ್ರತಿಧ್ವನಿ ಈಗಲೂ ರಿಂಗಣಿಸುತ್ತಿರುವ ನಾಡುಗಳಲ್ಲಿನ ಹೆಜ್ಜೆಜಾಡನ್ನು ಒಟ್ಟಿಗೆ ಮೆಲುಕು ಹಾಕೋಣ.

ಇಂಡೋನೇಷ್ಯಾ– ಶಿಲೆಯಲ್ಲಿ ಅರಳಿದ ಮಹಾಕಾವ್ಯ

ನಾನು ಇಂಡೋನೇಷ್ಯಾಗೆ ಮೊದಲ ಬಾರಿ ಭೇಟಿ ನೀಡಿದಾಗ ಅದು ನನಗೆ ಪರಿಚಿತ ನೆಲವೇನೋ ಎಂಬ ಭಾವನೆ ಮೂಡಿ ಅಚ್ಚರಿಯಾಗಿತ್ತು. ಬಾಲಿಯಲ್ಲಿ ಮನೆಗಳ ಮುಂಭಾಗದಲ್ಲಿ ತಾಳೆ ಎಲೆಯ ತಟ್ಟೆಗಳಲ್ಲಿ ಇರಿಸುವ ಚನಾಂಗ್ ಸೀರೆಗಳ ಸಮರ್ಪಣಾ ವಿಧಿಯು ಬಹುಮಟ್ಟಿಗೆ ನಮ್ಮ ಭಾರತದಲ್ಲಿ ಸಂಜೆಯ ವೇಳೆ ದೀಪ ಹಚ್ಚುವ ವಿಧಿಯನ್ನೇ ಹೋಲುತ್ತದೆ. ಇಲ್ಲಿ ಪುರಾಣವು ದೇಗುಲಗಳಿಗಷ್ಟೇ ಸೀಮಿತಗೊಂಡಿಲ್ಲ. ಬದಲಿಗೆ, ಅದು ದೈನಂದಿನ ಧಾರ್ಮಿಕ ವಿಧಿಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಜೀವಂತವಾಗಿದೆ.

ಇಲ್ಲಿನ ರಸ್ತೆಗಳ ವೃತ್ತಗಳಲ್ಲಿ ಘಟೋತ್ಕಚನ ಪ್ರತಿಮೆಗಳು ಎದ್ದು ಕಾಣುತ್ತವೆ, ಹನುಮಂತನ ಮೂರ್ತಿಗಳು ದೇವಸ್ಥಾನಗಳಲ್ಲಿ ದ್ವಾರಪಾಲಕರಾಗಿ ರಕ್ಷಣೆಗೆ ನಿಂತಿರುತ್ತವೆ ಹಾಗೂ ರಾಮಾಯಣವು ನೃತ್ಯ, ಸಂಗೀತ ಹಾಗೂ ಕಲ್ಲಿನ ಕೆತ್ತನೆಗಳಲ್ಲಿ ಅನಾವರಣಗೊಳ್ಳುತ್ತದೆ. ಉಬುಡ್ ಬಳಿ ಮಹಾಕಾವ್ಯದ ದೃಶ್ಯಗಳನ್ನು ನದಿ ದಂಡೆಯುದ್ದಕ್ಕೂ ಕೆತ್ತನೆ ಕಲೆಯಲ್ಲಿ ಚಿತ್ರಿಸಲಾಗಿದ್ದು, ರ್‍ಯಾಫ್ಟಿಂಗ್ ಮಾಡುವವರಿಗೆ ಅಚಾನಕ್ಕಾಗಿ ಎದುರಾಗಿ ಕಥೆಗಳನ್ನು ಉಲಿಯುತ್ತವೆ.

ಗರುಡನ ಮೇಲೆ ಆರೂಢನಾದ ವಿಷ್ಣುವಿನ ಗರುಡ ವಿಷ್ಣು ಕೆಂಚನ ಸ್ಮಾರಕವು ಮನೋಹರವಾಗಿದೆ. ಪ್ರಪಂಚದ ಅತ್ಯಂತ ದೊಡ್ಡ ಪ್ರತಿಮೆಗಳಲ್ಲಿ ಒಂದಾದ ಇದು ಭಾರತದ ಪುರಾಣಗಳು ಇಂದಿಗೂ ಬಾಲಿನೀಸ್ ಕಲ್ಪನೆಯನ್ನು ರೂಪಿಸುತ್ತಿವೆ ಎಂಬುದನ್ನು ನೆನಪಿಸುತ್ತದೆ.

ಇನ್ನಷ್ಟು ಉತ್ತರಕ್ಕೆ ಸಾಗಿದರೆ ಜಾವಾದಲ್ಲಿ ಪ್ರಪಂಚದ ಅತ್ಯಂತ ವಿಶಾಲ ಬೌದ್ಧ ಸ್ಮಾರಕವಾದ ಬೊರೋಬುದುರ್ ಸ್ತೂಪವಿದೆ. 9ನೇ ಶತಮಾನದಲ್ಲಿ ನಿರ್ಮಾಣಗೊಂಡ ಈ ಸ್ತೂಪದ ಮೇಲಿನ ಕೆತ್ತನೆಯ ಫಲಕಗಳು ಬುದ್ಧನ ಬದುಕಿನ ಯಾನವನ್ನು ವಿವರಿಸುತ್ತವೆ; ಜೊತೆಗೆ, ಸಾಗರವನ್ನು ದಾಟಿ ಶತಮಾನಗಳಿಂದ ಉಳಿದು ಬೆಳೆಯುತ್ತಿರುವ ಬುದ್ಧನ ಚಿಂತನೆಗಳ ಮಹತ್ವವನ್ನು ಮನಗಾಣಿಸುತ್ತವೆ.

ಥಾಯ್ಲೆಂಡ್– ರಾಮ, ಅಯುತ್ಥಯಾ ಹಾಗೂ ಕರಿ



ಈ ಗೋಲ್ಡನ್ ರೋಡ್ ಇಂಡೋನೇಷ್ಯಾದಿಂದ ಥಾಯ್ಲೆಂಡ್‌ಗೆ ಸಾಗುತ್ತದೆ. ಭಾರತದ ಪ್ರಭಾವವು ಗುಪ್ತಗಾಮಿನಿಯಂತಿರುವ, ಆದರೆ ಆಳವಾಗಿ ಬೇರುಬಿಟ್ಟಿರುವ ನಾಡು ಇದಾಗಿದೆ. ಹಳೆಯ ರಾಜಧಾನಿ ಅಯುತ್ಥಯಾದ ಹೆಸರಿನ ಮೂಲವೇ ರಾಮನ ಜನ್ಮಸ್ಥಳವಾದ ಅಯೋಧ್ಯಾ ಆಗಿದೆ. ಥಾಯ್‌ನಲ್ಲಿ ರಾಜರು ಬಹಳ ಹಿಂದಿನಿಂದಲೇ 'ರಾಮ' ಎಂಬುದನ್ನೇ ತಮ್ಮ ಹೆಸರಾಗಿಸಿಕೊಳ್ಳುತ್ತಿದ್ದು, ಆ ಸಂಪ್ರದಾಯವು ಇಂದಿಗೂ ಮುಂದುವರಿದಿದೆ.

ಇಲ್ಲಿನ ರಾಮಕಿಯೆನ್ ರಾಮಯಣವನ್ನೇ ಸ್ಥಳೀಯ ಭಾಷೆಯಲ್ಲಿ ಹೇಳುವ ಮಹಾಕಾವ್ಯವಾಗಿದೆ. ಅರಮನೆಯ ಭಿತ್ತಿಚಿತ್ರಗಳು, ವಿಮಾನ ನಿಲ್ದಾಣದಲ್ಲಿ ವಿಷ್ಣುವು ಅನಂತನ ಮೇಲೆ ಮಲಗಿದ ಭಂಗಿಯಲ್ಲಿರುವ ಶಿಲ್ಪಗಳು ಹಾಗೂ ಅರಮನೆ ವಾಸ್ತುಶಿಲ್ಪಗಳಲ್ಲಿ ಭಾರತದ ಪ್ರಭಾವವು ನಿಚ್ಚಳವಾಗಿ ಕಂಡುಬರುತ್ತದೆ.

ಥಾಯ್‌ನ ಪಾಕ ಪದ್ಧತಿಯಲ್ಲೂ ಈ ಪ್ರಭಾವವನ್ನು ಕಾಣಬಹುದಾಗಿದೆ. ಸಾಂಬಾರು ಪದಾರ್ಥಗಳನ್ನು ಬಳಸಿ ಸಿದ್ಧಪಡಿಸುವ ಇಲ್ಲಿನ ಅಚ್ಚುಮೆಚ್ಚಿನ ಹಲವು ಕರಿಗಳ ಹಿನ್ನೆಲೆಯು ಭಾರತದ ಮೂಲದ್ದಾಗಿವೆ. ಹಿಂದುತ್ವವು ಇಲ್ಲಿಗೆ ದೇವತೆಗಳನ್ನು ತಂದಿದೆ, ಬೌದ್ಧ ಧರ್ಮವು ಆಧ್ಯಾತ್ಮಿಕತೆಯ ತಿರುಳನ್ನು ರೂಪಿಸಿದೆ ಹಾಗೂ ಇವೆರಡೂ ಥಾಯ್ ಸಂಸ್ಕೃತಿಯಲ್ಲಿ ಅವಿಚ್ಛಿನ್ನವಾಗಿ ಮಿಳಿತಗೊಂಡಿವೆ.

ಕಾಂಬೋಡಿಯಾ– ಆಂಕೋರ್ ವಾಟ್‌ನ ಚಿರಂತನ ಕತೆಗಳು

ಕಾಂಬೋಡಿಯಾದಲ್ಲಿ ಗೋಲ್ಡನ್ ರೋಡ್ ಆಂಕೋರ್ ವಾಟ್‌ನಲ್ಲಿ ತನ್ನ ಉಚ್ಛ್ರಾಯವನ್ನು ತಲುಪಿದೆ. ಮೊದಲಿಗೆ 12ನೇ ಶತಮಾನದಲ್ಲಿ ವಿಷ್ಣು ದೇಗುಲವಾಗಿ ನಿರ್ಮಾಣಗೊಂಡು, ನಂತರ ಬೌದ್ಧರ ಪವಿತ್ರ ಸ್ಥಳವಾಗಿ ಪರಿವರ್ತನೆಗೊಂಡ ಇದು ಪ್ರಪಂಚದ ಅತ್ಯಂತ ದೊಡ್ಡ ಧಾರ್ಮಿಕ ಸ್ಮಾರಕವಾಗಿ ವಿರಾಜಮಾನವಾಗಿದೆ.

ಇದರ ಬಿತ್ತಿಗಳು ಮಹಾಭಾರತ ಮತ್ತು ರಾಮಾಯಣದ ದೃಶ್ಯಗಳಿಂದ ಜೀವಂತವಾಗಿವೆ, ಇಲ್ಲಿ ಅಪ್ಸರೆಯರು ಚಿರಂತನವಾಗಿ ನರ್ತಿಸುತ್ತಾರೆ ಹಾಗೂ ಸಂಸ್ಕೃತದ ಶಾಸನಗಳು ಶತಮಾನಗಳ ಕಥನವನ್ನು ಪಿಸುಗುಟ್ಟುತ್ತವೆ. ದೇಗುಲವೆಂದರೆ ಮನುಷ್ಯರು ಹಾಗೂ ದೈವಿಕದ ನಡುವಿನ ಸೇತುವೆಯೆಂಬ ಭಾರತೀಯ ಚಿಂತನೆಯು ಇಲ್ಲಿ ಪ್ರಧಾನವಾಗಿ ಅಭಿವ್ಯಕ್ತಗೊಂಡಿದೆ.

ಶ್ರೀಲಂಕಾ– ಪುರಾಣ ಹಾಗೂ ನಂಬಿಕೆಯ ಸಂಗಮ

ರಾಮಾಯಣದಲ್ಲಿ ಶ್ರೀಲಂಕಾಗೆ ವಿಶೇಷ ಸ್ಥಾನವಿದ್ದು, ಇದು ಪುರಾಣ ಹಾಗೂ ಭೌಗೋಳಿಕತೆ ಪರಸ್ಪರ ಹೆಣೆದುಕೊಂಡಿವೆ. ನುವರ ಎಲಿಯಾ ಬಳಿಯ ಸೀತಾ ಎಲಿಯಾ, ಅಶೋಕ ವಾಟಿಕಾ, ಎಲ್ಲಾ ಬಳಿಯ ರಾವಣನ ಗುಹೆಗಳು ಹಾಗೂ ದಕ್ಷಿಣ ಕರಾವಳಿಯ ಉಸ್ಸಂಗೋಡ ಹೀಗೆ ದ್ವೀಪದಾದ್ಯಂತ ರಾಮಾಯಣದ ಹೆಜ್ಜೆಜಾಡು ಇಲ್ಲಿ ಸುರುಳಿಯಂತೆ ಬಿಚ್ಚಿಕೊಳ್ಳುತ್ತದೆ.

ಚಹಾ ತೋಟಗಳು, ಜಲಪಾತಗಳು ಹಾಗೂ ಅರಣ್ಯದಿಂದ ಸುತ್ತುವರಿದ ಬೆಟ್ಟಗುಡ್ಡಗಳಲ್ಲಿ ಅಡ್ಡಾಡುವಾಗ ಕಥೆಗಳು ಆ ನೆಲದ ಭಾಗವೇ ಆಗಿರುವಂತೆ ಭಾಸವಾಗುತ್ತವೆ. ಶ್ರೀಲಂಕಾವು ಮಹಾಕಾವ್ಯದ ಜೀವಂತ ವೇದಿಕೆಯಾಗುತ್ತದೆ.

ಅಶೋಕನ ಆಳ್ವಿಕೆಯ ಕಾಲದಲ್ಲಿ ಬೌದ್ಧ ತತ್ವವು ಸಾಗರವನ್ನು ದಾಟಿ ಇಲ್ಲಿ ಆಳವಾಗಿ ಬೇರುಬಿಟ್ಟಿತು. ಅನೂರಾಧಪುರದಲ್ಲಿ ಭವ್ಯ ಸ್ತೂಪಗಳು ಎತ್ತರಕ್ಕೆ ತಲೆಯೆತ್ತಿ ನಿಂತಿವೆ, ಕ್ಯಾಂಡಿಯಲ್ಲಿನ 'ಟೆಂಪಲ್ ಆಫ್ ಟೂಥ್'ನಲ್ಲಿ ಬೌದ್ಧ ಧರ್ಮದ ಅತ್ಯಂತ ಪವಿತ್ರ ಅವಶೇಷವನ್ನು ಕಾಣಬಹುದಾಗಿದೆ. ಇಲ್ಲಿ ನಂಬಿಕೆಯ ಪರಾಕಾಷ್ಠೆಯು ಮೇಲ್ನೋಟಕ್ಕೇ ಗೋಚರಿಸುತ್ತದೆ.

ಮ್ಯಾನ್ಮಾರ್– ದಿಗಂತದ ಅಂಚಿನವರೆಗೂ ದೇಗುಲಗಳು

ಮ್ಯಾನ್ಮಾರ್‌ಗೆ ಬಂದರೆ ಬಾಗಾನ್‌ನ ಬಯಲು ಪ್ರದೇಶಗಳಲ್ಲಿ ಕಥೆ ಅನಾವರಣಗೊಳ್ಳುತ್ತದೆ. ಇಲ್ಲಿ ಸಾವಿರಾರು ದೇವಸ್ಥಾನಗಳು ಹಾಗೂ ಸ್ತೂಪಗಳು ದಿಗಂತದ ಅಂಚಿನವರೆಗೂ ಹರಡಿಕೊಂಡಿವೆ. 9ರಿಂದ 13ನೇ ಶತಮಾನಗಳ ನಡುವಿನ ಅವಧಿಯಲ್ಲಿ ನಿರ್ಮಾಣಗೊಂಡ ಇವು ಭಾರತದಿಂದ ಪಸರಿಸಿದ ಬೌದ್ಧ ಬೋಧನೆಗಳನ್ನು ಪ್ರತಿಫಲಿಸುತ್ತವೆ.

ಇರವಾಡಿ ನದಿಯು ಸೂರ್ಯಾಸ್ತದಲ್ಲಿ ಮಿರುಗುತ್ತಾ ಅಲ್ಲಿನ ದೇಗುಲಗಳ ಪ್ರಭೆಯನ್ನು ನಿಧಾನವಾಗಿ ಕತ್ತಲು ಮುಸುಕವಾಗ ಈ ನಗರಗಳಲ್ಲಿ ಸುಪ್ತವಾಗಿರುವ ಆಧ್ಯಾತ್ಮಿಕ ಅಭೀಪ್ಸೆಯು ಸ್ಪಷ್ಟವಾಗಿ ಎದ್ದುಕಾಣುತ್ತದೆ.

ಚೀನಾ– ನಳಂದಾಗೆ ಆಗಮಿಸಿದ ಯಾತ್ರಿಕರು

ಅಂದು ಚೀನಾ ಕೂಡ ಭಾರತದ ಬೌದ್ಧಿಕ ಸೆಳೆತಕ್ಕೆ ಒಳಗಾಯಿತು. ಫಾ ಶಿಯನ್ ಮತ್ತು ಶುವಾನ್ ಜಾಂಗ್‌ನಂತಹ ಭಿಕ್ಕುಗಳು ತತ್ವಶಾಸ್ತ್ರ, ವಿಜ್ಞಾನ ಹಾಗೂ ತರ್ಕವು ವಿಕಸನಗೊಂಡ ಭಾರತದ ಉತ್ಕೃಷ್ಟ ವಿಶ್ವವಿದ್ಯಾನಿಲಯವಾದ ನಳಂದಾದಲ್ಲಿ ಅಧ್ಯಯನ ಮಾಡುವ ಸಲುವಾಗಿ ಪ್ರಯಾಸಕರ ಪರ್ಯಟನೆಗಳನ್ನು ಕೈಗೊಂಡರು.

ಶುವಾನ್ ಜಾಂಗ್‌ನ ಪ್ರವಾಸ ಕಥನವು ಪ್ರಾಚೀನ ಭಾರತದ ಕುರಿತಾದ ಸಮೃದ್ಧ ದಾಖಲೀಕರಣಗಳಲ್ಲಿ ಒಂದಾಗಿದೆ. ಆತ ಇಲ್ಲಿಂದ ಕೊಂಡೊಯ್ದು, ಈಗ ಶಿಯಾನ್‌ನ ಬೃಹತ್ ವೈಲ್ಡ್ ಗೂಸ್ ಪಗೋಡಾದಲ್ಲಿರುವ ಧರ್ಮಗ್ರಂಥಗಳು ಶತಮಾನಗಳಿಂದ ಪೂರ್ವ ಏಷ್ಯಾದಲ್ಲಿ ಬೌದ್ಧ ಧರ್ಮದ ಮಾರ್ಗದರ್ಶಿಕೆಯಾಗಿವೆ.

ಗೋಲ್ಡನ್ ರೋಡ್ ಇಂದು

ಈ ನಾಡುಗಳಲ್ಲಿನ ಪಯಣವು ಡಾಲ್ರಿಂಪಲ್‌ನ ವಾದಮಂಡನೆಯನ್ನು ಸ್ಪಷ್ಟಗೊಳಿಸುತ್ತವೆ. ಅದೇನೆಂದರೆ, ಚಿಂತನೆಗಳು ಸಾಮ್ರಾಜ್ಯಗಳಿಗಿಂತಲೂ ದೀರ್ಘ ಕಾಲ ಬಾಳಿ ಬೆಳಗುತ್ತವೆ; ದೇಗುಲಗಳ ಮುಕ್ಕಾಗುತ್ತವೆ, ಸಾಮ್ರಾಜಗಳು ಪತನವಾಗುತ್ತವೆ ಆದರೆ ತತ್ವ ಚಿಂತನೆಗಳು ಉಳಿದು ಬೆಳೆಯುತ್ತವೆ.

ಇಂದು ಯೋಗ ಸ್ಟುಡಿಯೊಗಳು ಪ್ರಪಂಚಾದ್ಯಂತ ತಲೆಯೆತ್ತುತ್ತಿವೆ, ಆಯುರ್ವೇದವನ್ನು ವಿದೇಶಗಳಲ್ಲೂ ಅಧ್ಯಯನ ಮಾಡಲಾಗುತ್ತಿದೆ. ಭಾರತದಿಂದ ದೂರದಲ್ಲಿರುವ ನೆಲದಲ್ಲೂ ಸಂಸ್ಕೃತ ಮಂತ್ರಗಳು ಪಠಣಗೊಳ್ಳುತ್ತವೆ. ಗೋಲ್ಡನ್ ರೋಡ್ ಎಂಬುದು ಮುಗಿದು ಹೋಗಿರುವ ಅಧ್ಯಾಯವಾಗಿಲ್ಲ. ಅದು ಕಾಲಕಾಲಕ್ಕೆ ಹೊಸ ಸ್ವರೂಪಗಳನ್ನು ಪಡೆದಿದೆ ಎಂಬುದೇ ದಿಟ.

ವಿಶ್ವವೇ ಒಂದು ಕುಟುಂಬ

ನಾನು ಈ ಪುಸ್ತಕ ಓದಿ ಮುಗಿಸುತ್ತಿರುವಾಗ ಈ ಪಯಣವು ಕೇವಲ ಚರಿತ್ರೆಯಲ್ಲ ಬದಲಿಗೆ ನನ್ನದೇ ಪರ್ಯಟನೆಗಳ ಕನ್ನಡಿ ಎಂಬುದು ನನಗೆ ಮನವರಿಕೆಯಾಯಿತು. ಬಾಲಿಯಲ್ಲಿರಲಿ, ಅಯುತ್ಥಯಾ ಇರಲಿ, ಆಂಕೋರ್ ಆಗಿರಲಿ ಇಲ್ಲವೇ ಬಾಗಾನ್ ಆಗಿರಲಿ ನಾನು ಕೇವಲ ಪ್ರೇಕ್ಷಣೀಯ ಸ್ಥಳಗಳ ದರ್ಶನಕ್ಕೆ ಸಾಕ್ಷಿಯಾಗಿರಲಿಲ್ಲ; ಬದಲಿಗೆ ಶತಮಾನಗಳ ಹಿಂದೆಯೇ ಚಿಂತನೆಗಳಿಂದ ಪ್ರಭಾವಿತವಾದ ಮಾರ್ಗಗಳಲ್ಲಿ ಅನುಸಂಧಾನ ಮಾಡುತ್ತಿದ್ದೆ.

ಈ ಗೋಲ್ಡನ್ ರೋಡ್‌ನಲ್ಲಿ ಸಂಸ್ಕೃತದ 'ವಸುಧೈವ ಕುಟುಂಬಕಂ' ಎಂಬ ಉಲ್ಲೇಖ, ಅಂದರೆ, 'ವಿಶ್ವವೇ ಒಂದು ಕುಟುಂಬ' ಎಂಬುದು ಜೀವಂತವಾಗಿರುವುದು ಎದ್ದುತೋರುತ್ತದೆ. ಚಿಂತನೆಗಳು ಯಾವುದೇ ಒಂದು ದೇಶಕ್ಕೆ ಸೇರಿದವುಗಳಲ್ಲ ಬದಲಿಗೆ ಅವು ಇಡೀ ಮನುಕುಲಕ್ಕೆ ಸೇರಿದ ಸ್ವತ್ತುಗಳು.

ಹೀಗಾಗಿ, ಈ ಪರ್ಯಟನೆ ಕೈಗೊಳ್ಳಲು ನಾನು ನಿಮ್ಮನ್ನು ಆಹ್ವಾನಿಸುತ್ತೇನೆ. ಗೋಲ್ಡನ್ ರೋಡ್‌ನ ಜಾಡಿನಲ್ಲಿ ದೇವಸ್ಥಾನಗಳನ್ನು ದರ್ಶಿಸಿ, ಕರಿಗಳನ್ನು ಆಸ್ವಾದಿಸಿ, ಮಂತ್ರ ಮಠಣಗಳನ್ನು ಕಿವಿಗೊಟ್ಟು ಆಲಿಸಿ ಹಾಗೂ ಇಂದು ನಾವು ಯಾವ ಚಿಂತನೆಗಳನ್ನು ಹೊಂದಿದ್ದೇವೆ ಹಾಗೂ ಅವು ನಾಳೆ ಎಲ್ಲಿಗೆ ಪಯಣಿಸುತ್ತವೆ ಎಂದು ನಿಮಗೆ ನೀವೇ ಕೇಳಿಕೊಳ್ಳಿ.



ನ್ಯೂಜಿಲೆಂಡ್ ವಿರುದ್ಧ ಟಿ20 ಕ್ರಿಕೆಟ್ ಸರಣಿ ಗೆದ್ದ ಆತಿಥೇಯ ಭಾರತ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು ಪಿಟಿಐ ಚಿತ್ರ

ಇಶಾನ್ ರನ್..ರನ್.. ಭಾರತ ವಿನ್..

ಸೂರ್ಯಕುಮಾರ್ ಬಳಗಕ್ಕೆ ಸರಣಿ ಕಿರೀಟ • ಅರ್ಷದೀಪ್ ಸಿಂಗ್‌ಗೆ ಐದು ವಿಕೆಟ್

ತಿರುವನಂತಪುರ (ಪಿಟಿಐ): ಇಶಾನ್ ಕಿಶನ್ ಶತಕದ ಭರಾಟೆ ಮತ್ತು ಅರ್ಷದೀಪ್ ಸಿಂಗ್ ಅವರ ದಾಳಿಯಿಂದ ಭಾರತ ತಂಡವು ಶನಿವಾರ ನ್ಯೂಜಿಲೆಂಡ್ ಎದುರಿನ ಕೊನೆಯ ಟಿ20 ಪಂದ್ಯದಲ್ಲಿ ಜಯ ಸಾಧಿಸಿತು. ಸರಣಿಯನ್ನು 4–1ರಿಂದ ಗೆದ್ದುಕೊಂಡಿತು.

42 ಎಸೆತಗಳಲ್ಲಿ ಶತಕ ಸಿಡಿಸಿದ ಜಾರ್ಖಂಡ್ ಹುಡುಗ ಇಶಾನ್ ಆಟದ ಭರಾಟೆಗೆ ಜನಸ್ತೋಮ ಸಂಭ್ರಮಿಸಿತು. ಸ್ಥಳೀಯ ಹೀರೊ ಸಂಜು ಸ್ಯಾಮ್ಸನ್ ಅವರ ವೈಫಲ್ಯವನ್ನೂ ಇಶಾನ್ ಆಟ ಮರೆಸಿತು. ಅಷ್ಟೇ ಅಲ್ಲ; ಇಶಾನ್ ಶತಕ ಪೂರ್ಣಗೊಳಿಸಿದಾಗ ಇನ್ನೊಂದು ಬದಿಯಲ್ಲಿದ್ದ ಹಾರ್ದಿಕ್ ಪಾಂಡ್ಯ ಅವರಂತೂ ಮೇಲಕ್ಕೆ ಜಿಗಿದು ಸಂಭ್ರಮಿಸಿದ್ದು ವಿಶೇಷವಾಗಿತ್ತು.

ಗ್ರೀನ್‌ಫೀಲ್ಡ್ ಕ್ರೀಡಾಂಗಣದಲ್ಲಿ ನಡೆದ ನ್ಯೂಜಿಲೆಂಡ್ ಎದುರಿನ ಐದನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ಇಶಾನ್ ಅಬ್ಬರದ ಆಟದ ಬಲದಿಂದ ಭಾರತ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 271 ರನ್‌ಗಳ ಬೃಹತ್ ಮೊತ್ತ ಪೇರಿಸಿತು.

ಇಶಾನ್ (103; 43ಎ, 4X6, 6X10) ಮತ್ತು ನಾಯಕ ಸೂರ್ಯಕುಮಾರ್ ಯಾದವ್ (63; 30ಎ, 4X4, 6X6) ಮೂರನೇ ವಿಕೆಟ್ ಜೊತೆಯಾಟದಲ್ಲಿ 137 (57ಎಸೆತ) ರನ್ ಸೇರಿಸಿದರು. ದಿಟ್ಟ ಪ್ರತಿಕ್ರಿಯೆ ನೀಡಿದ ನ್ಯೂಜಿಲೆಂಡ್ ಕೇವಲ 46 ರನ್‌ಗಳಿಂದ ಸೋತಿತು. ಫಿನ್ ಅಲೆನ್ (80; 38ಎ, 4X8, 6X6) ಅವರ ಬೀಸಾಟದಿಂದ ಕಿವೀಸ್ ತಂಡವು 19.4 ಓವರ್‌ಗಳಲ್ಲಿ 225 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಈ ಪಂದ್ಯದಲ್ಲಿ ಒಟ್ಟು 496 ರನ್‌ಗಳು ಹರಿದವು. ಅದರಲ್ಲಿ ಒಟ್ಟು 36 ಸಿಕ್ಸರ್‌ಗಳು ದಾಖಲಾದವು.

ಆರಂಭಿಕ ಬ್ಯಾಟರ್ ಸಂಜು (6 ರನ್) ಸತತ ಐದನೇ ಟಿ20 ಪಂದ್ಯದಲ್ಲಿಯೂ ವಿಫಲರಾದರು. ಇದರಿಂದಾಗಿ ಅವರು ಮುಂದಿನ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡದಲ್ಲಿ ಸ್ಥಾನ ಪಡೆಯುವುದು ಅನುಮಾನವಾಗಿದೆ. ವೇಗದ ಬೌಲರ್ ಲಾಕಿ ಫರ್ಗ್ಯುಸನ್ ಎಸೆತದಲ್ಲಿ ಬೆವನ್ ಜೇಕಬ್ಸ್‌ಗೆ ಕ್ಯಾಚಿತ್ತರು.

ಕ್ರೀಸ್‌ನಲ್ಲಿದ್ದ ಅಭಿಷೇಕ್ ಶರ್ಮಾ ಅವರೊಂದಿಗೆ ಸೇರಿಕೊಂಡ ಇಶಾನ್ ಹೊಡಿ ಬಡಿ ಆಟವಾಡಿದರು. ಅಭಿಷೇಕ್ 16 ಎಸೆತಗಳಲ್ಲಿ 30 ರನ್ ಸೂರೆ ಮಾಡಿದರು. ನಾಲ್ಕು ಬೌಂಡರಿ, ಎರಡು ಸಿಕ್ಸರ್ ಸಿಡಿಸಿದರು. ಫರ್ಗ್ಯುಸನ್ ಹಾಕಿದ ಉತ್ತಮ ಲೆಂಗ್ತ್ ಇರುವ ಚುರುಕಾದ ಎಸೆತವನ್ನು ಲಾಫ್ಟ್ ಮಾಡುವ ಶರ್ಮಾ ಪ್ರಯತ್ನ ಕೈಕೊಟ್ಟಿತು. ಚೆಂಡು ಸೀದಾ ಸ್ಟಂಪ್‌ಗೆ ಅಪ್ಪಳಿಸಿತು. ಆದರೆ ಇಲ್ಲಿಂದಲೇ ಕಿವೀಸ್ ಸಂಕಷ್ಟವೂ ಶುರುವಾಯಿತು!

ಇಶಾನ್ ಜೊತೆಗೂಡಿದ ಸೂರ್ಯ ಪ್ರಖರವಾಗಿ ಬೆಳಗಿದರು. ಇಶಾನ್ 28 ಎಸೆತಗಳಲ್ಲಿ 50 ರನ್ ಗಳಿಸಿದರು. ಸ್ಪಿನ್ನರ್ ಈಶ್ ಸೋಧಿ ಹಾಕಿದ 12ನೇ ಓವರ್‌ನಲ್ಲಿ ಇಶಾನ್ 28 (4,4,4,6,4,6) ರನ್ ಹೊಡೆದರು. 27 ವರ್ಷದ ಎಡಗೈ ಬ್ಯಾಟರ್ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಒಂದು ಸಾವಿರ ರನ್ ಗಡಿ ದಾಟಿದರು.

ಇನ್ನೊಂದು ಬದಿಯಲ್ಲಿ ಸೂರ್ಯ ಕೂಡ ಬೀಸಾಟವಾಡಿ, 26 ಎಸೆತಗಳಲ್ಲಿ ಅರ್ಧಶತಕ ಹೊಡೆದರು. ‘ಮುಂಬೈಕರ್’ ಟಿ20 ಕ್ರಿಕೆಟ್‌ನಲ್ಲಿ 3 ಸಾವಿರ ರನ್ ಗಡಿ ಮುಟ್ಟಿದರು. ಮಿಚೆಲ್ ಸ್ಯಾಂಟನರ್ ಹಾಕಿದ ಎಸೆತವನ್ನು ಮುನ್ನುಗ್ಗಿ ಹೊಡೆಯುವ ಯತ್ನದಲ್ಲಿ ಸೂರ್ಯ ಎಡವಿದರು. ವಿಕೆಟ್‌ಕೀಪರ್ ಟೀಮ್‌ಸೀಫರ್ಟ್‌ಸ್ಟಂಪಿಂಗ್‌ಮಾಡಿದರು.

ಕ್ರೀಸ್‌ಗೆ ಬಂದ ಹಾರ್ದಿಕ್ ಪಾಂಡ್ಯ ಕೂಡ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. ಕೇವಲ 17 ಎಸೆತಗಳಲ್ಲಿ 42 ರನ್ ಗಳಿಸಿದರು. 4 ಸಿಕ್ಸರ್ ಮತ್ತು 1 ಬೌಂಡರಿ ಹೊಡೆದರು. ಇಶಾನ್ ಮತ್ತು ಹಾರ್ದಿಕ್ ಜೊತೆಯಾಟದಲ್ಲಿ ಕೇವಲ 18 ಎಸೆತಗಳಲ್ಲಿ 48 ರನ್ ಹರಿದುಬಂದವು. ಜೇಕಬ್ ಡಫಿ ಬೌಲಿಂಗ್‌ನಲ್ಲಿ ಇಶಾನ್ ಔಟಾದರೆ, ಕೈಲ್ ಜೆಮಿಸನ್ ಓವರ್‌ನಲ್ಲಿ ಪಾಂಡ್ಯ ಆಟಕ್ಕೆ ತೆರೆಬಿತ್ತು.

ನ್ಯೂಜಿಲೆಂಡ್ ತಂಡದ ಅಲೆನ್ ಮತ್ತು ರಚಿನ್ ರವೀಂದ್ರ (30; 17ಎ) ಬಹಳಷ್ಟು ಪ್ರತಿರೋಧ ಒಡ್ಡಿದರು. ಆದರೆ ಪ್ರಮುಖ ಬ್ಯಾಟರ್‌ಗಳಿಗೆ ಅರ್ಷದೀಪ್ (51ಕ್ಕೆ5) ಮತ್ತು ಸ್ಪಿನ್ನರ್ ಅಕ್ಷರ್ ಪಟೇಲ್ (33ಕ್ಕೆ3) ಕಡಿವಾಣ ಹಾಕಿದರು. ಆದರೆ ಎಲ್ಲ ಬೌಲರ್‌ಗಳು ಹೆಚ್ಚು ರನ್ ಬಿಟ್ಟುಕೊಟ್ಟರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5ಕ್ಕೆ271 (ಅಭಿಷೇಕ್ ಶರ್ಮಾ 30, ಇಶಾನ್ ಕಿಶನ್ 103, ಸೂರ್ಯಕುಮಾರ್ ಯಾದವ್ 63, ಹಾರ್ದಿಕ್ ಪಾಂಡ್ಯ 42, ಲಾಕಿ ಫರ್ಗ್ಯುಸನ್ 41ಕ್ಕೆ2) ನ್ಯೂಜಿಲೆಂಡ್: 19.4 ಓವರ್‌ಗಳಲ್ಲಿ 225 (ಫಿನ್ ಅಲೆನ್ 80, ರಚಿನ್ ರವೀಂದ್ರ 30, ಡ್ಯಾರಿಲ್ ಮಿಚೆಲ್ 26, ಈಶ್ ಸೋಧಿ 33, ಅರ್ಷದೀಪ್ ಸಿಂಗ್ 51ಕ್ಕೆ5, ಅಕ್ಷರ್ ಪಟೇಲ್ 33ಕ್ಕೆ3) **ಫಲಿತಾಂಶ:** ಭಾರತ ತಂಡಕ್ಕೆ 46 ರನ್ ಜಯ ಮತ್ತು 4–1ರಿಂದ ಸರಣಿ ಗೆಲುವು. ಪಂದ್ಯದ ಆಟಗಾರ: ಇಶಾನ್ ಕಿಶನ್. ಸರಣಿ ಆಟಗಾರ: ಸೂರ್ಯಕುಮಾರ್

ಅಂಕಿ ಅಂಶಗಳು

6 ಸೂರ್ಯಕುಮಾರ್ ಯಾದವ್ ಗೆದ್ದ ಸರಣಿ ಶ್ರೇಷ್ಠ ಪ್ರಶಸ್ತಿಗಳು. ವಿರಾಟ್ ಕೊಹ್ಲಿ ಮತ್ತು ವನಿಂದು ಹಸರಂಗ (ಶ್ರೀಲಂಕಾ) ಜೊತೆಗೆ ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಬಾರಿ ಈ ಗೌರವಕ್ಕೆ ಪಾತ್ರರಾದರು

36 ಈ ಪಂದ್ಯದಲ್ಲಿ ದಾಖಲಾದ ಒಟ್ಟು ಸಿಕ್ಸರ್‌ಗಳು. ಟಿ20 ಕ್ರಿಕೆಟ್ ಇತಿಹಾಸದಲ್ಲಿ ಎರಡನೇ ಅತಿಹೆಚ್ಚು ಸಿಕ್ಸರ್ ದಾಖಲೆ ಇದಾಗಿದೆ

496 ಪಂದ್ಯದಲ್ಲಿ ಎರಡು ತಂಡಗಳ ಒಟ್ಟು ರನ್. ಇದು ಟಿ20 ಪಂದ್ಯವೊಂದರಲ್ಲಿ ದಾಖಲಾದ ಎರಡನೇ ಗರಿಷ್ಠ ರನ್ ದಾಖಲೆಯಾಗಿದೆ

ಟಿ20: ಐಸಿಸಿ ಪೂರ್ಣ ಸದಸ್ಯ ರಾಷ್ಟ್ರದ ವಿರುದ್ಧ ಗರಿಷ್ಠ ರನ್ ದಾಖಲೆ

ರನ್	ತಂಡ	ಎದುರಾಳಿ	ತಾಣ	ವರ್ಷ
2ಕ್ಕೆ 304	ಇಂಗ್ಲೆಂಡ್	ದಕ್ಷಿಣ ಆಫ್ರಿಕಾ	ಮ್ಯಾಂಚೆಸ್ಟರ್	2025
6ಕ್ಕೆ 297	ಭಾರತ	ಬಾಂಗ್ಲಾದೇಶ	ಹೈದರಾಬಾದ್	2024
1ಕ್ಕೆ 283	ಭಾರತ	ದಕ್ಷಿಣ ಆಫ್ರಿಕಾ	ಜೋಹಾನೆಸ್‌ಬರ್ಗ್	2024
3ಕ್ಕೆ 278	ಅಫ್ಗಾನಿಸ್ತಾನ	ಐರ್ಲೆಂಡ್	ಡೆಹ್ರಾಡೂನ್	2019
5ಕ್ಕೆ 271	ಭಾರತ	ನ್ಯೂಜಿಲೆಂಡ್	ತಿರುವನಂತಪುರ	2026

ನಾಕೌಟ್ ತಲುಪಲು ಪಡಿಕ್ಕಲ್ ಪಡೆಗೆ ಜಯ ಅನಿವಾರ್ಯ

ಕರ್ನಾಟಕಕ್ಕೆ ಇನಿಂಗ್ಸ್ ಮುನ್ನಡೆ ‘ಶ್ರೇಯ’

ಪ್ರಜಾವಾಣಿ ವಾರ್ತೆ

ಮೊಹಾಲಿ: ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಕರ್ನಾಟಕದ ಪಾಲಿಗೆ ಮತ್ತೊಮ್ಮೆ ‘ಆಪದ್ಬಾಂಧವ’ನಾದರು. ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ಎಲೀಟ್ ಬಿ ಗುಂಪಿನ ಪಂದ್ಯದಲ್ಲಿ ಪಂಜಾಬ್ ಎದುರು ಕರ್ನಾಟಕ ತಂಡವು 7 ರನ್‌ಗಳ ಮಹತ್ವದ ಮುನ್ನಡೆ ಗಳಿಸಲು ಶ್ರೇಯಸ್ ಬ್ಯಾಟಿಂಗ್ ಕಾರಣವಾಯಿತು.


ಶ್ರೇಯಸ್ ಗೋಪಾಲ್

ಈ ಸಲದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ನಾಕೌಟ್ ಹಂತ ತಲುಪಲು ಈಗ ನಡೆಯುತ್ತಿರುವ ಪಂಜಾಬ್ ಎದುರಿನ ಪಂದ್ಯದಲ್ಲಿ ಜಯಿಸುವುದು ಕರ್ನಾಟಕ ತಂಡಕ್ಕೆ ಅಗತ್ಯವಾಗಿದೆ. ಆದ್ದರಿಂದ ಕೊನೆಯ ದಿನವಾದ ಭಾನುವಾರ ಪಂಜಾಬ್ ತಂಡವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕಬೇಕು. ನಂತರ ಗುರಿ ಬೆನ್ನಟ್ಟಿ ಗೆಲ್ಲಬೇಕು. ಆದರೆ ಶನಿವಾರ ದಿನದಾಟದ ಅಂತ್ಯಕ್ಕೆ ಪಂಜಾಬ್ ತಂಡವು ಎರಡನೇ ಇನಿಂಗ್ಸ್‌ನಲ್ಲಿ 45 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 119 ರನ್ ಗಳಿಸಿದೆ. ಒಟ್ಟು 112 ರನ್‌ಗಳ ಮುನ್ನಡೆ ಸಾಧಿಸಿದೆ. ನಾಯಕ ಉದಯ್ ಸಹರನ್ (ಬ್ಯಾಟಿಂಗ್ 63; 110ಎ) ಮತ್ತು ಅನ್ಮೋಲ್‌ಪ್ರೀತ್ ಸಿಂಗ್ (ಬ್ಯಾಟಿಂಗ್ 6) ಕ್ರೀಸ್‌ನಲ್ಲಿದ್ದಾರೆ.

ಬಿ ಗುಂಪಿನಲ್ಲಿ 28 ಅಂಕ ಗಳಿಸಿರುವ ಮಧ್ಯಪ್ರದೇಶವು ಅಗ್ರ ಸ್ಥಾನದೊಂದಿಗೆ ಈಗಾಗಲೇ ಕ್ವಾರ್ಟರ್‌ಫೈನಲ್ ಪ್ರವೇಶಿಸಿದೆ. ಎರಡನೇ ಸ್ಥಾನದಲ್ಲಿ ಸೌರಾಷ್ಟ್ರ (25 ಅಂಕ) ಮತ್ತು ಮೂರನೇ ಸ್ಥಾನದಲ್ಲಿ ಮಹಾರಾಷ್ಟ್ರ (24 ಅಂಕ) ಇದ್ದಾರೆ. ಆದ್ದರಿಂದ 21 ಅಂಕ ಗಳಿಸಿರುವ ಕರ್ನಾಟಕವು ಪಂಜಾಬ್ ವಿರುದ್ಧ ಗೆದ್ದರೆ 6 ಅಂಕಗಳು ಲಭಿಸುತ್ತವೆ. ಆಗ 27 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದು ನಾಕೌಟ್ ಪ್ರವೇಶಿಸುವುದು ಸುಲಭವಾಗಲಿದೆ. ಒಂದೊಮ್ಮೆ ಪಂದ್ಯ ಡ್ರಾ ಆದರೆ ಕರ್ನಾಟಕಕ್ಕೆ ಕೇವಲ 3 ಅಂಕ ದೊರೆಯಲಿದ್ದು, ನಾಕೌಟ್ ಪ್ರವೇಶ ಸಾಧ್ಯವಾಗುವುದಿಲ್ಲ. ಆದ್ದರಿಂದ ಗೆಲ್ಲಲೇಬೇಕಾದ ಒತ್ತಡ ದೇವದತ್ತ ಪಡಿಕ್ಕಲ್ ಬಳಗದ ಮುಂದಿದೆ.

ಶ್ರೇಯಸ್ ಹೋರಾಟ: ಪಂಜಾಬ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 309 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಕರ್ನಾಟಕ ತಂಡವು 110.2 ಓವರ್‌ಗಳಲ್ಲಿ 316 ರನ್ ಗಳಿಸಿತು. ಶ್ರೇಯಸ್ ಗೋಪಾಲ್ (77; 195ಎ, 4X6) ಅವರ ದಿಟ್ಟ ಆಟದಿಂದ ಮುನ್ನಡೆ ಸಾಧ್ಯವಾಯಿತು.

ಶುಕ್ರವಾರದ ದಿನದಾಟದ ಅಂತ್ಯಕ್ಕೆ ಕರ್ನಾಟಕವು 6ಕ್ಕೆ255 ರನ್ ಗಳಿಸಿತ್ತು. ಮುನ್ನಡೆ ಸಾಧಿಸಲು 54 ರನ್‌ಗಳ ಅಗತ್ಯವಿತ್ತು.

ಕ್ರೀಸ್‌ನಲ್ಲಿದ್ದ ಶ್ರೇಯಸ್ ಗೋಪಾಲ್ ಹಾಗೂ ವಿದ್ಯಾಧರ್ ಪಾಟೀಲ ಅವರು ಶನಿವಾರ ಆಟ ಮುಂದುವರಿಸಿದರು. 11 ರನ್‌ಗಳು ಸೇರುವಷ್ಟರಲ್ಲಿ ಎರಡು ವಿಕೆಟ್‌ಗಳು ಪತನವಾದವು. ವಿದ್ಯಾಧರ್ (34 ರನ್) ಮತ್ತು ಶಿಖರ್ ಶೆಟ್ಟಿ (1 ರನ್) ಪೆವಿಲಿಯನ್ ಸೇರಿದರು. ಇದರಿಂದಾಗಿ ಹಿನ್ನಡೆಯ ಭೀತಿ ಎದುರಾಗಿತ್ತು.

ಮಂಜಿನಿಂದಾಗಿ ವಿಳಂಬ

ಕರ್ನಾಟಕ ಮತ್ತು ಪಂಜಾಬ್ ನಡುವಣ ಪಂದ್ಯದ ಮೂರನೇ ದಿನದಾಟವು ದಟ್ಟ ಮಂಜಿನಿಂದಾಗಿ ಶನಿವಾರ ಬೆಳಿಗ್ಗೆ ತಡವಾಗಿ ಆರಂಭವಾಯಿತು. ಬೆಳಗಿನ ಅವಧಿಯಲ್ಲಿ ಆಟವೇ ನಡೆಯಲಿಲ್ಲ.

ಅದರಿಂದಾಗಿ 11.30ಕ್ಕೆ ಊಟದ ವಿರಾಮ ನೀಡಲಾಯಿತು. ಮಧ್ಯಾಹ್ನ 12.10ಕ್ಕೆ ಆಟ ಆರಂಭವಾಯಿತು. ಭಾನುವಾರವೂ ಇಂತಹದೇ ವಾತಾವರಣ ಇರುವ ಸಾಧ್ಯತೆ ಇದೆ ಎನ್ನಲಾಗಿದೆ.

ಈ ಹಂತದಲ್ಲಿ ಶ್ರೇಯಸ್ ಜೊತೆಗೂಡಿದ ಮೊಹ್ಸಿನ್ ಖಾನ್ (10; 34ಎ, 6X1) ಒಂಬತ್ತನೇ ವಿಕೆಟ್ ಜೊತೆಯಾಟದಲ್ಲಿ 26 ರನ್ ಸೇರಿಸಿದರು. ಇದರಿಂದಾಗಿ ತಂಡವು ಮುನ್ನಡೆ ಸಾಧಿಸಿತು. ಶ್ರೇಯಸ್ ಅವರು ತಂಡವನ್ನು ಹಿನ್ನಡೆಯ ಆತಂಕದಿಂದ ಪಾರುಮಾಡಿದರು. ಅವರು ಅನ್ಮೋಲ್‌ಜೀತ್ ಸಿಂಗ್ ಅವರ ಬೌಲಿಂಗ್‌ನಲ್ಲಿ ಸುಖದೀಪ್‌ಗೆ ಕ್ಯಾಚಿತ್ತರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಂಜಾಬ್: 92 ಓವರ್‌ಗಳಲ್ಲಿ 309. ಕರ್ನಾಟಕ: 110.2 ಓವರ್‌ಗಳಲ್ಲಿ 316 (ಶ್ರೇಯಸ್ ಗೋಪಾಲ್ 77, ವಿದ್ಯಾಧರ್ ಪಾಟೀಲ 34, ಶಿಖರ್ ಶೆಟ್ಟಿ 1, ಮೊಹ್ಸಿನ್ ಖಾನ್ 10, ಪ್ರಸಿದ್ಧಕೃಷ್ಣ ಔಟಾಗದೆ 3,ಸುಖದೀಪ್ ಭಜ್ವಾ 42ಕ್ಕೆ3, ಹರಪ್ರೀತ್ ಬ್ರಾರ್ 125ಕ್ಕೆ4, ಅನ್ಮೋಲ್‌ಜೀತ್ ಸಿಂಗ್ 62ಕ್ಕೆ2) ಎರಡನೇ ಇನಿಂಗ್ಸ್: ಪಂಜಾಬ್: 45 ಓವರ್‌ಗಳಲ್ಲಿ 3ಕ್ಕೆ119 (ಅಭಿಜಿತ್ ಗಾರ್ಗ್ 33, ಉದಯ ಸಹರನ್ ಬ್ಯಾಟಿಂಗ್ 63, ಅನ್ಮೋಲ್‌ಪ್ರೀತ್ ಸಿಂಗ್ ಬ್ಯಾಟಿಂಗ್ 6, ಶಿಖರ್ ಶೆಟ್ಟಿ 43ಕ್ಕೆ1, ಶ್ರೇಯಸ್ ಗೋಪಾಲ್ 25ಕ್ಕೆ1, ಮೊಹ್ಸಿನ್ ಖಾನ್ 29ಕ್ಕೆ1)

ಚಿಟಿಕೆ ಸುದ್ದಿ

ಭಾರತಕ್ಕೆ ಮಣಿದ ನೇಪಾಳ

ಪೋಖರಾ (ನೇಪಾಳ) (ಪಿಟಿಐ): ಪರ್ಲ್ ಫೆರ್ನಾಂಡಿಸ್ ಅವರ ಆಟದ ನೆರವಿನಿಂದ ಭಾರತ ತಂಡವು ಶನಿವಾರ ಸ್ಯಾಫ್ (ದಕ್ಷಿಣ ಏಷ್ಯಾ ಫುಟ್‌ಬಾಲ್ ಫೆಡರೇಷನ್) 19 ವರ್ಷದೊಳಗಿನ ಬಾಲಕಿಯರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ 1–0 ಗೋಲಿನಿಂದ ನೇಪಾಳ ತಂಡವನ್ನು ಮಣಿಸಿ ಶುಭಾರಂಭ ಮಾಡಿತು.

ಪೋಖರಾ ರಂಗಶಾಲಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪರ್ಲ್ ಅವರು 49ನೇ ನಿಮಿಷದಲ್ಲಿ ಹೊಡೆದ ಗೋಲು ಗೆಲುವಿಗೆ ನಿರ್ಣಾಯಕವಾಯಿತು.

ದಿನದ ಮತ್ತೊಂದು ಪಂದ್ಯದಲ್ಲಿ ಬಾಂಗ್ಲಾದೇಶ 12–0ಯಿಂದ ಭೂತಾನ್ ತಂಡವನ್ನು ಮಣಿಸಿತು. ಭಾರತ ಫೆ.2ರಂದು ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ರಣವೀರ್‌ಗೆ ಪ್ರಶಸ್ತಿ ಡಬಲ್


ಪ್ರಶಸ್ತಿ ಗೆದ್ದ ರಣವೀರ್ ಮತ್ತು ಮೆಹರ್

ಬೆಂಗಳೂರು: ಕರ್ನಾಟಕದ ರಣವೀರ್ ಗವಳಿ ಇಲ್ಲಿನ ಮ್ಯಾಟ್ ಸ್ಪೋರ್ಟ್ಸ್ ಕ್ರೀಡಾಂಗಣದಲ್ಲಿ ಶನಿವಾರ ಮುಕ್ತಾಯಗೊಂಡ 14 ವರ್ಷದೊಳಗಿನವರ ಚಾಂಪಿಯನ್‌ಷಿಪ್ ಸರಣಿಯ ಟೆನಿಸ್ ಟೂರ್ನಿಯಲ್ಲಿ ಡಬಲ್ ಪ್ರಶಸ್ತಿ ಗೆದ್ದುಕೊಂಡರು.

ಬಾಲಕರ ಸಿಂಗಲ್ಸ್‌ನ ಫೈನಲ್‌ನಲ್ಲಿ ರಣವೀರ್ 7-6 (4), 6-2ರಿಂದ ಏಗನ್ ಬಾಲಕುಮಾರ್ ವಿರುದ್ಧ ಗೆಲುವು ಸಾಧಿಸಿದರು. ರಣವೀರ್ ಮತ್ತು ಧನುಷ್ ಎಂ. ಜೋಡಿಯು ಡಬಲ್ಸ್‌ನಲ್ಲಿ 6-2, 6-0ರಿಂದ ದರ್ಶ್ ಮಲ್ವಾನ್ ಮತ್ತು ಪಾರ್ಥ್ ತ್ಯಾಗಿ ಅವರನ್ನು ಮಣಿಸಿ ಚಾಂಪಿಯನ್ ಆಯಿತು.

ಬಾಲಕಿಯರ ಸಿಂಗಲ್ಸ್‌ನಲ್ಲಿ ಮೆಹರ್ ಟಿ. 6-3, 6-3ರಿಂದ ಪ್ರಿಯಾಲ್ ಸರಾಫ್ ಅವರನ್ನು ಸೋಲಿಸಿ ಕಿರೀಟ ಗೆದ್ದರು. ಡಬಲ್ಸ್ ಫೈನಲ್‌ನಲ್ಲಿ ಕನಿಶಾ ಸುಭಾಷ್ ಮತ್ತು ಪ್ರಣೀಕಾ ನಾಯ್ಕ್ ಎಂ. 6-2, 4-6, 10-7ರಿಂದ ಸಾಯಿ ಹಾಸಿನಿ ಪರ್ವತನೇನಿ ಮತ್ತು ದಿಯಾ ಬೆಹೆರಾ ಅವರನ್ನು ಮಣಿಸಿದರು.

ಯೋಗೇಂದ್ರಗೆ ಕಂಚು



ಬೆಂಗಳೂರು: ಮೈಸೂರಿನ ಅಥ್ಲೀಟ್ ಎಂ. ಯೋಗೇಂದ್ರ ಅವರು ಶನಿವಾರ 46ನೇ ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್‌ನ 2000 ಮೀಟರ್ ಸ್ಟಿಪಲ್ ಚೇಸ್ ಓಟದಲ್ಲಿ ಕಂಚಿನ ಪದಕ ಗೆದ್ದರು.

ಯೋಗೇಂದ್ರ ಅವರಿಗೆ ಅಥ್ಲೆಟಿಕ್ ತರಬೇತುದಾರ ಡಾ.ಟಿ.ಜೆ. ರಾಜೀವ್ ಪದಕ ಪ್ರದಾನ ಮಾಡಿದರು. ತಿರುವನಂತಪುರದ ಕೇರಳ ವಿಶ್ವವಿದ್ಯಾಲಯ ಮೈದಾನದಲ್ಲಿ ಜ.28ರಿಂದ ನಡೆಯುತ್ತಿರುವ ಕೂಟ ಫೆ.1ರಂದು ಮುಕ್ತಾಯಗೊಳ್ಳಲಿದೆ.

ಮೂರು ಸೆಟ್‌ಗಳ ಫೈನಲ್‌ನಲ್ಲಿ ಸೋತ ಅಗ್ರ ಶ್ರೇಯಾಂಕದ ಸಬಲೆಂಕಾ

ರಿಬಾಕಿನಾಗೆ ಆಸ್ಟ್ರೇಲಿಯಾ ಓಪನ್ ಕಿರೀಟ

ಮೆಲ್ಬರ್ನ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಅವರನ್ನು ಉತ್ತಮ ಹೋರಾಟದ ಫೈನಲ್‌ನಲ್ಲಿ ಮಣಿಸಿದ ಎಲಿನಾ ರಿಬಾಕಿನಾ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಇದು ಕಜಾಕಸ್ತಾನದ ಆಟಗಾರ್ತಿಗೆ ಎರಡನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ.

ಭರ್ಜರಿ ಸರ್ವ್‌ಗಳನ್ನು ಮಾಡುವ ಐದನೇ ಶ್ರೇಯಾಂಕದ ಆಟಗಾರ್ತಿ, ಶನಿವಾರ ರಾಡ್ ಲೇವರ್ ಅರೇನಾದಲ್ಲಿ 6–4, 4–6, 6–4 ರಿಂದ ಸಬಲೆಂಕಾ ವಿರುದ್ಧ ಜಯಗಳಿಸಿದರು. ಚೆಂಡನ್ನು ಬಲವಾಗಿ ಹೊಡೆದಟ್ಟುವ ಇಬ್ಬರು ಆಟಗಾರ್ತಿಯರ ನಡುವಣ ಈ ಪಂದ್ಯ 2ಗಂಟೆ 18 ನಿಮಿಷ ನಡೆಯಿತು.

ಈ ಮೂಲಕ ಕಜಾಕಸ್ತಾನದ ರಿಬಾಕಿನಾ 2023ರ ಫೈನಲ್‌ನಲ್ಲಿ ಸಬಲೆಂಕಾ ಕೈಲಿ ಅನುಭವಿಸಿದ ಸೋಲಿಗೆ ಮುಯ್ಯಿ ತೀರಿಸಿಕೊಂಡರು. 26 ವರ್ಷ ವಯಸ್ಸಿನ ರಿಬಾಕಿನಾ ಅವರು ಈ ಹಿಂದೆ 2022ರಲ್ಲಿ ವಿಂಬಲ್ಡನ್‌ನಲ್ಲಿ ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸಿದ್ದರು.

27 ವರ್ಷ ವಯಸ್ಸಿನ ಸಬಲೆಂಕಾ ಅವರಿಗೆ ಈ ಸೋಲು ನಿರಾಸೆ ಮೂಡಿಸಿತು. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಎರಡನೇ ಬಾರಿ ಅಮೆರಿಕ ಓಪನ್ ಗೆದ್ದುಕೊಂಡಿದ್ದ ಅವರು ಫ್ರೆಂಚ್ ಓಪನ್ ಮತ್ತು ಅಮೆರಿಕ ಓಪನ್ ಫೈನಲ್ಸ್‌ನಲ್ಲಿ ಸೋತಿದ್ದರು.

ಸತತ ನಾಲ್ಕನೇ ಬಾರಿ ಆಸ್ಟ್ರೇಲಿಯನ್ ಓಪನ್ ಫೈನಲ್ ತಲುಪಿದ್ದ ಅವರು ಇದುವರೆಗೆ ಪ್ರಾಬಲ್ಯ ಸಾಧಿಸಿದ್ದು, ಫೈನಲ್ ನಂತರ ಕಣ್ಣೀರನ್ನು ತಡೆಯಲಾಗಲಿಲ್ಲ.

ರಿಬಾಕಿನಾ ಆರಂಭದಲ್ಲೇ ಎದುರಾಳಿಯ ಸರ್ವ್ ಮುರಿದು 2–0 ಮುನ್ನಡೆ ಪಡೆದರು. ಉತ್ತಮ ಹೊಡೆತಗಳು ಹಾಗೂ ಸರ್ವ್‌ಗಳ ಮೂಲಕ 37 ನಿಮಿಷಗಳಲ್ಲಿ ಮೊದಲ ಸೆಟ್ ಗೆದ್ದರು. ಸಬಲೆಂಕಾ 2026ರಲ್ಲಿ ಒಂದೂ ಸೆಟ್ ಕಳೆದುಕೊಂಡಿರಲಿಲ್ಲ.

ಎರಡನೇ ಸೆಟ್‌ನ ಎರಡನೇ ಗೇಮ್ ಒತ್ತಡದಿಂದ ಕೂಡಿತ್ತು. ಈ ಗೇಮ್‌ನಲ್ಲಿ ರಿಬಾಕಿನಾ ಮೂರು ಬಾರಿ ಬ್ರೇಕ್ ಪಾಯಿಂಟ್ ರಕ್ಷಿಸಿ 1–1 ಸಮ ಮಾಡಿಕೊಂಡರು.

ನಿಧಾನವಾಗಿ ಕುದುರಿಕೊಂಡ ಸಬಲೆಂಕಾ ಅತ್ಯುತ್ತಮ ರ‍್ಯಾಲಿಗಳ ಮೂಲಕ ಏಳನೇ ಗೇಮ್ ಉಳಿಸಿಕೊಂಡು 4–3 ಮುನ್ನಡೆ ಗಳಿಸಿದರು. ಈ ವೇಳೆ ಸರಾಗವಾಗಿ ಆಡತೊಡಗಿದ ಸಬಲೆಂಕಾ ಎರಡನೇ ಸೆಟ್ ಗೆದ್ದರಲ್ಲದೇ, ಮೂರನೇ ಸೆಟ್‌ನಲ್ಲಿ 3–0 ಮುನ್ನಡೆ ಪಡೆದು ಗೆಲುವಿನತ್ತ ಸಾಗಿದಂತೆ ಕಂಡಿತು.

ಮೂರನೇ ಸೆಟ್‌ನ ಎರಡನೇ ಗೇಮ್‌ನಲ್ಲಿ ರಿಬಾಕಿನಾ ಅವರ ಸರ್ವ್ ಮುರಿದ ಸಬಲೆಂಕಾ ಬೇಗನೇ ಮುನ್ನಡೆ ಸಂಪಾದಿಸಿದರು. ಒಂದೂ ಸೆಟ್ ಕಳೆದುಕೊಳ್ಳದೇ ಫೈನಲ್ ತಲುಪಿದ್ದ ರಿಬಾಕಿನಾ ಕೂಡ ಕೆಲಕಾಲ ಅಧೀರರಾದಂತೆ ಕಂಡರು.

ಆದರೆ ಮರು ಗೇಮ್‌ನಲ್ಲಿ ತಮ್ಮ ಸರ್ವ್ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದ ರಿಬಾಕಿನಾ ಎದುರಾಳಿಯ ಸರ್ವ್ ಮುರಿದು 3–3 ಸಮಮಾಡಿಕೊಂಡರು. ಪಂದ್ಯ ರೋಚಕವಾಗುವಂತೆ ಕಂಡಿತು. ಈ ಹಂತದಲ್ಲಿ ಸಂಯಮವಹಿಸಿ ಆಡಿದ ಅವರು ಸಬಲೆಂಕಾ ಅವರ ಸರ್ವ್ ಮುರಿದು, ಸತತ ನಾಲ್ಕನೇ ಗೇಮ್ ಗೆಲ್ಲುವ ಮೂಲಕ 4–3 ಗಳಿಸಿದರು. ಆ ಮೂಲಕ ಗೆಲುವಿಗೆ ಹತ್ತಿರವಾದರು. ಆರನೇ ‘ಏಸ್’ ಮೂಲಕ ಅವರು ಗೆಲುವು ಪೂರೈಸಿದರು.


ಸಬಲೆಂಕಾ ಈ ಪಂದ್ಯ ಗೆಲ್ಲುವ ನೆಚ್ಚಿನ ಆಟಗಾರ್ತಿಯಾಗಿದ್ದರೂ, ರಿಬಾಕಿನಾ ಸಹ ಇತ್ತೀಚಿನ ತಿಂಗಳಲ್ಲಿ ಉತ್ತಮ ಲಯದಲ್ಲಿದ್ದರು. ಡಿಸೆಂಬರ್‌ನಲ್ಲಿ ಡಬ್ಲ್ಯುಟಿಎ ಫೈನಲ್‌ನಲ್ಲಿ ಸಬಲೆಂಕಾ ವಿರುದ್ಧ ಜಯಗಳಿಸಿದದ್ದರು.

ಎಂಟರ ಘಟ್ಟದಲ್ಲಿ, ಎರಡನೇ ಶ್ರೇಯಾಂಕದ ಇಗಾ ಶ್ವಾಂಟೆಕ್ ಅವರನ್ನು ಮಣಿಸಿದ್ದ ರಿಬಾಕಿನಾ ಸೆಮಿಫೈನಲ್‌ನಲ್ಲಿ ಆರನೇ ಶ್ರೇಯಾಂಕದ ಜೆಸಿಕಾ ಪೆಗುಲಾ ಅವರನ್ನು ಸೋಲಿಸಿದ್ದರು.

ಮಾಸ್ಕೊದಲ್ಲಿ ಜನಿಸಿದ ರಿಬಾಕಿನಾ, ತಮ್ಮ 19ನೇ ವಯಸ್ಸಿನಲ್ಲಿ (2018) ಹಣಕಾಸಿನ ತೊಂದರೆಯ ಕಾರಣ ಕಜಾಕಸ್ತಾನಕ್ಕೆ ವಲಸೆ ಹೋಗಿದ್ದರು.

ದಾಖಲೆ ಹೊಸ್ತಿಲಲ್ಲಿ ಜೊಕೊವಿಚ್, ಅಲ್ಕರಾಜ್


ಜೊಕೊವಿಚ್


ಅಲ್ಕರಾಜ್

ಮೆಲ್ಬರ್ನ್ (ಎಪಿ): ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಕಿರೀಟದ ಹೊಸ್ತಿಲಲ್ಲಿರುವ ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ ಅವರು ಭಾನುವಾರ ಆಸ್ಟ್ರೇಲಿಯಾ ಓಪನ್ ಪುರುಷರ ಸಿಂಗಲ್ಸ್‌ನ ಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರನ್ನು ಎದುರಿಸಲಿದ್ದಾರೆ.

ಮೆಲ್ಬರ್ನ್ ಪಾರ್ಕ್‌ನಲ್ಲಿ 11ನೇ ಬಾರಿ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ 38 ವರ್ಷದ ಜೊಕೊವಿಚ್ ಅವರು ಸೆಮಿಫೈನಲ್‌ನಲ್ಲಿ ಇಟಲಿಯ ಯಾನಿಕ್ ಸಿನ್ನರ್ ಅವರಿಗೆ ಆಘಾತ ನೀಡಿದ್ದರು. ಪ್ರಸ್ತುತ 24 ಗ್ರ್ಯಾನ್ ಸ್ಲಾಮ್‌ಗಳೊಂದಿಗೆ ಆಸ್ಟ್ರೇಲಿಯಾದ ಮಾರ್ಗರೇಟ್ ಕೋರ್ಟ್ ಅವರ ದಾಖಲೆ ಸರಿಗಟ್ಟಿರುವ ಜೊಕೊವಿಚ್, ಈ ಬಾರಿ ಪ್ರಶಸ್ತಿ ಗೆದ್ದರೆ ಇತಿಹಾಸ ನಿರ್ಮಿಸಲಿದ್ದಾರೆ.

ಸ್ಪೇನ್‌ನ ತಾರೆ ಅಲ್ಕರಾಜ್ ಅವರು ಇಲ್ಲಿ ಮೊದಲ ಬಾರಿ ಪ್ರಶಸ್ತಿ ಗೆಲ್ಲುವ ಛಲದಲ್ಲಿದ್ದಾರೆ. 22 ವರ್ಷದ ಅವರು ಈಗಾಗಲೇ ಇತರ ಮೂರು ಗ್ರ್ಯಾನ್‌ಸ್ಲಾಮ್‌ಗಳನ್ನು ತಲಾ ಎರಡು ಬಾರಿ ಗೆದ್ದಿದ್ದಾರೆ. ಇಲ್ಲಿ ಚಾಂಪಿಯನ್ ಆದರೆ ನಾಲ್ಕೂ ಗ್ರ್ಯಾನ್‌ಸ್ಲಾಮ್ ಕಿರೀಟ ಮುಡಿಗೇರಿಸಿಕೊಂಡ ಅತಿ ಕಿರಿಯ ವಯಸ್ಸಿನ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗುವರು. ಸದ್ಯ ಈ ದಾಖಲೆ ಅವರದೇ ದೇಶದ ರಫೆಲ್ ನಡಾಲ್ (24ನೇ ವಯಸ್ಸಿನಲ್ಲಿ) ಹೆಸರಿನಲ್ಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸೋನಿ ಸ್ಪೋರ್ಟ್ಸ್


ಮಹಿಳಾ ಸಿಂಗಲ್ಸ್ ಟ್ರೋಫಿಯೊಂದಿಗೆ ಕಜಾಕಸ್ತಾನದ ಎಲಿನಾ ರಿಬಾಕಿನಾ ಎಪಿ/ಪಿಟಿಐ ಚಿತ್ರ

ಮುಯ್ಯಿ ತೀರಿಸಿಕೊಳ್ಳುವತ್ತ ಭಾರತ ಚಿತ್ತ

ಯುವ ವಿಶ್ವಕಪ್: ಆಯುಷ್ ಪಡೆಗೆ ಪಾಕಿಸ್ತಾನ ಸವಾಲು

ಬುಲವಾಯೊ (ಪಿಟಿಐ): ಐದು ಸಲದ ಚಾಂಪಿಯನ್ ಭಾರತ ಯುವ ತಂಡವು ಭಾನುವಾರ 19 ವರ್ಷದೊಳಗಿನವರ ವಿಶ್ವಕಪ್ ಏಕದಿನ ಕ್ರಿಕೆಟ್ ಟೂರ್ನಿ ಸೂಪರ್ ಸಿಕ್ಸ್ ಪಂದ್ಯದಲ್ಲಿ ‘ಬದ್ಧ ಪ್ರತಿಸ್ಪರ್ಧಿ’ ಪಾಕಿಸ್ತಾನ ಯುವಪಡೆಯನ್ನು ಎದುರಿಸಲಿದೆ.

ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರು ತಂಡದೊಂದಿಗೆ ಚುಟುಕು ಸಂಭಾಷಣೆ ನಡೆಸಿದ್ದಾರೆ. ಅವರ ಸಲಹೆಗಳಿಂದಾಗಿ ಯುವ ಆಟಗಾರರಲ್ಲಿ ಹೊಸ ಹುರುಪು ಮಾಡಿದೆ.

ಕಳೆದ ಡಿಸೆಂಬರ್‌ನಲ್ಲಿ ನಡೆದಿದ್ದ 19 ವರ್ಷದೊಳಗಿನವರ ಏಷ್ಯಾಕಪ್ ಫೈನಲ್‌ನಲ್ಲಿ ಪಾಕ್ ಎದುರು ಅನುಭವಿಸಿದ್ದ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ಭಾರತ ಇದೆ. ಅದೇ ಟೂರ್ನಿಯ ಗುಂಪು ಹಂತದ ಪಂದ್ಯದಲ್ಲಿ ಭಾರತವು ಪಾಕ್ ತಂಡವನ್ನು 90 ರನ್‌ಗಳಿಂದ ಮಣಿಸಿತ್ತು. ಪಾಕ್ ಆಟಗಾರರ ಹಸ್ತಲಾಘವ ಮಾಡದಿರುವ ತನ್ನ ನಿಲುವನ್ನು ಭಾರತ ತಂಡವು ಈ ಪಂದ್ಯದಲ್ಲಿಯೂ ಮುಂದುವರಿಸಲಿದೆ.


ಆಯುಷ್ ಮ್ಹಾತ್ರೆ

ಆಯುಷ್ ಮ್ಹಾತ್ರೆ ನಾಯಕತ್ವದ ತಂಡವು ಈ ಟೂರ್ನಿಯಲ್ಲಿ ಇದುವರೆಗೆ ಉತ್ತಮವಾಗಿ ಆಡಿದೆ. ಅಮೆರಿಕ, ಬಾಂಗ್ಲಾದೇಶ ಮತ್ತು ನ್ಯೂಜಿಲೆಂಡ್ ತಂಡಗಳ ಎದುರು ಗುಂಪು ಹಂತದಲ್ಲಿ ಗೆಲುವು ಸಾಧಿಸಿತ್ತು. ಸೂಪರ್ ಸಿಕ್ಸ್ ಹಂತದ ಮೊದಲ ಪಂದ್ಯದಲ್ಲಿ ಆತಿಥೇಯ ಜಿಂಬಾಬ್ವೆ ಎದುರು 204 ರನ್‌ಗಳಿಂದ ಗೆದ್ದಿತ್ತು. ಆದರೆ ಪಾಕ್ ತಂಡದಲ್ಲಿ ಕಠಿಣ ಪೈಪೋಟಿಯೊಡ್ಡುವ ಸಾಮರ್ಥ್ಯದ ಆಟಗಾರರು ಇದ್ದಾರೆ.

ಇನ್ನೊಂದೆಡೆ; ಪಾಕಿಸ್ತಾನ ತಂಡವು ಗುಂಪು ಹಂತದ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ಎದುರು ಸೋತಿತ್ತು. ನಂತರದ ಎರಡು ಪಂದ್ಯಗಳಲ್ಲಿ ಸ್ಕಾಟ್ಲೆಂಡ್ ಮತ್ತು ಜಿಂಬಾಬ್ವೆ ಎದುರು ಗೆದ್ದು ಸೂಪರ್ ಸಿಕ್ಸ್ ಪ್ರವೇಶಿಸಿದೆ. ಈ ಸುತ್ತಿನ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧವೂ ಎಂಟು ವಿಕೆಟ್‌ಗಳಿಂದ ಗೆದ್ದಿತ್ತು.

ಪಂದ್ಯ ಆರಂಭ: ಮಧ್ಯಾಹ್ನ 1

ರಾಷ್ಟ್ರೀಯ ಸುತ್ತಿಗೆ ಕರ್ನಾಟಕ ತಂಡ

ಬೆಂಗಳೂರು: ಕರ್ನಾಟಕ ತಂಡವು ಇಲ್ಲಿ ನಡೆದ ಖೇಲೊ ಇಂಡಿಯಾ– ಅಸ್ಮಿತಾ 13 ವರ್ಷದೊಳಗಿನ ಬಾಲಕಿಯರ ಫುಟ್‌ಬಾಲ್ ಲೀಗ್ (ದಕ್ಷಿಣ ವಲಯ) ನಲ್ಲಿ ಪ್ರಶಸ್ತಿ ಗೆದ್ದು, ರಾಷ್ಟ್ರೀಯ ಸುತ್ತಿನ ಸ್ಪರ್ಧೆಗೆ ಅರ್ಹತೆ ಪಡೆಯಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡವು 3–0 ಕೇರಳ ತಂಡವನ್ನು ಮಣಿಸಿತು. ರನ್ನರ್ಸ್ ಅಪ್ ಆದ ಕೇರಳ ತಂಡವೂ ರಾಷ್ಟ್ರೀಯ ಸುತ್ತಿಗೆ ಟಿಕೆಟ್ ಪಡೆಯಿತು.

ಕರ್ನಾಟಕ ಪರ ರುಕ್ಷಾನಾ (23ನೇ) ಮತ್ತು ಸುಭಾತ್ರ ಎ. (54ನೇ) ತಲಾ ಒಂದು ಗೋಲು ಗಳಿಸಿದರು. ಮತ್ತೊಂದು ಗೋಲು ‘ಉಡುಗೊರೆ’ಯಾಗಿ ಲಭಿಸಿತು.

ಸಾಯ್ ಆಡಳಿತಾಧಿಕಾರಿ ರಾಜೇಶ್ ವಿಜೇತ ತಂಡಕ್ಕೆ ಟ್ರೋಫಿ ಹಸ್ತಾಂತರಿಸಿದರು. ಕೆಎಸ್‌ಎಫ್‌ಎ ಪ್ರಧಾನ ಕಾರ್ಯದರ್ಶಿ ಎಂ.ಕುಮಾರ್, ಕೋಶಾಧಿಕಾರಿ ಬಿ.ಕೆ. ಮುನಿರಾಜು, ಅಂತರರಾಷ್ಟ್ರೀಯ ಮಾಜಿ ಆಟಗಾರ್ತಿ ಚಿತ್ರಾ ಗಂಗಾಧರ್, ಬಿಡಿಎಫ್‌ಎ ಮಾಜಿ ಅಧ್ಯಕ್ಷ ಎಸ್.ಎಲ್. ಆ್ಯಂಟನಿ, ಪ್ರಧಾನ ಉಪ ಕಾರ್ಯದರ್ಶಿ ಹನೀಫ್, ಉಪಾಧ್ಯಕ್ಷ ಕಮಲ್ ಬಿ ಇದ್ದರು.

ಮುಂಬೈ ರೇಸ್

ಫಿನ್‌ಬಾಸ್ ಗೆಲ್ಲುವ ನಿರೀಕ್ಷೆ

ದೇಶದ ಶ್ರೀಮಂತ ಡರ್ಬಿ ರೇಸ್ ವಿಲ್ಲೂ ಸಿ. ಪೂನಾವಾಲ ಇಂಡಿಯನ್ ಡರ್ಬಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆ. ಬೇಚಿಮೊ, ಸಾವರಿನ್ ಕಿಂಗ್ ಮತ್ತು ಫಿನ್‌ಬಾಸ್ ನಡುವೆ ಪೈಪೋಟಿಯಿದ್ದು, ಫಿನ್‌ಬಾಸ್ ತುಸು ಮುಂಚೂಣಿಯಲ್ಲಿರುವಂತೆ ಕಂಡು ಬಂದಿದೆ. ಮಧ್ಯಾಹ್ನ 2:15ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಡಾನ್ ಉಲಿಯೊ 4, ಲಾ ಡಾಲ್ಸ್ ವಿಟಾ 6, ಅಶ್ವ ಗಿಪ್ಸಿ 2
2ನೇ ರೇಸ್: ಪುಚ್ಚಿನಿ 3, ಅಲೆಕ್ಸಿಯಾಸ್ 1, ನೋಟ್ ಮೀಫಾರ್‌ಕಾಶನ್ 2
3ನೇ ರೇಸ್: ಸ್ಯಾಂಟಿಸಿಮೊ 2, ಆಫ್ರಿಕನ್ ಗೋಲ್ಡ್ 1, ಫ್ರೆಂಡ್ಸ್ ಪ್ರಿನ್ಸ್ 4
4ನೇ ರೇಸ್: ಲೇಡಿ ಸ್ಕಾರ್ಲೆಟ್ 6, ಬೀಸ್ಟ್ ಮೋಡ್ 1, ಹೈಲ್ಯಾಂಡ್ ಸ್ಪಿರಿಟ್ 2
5ನೇ ರೇಸ್: ಸೈಕಿಕ್ ಸ್ಟಾರ್ 1, ಥಲಸ್ಸ 9, ಎವಾಲ್ಡೊ 2
6ನೇ ರೇಸ್: ನೆಬುಲಾ 1, ಬಕಿಂಗ್‌ಹ್ಯಾಮ್ 2, ಅಡ್ಮಿರಲ್ 3
7ನೇ ರೇಸ್: ಫಿನ್‌ಬಾಸ್ 8, ಬೇಚಿಮೊ 1, ಸಾವರಿನ್ ಕಿಂಗ್ 4
8ನೇ ರೇಸ್: ಸೋಷಿಯಲ್ ಬಟರ್‌ಫ್ಲೈ 6, ಫಾಂಟಾನ 2, ಬಿಗ್ ಬೇ 7
9ನೇ ರೇಸ್: ಟ್ರಾಪಿಕಲ್ ಪ್ಯಾರಡೈಸ್ 2, ಗೋಲ್ಡನ್ ಹಾರ್ಟ್ 5, ಮಿನಿಸ್ಟ್ರಿ ಆಫ್ ಟೈಮ್ 6

ಉತ್ತಮ ಬೆಟ್: ನೆಬುಲಾ

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
2,3,4,5,6	5,6,7,8,9	3,4,5	6,7,8	7,8,9

ಬ್ಯಾಡ್ಮಿಂಟನ್: ಫೈನಲ್‌ಗೆ ದೇವಿಕಾ



ಬ್ಯಾಂಕಾಕ್ (ಪಿಟಿಐ): ಭಾರತದ ದೇವಿಕಾ ಸಿಹಾಗ್ ಅವರು ವಿಶ್ವದ 35ನೇ ಕ್ರಮಾಂಕದ ಆಟಗಾರ್ತಿ ಹುವಾಂಗ್ ಯು–ಸುನ್ (ತೈವಾನ್) ವಿರುದ್ಧ ಶನಿವಾರ 22–20, 21–13ರಲ್ಲಿ ನೇರ ಗೇಮ್‌ಗಳಿಂದ ಗೆದ್ದು ಥಾಯ್ಲೆಂಡ್ ಮಾಸ್ಟರ್ಸ್ ಟೂರ್ನಿಯ ಫೈನಲ್ ತಲುಪಿದರು.

ಸೂಪರ್ 300 ಮಟ್ಟದ ಟೂರ್ನಿಯಲ್ಲಿ ಇದೇ ಮೊದಲ ಸಲ ಅವರು ಫೈನಲ್ ತಲುಪಿದ್ದಾರೆ. ಹರಿಯಾಣದ 20 ವರ್ಷ ವಯಸ್ಸಿನ ದೇವಿಕಾ ಅವರು ಬೆಂಗಳೂರಿನ ಪಡುಕೋಣೆ –ದ್ರಾವಿಡ್ ಶ್ರೇಷ್ಠತಾ ಕೇಂದ್ರದಲ್ಲಿ ಕೋಚ್ ಉಮೇಂದ್ರ ರಾಣಾ ಅವರಿಂದ ತರಬೇತಿ ಪಡೆಯುತ್ತಿದ್ದಾರೆ. ಪ್ರಸ್ತುತ ವಿಶ್ವ ಕ್ರಮಾಂಕದಲ್ಲಿ 63ನೇ ಸ್ಥಾನದಲ್ಲಿರುವ ಅವರು ಭಾನುವಾರ ಸಿಂಗಲ್ಸ್ ಕಿರೀಟಕ್ಕೆ ನಡೆಯುವ ಫೈನಲ್‌ನಲ್ಲಿ ಮಲೇಷ್ಯಾದ ಗೋ ಜಿನ್ ವೀ ಅವರನ್ನು ಎದುರಿಸಲಿದ್ದಾರೆ.

ಓಪನ್ ಸೀ ಈಜು: ಬಾಶಿತ್‌ಗೆ ಪ್ರಶಸ್ತಿ

ಮಂಗಳೂರು: ನಗರದ ಮೊಹಮ್ಮದ್ ಅಬ್ದುಲ್ ಬಾಶಿತ್ (2 ಗಂಟೆ 14:3 ನಿಮಿಷ) ಅವರು ಮಂಗಳೂರು ಸರ್ಫ್ ಕ್ಲಬ್ ಆಯೋಜಸಿದ್ದ ಅಂತರರಾಷ್ಟ್ರೀಯ ಓಪನ್ ಸೀ ಈಜು ಚಾಂಪಿಯನ್‌ಷಿಪ್‌ನ 8 ಕಿಲೊಮೀಟರ್ ಸ್ಪರ್ಧೆಯ ಪ್ರಶಸ್ತಿ ಗೆದ್ದರು.


ಅಬ್ದುಲ್ ಬಾಶಿತ್

ಬೆಂಗಳೂರಿನ ಅಜಯ್ ರಾವ್ ಮತ್ತು ಮೇಘನಾ ಮಯ್ಯ 6 ಕಿಲೊ ಮೀಟರ್ಸ್ ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. ತಣ್ಣೀರುಬಾವಿ ಬೀಚ್‌ನಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಅಜಯ್ ರಾವ್ 2 ಗಂಟೆ 33:4ನಿಮಿಷಗಳಲ್ಲಿ ಗುರಿ ಮುಟ್ಟಿದರೆ ಮೇಘನಾ ಮಯ್ಯ 2 ಗಂಟೆ 50:47 ಸೆಕೆಂಡುಗಳಲ್ಲಿ ರೇಸ್ ಮುಗಿಸಿದರು.

ಡ್ರಾದೊಡನೆ ಗುಕೇಶ್‌ಗೆ ಹಿನ್ನಡೆ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಡಿ.ಗುಕೇಶ್ ಅವರು ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಶನಿವಾರ ಸ್ವದೇಶದ ಅರವಿಂದ ಚಿದಂಬರಮ್ ಜೊತೆ ಡ್ರಾ ಮಾಡಿಕೊಂಡರು. ಇದರಿಂದ ಈ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ಅವರ ಆಸೆ ಭಗ್ನಗೊಂಡಿತು.

11ನೇ ಸುತ್ತು ಭಾರತದ ಆಟಗಾರರಿಗೆ ಶುಭದಾಯಕವಾಗಲಿಲ್ಲ. ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆದಿರುವ ಆರ್.ಪ್ರಜ್ಞಾನಂದ (4.5 ಅಂಕ) ಅವರು ಉತ್ತಮ ಓಟ ಕಾಣುತ್ತಿರುವ ಜರ್ಮನಿಯ ವಿನ್ಸೆಂಟ್ ಕೀಮರ್ (6) ಅವರಿಗೆ ಮಣಿದರು. ಭಾರತದ ಅಗ್ರಮಾನ್ಯ ಆಟಗಾರ ಅರ್ಜುನ್ ಇರಿಗೇಶಿ (4) ಅವರು ವಿಶ್ವಕಪ್ ವಿಜೇತ ಜಾವೊಖಿರ್ ಸಿಂದರೋವ್ (7) ಅವರೆದುರು ಸೋಲನ್ನು ಒಪ್ಪಿಕೊಳ್ಳ-ಬೇಕಾಯಿತು. ಇನ್ನು ಎರಡು ಸುತ್ತುಗಳು ಉಳಿದಿದ್ದು ಗುಕೇಶ್ 5.5 ಅಂಕ ಸಂಗ್ರಹಿಸಿ 10ನೇ ಸ್ಥಾನದಲ್ಲಿದ್ದಾರೆ. 14 ಆಟಗಾರರ ಕಣದಲ್ಲಿ ಚಿದಂಬರಂ (4) ಅವರು 12ನೇ ಸ್ಥಾನದಲ್ಲಿದ್ದಾರೆ.

ಗೆಲುವಿನ ನಿರೀಕ್ಷೆಯಲ್ಲಿ ಕ್ಯಾಪಿಟಲ್ಸ್

ಮಹಿಳಾ ಪ್ರೀಮಿಯರ್ ಲೀಗ್

ವಡೋದರ (ಪಿಟಿಐ): ಪ್ರಮುಖ ಬ್ಯಾಟರ್‌ಗಳ ವೈಫಲ್ಯದಿಂದಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ಒತ್ತಡಕ್ಕೆ ಸಿಲುಕಿದೆ. ಭಾನುವಾರ ಯುಪಿ ವಾರಿಯರ್ಸ್ ವಿರುದ್ಧ ನಡೆಯಲಿರುವ ಈ ಆವೃತ್ತಿಯ ಕೊನೆಯ ಲೀಗ್ ಪಂದ್ಯದಲ್ಲಿ ಯುಪಿ ವಾರಿಯರ್ಸ್ ವಿರುದ್ಧ ಗೆದ್ದರೆ ಮಾತ್ರ ಡೆಲ್ಲಿ ತಂಡವು ನೇರವಾಗಿ ಎಲಿಮಿನೇಟರ್‌ನಲ್ಲಿ ಆಡುವ ಅವಕಾಶ ಪಡೆಯಲಿದೆ.

ಆರ್‌ಸಿಬಿ (12 ಅಂಕ) ಈಗಾಗಲೇ ನೇರವಾಗಿ ಫೈನಲ್‌ಗೆ ಅರ್ಹತೆ ಪಡೆದಿದೆ. ಈ ಹಿಂದಿನ ಪಂದ್ಯದಲ್ಲಿ ಮುಂಬೈ ವಿರುದ್ಧ ಗೆಲ್ಲುವ ಮೂಲಕ ಗುಜರಾತ್ ಜೈಂಟ್ಸ್ (10 ಅಂಕ) ತಂಡ ಎಲಿಮಿನೇಟರ್‌ನ ಒಂದು ಸ್ಥಾನ ಕಾದಿರಿಸಿದೆ. ಮುಂಬೈ ಇಂಡಿಯನ್ಸ್ (6 ಅಂಕ) ಲೀಗ್ ವ್ಯವಹಾರ ಮುಗಿಸಿದೆ. ಜೆಮಿಮಾ ಪಡೆ ಸದ್ಯ ಆರು ಅಂಕಗಳೊಡನೆ ನಾಲ್ಕನೇ ಸ್ಥಾನ, ಕೊನೆಯ ಲೀಗ್ ಪಂದ್ಯ ಗೆದ್ದಲ್ಲಿ ಮೂರನೇ ಸ್ಥಾನಕ್ಕೇರಲಿದೆ.

ಕೊನೆಯ ಸ್ಥಾನದಲ್ಲಿರುವ ವಾರಿಯರ್ಸ್ (4) ಗೆದ್ದರೆ, ಎಲಿಮಿನೇಟರ್‌ಗೇರುವ ಮುಂಬೈ ತಂಡದ ಆಸೆ ಜೀವಂತವಾಗಿ ಉಳಿಯಲಿದೆ. ಮುಂಬೈ, ಡೆಲ್ಲಿ ಮತ್ತು ಯುಪಿ ತಂಡಗಳು ಆಗ ತಲಾ ಆರು ಪಾಯಿಂಟ್ಸ್ ಗಳಿಸಿದಂತಾಗಲಿದ್ದು ನೆಟ್ ರನ್ ರೇಟ್ ಗಣನೆಗೆ ಬರಲಿದೆ. ಮುಂಬೈ ಇಂಡಿಯನ್ಸ್ ರನ್‌ರೇಟ್ (0.059), ಸದ್ಯ ಇತರ ಎರಡು ತಂಡಗಳಿಗಿಂತ (ವಾರಿಯರ್ಸ್: –1.146, ಡೆಲ್ಲಿ: –0.164) ಉತ್ತಮವಾಗಿದೆ.

ಡೆಲ್ಲಿ ಆಟಗಾರ್ತಿಯರ ಪೈಕಿ, ದಕ್ಷಿಣ ಆಫ್ರಿಕಾದವರಾದ ಲಿಝೆಲ್ ಲೀ (230) ಮತ್ತು ಲಾರಾ ವೋಲ್ವಾರ್ಟ್ (194) ಮಾತ್ರ ಯಶಸ್ಸು ಗಳಿಸಿದ್ದಾರೆ. ಶಫಾಲಿ ವರ್ಮಾ (179) ಸ್ಥಿರ ಪ್ರದರ್ಶನ ನೀಡಿಲ್ಲ. ನಾಯಕಿ ಜೆಮಿಮಾ 7 ಪಂದ್ಯಗಳಿಂದ 132 ರನ್‌ಗಳನ್ನಷ್ಟೇ ಗಳಿಸಿದ್ದಾರೆ.

ವಾರಿಯರ್ಸ್ ಆಡಿದ 7 ಪಂದ್ಯಗಳಲ್ಲಿ ಎರಡರಲ್ಲಷ್ಟೇ ಜಯಗಳಿಸಿದೆ. ತಂಡ ನಾಯಕಿ ಮೆಗ್ ಲ್ಯಾನಿಂಗ್ (7 ಪಂದ್ಯಗಳಿಂದ 248) ಅವರನ್ನು ನಂಬಿಕೊಂಡಿದೆ. ಇನ್ನೊಬ್ಬ ಯಶಸ್ವಿ ಆಟಗಾರ್ತಿ ಫೋಬಿ ಲಿಚ್‌ಫೀಲ್ಡ್ (6 ಪಂದ್ಯಗಳಿಂದ 243) ಗಾಯಾಳಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30.
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331


PROPERTY CORNER

ಕ್ಲಾಸಿಫೈಡ್ಸ್

FOR SALE

BDA SITE No. 90, BTM 1st Stage, North facing 40×60, 60 ft. Road, Adjacent to JALA BHAVAN, Between Bannerghatta Road to Jayanagar East End Road, Approx 100 mtr. to Bannerghatta Main Road.

Genuine Buyers Call:
Muralidhar: 98453 01599



VCNR VISTA ಮಾದಾವರ ಮೆಟ್ರೋ ನಿಲ್ದಾಣದಿಂದ 5 ನಿಮಿಷ
BMRDA APPROVED
₹ 69 ಲಕ್ಷದಿಂದ
ಸೈಟ್ ವಿಸಿಟ್ ಬುಕ್ ಮಾಡಿ: 9535 040 504
30x40 | 30x50

New Building with 65 Rooms For Rent

near **MANYATA TECH PARK**

Suitable for

Student Hostel
Company Guest House
Lodging
PG
Attached Bath and Ample Car Parking

Contact
98450 08811



Shobha Residency
OMKAR NAGAR, Opposite JSS College, 40 Feet Wide Road, Near to Global Village, Rajarajeshwari Nagar, Bangalore.
BDA Approved Luxury 3 BHK Flats for Sale in Prime Location.
Each Flat Built up Area 2100 Sqft. North Facing
Call: 98440 26676 | 83104 43385

Commercial Space for RENT
(Opposite St.Philomena's Church, Mysore-1)



About 11,000sqft- ground+ 2 floors, Parking available in basement.
Suitable for Software Co./ Bank/Super Market / Shopping Complex/ Showrooms/ Shops.
Please Contact:
Mob: 9880063284 | 8884819699

REAL ESTATE SELLING

Sites

Anjanapura

"**ANJANAPURA 8TH** Block 30x40 South_facing, only Genuine Buyers Call: 'Sri.Ganesh Real Estate' 9845286505"

SALE BDA 30X40 Anjanapura 5th G Block South facing 40X60 west facing commercial site 2nd Block. 9620041313, 9945373839

Banashankari

"**BANASHANKARI 6TH_STAGE** 4th_Block`50x80 North`West corner and`50x80 North`facing 7th-Block and`30x40 West`facing 2nd-Block and`40x60 3rd-Block East`facing near`BDA Complex._Call: 9845146725/ 9741466369"

BDA SITE FOR SALE, Banashankari 1st Stage, 2nd Block, 6th Cross, 8th Main, 60'x41', prime residential area, near reputed school. CLEAR TITLE DEED, Ideal for bungalow/redevelopment. Direct owner. Ph: 9848482065

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

SALE BSK 6th stage 4th B Block 40X60 west Facing 2.10Cr Also 40X60 South Facing 6th Block 2.20cr Behind 100 Road all owners site. 9945373839, 9620041313

BANASHANKARI 6TH Stage 7th Block BDA 30x40 East Facing Site For Sale 1.6Cr. Owner- 9900115519

BTM Layout

BTM 2ND Stage, 40x60 North facing site 25,000/-, 30x40 South facing 26,000/-, good location: 9845307497

Bannerghatta Road

BANNERGHATTA ROAD, Bilekahalli, Ramanasri Enclave Near Vega City Mall, 60x50 East, Residential A-Katha, 4,44,00,000/- 9980761200

AVAILABLE FOR RENT

2,800 sq.ft. (Ground Floor). Suitable for Show Room / Bank Branch on R.V.Road (Manandi Samvrudhi), Opp.to R.V.Public School, Lalbagh West Gate, Bangalore.
Contact Owner: 98450 48332

AKSHAYANAGARA 3562 SQFT 11000/-, PANDURANGA NAGARA 40x60 21000/-, VIJAYABANK LAYOUT 50x100 COMERCIAL 30000/- FINAL 9449655947

Jakkur

FOR SALE -JAKKUR4000 square feet(50×80) residential plot,Telecom Layout. A-Khata(clear title) 13,500/sqft(5.4 Cr).Direct owner. Whatsapp: 9591918278 9844019327

Jayanagar

SALE BDA-SITE 19x24 NORTH WEST CORNER JAYANAGAR 6TH BLOCK NEAR METRO STATION Rs.1.15CR Call:7892531744 9448369117

"**JAYANAGAR 7TH_BLOCK** 42x50_South_facing, Banashankari 2nd_Stage 30x50. 'Sri.Ganesh Real Estate' 9845286505"

J P Nagar

"**J.P.NAGAR, SRINIDHI_LAYOUT** 30x51 Residential Site, East_Facing, BBMP A_Katha, Full White. Direct Owner: 9845249799/ 9845088449"

Basavanagudi

SALE SITES 100x130 Gandhi Bazaar commercial property North 114x52 west V.V.Puram residential site/ land. 9845720810.

Kengeri

BDA 50X80 East Facing Commercial Property on Kengeri Railway Station Road Prime Location Genuine Buyers Contact: 9148514646

Koramangala

LAND SALE 30x40 West Facing E Katha Suitable: Resi/ Commercial Near Sony Koramangala Sony Signal, Clear Title: 9381009151

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

KEMPEGWODA LAYOUT 3rd Block "J"Sector Kommaghatta #2740 30x40 Site Sale.Ready to Construction ₹9750/-. 9742681666

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Mallathalli

MALATHAHALLI SITE for sale MPM Layout 40x60 A khatha North face 40 feet Road Contact 9886349709 Broker excuse

Malleshwaram

MALLESHWARAM, MARGOSA Road, 2400sqft, South Facing, Excellent Location, Semi-Commercial Plot for Sale. Price 40k Persqft Contact: 9845575731

AVAILABLE FOR RENT

on St.Marks Road (Manandi Plaza), Bangalore. Office Space 3,000 sq.ft. Warm Shell in 3rd Floor with Lift.
Contact Owner: 98450 48332

Multiple Locations

BDA SITES AVAILABLE 50x80, 40x60, 30x40, 30x20 in Vishweshwaraiah Layout and Kempegowda Layout. 9900999919.

Mysore Road

PRICE 2450SFT only. Mysore Road Near Christ College 60x90 E-Khatha Site Immediate Settlement. Call:7619444766

Rajajinagar

RAJAJINAGAR 2ND Stage 40X60 Property for Sale East facing, Excellent location, Price 22000/- Call: 9663983846

Mysore

KIADB INDUSTRIAL HOUSING AUCTION SITE FOR SALE, 17539 SQFT, E/Face, RING ROAD, OPPOSITE SHESHADRIPURAM COLLEGE, HEBBAL, MYSORE. CALL: 9845981490

Nagarabhavi

"**NAGARABHAVI DEEPA_COMPLEX** MPM Layout 40x60 East North Corner BDA Site Sale 80% White. 9448432633"

Nelamangala

BYRASHETTYHALLI AISHWARYA County BMRDA 40x60, East And Banashankari BDA 30x40,Sites For Sale : 9620117773/9845857006

CONSTRUCTION MATERIALS FOR SALE

Large quantity of used construction materials in good conditions. Such as Shuttering Plate, Jacks, Spans, Cuplock scafolding & Machinery such as 1Bag, 2, 3&4 Bag Mixers, and Tractor Mounted 16 KVA D.G, Material hoist Electrical & Diesal 30 & 40 mts height, Cutting & Bar Bending Machines (Electrical) for sale.
Contact:
6360605636 / 8431164733

5390 SQFT, S/W Corner, E-Khata Villa Plot, Sri Sai Krishna Villas, Hassan-Mangaluru Road, Lakkenahalli, Bengaluru.Rs. 4500/- psft. (slightly negotiable)Genuine buyers only Contact: 9480217325

Sahakarnagar

SAHAKARANAGAR, 40X60 Feet West Facing, Excellent Location BDA Approved For Sale Call: 9341260828, 9980018828

Hegganahalli

2SITES SALE 80ftx100ft In Hegganahalli Cross Bangalore-91 A&E Katha Borewell Brick wall Fenced:9900287834/ 9448377834

Tumkur

10 GUNTAS DC Converted Near Bustand and 11.75 Guntas DC Converted Plot Near Police Station For Sale in Gubbi Town: 9880419865

Mysore

MYSORE BDA (MUDA) Site Sale, Dattagalli 3rd Stage 823 Sqft, No.55 East- Corner. 9845729728.

Srirampura

SALE 30X100 site, 1st cross, North facing, Site, Single owner, 2 mins-metro-mantri mall, 17000/sqft PH 9739732433

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

REAL ESTATE SELLING

Sites

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 82173 92686

"VISVESHWARAIAH LAYOUT 6th Block 40x60 South facing Site for sale Good Location Genuine Buyers Contact: 9845500019/ 7019314962"

SALE, 5TH, 6th Block, 40X60, 30X40 and Three/ Four BHK Duplex House, RUDRAPPA: 9035334418, 9141326819

"VISHVESWARAIAH LAYOUT 1st-Block 4x60 East facing Site for sale. Call: 9071098870/ 9886294610 (BROKERS EXCUSE)"

SMVL 7TH Block, 40×60 Site, DC Conversion E Katha, North, Byregowda Layout, Near Kings Club: 9980433004

BDA-SITE FOR-SALE @ Sir. M. Vishweshwaraiah Layout 30x40 Contact: 6363496142

40X60 NORTH Facing site, SMV 5th block, DC converted, BBMP A & E Khata. Close to proposed Metro phase 3. Contact: 9900266984

'DIRECT OWNER' 30x40 North Facing Vishveswaraiah Layout 4th Block, Full Development Area: 8496030007/ 8310885235

House

Rajajinagar

RAJAJINAGAR 1ST Block, Near Metro Station, 40x60 4,Bedroom Duplex House, Sale Good Location: 9980501366

Vishweshwariah Layout

"30X40 BDA ONE/TWO BHK, FIVE RENTAL INCOME HOUSE SALE, 5TH BLOCK VISHVESHWARAIAH LAYOUT- 9845143579"

Flat

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Commerical

Anjanapura

ANJANAPURA 8TH Block 80'Road Commercial 50x80 East 7,20,00,000/- Residential 8th Block 40x60 West, 2,55,00,000/- 9845307497.

Basaweshwaranagar

BASAVESHWAR NAGAR 100 Feet Main Road Commercial 40X60 BDA Property For Sale Call: 9341260828 9980018828

Mysore

COMMERCIAL LAND FOR SALE
52,272 sqft/ 1.08 Acres
Rs.1250/- per sqft
10 Km from Palace, Surrounded by Layouts
SUITABLE FOR
Layout, Hospital, Hotels, Lodge, Villa House, Choultry, Farm House, HD Kote Main Road Mysore.
Ganishka Properties Buy/Sell
Contact: +91 97397 03467

Agricultural Land Converted

Bangalore South

SOUTH BANGALORE 95acre Land for Sale yellowzone, City Limit (Layout, farm Land, Multiple Development) 7619444766

Agricultural Land

Mysore

MYSORE NANJANGUDU 5acre and 10acre Land For Immediate Sale 25 Lakhs only Per Acre: 7619444766

Commercial Building

Sarjapur Road

COMMERCIAL BUILDING for sale. Sarjapur road, Kasavanahalli. G+5. Current income 5 lacs. 10 Cr | Slightly negotiable. contact: 7795719141

Commercial Land

Bangalore North

HEGADENAGARA 100 FEET MAIN ROAD, Bangalore North, Prime Location 35,500 Sqft. COMMERCIAL LAND SALE. 16,000/-Sqft. Call: 9008418631.

Industrial & Factory

Magadi Road

FOR SALE Industrial Building off Magadi road North Facing, 30 Ft Road, Land: 8,000 Sqft, Built up- 16000 Sqft, Power: 200KvA. Contact: 9035609555

Tumkur Road

SALE 25 to 30 Acres Warehouse Converted Land. Also 10/ 12 acres Industrial Land. 9141326819

Residential/ Commercial

Multiple Locations

TENENTED, GETTING 1% Rental Income Commercial, Residential, PG Building SALE All Location, Price:2.5cr. above. 9980577227.

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement, genuine Sellers Contact: 9902038118, 9449060605

Banashankari

BDA-SITES WANTED @ BSK 6th Stage all Blk Vishweshwaraiah Lyt Kempegowda Lyt 30x40, 40x60, 50x80 Call:9845555666

Multiple Locations

WANTED BDA Sites Anjanapura-Arkavathi, Banashankari 6th stage, Vishweswaraiah, Kempegowda, Dr. Shivaramkaranth Layout. Contact: Sapthagiri "(Opposite BDA Head Office) "9036360366.

Vishweshwariah Layout

'BDA SITE SALE '30X40 SOUTH FACING SMV 7th Block MUDDINAPALYA @1.73Cr Contact: 9108133156

RENTAL PROPERTIES

Accommodation Available

Villas/Bunglows

FOR RENT
Independent Bungalow 4000 sqft 4 BHK G+1at
Kumara Krupa Rd
HIGH GROUND with all facilities 3 car parking servant room, garden contact +919448129770

Commercial

COMMERCIAL SPACE FOR RENT at Geddanahalli New Airport Road Banglore 560077 1, 2 & 3 Floor suitable for Restaurant, spa, GYM, office space & Any commercial Purpose. Lift service, 20KV power supply is Available contact : 9066623347 9066489666

350 SFT 1st Floor Office Space, attached Toilet. Jayanagar 5th Block, Near Metro. Sharavanan 9787859951

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

EPOXY GROUTING for bathroom & balconies. Heat reflecting coating for terraces. Contact Roof & Walls, Bangalore. 9845987989

MATRIMONIAL

Brides Wanted

Hindu

BRIDE WANTED
Bride Required for aged 30 years, born 1995,
Height:- 5'.7"
Qualification:- BBA/ MBA
Job:- IT
Annual Income:- 7 Lakhs
Father:- Opted VRS from Air India
Monther:- Home Maker
Sibling:- 1 Sister Working
Sister Working in Air India Trivandrum International Airport
Looking for Well - Educated (Graduate) good looking, working, Malayalee or Tamilian Girl.
Contact:-
93428 48984, 92434 30632

Bride Required Others

WANTED BRIDE
36 Year Well settled Software Architect Looking Bride for Marriage
First preference Madiwala, No Caste Objection
Contact : 99161 67699 Bangalore

JOB OPPORTUNITIES

Cook

BANGALORE TIFFIN Items 'THINDU' Master Cooks required at Chennai. Food & Accommodation provided. Contact:- 9080166615.

Engg/ Production Technical

WANTED
CIVIL ENGINEER
Required for KCOE&I Project at Dabaspet with 3 / 5 years experience in project / site works.
CAR DRIVER-CUM-OFFICE ASSISTANT
required for KASSIA. Candidates should have minimum qualification of PUC and possess own two wheeler.
Interested candidates may send their resume in a sealed cover to KASSIA, # 2/106, 17th Cross, Magadi Chord Road, Vijayanagar, Bangalore-560040 within 7 days.

WANTED SITE Engineers Qualifcation DIPLOMA or BE. Salary fresher 20,000/- Experienced- 25,000/- Mobile: 9611712549/ 9019157733

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Manager

TRANSPORT COMPANY requires Experienced person independently manage Bangalore branch business and operation. Please contact: 9035178911.

General

WANTED: MEDICAL MBBS Doctors, MSW, Staff Nurses, B.Sc Laboratory, Technicians. Contact: 9448465835, 9901665601

Teachers/ Professors

ST.PHILOMENA SCHOOL and PU COLLEGE
Byalakere, Yelahanka, Bengaluru
9480091189/ 9845036582
stphilomenas118@gmail.com
Requires experienced & Trained TEACHERS for
NURSERY NTT & MTT
HIGH SCHOOL All subjects (M.Sc. B.Ed/ MA B.Ed.)
COLLEGE Physics, Chemistry, Mathematics, Computer, Accountancy & Business Studies (M.Sc. B.Ed. / M.Com)

HOLY ANGEL'S High School, Hampinagar, Vijayanagar, Bengaluru-560104. Phone: 23404465/23202042 holyangels.highschoolr pclayout@gmail.com Requires Experienced Trained Teachers for the Academic year 2026-27 for Nursery, Primary, High-School, Computer Teacher, Music Teacher & PE Teacher.STATE & ICSE. Qualification: B.A./B.Sc.,B.Ed/ M.A./ M.Sc.,M.Ed. NTT, CPEd. Only English Medium Candidates need to apply

VIDYA VAHINI SCHOOL, Affiliated to CBSE, Nagarbhavi, Bangalore. REQUIRES: Candidates for GRADE 7 to 10 (All subjects). Interested candidates forward your resume to what'sapp number- 9686282423. For the school to contact. Walk-interview.

Hospital & Medical Jobs

WANTED HR (5+Years) & MARKETING EXECUTIVES (2+Years) Hospital Experience only. MAHARAJA AGRASEN HOSPITAL Bengaluru-70 Mobile- 9513362681 (9am-to-6pm) E-mail: ceo.mahb@gmail.com

Wanted

WANTED DIPLOMA in Mechanical Electrical Engineering, Job: LAB INSTRUCTOR. Peenya Industrial Area, Bangalore. Contact: 8147011054.

REQUIRED JUNIOR ADVOCATES 'DNM Associates' Required having Experience of TWO TO THREE years (2-3) Fluency in Languages, hardworking and interested in profession. Both trial and High Court work. Call 9845081411/ 9632671467 Email dnmanjunathadvocate@gmail.com

WANTED: YOUNG dedicated North Indian male assistant for old man in Gokarna. Minimum High School. Monthly Salary 20,000 to 30,000 depending on experience. Please call 9810896996, 9319188313 or contact Moti Lal Gupta, Room 217 Shrinivas Hotel, Hampankatta Mangalore.

CONNECT



PERSONAL

Change of Name

CHANGE OF NAME
I, **Prashanth,** Son of Ravindra Malleshappa Desai, residing at No. 1445, Kishan House, 17th Cross, Kumaraswamy Layout, Bengaluru-78 have changed my name to **PRASHANTH RAVINDRA DESAI** vide Affidavit dated 29-01-2026, sworn before Notary L. Puttaraju, Bengaluru.

CHANGE OF NAME
I, **Tanuja** D/o Srinivas, residing at No. 63/1, 2nd Cross, SBI Staff Colony, HSBC Layout, Basaveshwaranagar, Bengaluru 560079, have changed my name to **TANUJA S** vide affidavit dated 28-01-2026 before notary Vanajakshi R, Bengaluru. Henceforth I shall be called **TANUJA S** only

Lost

DOCUMENT LOST
I, **Ismail Jabiulla** Residing at Mehaboob Nagara, 22nd Ward, Vijayapura Town, Devanahalli Tq, have Lost my Original **Sale Deed/ House Registration Paper, Document No/ Identification: 979/92-93 V 1415** Date: 09/09/2024 while in transit. If found Please **Contact: 7676777769**

EDUCATION To Place your Classified Ads Contact: 9845114560


ARVIND PROPERTIES
Move in for an extraordinary LIFESTYLE in the
HEART OF NATURE
ARVIND PROPERTIES CLUB HOUSE
CLUB HOUSE
APARTMENT-LIVING FACILITIES
Within a plotted development
with an iconic
CLUB HOUSE - 50,000 sqft (G+4)
that redefines comfort and class.
TUMKUR METRO EXPANSION
Makali
Dasanapura
Nelamangala
Weaver Colony
Nelamangala Visveswara Pura
Nelamangala Tollgate
Boodihal
T. Begur
Thippagondana halli
Kulavanahalli
Mahimapura
Bildankote
Somapura Industrial Area
Dabaspet
Nallayana palya
Chikkahalli
Hirehalli Industrial Area
Pandithana halli
Kyatsandra Bypass
Kyatsandra
SIT (Siddhartha College)
Tumakuru Bus Stand
TUDA Layout
Naganna Palya
Sira Gate (proposed)
WORLD-CLASS AMENITIES
Basketball Court
Recreational Parks
Amphitheatre
Children's Play Area
Open Gymnasium
Swimming Pool
Lawn Tennis Court
Jogging & Cycling Track
Temple
RERA NO. PRM/KA/RERA/1250/307/PR/280324/006755
50 Acres Project
900 Premium Plots
Mr. M.K. Ashok
ARVIND PROPERTIES
E - Khata
BMRDA & RERA Approved
Ready for Registration
Bank Loan Available
Ready-to-build plots
Start your dream home construction
from April
YOUR PLOT JUST MINUTES FROM THE UPCOMING METRO
ನೆಲಮಂಗಲ ಸೊಂಡೆಕೊಪ್ಪ ರಸ್ತೆ
99986 08666
www.arvindproperties.com